ಭಾನುವಾರ, ಡಿಸೆಂಬರ್ 25, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 355 | ಪುಟ 20
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Scan to watch the video

ಕ್ರಿಸ್‌ಮಸ್ ಶುಭಾಶಯಗಳು

ಇಂದು ಭಾನುವಾರದ ಪುರವಣಿ 10

'ಹೊಸ ವರ್ಷಕ್ಕೆ ನೂತನ ಮಾರ್ಗಸೂಚಿ' 8

'ಒಬಿಸಿಗೆ ಅನ್ಯಾಯವಾಗಲು ಬಿಡಲ್ಲ' 7

ಜನವರಿಯಲ್ಲೇ ಶಿಕ್ಷಕರ ವರ್ಗಾವಣೆ ಶೀಘ್ರ ವೇಳಾಪಟ್ಟಿ

ಬೆಂಗಳೂರು: ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಾಯ್ದೆಯ ತಿದ್ದುಪಡಿಯನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಸಮ್ಮತಿಸಿದ್ದು, ಜನವರಿ (2023) ಅಂತ್ಯದ ಒಳಗೆ ವರ್ಗಾವಣೆ ಪ್ರಕ್ರಿಯೆಗಳು ಆರಂಭವಾಗಲಿವೆ.

ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಾಯ್ದೆ–2020ಕ್ಕೆ ತಿದ್ದುಪಡಿ ತಂದು ಶಿಕ್ಷಕ ಸ್ನೇಹಿ ವರ್ಗಾವಣೆಗಾಗಿ ರೂಪಿಸಿದ ಕರಡು ಅಧಿಸೂಚನೆ ಪ್ರಕಟಿಸಲಾಗಿತ್ತು.

7ನೇ ಪುಟ ನೋಡಿ

ಒಳ ಪುಟಗಳು

ಚಿನಕುರಳಿ

ಪ್ರಕಾಶ್ ಶೆಟ್ಟಿ



ನಾಲೆಗಳ ಆಧುನೀಕರಣದಲ್ಲಿ ಭ್ರಷ್ಟಾಚಾರದ ವಾಸನೆ; ಹಸನಾಗದ ರೈತರ ಬದುಕು

ಹಣದ ಹೊಳೆ: ಹೊಲಕ್ಕಿಲ್ಲ ನೀರು

• ಮನೋಜಕುಮಾರ್ ಗುದ್ದಿ

ಒಳನೋಟ
ಹೆಸರಿಗಷ್ಟೇ ತನಿಖೆ
ಪ್ರತಿಕ್ರಿಯಿಸಿ: 9606038256
feedback@prajavani.co.in

ಕಲಬುರಗಿ: ನೀರಾವರಿ ಉದ್ದೇಶಕ್ಕೆ ರಾಜ್ಯದ ಹಲವು ಕಡೆ ಸಾವಿರಾರು ಕೋಟಿ ರೂಪಾಯಿ ಅನುದಾನ ಸುರಿದು ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ. ಇವುಗಳ ನಿರ್ವಹಣೆ, ಆಧುನೀಕರಣಕ್ಕೆ ಪ್ರತಿ ವರ್ಷ ನೂರಾರು ಕೋಟಿ ಖರ್ಚು ಮಾಡಲಾಗುತ್ತದೆ. ಆದರೆ, ಆಶಯದಂತೆ ಹೊಲಗಳಿಗೆ ಮಾತ್ರ ಸಮರ್ಪಕವಾಗಿ ನೀರು ಹರಿದುಬರುತ್ತಿಲ್ಲ. ಇವೆಲ್ಲದರ ಮಧ್ಯೆ ಕಳಪೆ ಕಾಮಗಾರಿ, ಭ್ರಷ್ಟಾಚಾರದ ಆರೋಪಗಳೂ ಕೇಳಿಬರುತ್ತಲೇ ಇವೆ.

ರಾಜ್ಯದ ಪ್ರಮುಖ ನದಿಗಳಾದ ಕೃಷ್ಣಾ, ತುಂಗಭದ್ರಾ, ಕಾವೇರಿ, ಭದ್ರಾ, ಮಲಪ್ರಭಾ, ಘಟಪ್ರಭಾ, ಕಾರಂಜಾ, ಅಮರ್ಜಾ ನೀರನ್ನು ಬಳಸಿಕೊಳ್ಳಲು ದಶಕಗಳ ಹಿಂದೆಯೇ ಅಣೆಕಟ್ಟುಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಯಿತು. ನಾಲೆಗಳ ಕಾಮಗಾರಿಯೂ ನಡೆಯಿತು. ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪುರ ಬಲದಂಡೆ ಕಾಲುವೆ (ಎನ್‌ಆರ್‌ಬಿಸಿ) ಯೋಜನೆಯ ಕಾಮಗಾರಿಯ ಹಲವೆಡೆ ಸಿಮೆಂಟ್ ಕಿತ್ತುಹೋಗಿದ್ದು ಕಳಪೆ ಕಾಮಗಾರಿಗೆ 'ಸಾಕ್ಷಿ'ಯಾದವು. ರೈತ ಸಂಘಟನೆಗಳು, ಸಾಮಾಜಿಕ ಹೋರಾಟಗಾರರು ತನಿಖೆಗೆ ಒತ್ತಾಯಿಸಿದರು. ಆದರೆ ಕಾಟಾಚಾರದ ತನಿಖೆ ನಡೆಯಿತೇ ಹೊರತು ಸಂಬಂಧ ಪಟ್ಟ ಎಂಜಿನಿಯರ್‌ಗಳ ವಿರುದ್ಧ ಕ್ರಮ, ದುರ್ಬಳಕೆಯಾದ ಹಣ ವಸೂಲಿ, ಗುತ್ತಿಗೆದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತಹ ಪ್ರಕ್ರಿಯೆ ನಡೆದಿಲ್ಲ.

ಹಲ್ಲೆ ಯತ್ನ: ಆಧುನೀಕರಣ ಕಾಮಗಾರಿಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಆರೋಪದ ತನಿಖೆಗಾಗಿ, ಕಳೆದ ಮೇ ತಿಂಗಳ 5ರಂದು ರಾಯಚೂರು ಜಿಲ್ಲೆಯ ಲಿಂಗಸುಗೂರಿನಲ್ಲಿ ಸ್ಥಳ ಪರಿಶೀಲಿಸಲು ಬಂದಿದ್ದ ವಿಧಾನಮಂಡಲದ ಸದನ ಸಮಿತಿ ಸದಸ್ಯರ ಮೇಲೆ ಗುತ್ತಿಗೆದಾರರ ಬೆಂಬಲಿಗರ ಹಲ್ಲೆ ಯತ್ನವೂ ನಡೆದಿತ್ತು!

ಯಾದಗಿರಿ–ರಾಯಚೂರು ಜಿಲ್ಲೆಗಳಲ್ಲಿ ಹಾದುಹೋಗುವ ನಾರಾಯಣಪುರ ಬಲದಂಡೆ ಕಾಲುವೆಯ ಮುಖ್ಯ ಕಾಲುವೆ ದುರಸ್ತಿಗೆ 2020ರಲ್ಲಿ ₹ 980 ಕೋಟಿ ಹಾಗೂ ವಿತರಣಾ ಕಾಲುವೆ ಮತ್ತು ಹೊಲಗಾಲುವೆಗಳ ದುರಸ್ತಿಗಾಗಿ ₹ 1,440 ಕೋಟಿ ಬಿಡುಗಡೆ ಮಾಡಲಾಗಿತ್ತು.



ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಕೆಳದಂಡೆ ಮುಲ್ಲಾಮಾರಿ ಯೋಜನೆಯ ನಾಗರಾಳ ಜಲಾಶಯದ ಮುಂಭಾಗದಲ್ಲೇ ಕಾಂಕ್ರೀಟ್ ಬೆಡ್ ಕಿತ್ತು ಹೋಗಿರುವುದು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

> ಅಧಿಕಾರಿಗಳ ಭ್ರಷ್ಟಾಚಾರ ಆರೋಪಗಳ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಮುಖ್ಯ ಎಂಜಿನಿಯರ್‌ಗೆ ಸೂಚಿಸಿದ್ದೆ. ತನಿಖಾ ವರದಿ ತರಿಸಿ ಕ್ರಮ ಕೈಗೊಳ್ಳುತ್ತೇನೆ.
> **ಗೋವಿಂದ ಕಾರಜೋಳ,** ಜಲಸಂಪನ್ಮೂಲ ಸಚಿವ

6ನೇ ಪುಟ ನೋಡಿ

5 ದೇಶಗಳ ಪ್ರಯಾಣಿಕರಿಗೆ ಆರ್‌ಟಿ–ಪಿಸಿಆರ್ ಕಡ್ಡಾಯ

ಗಾಂಧಿನಗರ/ನವದೆಹಲಿ (ಪಿಟಿಐ): ಕೋವಿಡ್ ಪ್ರಕರಣಗಳು ಹೆಚ್ಚು ವರದಿಯಾಗುತ್ತಿರುವ ಚೀನಾ, ಜಪಾನ್, ದಕ್ಷಿಣ ಕೊರಿಯಾ, ಸಿಂಗಪುರ ಹಾಗೂ ಥಾಯ್ಲೆಂಡ್‌ನಿಂದ ಭಾರತಕ್ಕೆ ಬರುವ ಪ್ರಯಾಣಿಕರಿಗೆ ಕೊರೊನಾ ಸೋಂಕು ಪತ್ತೆ ಹಚ್ಚುವ ಆರ್‌ಟಿ–ಪಿಸಿಆರ್ ಪರೀಕ್ಷೆಯನ್ನು ಕೇಂದ್ರ ಸರ್ಕಾರ ಕಡ್ಡಾಯಗೊಳಿಸಿದೆ.

ಗಾಂಧಿನಗರದಲ್ಲಿ ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ, ವಿದೇಶದಿಂದ ಬರುವ ಪ್ರಯಾಣಿಕರಿಗೆ ವಿಮಾನ ನಿಲ್ದಾಣಗಳಲ್ಲಿ ಥರ್ಮಲ್ ಸ್ಕ್ರೀನಿಂಗ್ ಮಾಡಲಾಗುವುದು. ಸೋಂಕು ದೃಢಪಟ್ಟ ಅಥವಾ ಜ್ವರದ ಲಕ್ಷಣಗಳು ಕಾಣಿಸಿಕೊಂಡ ಪ್ರಯಾಣಿಕರನ್ನು ಕ್ವಾರಂಟೈನ್‌ನಲ್ಲಿ ಇರಿಸಲಾಗುವುದು ಎಂದರು.

ಈ ಐದೂ ದೇಶಗಳಿಂದ ಬರುವ ಪ್ರಯಾಣಿಕರು 'ಏರ್ ಸುವಿಧಾ' ಪೋರ್ಟಲ್‌ನಲ್ಲಿ ತಮ್ಮ ಆರೋಗ್ಯ ಮಾಹಿತಿ ಭರ್ತಿ ಮಾಡುವುದನ್ನು ಮತ್ತೆ ಕಡ್ಡಾಯ ಮಾಡಲಾಗಿದೆ. ಇವರು ಮುಂಚಿತವಾಗಿಯೇ ಆರ್‌ಟಿ–ಪಿಸಿಆರ್ ಪ್ರಮಾಣಪತ್ರವನ್ನು ಅಪ್‌ಲೋಡ್ ಮಾಡಬೇಕು ಎಂದು ಸಚಿವರು ಹೇಳಿದರು.

ಇನ್ನಷ್ಟು ಸುದ್ದಿಗಳು 8

ಶಾಹಿ ಈದ್ಗಾ ಮಸೀದಿ ಸಮೀಕ್ಷೆ ಮಥುರಾ ಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಲಖನೌ: ಶ್ರೀಕೃಷ್ಣ ಜನ್ಮಭೂಮಿಯ ಪಕ್ಕದಲ್ಲಿರುವ ಶಾಹಿ ಈದ್ಗಾ ಮಸೀದಿ ಸಂಕೀರ್ಣದ ಸಮೀಕ್ಷೆಗೆ ಮಥುರಾದ ಜಿಲ್ಲಾ ನ್ಯಾಯಾಲಯವು ಶನಿವಾರ ಆದೇಶ ನೀಡಿದೆ.

ಹಿಂದೂ ಸೇನಾದ ಅಧ್ಯಕ್ಷ ವಿಷ್ಣು ಗುಪ್ತಾ ಮತ್ತು ಉಪಾಧ್ಯಕ್ಷ ಸುರ್ಜಿತ್ ಸಿಂಗ್ ಯಾದವ್ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಮೂರನೇ ಸಿವಿಲ್ ನ್ಯಾಯಾಧೀಶರಾದ ಸೋನಿಕಾ ವರ್ಮಾ ಅವರು ಈ ಆದೇಶ ನೀಡಿದ್ದಾರೆ. ವಿವಾದಿತ ಸ್ಥಳದ ಸಮೀಕ್ಷೆ ನಡೆಸಿ ಜ.20ರೊಳಗೆ ವರದಿ ಸಲ್ಲಿಸುವಂತೆ 'ಅಮಿನ್'ಗೆ (ಕಂದಾಯ ಅಧಿಕಾರಿ) ನ್ಯಾಯಾಲಯವು ಸೂಚಿಸಿದೆ. ಜ.20ರಂದು ಪ್ರಕರಣ ಮತ್ತೆ ವಿಚಾರಣೆಗೆ ಬರಲಿದೆ.

ಶ್ರೀಕೃಷ್ಣ ಜನ್ಮಭೂಮಿಯ ಒಂದು ಭಾಗವನ್ನು ಕೆಡವಿ, ಮೊಘಲ್ ದೊರೆ ಔರಂಗಜೇಬನು ಶಾಹಿ ಈದ್ಗಾ ಮಸೀದಿ ನಿರ್ಮಿಸಿದ್ದಾನೆ ಎಂದು ಅರ್ಜಿದಾರರಾದ ವಿಷ್ಣು ಮತ್ತು ಸುರ್ಜಿತ್ ಸಿಂಗ್ ತಮ್ಮ ಅರ್ಜಿಯಲ್ಲಿ ವಾದಿಸಿದ್ದಾರೆ.

7ನೇ ಪುಟ ನೋಡಿ

‘ಕೊರೊನಾ: ತುಳಸಿ ಹಾಕಿದ ನೀರು ಸೇವಿಸಿ’

ಮಂಗಳೂರು: ‘ನಾನು ತುಳಸಿ ಮಾಲೆಯನ್ನು ಧರಿಸುತ್ತೇನೆ. ತುಳಸಿಯು ಹೆಚ್ಚಿನ ಆಮ್ಲಜನಕವನ್ನು ನೀಡುತ್ತದೆ. ತುಳಸಿ ಹಾಕಿದ ನೀರನ್ನು ಸೇವಿಸಿದರೆ ಕೊರೊನಾ ಬರುವುದಿಲ್ಲ’ ಎಂದು ಸಂಸದೆ ಪ್ರಜ್ಞಾ ಸಿಂಗ್ ಠಾಕೂರ್ ತಿಳಿಸಿದರು.

ಶಿವಮೊಗ್ಗದಲ್ಲಿ ಹಿಂದೂ ಜಾಗರಣ ಮಂಚ್‌ನ ಕಾರ್ಯಕ್ರಮದಲ್ಲಿ ಭಾಗಿಯಾಗಲು ಬಜಪೆಯ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಶನಿವಾರ ಬಂದಿಳಿದ ಅವರು ಸುದ್ದಿಗಾರರ ಜೊತೆ ಮಾತನಾಡಿದರು.

2019ನೇ ಸಾಲಿನ ಪುಸ್ತಕ ಖರೀದಿಗೆ ಇನ್ನೂ ಪಾವತಿಯಾಗದ ಹಣ

ಪರಿಷ್ಕರಣೆಯಾಗದ ದರ: ಸಂಕಷ್ಟದಲ್ಲಿ ಪುಸ್ತಕೋದ್ಯಮ

• ವರುಣ ಹೆಗಡೆ

ಬೆಂಗಳೂರು: ಸಾರ್ವಜನಿಕ ಗ್ರಂಥಾಲಯ ಇಲಾಖೆ ಖರೀದಿ ಮಾಡುವ ಪುಸ್ತಕಗಳ ಪುಟದ ದರವನ್ನು ಐದು ವರ್ಷಗಳಿಂದ ಪರಿಷ್ಕರಿಸದ ಸರ್ಕಾರ, ಏಕಗವಾಕ್ಷಿ ಯೋಜನೆಯಡಿ ಖರೀದಿಸಲ್ಪಟ್ಟ 2019ನೇ ಸಾಲಿನ ಪುಸ್ತಕಗಳ ಪೂರ್ಣ ಹಣವನ್ನು ಪಾವತಿಸಿಲ್ಲ. ಇದರಿಂದಾಗಿ ಪುಸ್ತಕೋದ್ಯಮಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಕಾಗದ ಹಾಗೂ ಮುದ್ರಣದ ದರ ಏರಿಕೆಯ ಕಾರಣ ಪ್ರಕಾಶಕರು, ಗ್ರಂಥಾಲಯ ಇಲಾಖೆ ಖರೀದಿಸುವ ಪುಸ್ತಕಗಳ ಪುಟದ ಬೆಲೆ ಪರಿಷ್ಕರಿಸುವಂತೆ ಸರ್ಕಾರಕ್ಕೆ ಆಗ್ರಹಿಸುತ್ತಾ ಬಂದಿದ್ದಾರೆ. ಸದ್ಯ ಪುಟವೊಂದಕ್ಕೆ 70 ಪೈಸೆಯಿದ್ದು, 30 ಪೈಸೆ ಹೆಚ್ಚಿಸಬೇಕು ಎನ್ನುವುದು ಪ್ರಕಾಶಕರ ಒತ್ತಾಯ. ಆಗ ಪುಟವೊಂದಕ್ಕೆ ₹ 1 ನಿಗದಿಯಾಗಲಿದೆ. ಆದರೆ, ಸರ್ಕಾರವು ಈ ಪ್ರಸ್ತಾವವನ್ನು ತಿರಸ್ಕರಿಸಿದೆ. ಇನ್ನೊಂದೆಡೆ ಏಕಗವಾಕ್ಷಿ ಯೋಜನೆಯಡಿ 2019ನೇ ಸಾಲಿನ ಪುಸ್ತಕ ಖರೀದಿಗೆ ಸಂಬಂಧಿಸಿದಂತೆ ಗ್ರಂಥಾಲಯ ಇಲಾಖೆಯು ₹ 8.40 ಕೋಟಿ ಬಾಕಿ ಉಳಿಸಿಕೊಂಡಿದೆ. ಇದು ಪ್ರಕಾಶಕರ ಅಸಮಾಧಾನಕ್ಕೆ ಕಾರಣವಾಗಿದೆ.

ರಾಜ್ಯದಲ್ಲಿ ಸುಮಾರು 500 ಪ್ರಕಾಶನ ಸಂಸ್ಥೆಗಳಿವೆ. ಕೆಲವು ಲೇಖಕರು ಕೂಡ ಪ್ರಕಾಶನ ಕಾರ್ಯದಲ್ಲಿ ನಿರತರಾಗಿದ್ದಾರೆ. ಪ್ರತಿ ವರ್ಷ ಸುಮಾರು 8 ಸಾವಿರ ಪುಸ್ತಕಗಳು ಪ್ರಕಟವಾಗುತ್ತಿವೆ. ಬಹುತೇಕ ಪ್ರಕಾಶಕರು ಗ್ರಂಥಾಲಯ ಇಲಾಖೆಯ ಸಗಟು ಖರೀದಿಯನ್ನೇ ಅವಲಂಬಿಸಿದ್ದಾರೆ. ಏಕಗವಾಕ್ಷಿ ಯೋಜನೆಯಡಿ ಆಯ್ಕೆಯಾದ ಪ್ರತಿ ಶೀರ್ಷಿಕೆಯ 300 ಪ್ರತಿಗಳನ್ನು ಇಲಾಖೆಯು ಖರೀದಿಸಲಿದೆ. ಇದಕ್ಕಾಗಿ ಪ್ರತಿವರ್ಷ ₹ 15 ಕೋಟಿ ವೆಚ್ಚ ಮಾಡಲಾಗುತ್ತಿದೆ. ಸರ್ಕಾರವು 2017ರಲ್ಲಿ ಪುಸ್ತಕಗಳ ಪುಟದ ಬೆಲೆಯನ್ನು ಪರಿಷ್ಕರಿಸಿ, 20 ಪೈಸೆ ಹೆಚ್ಚಳ ಮಾಡಿತ್ತು. ಬಳಿಕ ಪುಟಗಳ ದರವನ್ನು ಪರಿಷ್ಕರಿಸಿಲ್ಲ.

ಅರ್ಧದಷ್ಟು ಹಣ: ಏಕಗವಾಕ್ಷಿ ಯೋಜನೆಯಡಿ 2019ರಲ್ಲಿ ಪ್ರಕಟವಾದ 3,704 ಪುಸ್ತಕಗಳನ್ನು ತಲಾ 300 ಪ್ರತಿಗಳಂತೆ ಖರೀದಿಸಲಾಗಿದೆ. ಈ ಪುಸ್ತಕಗಳ ಒಟ್ಟು ಮೊತ್ತದಲ್ಲಿ ₹ 8 ಕೋಟಿಯನ್ನು ಮಾತ್ರ ಪಾವತಿಸಲಾಗಿದೆ. ಇನ್ನುಳಿದ ಮೊತ್ತವನ್ನು ಹಾಗೇ ಉಳಿಸಿಕೊಂಡಿದೆ. ಈಗ 2020ನೇ ಸಾಲಿನ ಪುಸ್ತಕಗಳ ಆಯ್ಕೆ ಪ್ರಕ್ರಿಯೆ ನಡೆದಿದ್ದು, ಪೂರ್ಣ ಅನುದಾನ ಬಿಡುಗಡೆಯಾಗುವ ಬಗ್ಗೆ ಪ್ರಕಾಶಕರಿಗೆ ಖಚಿತತೆ ಇಲ್ಲವಾಗಿದೆ.

‘ಸರ್ಕಾರದಿಂದ ನಾವು ವಿಶೇಷ ಸೌಲಭ್ಯ, ನೆರವನ್ನು ಕೇಳುತ್ತಿಲ್ಲ. ಮುದ್ರಣ ಸಾಮಗ್ರಿಗಳ ವೆಚ್ಚ ಶೇ 70 ರಷ್ಟು ಹೆಚ್ಚಳವಾಗಿದೆ. ಆದ್ದರಿಂದ ಏಕಗವಾಕ್ಷಿ ಯೋಜನೆಯಡಿ ಖರೀದಿಸುವ ಪುಸ್ತಕಗಳ ಪುಟದ ದರವನ್ನು ಪರಿಷ್ಕರಿಸಬೇಕು. ಕನಿಷ್ಠ 30 ಪೈಸೆಯಾದರೂ ಹೆಚ್ಚಿಸಬೇಕು. ಪುಸ್ತಕೋದ್ಯಮವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಈಗಾಗಲೇ ಇರುವ ಯೋಜನೆಯಡಿ ಪುಸ್ತಕಗಳ ಖರೀದಿಗೆ ನಿಯಮಿತವಾಗಿ ಅನುದಾನ ಬಿಡುಗಡೆ ಮಾಡಬೇಕು’ ಎಂದು ಸೃಷ್ಟಿ ಪ್ರಕಾಶನದ ಸೃಷ್ಟಿ ನಾಗೇಶ್ ತಿಳಿಸಿದರು.

₹ 4 ಕೋಟಿ ಅನುದಾನ ಅಗತ್ಯ

‘ಸರ್ಕಾರವು ಪುಸ್ತಕಗಳ ಪುಟದ ದರವನ್ನು ಪರಿಷ್ಕರಿಸಿ, 30 ಪೈಸೆ ಹೆಚ್ಚಿಸಿದಲ್ಲಿ ಹೆಚ್ಚುವರಿಯಾಗಿ ₹ 4 ಕೋಟಿ ಅನುದಾನ ಬೇಕಾಗುತ್ತದೆ. ವಿವಿಧ ಯೋಜನೆಗಳಿಗೆ ನೂರಾರು ಕೋಟಿ ರೂಪಾಯಿ ಹಂಚಿಕೆ ಮಾಡುವ ಸರ್ಕಾರ, ಪುಸ್ತಕೋದ್ಯಮವನ್ನು ಕಡೆಗಣಿಸಿದೆ. ಮುದ್ರಣ ಕಾಗದದ ಮೇಲಿನ ಜಿಎಸ್‌ಟಿ ಶೇ 5 ರಿಂದ ಶೇ 18 ಕ್ಕೆ ಏರಿಕೆ ಆಗಿದೆ. ಕಾಗದದ ದರವೂ ಹೆಚ್ಚಳವಾಗಿದೆ. ಆದ್ದರಿಂದ ದರ ಪರಿಷ್ಕರಿಸಬೇಕು’ ಎಂದು ಪ್ರಕಾಶ್ ಕಂಬತ್ತಳ್ಳಿ ಆಗ್ರಹಿಸಿದರು.

‘ಸಾರ್ವಜನಿಕರಿಂದ ವಸೂಲಿ ಆಗುವ ಗ್ರಂಥಾಲಯ ಕರದಿಂದ ಇಲಾಖೆಯ ಆರ್ಥಿಕ ವ್ಯವಹಾರಗಳು ನಡೆಯುತ್ತವೆ. ಆದರೆ ಈವರೆಗೂ ಬಿಬಿಎಂಪಿ, ನಗರಸಭೆ ಹಾಗೂ ಪುರಸಭೆಗಳು ಸಂಗ್ರಹವಾದ ಕರವನ್ನು ಇಲಾಖೆಗೆ ನೀಡಿಲ್ಲ. ಇದರಿಂದಾಗಿ ಪುಸ್ತಕ ಖರೀದಿ ಹಾಗೂ ಇತರೇ ಅಭಿವೃದ್ಧಿ ಕೆಲಸಗಳಿಗೆ ಹಿನ್ನಡೆಯಾಗಿದೆ. ಬಿಬಿಎಂಪಿಯೇ ಸುಮಾರು ₹ 500 ಕೋಟಿ ಗ್ರಂಥಾಲಯ ಕರವನ್ನು ಬಾಕಿ ಉಳಿಸಿಕೊಂಡಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಪುಸ್ತಕಗಳನ್ನು ಸರಕಿನಂತೆ ನೋಡದೆ, ಸಂಸ್ಕೃತಿಯೆಂದು ಅರಿತು ಪ್ರೋತ್ಸಾಹಿಸಬೇಕು. ತುರ್ತಾಗಿ ಪುಟಗಳ ದರವನ್ನು ಸರ್ಕಾರ ಪರಿಷ್ಕರಿಸಬೇಕು.
ಪ್ರಕಾಶ್ ಕಂಬತ್ತಳ್ಳಿ, ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷ

ಪುಟಗಳ ದರ ಪರಿಷ್ಕರಣೆ ಸರ್ಕಾರದ ಮಟ್ಟದಲ್ಲಿದೆ. ಪುಸ್ತಕ ಖರೀದಿಯ ಬಾಕಿ ಅನುದಾನ ಬಿಡುಗಡೆಯ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.
ಸತೀಶ್ ಕುಮಾರ್ ಹೊಸಮನಿ, ಗ್ರಂಥಾಲಯ ಇಲಾಖೆ ನಿರ್ದೇಶಕ

ರಾಷ್ಟ್ರ ಮಟ್ಟದ ಚರ್ಚಾ, ನಾಟಕ ಸ್ಪರ್ಧೆ

ಬೆಂಗಳೂರು: ದಯಾನಂದ ಸಾಗರ್ ಪದವಿಪೂರ್ವ ಕಾಲೇಜು ರಾಷ್ಟ್ರ ಮಟ್ಟದ ಅಂತರ ಶಾಲಾ–ಕಾಲೇಜು ಚರ್ಚಾ ಹಾಗೂ ನಾಟಕ ಸ್ಪರ್ಧೆ ಹಮ್ಮಿಕೊಂಡಿದೆ.

9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ಚರ್ಚಾ ಸ್ಪರ್ಧೆ, 11 ಹಾಗೂ 12ನೇ ತರಗತಿ ವಿದ್ಯಾರ್ಥಿಗಳಿಗೆ ಬೀದಿ ನಾಟಕ ಸ್ಪರ್ಧೆ ಏರ್ಪಡಿಸಲಾಗಿದೆ. ಸ್ಪರ್ಧೆಯು ‘ಜಾಗತಿಕ ತಾಪಮಾನ ಹಾಗೂ ಹವಾಮಾನ ಬದಲಾವಣೆ’ ವಿಷಯದ ಮೇಲೆ ನಡೆಯಲಿದೆ. ವಿದ್ಯಾರ್ಥಿಗಳ ಕ್ರಿಯಾಶೀಲತೆ ಅನಾವರಣಕ್ಕೂ ಅವಕಾಶ ಕಲ್ಪಿಸಲಾಗಿದ್ದು, ತಮ್ಮ ಆಲೋಚನೆಗಳಿಗೆ ರೂಪ ನೀಡಿ, ಕಾರ್ಯಗತಗೊಳಿಸಬಹುದಾಗಿದೆ. ವಿದ್ಯಾರ್ಥಿಗಳು ರೂಪಿಸಿದ ಪ್ರಾಜೆಕ್ಟ್‌ಗಳ ಪ್ರದರ್ಶನಕ್ಕೂ ಅವಕಾಶ ಇರಲಿದೆ. ಕಿರಿಯ ಮತ್ತು ಹಿರಿಯರ ವಿಭಾಗದಲ್ಲಿ ಸ್ಪರ್ಧೆ ನಡೆಯಲಿದ್ದು, ಪ್ರಥಮ ಬಹುಮಾನ ₹ 15 ಸಾವಿರ, ದ್ವಿತೀಯ ಬಹುಮಾನ ₹ 12 ಸಾವಿರ ಹಾಗೂ ತೃತೀಯ ಬಹುಮಾನ ₹ 10 ಸಾವಿರ ನಗದು ಇರಲಿದೆ. 2023ರ ಜ.18 ಹೆಸರು ನೋಂದಣಿಗೆ ಕಡೆಯ ದಿನಾಂಕವಾಗಿದೆ. ನೋಂದಣಿ ಹಾಗೂ ವಿವರಕ್ಕೆ ಮೊ.9448508659 ಅಥವಾ 9945490638ಕ್ಕೆ ಸಂಪರ್ಕಿಸಬಹುದು.

ಸುದ್ದಿ 2 ನಿಮಿಷ

ಪಬ್ಲಿಕ್ ಪರೀಕ್ಷೆ: ಯಾರನ್ನೂ ಅನುತ್ತೀರ್ಣ ಮಾಡಲ್ಲ– ನಾಗೇಶ್

ತುಮಕೂರು: ಮಕ್ಕಳ ಮೌಲ್ಯಮಾಪನ ಉದ್ದೇಶದಿಂದ 5ನೇ ಮತ್ತು 8ನೇ ತರಗತಿ ವಿದ್ಯಾರ್ಥಿಗಳಿಗೆ ಪಬ್ಲಿಕ್ ಪರೀಕ್ಷೆ ಮಾಡಲಾಗುತ್ತಿದೆ. ಇದರಲ್ಲಿ ಯಾರನ್ನೂ ಅನುತ್ತೀರ್ಣ ಮಾಡುವುದಿಲ್ಲ ಎಂದು ಶಾಲಾ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಸ್ಪಷ್ಟಪಡಿಸಿದರು.

‘ರುಪ್ಸಾ’ ಸಂಘಟನೆ, ಜಿಲ್ಲಾ ಅನುದಾನರಹಿತ ಶಾಲಾ ಆಡಳಿತ ಮಂಡಳಿ ಒಕ್ಕೂಟ ಟ್ರಸ್ಟ್ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಶೈಕ್ಷಣಿಕ ಸಮಾವೇಶದಲ್ಲಿ ಈ ವಿಷಯ ತಿಳಿಸಿದರು. ‘ಮುಂದಿನ ದಿನಗಳಲ್ಲಿ ಎನ್‌ಇಪಿ ಆಧಾರದ ಮೇಲೆ ತರಗತಿ ಆರಂಭಿಸಲಾಗುತ್ತದೆ. ಪ್ರಾರಂಭಿಕ ಹಂತದಲ್ಲಿ 500ರಿಂದ 600 ಶಾಲೆಗಳಲ್ಲಿ ಎನ್‌ಇಪಿ ಜಾರಿ ಮಾಡಲಾಗುತ್ತದೆ’ ಎಂದರು.

ಸತ್ಯದ ಜಾಗದಲ್ಲಿ ಸುಳ್ಳನ್ನು ಇರಿಸುವ ಕೆಲಸ ಆಗಲಿ: ಬರಗೂರು



ಬೆಂಗಳೂರು: ‘ರಾಜಕಾರಣಿಗಳು ತಮ್ಮ ಲಾಭಕ್ಕಾಗಿ ಸತ್ಯದ ಜಾಗದಲ್ಲಿ ಸುಳ್ಳನ್ನು ಇರಿಸುವ ಕೆಲಸ ಮಾಡುತ್ತಿದ್ದಾರೆ. ಸಾಹಿತಿಗಳು ಹಾಗೂ ಬುದ್ಧಿಜೀವಿಗಳು ಸತ್ಯದ ಜಾಗದಲ್ಲಿ ಸತ್ಯವನ್ನೇ ಕುಳಿಸುವ ಕೆಲಸ ಮಾಡಬೇಕು’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ಬೆಂಗಳೂರು ಸೌತ್ ಇಂಡಸ್ಟ್ರಿಯಲ್ ವರ್ಕರ್ಸ್ ಯೂನಿಯನ್ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಬಹುಭಾಷಾ ಕವಿಗೋಷ್ಠಿ ಉದ್ಘಾಟಿಸಿ ಮಾತನಾಡಿದರು. ‘ಸಾಹಿತಿಗಳು ಹಾಗೂ ಕಲಾವಿದರು ಜನಮನ್ನಣೆ ಬಯಸುತ್ತಾರೆ. ಅದೇ ರೀತಿ, ಅವರು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು ಎಂದು ಜನರು ಬಯಸುತ್ತಾರೆ. ಆದ್ದರಿಂದ ಸಾಹಿತ್ಯ ವಲಯದವರು ಜವಾಬ್ದಾರಿಯಿಂದ ವರ್ತಿಸಬೇಕು. ಬರವಣಿಗೆಗೆ ಕಟ್ಟುಪಾಡುಗಳನ್ನು ವಿಧಿಸುತ್ತಿರುವ ಈ ಕಾಲದಲ್ಲಿ ಕೆಲವರು ಸತ್ಯವನ್ನು ದರ್ಶನ ಮಾಡಿಸುವ ಕೆಲಸ ಮಾಡುತ್ತಿದ್ದಾರೆ. ಇಂತಹ ಕಾರ್ಯ ಹೆಚ್ಚಬೇಕು’ ಎಂದು ಹೇಳಿದರು.

ಕವಿಗಳಾದ ಎಲ್.ಎನ್ ಮುಕುಂದರಾಜ್, ಶಾಯಿಸ್ತಾ ಯೂಸಫ್, ಎಸ್.ಕೆ. ಸಲೀಮಾ, ಸುಷ್ಮಾ ಶಂಕರ್, ಮಮತಾ ಜಿ. ಸಾಗರ, ವಿಲ್ಸನ್ ಕಟೀಲ್, ಮಲರ್ ವಿಳಿ, ಸರ್ದಾರ್ ವಹಾಬ್ ದಾನಿಶ್, ಮಂಜುಳಾ ಹುಲಿಕುಂಟೆ, ದಾದಾಪೀರ್ ಜೈಮನ್, ಚಾಂದ್ ಪಾಷಾ ಹಾಗೂ ಚೈತ್ರಾ ಶಿವಯೋಗಿಮಠ ಅವರು ಕವನ ವಾಚಿಸಿದರು.

ಚಾಲಕ, ಮಹಿಳೆ ಸುಲಿಗೆ: ನಾಲ್ವರ ಸೆರೆ

ಬೆಂಗಳೂರು: ರಸ್ತೆಯಲ್ಲಿ ಒಂಟಿಯಾಗಿ ಓಡಾಡುವ ಜನರನ್ನು ಬೆದರಿಸಿ ಸುಲಿಗೆ ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಈಶಾನ್ಯ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

‘ಯಲಹಂಕ ಎ.ಕೆ. ಕಾಲೊನಿಯ ನರೇಶ್ (20), ಅಭಿಷೇಕ್ (20), ರಾಹುಲ್ (19) ಹಾಗೂ ಆರ್.ಟಿ. ನಗರದ ಎ. ಜಾನ್ (33) ಬಂಧಿತರು. ಇವರಿಂದ ₹ 3.15 ಲಕ್ಷ ಮೌಲ್ಯದ ಚಿನ್ನಾಭರಣ, 2 ದ್ವಿಚಕ್ರ ವಾಹನ ಹಾಗೂ ಮೂರು ಮೊಬೈಲ್ ಜಪ್ತಿ ಮಾಡಲಾಗಿದೆ. ಇವರ ವಿರುದ್ಧ ಚಿಕ್ಕಜಾಲ ಹಾಗೂ ಕೊಡಿಗೇಹಳ್ಳಿ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ’ ಎಂದು ಪೊಲೀಸರು ಹೇಳಿದರು.

ಡ್ರಗ್ಸ್ ಮಾರಾಟ: ಚಾಲಕ ಬಂಧನ

ಬೆಂಗಳೂರು: ಕೇರಳದಿಂದ ಬಂದು ಡ್ರಗ್ಸ್ ಮಾರುತ್ತಿದ್ದ ಆರೋಪಿ ಪಿ.ಎಚ್. ಶಬೀರ್‌ನನ್ನು (26) ಬಾಣಸವಾಡಿ ಪೊಲೀಸರು ಬಂಧಿಸಿದ್ದಾರೆ.

‘ಶಬೀರ್, ಹಲವು ತಿಂಗಳ ಹಿಂದೆ ನಗರಕ್ಕೆ ಬಂದಿದ್ದ. ಅಕ್ರಮ ಸಂಪಾದನೆಗಾಗಿ ಡ್ರಗ್ಸ್ ಮಾರಾಟಕ್ಕೆ ಇಳಿದಿದ್ದ. ಈತನಿಂದ ₹ 2 ಲಕ್ಷ ಮೌಲ್ಯದ 263 ಕೆ.ಜಿ. 700 ಗ್ರಾಂ ಡ್ರಗ್ಸ್ ಜಪ್ತಿ ಮಾಡಲಾಗಿದೆ. ಕ್ಯಾಬ್ ಚಾಲಕರಾಗಿದ್ದ ಶಬೀರ್‌ಗೆ ಅದರಿಂದ ಬರುತ್ತಿದ್ದ ಹಣ ಜೀವನ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ. ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ಈತ, ಹೆಚ್ಚು ಹಣ ಸಂಪಾದಿಸಬೇಕೆಂದು ಡ್ರಗ್ಸ್ ಮಾರಲಾರಂಭಿಸಿದ್ದ. ಕೇರಳ ಹಾಗೂ ನಗರದ ಕೆಲ ಪೆಡ್ಲರ್ ಜೊತೆ ಒಡನಾಟ ಹೊಂದಿದ್ದ ಆರೋಪಿ, ಕಡಿಮೆ ಬೆಲೆಗೆ ಡ್ರಗ್ಸ್ ಖರೀದಿಸಿ ತಂದು ಗ್ರಾಹಕರಿಗೆ ಮಾರುತ್ತಿದ್ದ’ ಎಂದು ತಿಳಿಸಿದ್ದಾರೆ.



ಬಾಲ ಏಸು ಮೂರ್ತಿ ಪೂಜೆ

ಕ್ರಿಸ್‌ಮಸ್ ಅಂಗವಾಗಿ ನಗರದ ಸೇಂಟ್ ಮೇರಿಸ್ ಬೆಸಿಲಿಕಾ ಚರ್ಚ್‌ನಲ್ಲಿ ಶನಿವಾರ ಫಾ.ಮಾರ್ಟಿನ್ ಕುಮಾರ್ ಅವರು ಬಾಲ ಏಸುವಿನ ಮೂರ್ತಿಯನ್ನು ಗೋದಲಿಯಲ್ಲಿಟ್ಟು ಪೂಜಿಸಿದರು.

ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಸುಬೇದಾರ್ ಪಾಳ್ಯ: ಆರೋಗ್ಯ ಕೇಂದ್ರ ಉದ್ಘಾಟನೆ

ಬೆಂಗಳೂರು: ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಸುಬೇದಾರ್ ಪಾಳ್ಯದಲ್ಲಿ (ವಾರ್ಡ್ ನಂ.61) ನೂತನವಾಗಿ ನಿರ್ಮಿಸಿರುವ ಸಮಗ್ರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಶಾಸಕ ಬಿ.ಎಸ್. ಯಡಿಯೂರಪ್ಪ ಅವರು ಶನಿವಾರ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಯಡಿಯೂರಪ್ಪ, ‘ಒಬ್ಬ ಜನಪ್ರತಿನಿಧಿಗೆ ಮನಸ್ಸಿದ್ದರೆ ತಮ್ಮ ಕ್ಷೇತ್ರವನ್ನು ಹೇಗೆ ಮಾದರಿಯಾಗಿ ಅಭಿವೃದ್ಧಿಪಡಿಸಬಹುದು ಎನ್ನುವುದಕ್ಕೆ ಅಶ್ವತ್ಥನಾರಾಯಣ ಉದಾಹರಣೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

‘ಮಲ್ಲೇಶ್ವರ ವ್ಯಾಪ್ತಿಯಲ್ಲಿ ಆರೋಗ್ಯ, ಶಿಕ್ಷಣ, ನಾಗರಿಕ ಸೇವೆಗಳು ಸೇರಿ ಎಲ್ಲವೂ ಸುಗಮವಾಗಿ ನಡೆಯುತ್ತಿವೆ. ಇದು ಕೇವಲ ಹಣ ಮತ್ತು ಶ್ರೀಮಂತಿಕೆಯಿಂದ ಆಗುವುದಿಲ್ಲ. ಇದಕ್ಕೆ ಜನಪರವಾದ ಕಳಕಳಿ ಬೇಕು’ ಎಂದರು.

ಕ್ಷೇತ್ರದ ಶಾಸಕರೂ ಆಗಿರುವ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, ‘ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ದಾಖಲೆಗಳ ಅವಶ್ಯಕತೆ ಇಲ್ಲ. ಯಾರು ಬೇಕಾದರೂ ಉಚಿತವಾಗಿ ಚಿಕಿತ್ಸೆ ಪಡೆಯಬಹುದು. ಇಲ್ಲಿ 220 ರೀತಿಯ ಪರೀಕ್ಷೆಗಳು ಲಭ್ಯವಿವೆ’ ಎಂದು ಹೇಳಿದರು.

‘ಅರ್ಹ ರೋಗಿಗಳಿಗೆ ಔಷಧಗಳನ್ನು ಸಹ ಉಚಿತವಾಗಿ ನೀಡಲಾಗುವುದು. ಇಲ್ಲದಿದ್ದರೆ ಪ್ರಧಾನಮಂತ್ರಿ ಜನೌಷಧಿ ಕೇಂದ್ರದಿಂದ ರಿಯಾಯಿತಿ ದರದಲ್ಲಿ ಪೂರೈಸಲಾಗುವುದು’ ಎಂದೂ ಮಾಹಿತಿ ನೀಡಿದರು.

‘ಕ್ಷೇತ್ರದಲ್ಲಿರುವ ಕೆ.ಸಿ. ಜನರಲ್ ಆಸ್ಪತ್ರೆ, ಗುಟ್ಟಹಳ್ಳಿ, ಮತ್ತೀಕೆರೆ ಸೇರಿ ಹಲವೆಡೆಗಳಲ್ಲಿ ಒಂದೇ ಸ್ಥಳದಲ್ಲಿ ಎಲ್ಲ ಚಿಕಿತ್ಸೆಯೂ ಸಿಗುವಂತೆ ಪರಿಪೂರ್ಣ ವ್ಯವಸ್ಥೆ ಮಾಡಲಾಗಿದೆ. ಉಳಿದ ವಾರ್ಡ್‌ಗಳಲ್ಲೂ ಇನ್ನು ಕೆಲವೇ ತಿಂಗಳಲ್ಲಿ ಇಂತಹ ಅನುಕೂಲ ಒದಗಿಸಲಾಗುವುದು’ ಎಂದರು.

ಬಿಬಿಎಂಪಿ ಆರೋಗ್ಯ ವಿಭಾಗದ ಆಯುಕ್ತ ಡಾ. ತ್ರಿಲೋಕಚಂದ್ರ, ಮಲ್ಲೇಶ್ವರ ಆರೋಗ್ಯಾಧಿಕಾರಿ ಡಾ. ಮನೋರಂಜನ್ ಹೆಗಡೆ, ಲೋಕೇಶ್, ಪಾಲಿಕೆ ಮಾಜಿ ಸದಸ್ಯರಾದ ಜಯಪ್ರಕಾಶ್, ಜೈಪಾಲ್ ಇದ್ದರು.

ರಷ್ಯಾ: ಕಟ್ಟಡದಲ್ಲಿ ಬೆಂಕಿ- 22 ಸಾವು

ಮಾಸ್ಕೊ (ಎಪಿ): ಸೈಬೀರಿಯಾದ ಕೆಮೆರೊವೊ ನಗರದಲ್ಲಿ ಎರಡು ಅಂತಸ್ತಿನ ಖಾಸಗಿ ಕಟ್ಟಡವೊಂದರಲ್ಲಿ ಅಗ್ನಿ ಅನಾಹುತ ಸಂಭವಿಸಿದ್ದು, 22 ಮಂದಿ ಮೃತಪಟ್ಟಿದ್ದಾರೆ ಎಂದು ರಷ್ಯಾದ ತುರ್ತು ಸಂದರ್ಭದ ಸಚಿವಾಲಯ ಶನಿವಾರ ತಿಳಿಸಿದೆ.

ಜೀವನದಲ್ಲಿ ಕಠಿಣ ಪರಿಸ್ಥಿತಿಗಳನ್ನು ಎದುರಿಸುತ್ತಿರುವ ವ್ಯಕ್ತಿಗಳಿಗಾಗಿ, ಈ ಕಟ್ಟಡದಲ್ಲಿ ತಾತ್ಕಾಲಿಕ ವಸತಿ ಸೌಲಭ್ಯ ಕಲ್ಪಿಸಲಾಗಿತ್ತು. ಈ ಕಟ್ಟಡವನ್ನು ಬಾಡಿಗೆಗೆ ಪಡೆದಿದ್ದ ವ್ಯಕ್ತಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಂಧಿತನ ವಿರುದ್ಧ ಕಟ್ಟಡ ನಿಯಮಗಳ ಉಲ್ಲಂಘನೆ ಮತ್ತು 22 ಜನರ ಮೃತ್ಯುವಿಗೆ ಕಾರಣವಾದ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ. ಅಗ್ನಿ ಅನಾಹುತದಲ್ಲಿ ಗಾಯಗೊಂಡಿರುವ ಆರು ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಸುಧಾ-ಮಯೂರ ಓದಿರಿ



ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಗಮನ ದ್ವಾರದಲ್ಲಿ ಸರದಿ ಸಾಲಿನಲ್ಲಿ ಹೋಗುತ್ತಿದ್ದ ಪ್ರಯಾಣಿಕರು

ಒಂದೇ ದಿನ 80 ಸಾವಿರ ಏರ್ ಟಿಕೆಟ್ ಬುಕ್ಕಿಂಗ್!

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೋವಿಡ್ ಭೀತಿಯ ನಡುವೆಯೂ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶನಿವಾರ ಪ್ರಯಾಣಿಕರ ಭಾರಿ ದಟ್ಟಣೆ ಕಂಡು ಬಂದಿತು.

ಕ್ರಿಸ್‌ಮಸ್ ಮತ್ತು ವರ್ಷಾಂತ್ಯ ಆಚರಣೆ ಮತ್ತು ಸಾಲು ಸಾಲು ರಜೆಗಳ ಹಿನ್ನೆಲೆಯಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದೆ. ಶನಿವಾರ ಒಂದೇ ದಿನ 80 ಸಾವಿರಕ್ಕೂ ಹೆಚ್ಚು ಪ್ರಯಾಣಿಕರು ವಿಮಾನ ಟಿಕೆಟ್ ಕಾಯ್ದಿರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬೆಳಗ್ಗೆಯಿಂದಲೇ ವಿಮಾನ ನಿಲ್ದಾಣವು ಪ್ರಯಾಣಿಕರಿಂದ ತುಂಬಿತ್ತು. ಹೆಚ್ಚುವರಿ ಲಗೇಜ್ ಪರಿಶೀಲನೆ, ಶುಲ್ಕ ಪಾವತಿ ಕೌಂಟರ್ ಬಳಿ ಉದ್ದನೆಯ ಸರದಿ ಸಾಲು ಕಂಡು ಬಂದಿತು. ಪ್ರಯಾಣಿಕರನ್ನು ನಿಯಂತ್ರಿಸುವಷ್ಟರಲ್ಲಿ ಭದ್ರತಾ ಸಿಬ್ಬಂದಿ ಹೈರಾಣಾದರು.

ದಟ್ಟನೆ ತಪ್ಪಿಸಲು 3, 4 ಮತ್ತು 9 ನಿರ್ಗಮನ ದ್ವಾರಗಳನ್ನು ಡಿಜಿ ಯಾತ್ರಾ ಬಳಕೆದಾರರಿಗೆ ಮೀಸಲಿಡಲಾಗಿದೆ. ಅದಕ್ಕಾಗಿ ವಾಟ್ಸ್‌ಆ್ಯಪ್ ಸಹಾಯವಾಣಿ 24 ಗಂಟೆ ಕಾರ್ಯ ನಿರ್ವಹಿಸುತ್ತಿದೆ.

ಮಾರ್ಗಸೂಚಿಯಂತೆ ವಿಮಾನ ನಿಲ್ದಾಣದ ಪ್ರಿ ಇಮಿಗ್ರೇಷನ್ ಸ್ಥಳದಲ್ಲಿ ರ‍್ಯಾಂಡಮ್ ಕೋವಿಡ್ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ವಿದೇಶಿ ಪ್ರಯಾಣಿಕರಿಗೆ ಕೋವಿಡ್ ನೆಗೆಟಿವ್ ವರದಿ ಸೇರಿದಂತೆ ಮಾಸ್ಕ್ ಕಡ್ಡಾಯ ಮಾಡಲಾಗಿದೆ.

ಪೂರ್ಣ ಪ್ರಮಾಣದ ಲಸಿಕೆ ಪಡೆದ ಪ್ರಯಾಣಿಕರಿಗೆ ಆರ್‌ಟಿಪಿಸಿಆರ್ ವರದಿ ಅಗತ್ಯ ಇಲ್ಲ. ಪ್ರಯಾಣಿಕರ ದಟ್ಟಣೆ ನಿರ್ವಹಣೆಗೆ ವಿಮಾನ ನಿಲ್ದಾಣ ಸಿಬ್ಬಂದಿ ಸನ್ನದ್ಧವಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಗೌರವಾಧ್ಯಕ್ಷರಾಗಿ ನೇಮಕ




ಡಿ.ಸುರೇಶ್ ಗೌಡ

ಯಲಹಂಕ: ಕರ್ನಾಟಕ ರಾಜ್ಯ ಅಮೆಚೂರ್ ಕಬಡ್ಡಿ ಅಸೋಸಿಯೇಷನ್‌ನ ನೂತನ ಗೌರವಾಧ್ಯಕ್ಷರಾಗಿ ಡಿ.ಸುರೇಶ್ ಗೌಡ ನೇಮಕ ಗೊಂಡಿದ್ದಾರೆ.

ರಾಜ್ಯದಲ್ಲಿ ಕಬಡ್ಡಿ ಕ್ರೀಡೆಯ ಬೆಳವಣಿಗೆಗೆ ಮತ್ತು ಉನ್ನತಮಟ್ಟಕ್ಕೆ ಕೊಂಡೊಯ್ಯುವಲ್ಲಿ ಸುರೇಶ್ ಗೌಡ ಸಲ್ಲಿಸಿರುವ ಸೇವೆ ಪರಿಗಣಿಸಿ, ಅಸೋಸಿಯೇಷನ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಗೌರವಾಧ್ಯಕ್ಷರನ್ನಾಗಿ ನೇಮಿಸಲಾಗಿದೆ ಎಂದು ಅಸೋಸಿಯೇಷನ್ ಅಧ್ಯಕ್ಷ ಎಂ. ಹನುಮಂತೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಮಹೇಶ್ ಕುಮಾರ್



ಎನ್‌.ಕೆ. ಮಹೇಶ್ ಕುಮಾರ್

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಜಾಲಾ ಹೋಬಳಿ ಬ್ಲಾಕ್ ಕಾಂಗ್ರೆಸ್ ಘಟಕದ ನೂತನ ಅಧ್ಯಕ್ಷರಾಗಿ ಎನ್.ಕೆ.ಮಹೇಶ್ ಕುಮಾರ್ ಆಯ್ಕೆಯಾಗಿದ್ದಾರೆ.

ಶಾಸಕ ಕೃಷ್ಣಬೈರೇಗೌಡ ಮತ್ತು ಕ್ಷೇತ್ರದ ಎಲ್ಲಾ ಕಾಂಗ್ರೆಸ್ ಮುಖಂಡರ ಸರ್ವಾನುಮತದ ನಿರ್ಣಯದಂತೆ ಈ ಆಯ್ಕೆಯನ್ನು ಮಾಡಲಾಗಿದೆ ಎಂದು ಕೆಪಿಸಿಸಿ ಸದಸ್ಯ ದಾನೇಗೌಡ ತಿಳಿಸಿದ್ದಾರೆ.

ಪ್ರಸ್ತುತ ದೊಡ್ಡಜಾಲ ಗ್ರಾಮ ಪಂಚಾಯಿತಿಯ ಸದಸ್ಯರಾಗಿರುವ ಇವರು, ಈ ಹಿಂದೆ ಅಧ್ಯಕ್ಷರಾಗಿ ಹಾಗೂ ಬೆಂಗಳೂರು ನಗರ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಕೆಎಂಎಂಸಿಆರ್‌ಗೆ ತಿದ್ದುಪಡಿ ತರಲು ಆಗ್ರಹ

ಎಂ– ಸ್ಯಾಂಡ್ ಪೂರೈಕೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣಿ ಗುತ್ತಿಗೆದಾರರಿಂದ ರಾಜಧನ ಸಂಗ್ರಹಿಸುವುದನ್ನು ಸ್ಥಗಿತಗೊಳಿಸಬೇಕು ಹಾಗೂ ಕೆಎಂಎಂಸಿಆರ್‌–1994ಕ್ಕೆ (ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ) ತಿದ್ದುಪಡಿ ತರಬೇಕು ಎಂದು ಆಗ್ರಹಿಸಿ, ರಾಜ್ಯದಾದ್ಯಂತ ಕಟ್ಟಡ ಕಲ್ಲು, ಎಂ-ಸ್ಯಾಂಡ್ ಉತ್ಪಾದನೆ ಹಾಗೂ ಪೂರೈಕೆಯನ್ನು ಅನಿರ್ದಿಷ್ಟಾವಧಿ ತನಕ ಬಂದ್ ಮಾಡಲು ಫೆಡರೇಷನ್ ಆಫ್ ಕರ್ನಾಟಕ ಕ್ವಾರಿ ಮತ್ತು ಸ್ಟೋನ್ ಕ್ರಷರ್ಸ್ ಅಸೋಸಿಯೇಷನ್ ನಿರ್ಧರಿಸಿದೆ.



ಫೆಡರೇಷನ್ ಆಫ್ ಕರ್ನಾಟಕ ಕ್ವಾರಿ ಮತ್ತು ಸ್ಟೋನ್ ಕ್ರಷರ್ಸ್ ಅಸೋಸಿಯೇಷನ್ ಸದಸ್ಯರು ನಗರದ ಶೇಷಾದ್ರಿಪುರದ ಕಚೇರಿ ಎದುರು ಶನಿವಾರ ಪ್ರತಿಭಟನೆ ನಡೆಸಿದರು

ಈ ಹೋರಾಟಕ್ಕೆ ಲಾರಿ ಮಾಲೀಕರ ಸಂಘವು ಬೆಂಬಲ ನೀಡಿದ್ದು, ಭಾನುವಾರದಿಂದಲೇ (ಡಿ.25) ಸಾಗಾಣಿಕೆ ಸ್ಥಗಿತಗೊಳ್ಳಲಿದೆ. ನೆರೆಯ ರಾಜ್ಯಗಳಿಂದಲೂ ಪೂರೈಕೆ ಸ್ಥಗಿತವಾಗಲಿದೆ ಎಂದು ಸಂಘದವರು ಎಚ್ಚರಿಸಿದ್ದಾರೆ.

ಸರ್ಕಾರದ ಧೋರಣೆ ಖಂಡಿಸಿ ನಗರದ ಶೇಷಾದ್ರಿಪುರ ಸಂಘದ ಕಚೇರಿ ಎದುರು ಪದಾಧಿಕಾರಿಗಳು ಶನಿವಾರ ತಲೆಯ ಮೇಲೆ ಕಟ್ಟಡ ಕಲ್ಲು, ಜಲ್ಲಿ, ಎಂ-ಸ್ಯಾಂಡ್‌ನ ಮೂಟೆ ಹೊತ್ತು ಪ್ರತಿಭಟಿಸಿದರು.

ಕೆಎಂಎಂಸಿಆರ್‌ಗೆ ತಿದ್ದುಪಡಿ ತರದೆ ಕರ್ನಾಟಕ ಸ್ಟೇಟ್ ರಿಮೋಟ್ ಸೆನ್ಸಿಂಗ್ ಅಪ್ಲಿಕೇಷನ್ ಕೇಂದ್ರದಿಂದ ವೇ-ಬ್ರಿಡ್ಜ್, ಜಿಯೊ ಫೆನ್ಸಿಂಗ್, ಮುಂತಾದ ಕ್ರಮ ಅಳವಡಿಸಿದರೆ ಉದ್ಯಮ ನಡೆಸುವುದೇ ಕಷ್ಟವಾಗಲಿದೆ ಎಂದು ಗುತ್ತಿಗೆದಾರರು ಅಳಲು ತೋಡಿಕೊಂಡರು.

ಅಸೋಸಿಯೇಷನ್ ಅಧ್ಯಕ್ಷ ರವೀಂದ್ರ ಶೆಟ್ಟಿ, ‘ಬೇಡಿಕೆ ಈಡೇರುವ ತನಕ ಬಂದ್ ವಾಪಸ್ ಪಡೆಯುವುದಿಲ್ಲ. ಇದರಿಂದ ಜನ ಸಾಮಾನ್ಯರು ಮನೆ ನಿರ್ಮಿಸಲು ತೊಂದರೆ ಎದುರಾಗಲಿದೆ.

ಮುಖ್ಯಾಂಶಗಳು

- ಡಿ.28ರಂದು ಬೆಳಗಾವಿಯಲ್ಲಿ ಬೃಹತ್ ಪ್ರತಿಭಟನೆ
- ಸಮಸ್ಯೆ ಪರಿಹರಿಸಲು ಗಣಿಗುತ್ತಿಗೆದಾರರ ಆಗ್ರಹ

ಸರ್ಕಾರದ ವಿವಿಧ ಮೂಲ ಸೌಕರ್ಯ ನಿರ್ಮಾಣ ಕಾಮಗಾರಿ ಮೇಲೆ ಬಂದ್‌ನಿಂದ ತೀವ್ರ ಪ್ರತಿಕೂಲ ಪರಿಣಾಮ ಬೀರಲಿದೆ’ ಎಂದು ತಿಳಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಗಣಿ ಮತ್ತು ಭೂವಿಜ್ಞಾನ ಸಚಿವರು ಸಮಸ್ಯೆ ಬಗೆಹರಿಸಬೇಕು ಎಂದು ಕೋರಿದರು.

ಕಾನೂನುಬದ್ಧ ಗಣಿಗಾರಿಕೆ ನಡೆಸುವುದಕ್ಕೆ ಪೂರಕ ನಿಯಮಗಳಿಲ್ಲ. ನಿಯಮಗಳ ಸಮಗ್ರ ತಿದ್ದುಪಡಿಯ ಅಗತ್ಯವಿದೆ. ದೂರ ಸಂವೇದಿ ತಂತ್ರಜ್ಞಾನದ ಮೂಲಕ ಡ್ರೋನ್ ಸಮೀಕ್ಷೆ ನಡೆಸುವ ನಿಯಮಗಳಿಗೆ ತಿದ್ದುಪಡಿ ತಂದಿರುವುದು ಸೂಕ್ತವಾಗಿಲ್ಲ. ಇದರಿಂದ ಉದ್ಯಮ ನಡೆಸುವುದು ಕಷ್ಟವಾಗಲಿದೆ ಎಂದು ಉಪಾಧ್ಯಕ್ಷ ಬಿ.ಆರ್.ಕಿರಣ್‌ರಾಜ್ ಹೇಳಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ್, ‘ಬೆಳಗಾವಿಯಲ್ಲಿ ಡಿ.28ರಂದು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ₹ 50 ಸಾವಿರಕ್ಕೂ ಹೆಚ್ಚು ಮಂದಿ ಹೋರಾಟದಲ್ಲಿ ಪಾಲ್ಗೊಳ್ಳಲಿದ್ದಾರೆ. ಕ್ರಷರ್ ಮತ್ತು ಕ್ವಾರಿ ಘಟಕ ಸಹ ಬಂದ್ ಮಾಡಲಾಗುವುದು’ ಎಂದು ಪುರುಷೋತಮ್ ಎಚ್ಚರಿಸಿದರು.

ಸರ್ಕಾರಕ್ಕೆ ರಾಜಧನ ಸಂದಾಯವಾಗಿದೆ. ಮತ್ತೆ ಗಣಿ ಗುತ್ತಿಗೆದಾರರಿಂದ ವಸೂಲಿ ಮಾಡುವುದು ಸರಿಯಲ್ಲ. ಸರ್ಕಾರ ಕಳೆದ 40 ವರ್ಷಗಳಿಂದ ಕಾಮಗಾರಿ ನಿರ್ವಹಣಾ ಇಲಾಖೆಗಳಲ್ಲಿ ರಾಜಧನವನ್ನು ಪಡೆದುಕೊಳ್ಳುತ್ತಿದೆ ಎಂದು ಅಸೋಸಿಯೇಷನ್ ಗೌರವಾಧ್ಯಕ್ಷ ಡಿ. ಸಿದ್ದರಾಜು ಹೇಳಿದರು.

ಅಸೋಸಿಯೇಷನ್ ಅಧ್ಯಕ್ಷ ಷಣ್ಮುಖಪ್ಪ, ಉಪಾಧ್ಯಕ್ಷರಾದ ಸಿಸ್ ಭಾಸ್ಕರ್, ಬಿ.ಎನ್.ಶ್ರೀನಿವಾಸ್, ಮಧುಕುಮಾರ್ ಉಪಸ್ಥಿತರಿದ್ದರು.

ಚಂದಾಪುರ ಕೆರೆ ಪ್ರದೇಶಕ್ಕೆ ಡಿ.ಸಿ ಭೇಟಿ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಚಂದಾಪುರ ಕೆರೆಯ ಕಲುಷಿತ ನೀರನ್ನು ನೈಸರ್ಗಿಕವಾಗಿ ಸಂಸ್ಕರಿಸುವ ಹಿನ್ನೆಲೆಯಲ್ಲಿ ಕೆರೆಯಲ್ಲಿನ ನೀರನ್ನು ಖಾಲಿ ಮಾಡಲು ಅನುಮತಿ ನೀಡಿ ಜಿಲ್ಲಾಧಿಕಾರಿ ಆದೇಶ ನೀಡಿದ್ದಾರೆ.

ಕೆರೆ ಪ್ರದೇಶಕ್ಕೆ ಶನಿವಾರ ಭೇಟಿ ನೀಡಿ ಪರಿಶೀಲಿಸಿದ ಜಿಲ್ಲಾಧಿಕಾರಿ ಕೆ.ಎಸ್. ದಯಾನಂದ್ ಮಾತನಾಡಿ, ಚಂದಾಪುರ ಕೆರೆ ಮತ್ತು ಮುತ್ತಾನಲ್ಲೂರು ಕೆರೆಯ ಕೋಡಿಯನ್ನು ಭಾಗಶಃ ಒಡೆದು ಚಂದಾಪುರ ಕೆರೆಯ ಪೂರ್ಣ ನೀರು ಮತ್ತು ಮುತ್ತಾನಲ್ಲೂರು ಕೆರೆಯ ಭಾಗಶಃ ನೀರನ್ನು ಖಾಲಿ ಮಾಡಿ ಯಥಾಸ್ಥಿತಿಯಲ್ಲಿ ಮರು ನಿರ್ಮಾಣ ಮಾಡಲಾಗುವುದು ಎಂದರು.

ಮಾರ್ಚ್ ಅಂತ್ಯದೊಳಗೆ ಕೈಗೊಂಡ ಪ್ರಗತಿಯ ವರದಿಯನ್ನು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ ನೀಡಬೇಕಾಗಿದೆ. ಹಾಗಾಗಿ ಸಣ್ಣ ನೀರಾವರಿ, ಕಂದಾಯ ಇಲಾಖೆ ಮತ್ತು ಚಂದಾಪುರ ಪುರಸಭೆಯ ಮುಖ್ಯಾಧಿಕಾರಿ ಒಗ್ಗೂಡಿ ಈ ಕಾರ್ಯವನ್ನು ತ್ವರಿತವಾಗಿ ಮಾಡುವಂತೆ ಸೂಚಿಸಲಾಗಿದೆ. ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯಿಂದ ತ್ವರಿತವಾಗಿ ಕಾಮಗಾರಿ ನಿರ್ವಹಿಸಲು ಸೂಚಿಸಲಾಗಿದೆ ಎಂದು ತಿಳಿಸಿದರು.

ವಿದೇಶಗಳಲ್ಲಿ ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿವೆ. ಈ ಹಿನ್ನೆಲೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ದೇಶದಲ್ಲಿ ಹೊಸ ಮಾರ್ಗಸೂಚಿ ಹೊರಡಿಸಿದೆ. ಇದರ ಅನ್ವಯ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದರು.

ಅತ್ತಿಬೆಲೆ ಗಡಿ ಭಾಗದಲ್ಲಿ ಅಂತರ್ ರಾಜ್ಯ ವಾಹನ ಸಂಚಾರ ಇರುವುದರಿಂದ ಗಡಿಯಲ್ಲಿ ತಪಾಸಣೆ ಕೈಗೊಳ್ಳುವ ಸಂಬಂಧ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.



ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ನಾಟಕ ಪ್ರದರ್ಶನಕ್ಕೆ ಕಾಂಗ್ರೆಸ್ ಮುಖಂಡ ವೀರಪ್ಪ ಮೊಯಿಲಿ ಚಾಲನೆ ನೀಡಿದರು. ಹಂಸಲೇಖ, ತುಮ್ಮಲ ರಾಮಕೃಷ್ಣ, ಎಂ.ಎನ್.ವೆಂಕಟೇಶ್, ಕೆ.ವಿ.ನಾಗರಾಜ್ ಮೂರ್ತಿ ಇತರರು ಇದ್ದರು

‘ಕಾಡುತ್ತಿದೆ ಜಾತಿಯ ಕರಿನೆರಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾತಿಯ ಕರಿ ನೆರಳು ನನ್ನನ್ನು ಈಗಲೂ ಕಾಡುತ್ತಿದೆ’ ಎಂದು ಕಾಂಗ್ರೆಸ್ ಮುಖಂಡ ವೀರಪ್ಪ ಮೊಯಿಲಿ ಕಳವಳ ವ್ಯಕ್ತಪಡಿಸಿದರು.

ರವೀಂದ್ರ ಕಲಾಕ್ಷೇತ್ರದಲ್ಲಿ ರಂಗ ವಿಜಯಾ ಟ್ರಸ್ಟ್ ಹಮ್ಮಿಕೊಂಡಿದ್ದ ಪ್ರೊ. ತುಮ್ಮಲ ರಾಮಕೃಷ್ಣ ಅವರ ಕಥೆಗಳ ಆಧಾರಿತ ಎಂ.ಎನ್. ವೆಂಕಟೇಶ್ ಅವರ ನ-ಕುಲ ನಾಟಕದ ಪ್ರದರ್ಶನ ವೀಕ್ಷಿಸಿ ಅವರು ಮಾತನಾಡಿದರು.

‘ತಳ ಸಮುದಾಯದಿಂದ ಬಂದ ನಾನು ಅನೇಕ ಸಮಸ್ಯೆಗಳನ್ನು ಜಾತಿಯ ವಿಷಯದಲ್ಲಿ ಅನುಭವಿಸುತ್ತಾ ಬಂದೆ. ಆದರೆ, ಮುಖ್ಯಮಂತ್ರಿ ಆದಾಗಲೂ ಜಾತಿಯ ಸಮಸ್ಯೆ ನನ್ನನ್ನು ಕಾಡಿದ್ದು ನಿಜ’ ಎಂದು ಹೇಳಿದರು.

ಸಂಗೀತ ನಿರ್ದೇಶಕ ಹಂಸಲೇಖ ಮಾತನಾಡಿ, ‘ಕನ್ನಡ ಮತ್ತು ತೆಲುಗು ಸಹೋದರ ಭಾಷೆಗಳು. ಯಾವಾಗಲೂ ಎಲ್ಲಾ ವಿಷಯದಲ್ಲೂ ಸಹೋದರರಾಗಿಯೇ ಉಳಿದುಕೊಂಡಿದ್ದೇವೆ. ಈ ನಾಟಕ ಕ್ಷೌರಿಕ ಸಮಾಜದ ಸಮಸ್ಯೆಗಳನ್ನು ಬಿಚ್ಚುಡುವಲ್ಲಿ ಯಶಸ್ವಿಯಾಗಿದೆ. ಪ್ರತಿ ಹಿಂದುಳಿದ ವರ್ಗದ ಕೈಗನ್ನಡಿಯಂತಿದೆ’ ಎಂದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಷಡಾಕ್ಷರಿ ಮಾತನಾಡಿ, ‘ಜಾತಿಯ ಕಾರಣಕ್ಕೆ ಅನೇಕ ಪ್ರತಿಭೆಗಳು ನಶಿಸಿಹೋಗುತ್ತವೆ. ವಿದ್ಯೆಯಿಂದ ನಿಜವಾದ ಪ್ರತಿಭೆಗಳು ಹೊರಹೊಮ್ಮುವಂತೆ ಆಗಬೇಕು’ ಎಂದರು.

ಆನೇಕಲ್: 12 ಸಾವಿರ ಹೊಸ ಮತದಾರರು



ಆನೇಕಲ್: ತಾಲ್ಲೂಕಿನ ವಿವಿಧ ಮತಗಟ್ಟೆಗಳಿಗೆ ಶನಿವಾರ ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ. ದಯಾನಂದ್ ಭೇಟಿ ನೀಡಿ ಮತದಾರರ ಪಟ್ಟಿ ಪರಿಷ್ಕರಣೆಯ ಪ್ರಗತಿ ಪರಿಶೀಲಿಸಿ ಸಾರ್ವಜನಿಕರ ಅಹವಾಲು ಆಲಿಸಿದರು.

ಬಳಿಕ ಮಾತನಾಡಿದ ಅವರು, ತಾಲ್ಲೂಕಿನಲ್ಲಿ 12 ಸಾವಿರ ಮತದಾರರು ಹೊಸದಾಗಿ ಸೇರ್ಪಡೆಯಾಗಿದ್ದಾರೆ. ಮನೆ ಮನೆಗೆ ಭೇಟಿ ನೀಡಿ ಮತದಾರರ ಸೇರ್ಪಡೆ, ಮಾರ್ಪಾಡು, ತಿದ್ದುಪಡಿ, ಹೆಸರು ತೆಗೆದು ಹಾಕಲು ಅನುಸರಿಸುತ್ತಿರುವ ಕ್ರಮಗಳ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ತಿಳಿಸಿದರು.

ಆನೇಕಲ್, ಅತ್ತಿಬೆಲೆ, ಚಂದಾಪುರ, ಬೊಮ್ಮಸಂದ್ರ ಪುರಸಭೆ, ಹೆಬ್ಬಗೋಡಿ ನಗರಸಭೆ ವ್ಯಾಪ್ತಿಯಲ್ಲಿ ಮತಗಟ್ಟೆ ಅಧಿಕಾರಿಗಳನ್ನು ಭೇಟಿ ಮಾಡಿ ಪರಿಶೀಲನೆ ನಡೆಸಲಾಗಿದೆ. ವಿವಿಧ ವಾರ್ಡ್‌ಗಳ ಮನೆಗಳಿಗೆ ಭೇಟಿ ಮಾಡಿ ಮನೆ ಮನೆ ಸಮೀಕ್ಷೆ ಕೈಗೊಂಡಿರುವ ಕ್ರಮಗಳ ಮಾಹಿತಿ ಪಡೆಯಲಾಗಿದೆ ಎಂದರು.

ತಾಲ್ಲೂಕಿನಲ್ಲಿ 22 ಸಾವಿರ ಮತದಾರರನ್ನು ತೆಗೆದುಹಾಕಿರುವ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಅವರು, ‘ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಎರಡು, ಮೂರು ಮತಗಟ್ಟೆಗಳಲ್ಲಿ ಒಬ್ಬರೇ ವ್ಯಕ್ತಿಯ ಹೆಸರು ಇರುವುದನ್ನು ಪರಿಶೀಲಿಸಿ ಒಂದು ಕಡೆ ಮಾತ್ರ ಉಳಿಸಿ ಉಳಿದ ಮತಗಟ್ಟೆಗಳಲ್ಲಿ ತೆಗೆದು ಹಾಕಲಾಗಿದೆ. ಹೆಸರು ತೆಗೆದು ಹಾಕಿರುವ ವ್ಯಕ್ತಿಗಳು ಸಮರ್ಪಕ ದಾಖಲೆ ನೀಡಿದರೆ ಈಗಲೂ ಸೇರಿಸಲು ಅವಕಾಶವಿದೆ’ ಎಂದು ಸ್ಪಷ್ಟಪಡಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Agricultural Land

General

AGRICULTURAL LAND for Sale Near Dandeli-Ganeshgudi Suitable for Homestay Resorts and Farming. 0.6kms from Highway, Natural water stream,Tar Road ,4G Networks Connected.Contact 9741590852

Commerical

J P Nagar

J.P.NAGAR PRIME Commercial 40x60, Built-up area 8500 Sft. OC-CC Project 12,50,00,000/- Contact: -9845000299.

Flat

Basaveshwaranagar

"2&3 BHK-FLATS, Ready to occupy with OC, 1km from Basaveshwarnagar, Magadi Main Road. 9845286505"

Mathikere

IMMEDIATE SALE 2BHK Flat 1257 sf clear documents 6500/-sf.Muthyalanagar. Negotiable. 9686973320.

Farm House/ Land/ Resorts

Kanakapura Road

KANAKAPURA TOWN 1 Acre and 2 Acre with Water & Electricity Suitable for any Purpose Call Ravikumar: 9945928994.

Mysore Road

FARM LAND Ramanagara 2-Acre, Teak, Coconut, Borewell, House 1km NH-275 bypas, 40 km Bengaluru- 9448172668

House

Kanakapura Road



7 HOUSES FOR SALE
NEAR VAJARAHALLI METRO STATION
NEXT TO KARISHMA HILLS
BRAND NEW Building
4 floors 3BHK Houses 1250 sft EF with Lift, Car park, Party Hall, in 40x60 Plot.
4 Cr. Nego: 76760 54842

Banashankari

BDA 40X60 East Facing 3 BHK House For Sale, Banashankari 6th Stage, 1st Block, Contact: 8861243295

Jayanagar

SALE 50X100 old House Purely Residential East Facing 1st Block Jayanagar Near Namdhari's Call:8123515830 9880004149

Kumarapark

KUMARAPARK WEST 25x40 west-facing Out-house ground floor,first-floor Entrance,17500/-sqft Negotiable.ABHILASHA CONSULTANTS.9480565758

MORE Classifieds IN SUPPLEMENT

Out-Station

A WELLBUILT Modren two floor RCC building measuring about 3000 Sqft with Three bedroom with attached bathrooms and Airconditioners in a prominent temple town 40 minutes from Bangalore, on Bangalore- Mysore Highway available for immediate sale. Contact by Text 7022247908. Email: sammallur@yahoo.com

Yelahanka

SEMI FURNISHED, 2 BHK-1 Unit, 1 BHK- 4 Units, Near Nitte Meenakshi, BMSIT, Manipal Medical College:- 9845014364

Industrial & Factory

Mysore

FOR SALE 4.14 Acres Industrial Converted Land In Kiadb Industrial Area Kadakola Mysore 9448554644,9986238629

Residential/ Commercial

Koramangala

KORAMANGALA (JAKKASANDRA) Residential Rental Income 70K, Building BBMP(A-Kata) near Green View Hospital Price. 93Lakhs, Contact: 9731456798, 9731276419

Sarjapur Road

TENANTED NEW Building, Sarjapura Road, 1700 Sft Site, getting 4L/ month, Company Agreement. 4.15cr. Call:9980577227

Sites

Anjanapura

ANJANAPURA 4TH Block 30x40 SF, KUMARASWAMY LAYOUT Opposite Hoysala Park. 30x40 SF Contact- 9964627255/ 9880300791

ANJANAPURA 5TH G Block, 60 Feet Road, BDA 60x40 North Facing Site Sale. 9035497206, 9844039884.

ANJANAPURA SITE for sale, 8th Block site no 763 E/F 80ft Road 50/80 commercial good location opposite Siliconcity Sports Academy Con 9845300644/ 9663554448

Arkavathi Layout

5000 SQFT Property For Sale at Arkavathi Layout, Srirampura (Revenue Title). Contact: 7676900174 8660220048

Banashankari

BANASHANKARI 6TH stage 4th B block 40x60 near Prestige Prime Rose Apartment Kanakapura Road Metro Station 9900097239

BANASHANKARI 6TH-5TH Block 50x80 SF Commercial Site 100' Road- 10th Block 40x60 EF- 9845511170/ 9880300791

Airport Road



BSNL LAYOUT
Premium Residential / Commercial Plots
Near B'lore Intl Airport Next to Mini Vidhana Soudha on 6 lane NH 207
@ 1100/Sft
OPEN FOR GENERAL PUBLIC
Call: 9071534000

Basavanagudi

SALE 120X120 old House North East Corner Basavanagudi 80feet Road Contact: 9611844667 8123515830

General

LIFE IS always Bliss at the Beach, book your beach site's at Kumta Uttara Kannada. 9019135480, 8050017465

Hosur Road

BBMP A Khata 30*40 Site for Sale Opp to Park, KHB Suryanagar Phase 3, Block 2, Attibele Main Road. Contact: 9886400198

Jalahalli

SITES FOR Sale at Bagalgunte DC Converted built to suit villas. 6364565657

Jayanagar

CORNER SITES & Beautiful Bungalows/ Houses For Sale. Jayanagar/ JP.Nagar/ BSKII 30x40, 30x50, 40x60, 50x60, 50x70, 50x80, 60x80, 60x90, 80x120. Budget: 3 Crores- 50 Crores. 'GOLDLINE'- 98450-33756

JAYANAGAR 7TH Block 40x52, 40x60 8th Block 40x60 4th 'T' Block 40x60 JP.Nagar 3rd Phase 40x60 Basavanagudi 40x65. 94484-83699

SALE JAYANAGAR 1st-Block 40x60 East Facing 24k and Jayanagar 4th-Block 45x90 West Facing With old-Houses 30k Call:9739393607

Kanakapura Road

NARAYANANAGAR 1ST Block 50x80 SF- 60'Road, 1st Block 40x40-N/F, 2nd Block 30x45 W/F- 9964627255/ 9880300791

Kempegowda Layout

WANTED/ AVAILABLE VISVESWARAIAH/ KEMPEGOWDA LAYOUT 1st- 9th Block 20x30 30x40 40x60 50x80 Sites Available at good Location, Immediate Registration: 9845488488

NADAPRABHU KEMPEGOWDA and VISHWESHWARAIAH LAYOUT Sites for Sale 20x30, 30x40, 40x60, 50x80. Manjunatha.S. 9742568746, 9663346666.

KEMPEGOWDA LAYOUT BDA SITES for Sale Commercial 50×80 300ft Road, 40×60 100ft Commercial Sites, 9731594565/ 9449556869

Magadi Road

SUMANAHALLI FLY over-Sajjepalya B Katha 64x85, south face suitable for Godown, Warehouse. Call:- 9448172668

Nagarabhavi

"35X50, 35X70 Commercial Sites-for-sale Deepa-Complex 60ft Road Raghavendra Layout Karnataka Bank Circle. Good Location, Genuine Buyers Contact: 9845969165"

30X40 NORTH Facing BBMP A- Katha Rs. 8500/- Negotiable Near Deepak Complex Contact:- 9916826976

Out-Station

VACANT LAND Measuring about 2500 sqft located in the prominent temple town 40 minutes from Bangalore on Bangalore- Mysore Highway for immediate sale by owner. Contact by Text 7022247908. Email: sammallur@yahoo.com

40X60 NORTH Facing Site Sale, Chalukyanagar, Gopishettykoppa, Shimoga, 3,000/- Sqft. Genuine Buyers Contact: 9482635840.

Sadashiva Nagar

SADASHIVANAGAR 80X120 Corner Property for Sale, Suitable for Luxurious Bungalow or Office Complex Call: 9060066332

SADHASHIVNAGAR PROPERTIES for sale 50x80, 90x60, 80x120 RMV 2nd 50x80 East. Contact Malnad. 9844092859/ 9632377775.

Thanisandra

TWO ADJACENT sites, 77x48, 57x18.5, Anam Enclave, 2kms from Manyata Techpark. Contact 9845212356

Vijayanagar

"SALE OLD demolition house 40x70 East Prime Location Vijayanagar (RPC Layout) Near Metro Station. 9845286505"

Vishweshwariah Layout

"50X80 NF Residential BDA SiteSale 2nd Block Vishveshwaraiah Layout (Near 100 feet Road). 9845143579"

BHARATHNAGAR ATTACH 40x40 BBMP A Katha SE Corner. SMV BDA Site 1st Block 40x60 East: 9964971895

BDA SITE SALE VISHWESHWARAIAH LAYOUT 6TH BLOCK EAST AND NORTH FACE 40FT ROAD 9500 NEGOTIABLE CONTACT: 8892901567/ 9341733480

SMV [DC CONVERSION SITES] 6th Block Behind 100ft Road 40x60 (North) Price 6000/- PSft, 1st Block 50x60 A Katha 40ft Road: 9845488488

VISHWESHWARAIAH LAYOUT BDA 6th Block 20X30 WF 30ft Road 37 Lakhs Negotiable Good Location: 6364646603

JOB OPPORTUNITIES

Accounts & Finance

WANTED Female Accountant for 5 years Experiences and Civil Interior fields Site Superior: 9886102678, Mail Id: mr22interior@gmail.com

Engg/ Production Technical

REQUIRE: PROJECT ENGINEERS, B.Com Graduates for Accounts, ITI candidates for our Motor and special-pumps Manufacturing-Unit at Devarachikkanahalli, Bannergatta Road, Bangalore. Email: flowoilpumps@ hotmail.com

PEENYA BASED MSME Manufacturing ELECTRICAL CONTROL PANELS requires WIREMEN. Contact: 8548054584/ nirmalams153@gmail.com

General

WANTED: FIELD OFFICER/AREA MANAGER/TRAINING OFFICER in & around Bangalore and Computer Operator for SHASHI DETECTIVE SERVICES Pvt.Ltd. Rajajinagar-080 23133633/ 23134876/ 9880495755. E-mail: gm@shashisecurity.com

MANUFACTURING COMPANY at Peenya/ Nelamangala requires Fresh B.Com GRADUATES, (2) B.E/ Diploma (Mechanical) Immediate appointment. Apply to: hr@acemulti.net

Hospital & Medical Jobs

FPA INDIA requires MEDICAL OFFICER, LAB TECHNICIAN, ACCOUNTS ASSISTANT. Bengaluru candidates apply. Recruitment reflects our commitment to safety protection of children/ young people. Email: bengaluru@fpaindia.org

Multiple Vacancy

OPPORTUNITY OF Career & Income for Retired Officials, Bankers, Teachers, CAs, Professionals, Homemakers. Call: 8095301555

VACANCY FOR Front Office Male & Female House' keeping Supervisor/ Floor Boys, Kitchen Pantry Electrician Above vacancy looking for experienced candidates only. Raaj Residency J.C. Road. CALL: 7760402612

GRAPHIC DESIGNER & Marketing Executive for Packaging Industry. min exp 3 yrs. 9845027450 reliancebengaluru@gmail.com

REQUIRED POULTRY MANAGER, SUPERVISORS & ACCOUNTANT for Poultry Farm at Gubbi, Tumkur District. Contact: 9535810396/ 7760301877/ 7795585199.

Security & Detectives

REQUIREMENT OF Security, Field Officer, Security Supervisor, Security Guard to Bangalore South Contact:- 9986081712

Teachers/ Professors

URGENTLY REQUIRED

India Literacy Project (ILP), a Non-Government Organization that works in the Education sector is hiring.
Visit: www.ilpnet.org
We are looking for candidates to work with the government education system and willing to travel
Computer Science Background: B.Sc/BCA/M.Sc/MCA/B.E
English Background: BA/MA English with B.Ed.
Science Background: B.Sc/M.Sc/B.Ed
Location / Districts: Bangalore ,Haveri,Yadgir, Tumkuru, Davangere, Dakshina Kannada, Koppal, Kalaburagi, Ballari, Kodagu, Kolar.
Candidates with relevant experience are preferred.
Send resumes to: jobs@ilpnet.org
Contact: 6361009258

THE REGENCY INSTITUTIONS
School & PU College.
5/1, AMS Lyt Extension, Vidyaranyapura, B'lore -97
Requires for the NEXT ACADEMIC YEAR
Trained graduates/ post graduates with min 3 years exp. in teaching
English, Economics, Physics, Sanskrit
Also wanted for PUC- Science core subject teachers with exp. in teaching
CET, JEE & NEET Qualified / trained teachers also required for all classes and subjects.
Send your resume to: careers22regency@gmail.com or drop it in the school office.
Ct: 080-29533770

SRI AHAM AATHMA VIDYALAYA- (ICSE/ State) Gruhalakshmi layout Nagasandra post, Peenya Dasarahalli, Bangalore-73 Requires TEACHERS for the academic year 2023-2024 (1) Computer Science-BCA/MCA/B.Sc, M.Sc B.Ed (2)Teachers to teach all the subjects for Nursery/Primary/ Middle/ High-School (3) Nursery Staff, NTT& Montessori (4) Office Staff/ Receptionist Clerk/ Data/DTP Operator with Tally, IT System Admin (5) LAB-ASSISTANT Librarian. Academic Co-Ordinator. Offers Attractive Salary. Transportation provided. Call 9880200172, 9663778869 Email: sriaavapplic@gmail.com

SRI AHAM AATHMA VIDYALAYA- (ICSE/ State) Gruhalakshmi layout Nagasandra post, Peenya Dasarahalli, Bangalore-73 Requires TEACHERS for the academic year 2023-2024 (1) Computer Science-BCA/MCA/B.Sc, M.Sc B.Ed (2)Teachers to teach all the subjects for Nursery/Primary/ Middle/ High-School (3) Nursery Staff, NTT& Montessori (4) Office Staff/ Receptionist Clerk/ Data/DTP Operator with Tally, IT System Admin (5) LAB-ASSISTANT Librarian. Academic Co-Ordinator. Offers Attractive Salary. Transportation provided. Call 9880200172, 9663778869 Email: sriaavapplic@gmail.com

KANNADA, SCIENCE TEACHERS For High School. Prefer Candidate Residing Near Yelachenahalli Metro Station WhatsApp CV: 9980944566

B.E.T. DEGREE COLLEGE FOR WOMEN. Affiliated to Bangalore City University, NAAC accredited, ISO Certified, Minority Institution, BISMILLAHNAGAR, BANGALORE- 560029, IS IN NEED OFPOLITICAL SCIENCE LECTURER QR: MA (political Science), Preference: BEd, UGC NET/ K-SET with experience Apply immediately E-mail: bismillah.wc@gmail.com WhatsApp to: 9980340172/ 9845280144.

REQUIRED EXPERIENCED candidates with good communication skills to teach high school Mathematics and Science also require Office Assistant having computer knowledge and Tally. Mail your resume/ CV within in 3 days to E-mail: vetvvpuramschool@gmail.com

RESIDENTIAL and COMMERCIAL SITES FOR SALE

THE IDEAL HOMES CO-OPERATIVE BUILDING SOCIETY LIMITED,

Ideal Homes Township, Mysore Road, **Bangalore - 560 098.**
Email: ihcbs.idealhomes@gmail.com **Ph: 080-28600892**

NOTICE

The Society has decided to offer For Sale a few **BMRDA approved Residential and Commercial Sites** at their **Banyan Tree Layout located at Donnenahalli / Kurubarahalli Villages, Bangalore South Taluk, adjacent to Karnataka Housing Board Layout.** Persons interested may contact the Society Office between 10.30 am and 5.30 pm on any working day.

Details of sites are as follows:

RESIDENTIAL SITES :

Sl. No.	Site No.	Dimension in Ft.	Road Facing Direction
1	4	80 + 90/2 x 78 + 38/2 = **4930.00 sq.ft.**	North-East Corner
2	94	1/2 x 160 x 70 = **5600.00 sq ft.**	North-East Comer
3	131	74 + 34/2 x 71+60/2 = **3537.00 sq.ft.**	South
4	132	82+48/ x 2 x 94 + 80/2 = **5655.00 sq.ft.**	North-West Corner
5	150	48 + 32/2 x 42 + 40/2 = **1640.00 sq.ft.**	South
6	194	30 x 60 = **1800.00 sq.ft.**	North-West Corner
7	226	40 + 50/2 x 40 + 45/2 = **1912.50 sq.ft.**	South
8	247	60 + 25/2 x 66 + 75/2 = **2996.25 sq.ft.**	West
9	249	110 + 85/2 x 46 + 48/2 = **4582.50 sq.ft.**	West

COMMERCIAL SITES :

Sl. No.	Site No.	Dimension in Ft.	Road Facing Direction
1	23	130 + 40/2 x 175 + 180/2 = **15087.50 sq.ft.**	4 Side Road
2	95	165 + 200/2 x 170 + 70/2 = **21891.97 sq.ft.**	North, South & West
3	166	283 + 240/2 x 6+143/2 = **19481.75 sq.ft.**	South

By Order of the Board of Directors
Sd/- **Secretary**

MATRIMONIAL

Matrimonial Bureaus

ASHIRWAD MATRIMONIAL SERVICE
For all religion invites RC Konkani slim, fair girls within 35 years for a handsome boy BE own business
Contact: 9632163953

Brides Wanted

Muslim

1995 BORN Sunni muslim boy B.Tech IIT, MS,Florida working as a Program Manager is looking for a Cultured girl from Bangalore For marriage.Father Retired Govt.Employee (080-69074951)

Bride Required Others

LINGAYAT, BANGALORE based family is looking for a suitable match for their very handsome son working in UK, Father CA,Interested families may connect (Caste No Bar- (080-69072054)

OTHERS

For Sale

PVC LUMPS / PULVERISED LUMPS FOR SALE "AS IS WHERE IS BASIS"

We have following good Quality Materails for Immediate Disposal at our plants in Jigani / Plot 26

ITEM NAME	QTY IN MT	PACK SIZE
PVC LUMPS	11	JUMBO BAGS
PVC PULVERIZED LUMPS	189	JUMBO BAGS
TOTAL	200	

Last Date For Submiting The Quotes : 07/01/2023 By E-mail To Sandeep.anand@ashirvad.com **Payment Terms:** 100% Advance Before Lifting Including Gst. Actual Weights Will Be Considering For Final Payment. All Lifting / Loading / Movement /transport Will Be To Buyers' Scope. Any Damages While Handling Loading To Our Property Will Be Debited To Your Account. All Saety Rules With Proper Ppe To Be Followed Inside Our Plant.
Contact Person: Mr Sandeep Anand- Head Procurement.
Bidders Should Send Their Best Rates In One Go.
Registered Office Ashirvad Pipes Pvt Ltd
4-b- Attibele Industrial Area,hosur Road, Bengaluru-562 107

Furniture & Furnishings

ANTIQUE FURNITURE is for
sale made up of very old teak
and rose wood which is in excellent condition contact Raghavendra 9606866368

BUSINESS

Business to Business

Business

RUNNING MEDICAL Hospital want Partner/ Investor/ Takeover. All facilities, Doctors, Daily Income- Doctor Swamy- 9342247637.

INVEST RS.30K- TO-3L in Gold, Multiple Business (Group Co.,) You get 8% Secured Fixed Returns Regularly (Weekly/Monthly) Referrals Also Welcome. Contact- 7892818780

Construction And Maintenance

AVAIL 25% discount(T&Capply) on building constructions anywhere on anykhata sites,EMI payments accepted 7026375404 Bangalore

Financial Services

LOANS- BANK/PRIVATE Finance All Type of Loans Any Property (Any Where) Low Interest Rs.20L-To 20CR Contact: 8904047577

Business Offers

Finance

IF YOU have the money to settle your Bank NPA Loans callArun 9945699789. Ex-Banker our Negotiations, bargaining powers and Loan settlements with your banks will surprise you.

LOW -INTEREST Loans for Secured, Unsecured, NPA, Projects, Business, Colleges, Hospitals, Hotel, Agents Welcome 9843830066

PERSONAL

Change of Name

I,MEHUL RATILAL SHAH R/a#124,1st Floor,5th Main,3rd Stage,3rd Block, Basaveshwara Nagar, Bangalore- 560079.Have Changed`My Minor Daughter's Name`From TANISHKA MEHUL to TANISHKAA SHAH`vide Affidavit Dated:22-12-2022 Before`Notary Ratna.N, Bengaluru



9 ತಿಂಗಳಲ್ಲಿ 2 ಲಕ್ಷ ಕಾರ್ಡ್ ವಿತರಣೆ: ಯೋಜನೆಗೆ ವೇಗ ನೀಡಲು ನಿರ್ಧಾರ

ಪ್ರತಿ ತಿಂಗಳಿಗೆ 2 ಲಕ್ಷ ಆಸ್ತಿಗಳಿಗೆ ಯುಪಿಒಆರ್ ಕಾರ್ಡ್

● ಆರ್. ಮಂಜುನಾಥ್

ಬೆಂಗಳೂರು: ನಿಧಾನಗತಿಯಲ್ಲಿ ನಡೆಯುತ್ತಿದ್ದ ನಗರ ಆಸ್ತಿ ಮಾಲೀಕತ್ವ ಯೋಜನೆಗೆ (ಯುಪಿಒಆರ್) ಬೆಂಗಳೂರಿನಲ್ಲಿ ವೇಗ ನೀಡಲಾಗಿದ್ದು ಬಿಬಿಎಂಪಿ ವ್ಯಾಪ್ತಿಯ 23 ಲಕ್ಷ ಆಸ್ತಿಗಳಿಗೆ ಮುಂದಿನ 18 ತಿಂಗಳಲ್ಲಿ ಆಸ್ತಿ ಮಾಲೀಕತ್ವ ಕಾರ್ಡ್ ನೀಡುವ ಗುರಿ ಹೊಂದಲಾಗಿದೆ.

ಸರ್ಕಾರದಿಂದ ನೀಡಲಾಗುವ ಯುಪಿಒಆರ್ ಕಾರ್ಡ್ ನಾಗರಿಕರ ಆಸ್ತಿ ಮಾಲೀಕತ್ವದ ಪ್ರಮಾಣಪತ್ರವಾಗಿದೆ. ಆಸ್ತಿಯ ನಕ್ಷೆ, ಮಾಲೀಕತ್ವ ವಿವರ, ಹಕ್ಕುಗಳು ಸೇರಿದಂತೆ ಸಾಲ, ವ್ಯಾಜ್ಯ ಇತರೆ ಮಾಹಿತಿಗಳನ್ನೂ ಹೊಂದಿರುತ್ತದೆ.

ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ವತಿಯಿಂದ ನಗರದಲ್ಲಿರುವ ಪ್ರತಿ ಆಸ್ತಿಯ ನಕ್ಷೆಯನ್ನು ಡ್ರೋನ್ ತಂತ್ರಜ್ಞಾನದ ಮೂಲಕ ಡಿಜಿಟಲೀಕರಣ ಮಾಡಲಾಗುತ್ತದೆ. ನಗರದಲ್ಲಿರುವ ಆಸ್ತಿಗಳ ಮಾಹಿತಿ ಡ್ರೋನ್ ತಂತ್ರಜ್ಞಾನದಲ್ಲಿ ಡಿಜಿಟಲೀಕರಣ ಮಾಡಿದ ಮೇಲೆ ಸರ್ಕಾರಿ ಹಾಗೂ ಬಿಬಿಎಂಪಿ ದಾಖಲೆಗಳನ್ನು ಜೋಡಿಸಲಾಗುತ್ತಿದೆ. ಇಂತಹ ಆಸ್ತಿಗಳ ಮಾಲೀಕರಿಗೆ ಕಂದಾಯ ಇಲಾಖೆಯ ಭೂಮಾಪಕರು ನೋಟಿಸ್ ಜಾರಿಗೊಳಿಸುತ್ತಿದ್ದಾರೆ.

ನಾಗರಿಕರು ತಮ್ಮ ಆಸ್ತಿಯ ಮಾಲೀಕತ್ವದ ಕ್ರಯಪತ್ರ, ಆಸ್ತಿ ತೆರಿಗೆ ಪಾವತಿ ರಸೀದಿ, ಆಸ್ತಿ ಋಣಭಾರ ಪತ್ರ, ಬಿಬಿಎಂಪಿ ಖಾತೆ, ನಿವೇಶನ ಹಂಚಿಕೆ ಪತ್ರ, ನಿವೇಶನ ಸ್ವಾಧೀನ ಪತ್ರ, ಭೂಪರಿವರ್ತನೆ ಆದೇಶ/ ಲೇಔಟ್ ನಕ್ಷೆ ಪ್ರತಿ, ಮಾಲೀಕರ ಫೋಟೊ, ಆಸ್ತಿಯ ಫೋಟೊವನ್ನು ಭೂಮಾಪಕರಿಗೆ ಪರಿಶೀಲನೆ ಸಂದರ್ಭದಲ್ಲಿ ನೀಡಬಹುದು. ಮನೆಯ ಅಳತೆ ಹಾಗೂ ಇತರೆ ಮಾಹಿತಿಗಳನ್ನು ಮಾಲೀಕರ ಎದುರು ಭೂಮಾಪಕರು ನಮೂದಿಸುತ್ತಾರೆ.

ಆನ್‌ಲೈನ್ ಸೌಲಭ್ಯ: ಭೂಮಾಪಕರು ಬಂದ ಸಮಯದಲ್ಲಿ ದಾಖಲೆಗಳನ್ನು ನೀಡಲು ಸಾಧ್ಯವಿಲ್ಲದಿದ್ದರೆ ಆನ್‌ಲೈನ್‌ನಲ್ಲೂ (https://rdservices.karnataka.gov.in/service5/) ಅಪ್‌ಲೋಡ್ ಮಾಡಬಹುದು. ನಾಗರಿಕರು ತಮ್ಮ ಮೊಬೈಲ್ ಸಂಖ್ಯೆಯಲ್ಲಿ ಲಾಗಿನ್ ಆಗಬಹುದು. ಭೂಮಾಪಕರು ನೋಟಿಸ್ ನೀಡಿದ ಮೇಲೆ ಇದು ಚಾಲನೆಗೊಳ್ಳುತ್ತದೆ.

'ಯುಪಿಒಆರ್ ಕಾರ್ಡ್ ಲಭ್ಯವಾದ ಮೇಲೆ ಆಸ್ತಿ ಮಾರಾಟ ಅಥವಾ ವಿಭಜನೆ, ಬದಲಾವಣೆಗಳಾದರೆ ಉಪ ನೋಂದಣಾಧಿಕಾರಿ ಕಚೇರಿಯಿಂದ ಸ್ವಯಂ ಚಾಲಿತ ವ್ಯವಸ್ಥೆಯಲ್ಲಿ ಮಾಹಿತಿಗಳು ಬದಲಾಗುತ್ತವೆ. ಕೆರೆ ಪ್ರದೇಶ, ಸರ್ಕಾರಿ ಆಸ್ತಿ, ಅರಣ್ಯ ಪ್ರದೇಶದಲ್ಲಿ ಒತ್ತುವರಿಯಾಗಿದ್ದರೆ ಅವುಗಳನ್ನು ಸ್ಪಷ್ಟ ಮಾಹಿತಿ ಪ್ರತಿ ಆಸ್ತಿಗೂ ಸಂಪರ್ಕಿಸಲಾಗಿರುತ್ತದೆ. ಹೀಗಾಗಿ ಹೊಸದಾಗಿ ಖರೀದಿ ಮಾಡುವವರಿಗೆ ಸ್ಪಷ್ಟ ದಾಖಲೆಯೂ ಸಿಗುವಂತಾಗುತ್ತದೆ' ಎಂದು ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

'ಡ್ರೋನ್ ತಂತ್ರಜ್ಞಾನವನ್ನು ಬಳಸಿ ಯುಪಿಒಆರ್ ಯೋಜನೆ ಜಾರಿಗೆ ಸರ್ಕಾರ 2018ರ ನ.7ರಂದು ಆದೇಶ ಹೊರಡಿಸಿದೆ. ಈ ಕಾರ್ಯ ಆರಂಭವಾಗಿ ಎಳೆಂಟು ತಿಂಗಳಾಗಿದ್ದು, ಎರಡು ಲಕ್ಷ ಕಾರ್ಡ್ ವಿತರಿಸಲಾಗಿದೆ. ನಿಧಾನಗತಿಯಲ್ಲಿರುವ ಈ ಕಾರ್ಯಕ್ಕೆ ವೇಗ ನೀಡಲಿದ್ದು, ಬೆಂಗಳೂರಿನಲ್ಲಿ ಪ್ರತಿ ತಿಂಗಳೂ ಎರಡು ಲಕ್ಷಕ್ಕೂ ಹೆಚ್ಚಿನ ಯುಪಿಒಆರ್ ಕಾರ್ಡ್‌ಗಳನ್ನು ವಿತರಿಸುವ ಗುರಿ ಹೊಂದಲಾಗಿದೆ' ಎಂದರು.


District / ಜಿಲ್ಲೆ: ಬೆಂಗಳೂರು ನಗರ
Town / ಪಟ್ಟಣ: ಬೆಂಗಳೂರು
Ward No / ವಾರ್ಡ್ ನಂ: 165
Ward Name / ವಾರ್ಡ್ ಹೆಸರು: ಗಣೇಶ ಮಂದಿರ
UPOR Property ID / ಯುಪಿಒಆರ್ ಆಸ್ತಿ ಸಂಖ್ಯೆ: Z62-501-AB2
ULPIN / ಯು ಎಲ್ ಪಿನ್: 74T1YMDAHQUG
Revenue Department/ಕಂದಾಯ ಇಲಾಖೆ
Draft Urban Property Ownership Record/ಕರಡು ನಗರಾಸ್ತಿ ಮಾಲೀಕತ್ವ ದಾಖಲೆ
(Issued under Rule 83 of Karnataka Land Revenue Rules 1966
ಕರ್ನಾಟಕ ಭೂಕಂದಾಯ ನಿಯಮಾವಳಿ 1966 ರ ನಿಯಮ 83 ರಡಿಯಲ್ಲಿ ವಿತರಿಸಲಾಗಿದೆ)
(Form 13A/ನಮೂನೆ 13ಅ)
1. Property Type / ಆಸ್ತಿ ತರಹ
4. Property Area in/ಆಸ್ತಿಯ ವಿಸ್ತೀರ್ಣ
(i) Square Meters / ಚ.ಮೀ ಗಳಲ್ಲಿ: 60
(ii) Square Feet / ಚ.ಅಡಿ ಗಳಲ್ಲಿ: 649
7. Owner Name with Father/Husband/Guardian Name & ID Number
8. Municipal Property ID / ಮುನಿಸಿಪಲ್ ಐಡಿ: 165-W0023-20
PROPERTY MAP/ಸ್ವತ್ತಿನ ನಕ್ಷೆ
OVERVIEW MAP/ಆಸ್ತಿಯ ನೆರೆ ನೋಟ

ಯುಪಿಒಆರ್ ಕಾರ್ಡ್ ಮಾದರಿ

ಅಂಕಿ-ಅಂಶಗಳು

25 ಲಕ್ಷ — ನಗರದಲ್ಲಿರುವ ಒಟ್ಟು ಆಸ್ತಿಗಳು

6 ಲಕ್ಷ — ಡ್ರೋನ್ ನಕ್ಷೆ ಡಿಜಿಟಲೀಕರಣವಾಗಿರುವ ಆಸ್ತಿಗಳು

800 ಚದರ ಕಿ.ಮೀ — ಡ್ರೋನ್ ಹಾರಾಟ ನಡೆಸಿ ಡಿಜಿಟಲೀಕರಣ ಮಾಡುವ ಪ್ರದೇಶ

ಕಾರ್ಡ್ ಪಡೆಯುವುದು ಹೇಗೆ?

ನಗರದ ಪ್ರತಿ ಆಸ್ತಿಯ ಗಣಕೀಕೃತ ಭೌಗೋಳಿಕ ನಿರ್ದೇಶಿತ ನಕ್ಷೆಯನ್ನು ಡ್ರೋನ್ ತಂತ್ರಜ್ಞಾನದಲ್ಲಿ ಕಂದಾಯ ಇಲಾಖೆ ಸಿದ್ಧಗೊಳಿಸುತ್ತದೆ. ಆಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ವಿಚಾರಣಾಧಿಕಾರಿಗಳು ಸರ್ಕಾರಿ ಹಾಗೂ ಬಿಬಿಎಂಪಿಯಲ್ಲಿ ಪರಿಶೀಲಿಸುತ್ತಾರೆ. ನಂತರ ಪ್ರತಿ ಆಸ್ತಿಯ ಮಾಲೀಕರಿಗೆ ಒಂದು ನೋಟಿಸ್ ನೀಡಿ, ಮಾಹಿತಿ ನೀಡುವ ದಿನವನ್ನು ನಿಗದಿಪಡಿಸಿರುತ್ತಾರೆ.

ನಾಗರಿಕರು ತಮ್ಮ ಆಸ್ತಿಯ ಮಾಲೀಕತ್ವದ ದಾಖಲೆಗಳನ್ನು ನೀಡಿದಾಗ ಅದನ್ನು ಹೋಲಿಸಿ ನೋಡುತ್ತಾರೆ. ಕರಡು ಆಸ್ತಿ ಪ್ರಮಾಣ ಪತ್ರವನ್ನು ಸಿದ್ಧಪಡಿಸಿ ನಾಗರಿಕರಿಗೆ ನೀಡಲಾಗುತ್ತದೆ. ಆಕ್ಷೇಪಣೆಗಳಿದ್ದರೆ 30 ದಿನದಲ್ಲಿ ಸಲ್ಲಿಸಬಹುದು. ಆಕ್ಷೇಪಣೆಗಳಿದ್ದರೆ ಅವುಗಳನ್ನು ಪರಿಶೀಲಿಸಿ ಅಂತಿಮ ಆಸ್ತಿ ಪ್ರಮಾಣ ಪತ್ರವನ್ನು ವಿತರಿಸಲಾಗುತ್ತದೆ.

ಪ್ರಜಾವಾಣಿ ವಿಶೇಷ



ನಗರದ ತಿರುಮಲಾಪುರ ಚಿಕ್ಕ ಬಿದರುಕಲ್ಲಿನಲ್ಲಿ ಶ್ರೀರಂಗ ಯಕ್ಷಗಾನ ಮತ್ತು ಜನಪದ ಕಲಾ ಸಂಘದ ವತಿಯಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವೇದಾವತಿ ತಂಡದಿಂದ ಗಾಯಕಿ ಶಾರದಮ್ಮ ಅವರನ್ನು ಸನ್ಮಾನಿಸಲಾಯಿತು.

ಚೂರಿಯಿಂದ ಇರಿದು ವರ್ತಕನ ಹತ್ಯೆ

ಮಂಗಳೂರು ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ

ಪ್ರಜಾವಾಣಿ ವಾರ್ತೆ

ಸುರತ್ಕಲ್ (ದಕ್ಷಿಣ ಕನ್ನಡ): ಸಮೀಪದ ಕೃಷ್ಣಾಪುರದ ದಿನಸಿ ಅಂಗಡಿಗೆ ಶನಿವಾರ ರಾತ್ರಿ ನುಗ್ಗಿದ ದುಷ್ಕರ್ಮಿಗಳು, ವರ್ತಕ ಜಲೀಲ್ (42) ಅವರನ್ನು ಹತ್ಯೆಮಾಡಿ ಪರಾರಿಯಾಗಿದ್ದಾರೆ.

ಜಲೀಲ್ ಅವರು ಕೃಷ್ಣಾಪುರದ 4ನೇ ಬ್ಲಾಕ್‌ನಲ್ಲಿ 'ಲತೀಫಾ ಸ್ಟೋರ್' ಎಂಬ ದಿನಸಿ ಅಂಗಡಿಯನ್ನು ನಡೆಸುತ್ತಿದ್ದರು. ಅವರು ವ್ಯಾಪಾರ ನಡೆಸುತ್ತಿದ್ದ ವೇಳೆ ಬಂದ ಇಬ್ಬರು ಏಕಾಏಕಿ ಅವರ ಎದೆಗೆ ಚೂರಿಯಿಂದ ಇರಿದರು. ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡುತ್ತಿದ್ದ ಅವರನ್ನು ಅಕ್ಕಪಕ್ಕದ ಅಂಗಡಿಯವರು ಹಾಗೂ ಸ್ಥಳೀಯರು ಸೇರಿ ಮುಕ್ಕದ ಆಸ್ಪತ್ರೆಗೆ ದಾಖಲಿಸಿದರು. ಅಷ್ಟರಲ್ಲಿ ಅವರು ಕೊನೆಯುಸಿರೆಳೆದಿದ್ದರು.

ನಗರ ಪೊಲೀಸ್ ಕಮಿನಷರ್ ಎನ್.ಶಶಿಕುಮಾರ್ ಹಾಗೂ ಸುರತ್ಕಲ್ ಠಾಣೆಯ ಪೊಲೀಸ್ ಅಧಿಕಾರಿಗಳು ಆಸ್ಪತ್ರೆಗೆ ಧಾವಿಸಿದರು.

'ರಾತ್ರಿ 8 ಗಂಟೆ ಸುಮಾರಿಗೆ ಕೃತ್ಯ ನಡೆದಿದೆ. ಕೃತ್ಯ ನಡೆಸಿದ ದುಷ್ಕರ್ಮಿಗಳು ಮುಸುಕು ಧರಿಸಿದ್ದರು. ಹಾಗಾಗಿ ಅವರು ಯಾರೆಂದು ಗೊತ್ತಾಗಿಲ್ಲ. ಕೃತ್ಯಕ್ಕೆ ಬಳಸಿದ್ದ ಚೂರಿಯನ್ನು ಸ್ಥಳದಲ್ಲೇ ಬಿಸಾಡಿ ಹೋಗಿದ್ದಾರೆ. ಯಾವ ಕಾರಣಕ್ಕೆ ಕೊಲೆ ನಡೆಸಲಾಗಿದೆ ಎಂಬುದು ತನಿಖೆಯ ಬಳಿಕವಷ್ಟೇ ಗೊತ್ತಾಗಲಿದೆ' ಎಂದು ಶಶಿಕುಮಾರ್ ತಿಳಿಸಿದರು.

'ಇದು ಕೋಮು ದ್ವೇಷದಿಂದ ನಡೆದ ಕೊಲೆಯೋ ಅಥವಾ ಕೃತ್ಯಕ್ಕೆ ಬೇರೇನಾದರೂ ಕಾರಣಗಳಿವೆಯೇ ಎಂಬುದನ್ನು ಈಗಲೇ ಹೇಳಲಾಗದು. ವದಂತಿಗಳಿಗೆ ಜನರು ಕಿವಿಗೊಡದೇ ಶಾಂತಿ ಕಾಪಾಡಬೇಕು. ಮುನ್ನೆಚ್ಚರಿಕಾ ಕ್ರಮವಾಗಿ ಮಂಗಳೂರು ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆಯ ಸೆಕ್ಷನ್ 144ರ ಅಡಿ ನಿಷೇಧಾಜ್ಞೆ ಜಾರಿಗೊಳಿಸಲು ಕ್ರಮ ಕೈಗೊಳ್ಳುತ್ತೇವೆ. ಭಾನುವಾರ ಕ್ರಿಸ್ಮಸ್ ಆಚರಣೆಗೆ ಇದು ಅನ್ವಯವಾಗದು' ಎಂದು ಅವರು ತಿಳಿಸಿದರು.

'ಜಲೀಲ್ ಅವರ ಅಂಗಡಿ ಇರುವ ವಾಣಿಜ್ಯ ಸಂಕೀರ್ಣದಲ್ಲಿ ಒಟ್ಟು ಐದು ಅಂಗಡಿಗಳಿವೆ. ಕೃತ್ಯ ನಡೆಯುವಾಗ ಅಕ್ಕ ಪಕ್ಕದ ಅಂಗಡಿಯವರೂ ಇದ್ದರು. ಅವರು ಬಿಡಿಸಲು ತೆರಳುವಷ್ಟರಲ್ಲಿ ದುಷ್ಕರ್ಮಿಗಳು ಚೂರಿ ಇರಿದು ಪರಾರಿಯಾಗಿದ್ದರು' ಎಂದು ಮೂಲಗಳು ತಿಳಿಸಿವೆ.

ಅವರ ಮೃತದೇಹವನ್ನು ಮುಕ್ಕ ಆಸ್ಪತ್ರೆಯಿಂದ ಮಂಗಳೂರಿನ ಎ.ಜೆ. ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ.

ಜಲೀಲ್ ಅವರಿಗೆ ಮದುವೆಯಾಗಿದ್ದು, ಪತ್ನಿ ಜೊತೆ ಕೃಷ್ಣಾಪುರ 9ನೇ ಬ್ಲಾಕ್ ಮನೆಯಲ್ಲಿ ನೆಲೆಸಿದ್ದರು. ದಂಪತಿಗೆ ಮಕ್ಕಳಿಲ್ಲ.

ಸಾಂತ್ವನ: ಸ್ಥಳಕ್ಕೆ ಮಾಜಿ ಶಾಸಕ ಮೊಯ್ದಿನ್ ಬಾವ ಭೇಟಿ ನೀಡಿ ಜಲೀಲ್ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

'ಒಪಿಎಸ್: ಹೈಕಮಾಂಡ್ ಜತೆ ಚರ್ಚಿಸಿ ನಿಲುವು ಪ್ರಕಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ನೌಕರರಿಗೆ ಹಳೆ ಪಿಂಚಣಿ ಯೋಜನೆ (ಒಪಿಎಸ್) ಜಾರಿ ಕುರಿತಂತೆ ಪಕ್ಷದ ಹೈಕಮಾಂಡ್ ಜತೆ ಮಾತನಾಡಿ ನಿರ್ಧಾರ ತಿಳಿಸಲಾಗುವುದು. ಸುಳ್ಳು ಭರವಸೆ ನೀಡಲು ಹೋಗುವುದಿಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಹೊಸ ಪಿಂಚಣಿ ಯೋಜನೆ (ಎನ್‌ಪಿಎಸ್) ರದ್ದುಪಡಿಸಿ ಒಪಿಎಸ್ ಜಾರಿಗೆ ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನವನದಲ್ಲಿ ಎನ್‌ಪಿಎಸ್ ನೌಕರರು ಹಮ್ಮಿಕೊಂಡಿರುವ ಅಹೋರಾತ್ರಿ ಅನಿರ್ದಿಷ್ಟಾವಧಿ ಧರಣಿ ಆರನೇ ದಿನಕ್ಕೆ ಕಾಲಿಟ್ಟಿದೆ. ಧರಣಿ ಸ್ಥಳಕ್ಕೆ ಶನಿವಾರ ಭೇಟಿ ನೀಡಿದ ಸಂದರ್ಭದಲ್ಲಿ ಮಾತನಾಡಿದ ಸಿದ್ದರಾಮಯ್ಯ, 'ಸರ್ಕಾರಿ ನೌಕರರ ಹಕ್ಕು ರಕ್ಷಣೆ ಮಾಡುವುದು ನಮ್ಮ ಜವಾಬ್ದಾರಿ. ಅದಷ್ಟು ಬೇಗ ಪಕ್ಷದ ನಿರ್ಧಾರ ತಿಳಿಸಲಾಗುವುದು. ನಿಮ್ಮ ಜತೆ ನಾನಿದ್ದೇನೆ. ನಿಮ್ಮ ಬೇಡಿಕೆಗೆ ವಿರುದ್ಧ ಇಲ್ಲ' ಎಂದು ಧರಣಿ ನಿರತರಿಗೆ ಭರವಸೆ ನೀಡಿದರು.

'ಸರ್ಕಾರಿ ನೌಕರರಿಗೆ ನ್ಯಾಯಯುತ ಸಂಬಳ, ಪಿಂಚಣಿ ಕೊಡಬೇಕು. ಈ ಬಗ್ಗೆ ವಿಧಾನಸಭೆಯಲ್ಲಿ ಪ್ರಸ್ತಾಪಿದ್ದೇನೆ. ಒಪಿಎಸ್ ಮಾಡಲು ಸಾಧ್ಯವಿಲ್ಲ ಎಂದು ನನ್ನ ಅಧಿಕಾರವಧಿಯಲ್ಲಿ ಹೇಳಿದ್ದೆ. ಆದರೆ, ಈಗ ಕಾಲ ಬದಲಾಗಿದೆ. ಈಗಾಗಲೇ ಜಾರ್ಖಂಡ್, ಅಸ್ಸಾಂ, ಹಿಮಾಚಲ ಪ್ರದೇಶದಲ್ಲಿ ಒಪಿಎಸ್ ಜಾರಿ ತರಲಾಗಿದೆ. ನಮ್ಮ ಸರ್ಕಾರ ಬಂದರೆ ಜಾರಿಗೆ ತರಲು ಪ್ರಯತ್ನಿಸಲಾಗುವುದು' ಎಂದರು.


ಸ್ವಾತಂತ್ರ್ಯ ಉದ್ಯಾನದಲ್ಲಿ ಎನ್‌ಪಿಎಸ್ ಸರ್ಕಾರಿ ನೌಕರರು ಹಮ್ಮಿಕೊಂಡಿರುವ ಅಹೋರಾತ್ರಿ ಅನಿರ್ದಿಷ್ಟಾವಧಿ ಧರಣಿ ಆರನೇ ದಿನಕ್ಕೆ ಕಾಲಿಟ್ಟಿದ್ದು, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಶನಿವಾರ ಸ್ಥಳಕ್ಕೆ ತೆರಳಿ ಬೆಂಬಲ ಸೂಚಿಸಿದರು

'ಚಲನಶೀಲತೆ ತಂದುಕೊಟ್ಟ ಹನುಮಂತಪ್ಪ'

ಬೆಂಗಳೂರು: 'ಬ್ರಹ್ಮ ಸಮಾಜವನ್ನು ಕಟ್ಟಿ ಬೆಳೆಸಿದವರು ಡಬ್ಲ್ಯು.ಎಚ್.ಹನುಮಂತಪ್ಪ. ಜತೆಗೆ ಆ ಸಮಾಜಕ್ಕೆ ಸಾಂಸ್ಥಿಕ ರೂಪ ಹಾಗೂ ಚಲನಶೀಲತೆ ತಂದುಕೊಟ್ಟಿದ್ದರು' ಎಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ ಹೇಳಿದರು.

ನಗರದಲ್ಲಿ ಗಾಂಧಿ ಪ್ರತಿಷ್ಠಾನ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಶನಿವಾರ ಆಯೋಜಿಸಿದ್ದ ಸ್ಮಾರಕ ದತ್ತಿ ಉಪನ್ಯಾಸ ಹಾಗೂ ಡಬ್ಲ್ಯು.ಎಚ್.ಹನುಮಮಂತಪ್ಪ ಅವರು ಬರೆದ 'ಬ್ರಹ್ಮಧರ್ಮ-ಗಾಯತ್ರಿ' ಕಿರುಪುಸ್ತಕ ಬಿಡುಗಡೆಯಲ್ಲಿ ಅವರು ಮಾತನಾಡಿದರು.

'ಜೀವತತ್ವ, ಜಗತತ್ವ ಹಾಗೂ ಬ್ರಹ್ಮತತ್ವ ಎಂಬುದನ್ನು ಬ್ರಹ್ಮಸಮಾಜ ಪ್ರತಿಪಾದಿಸುತ್ತದೆ. ಇದು ಎಲ್ಲರಿಗೂ ಬೆಳಕು ತೋರಿಸುತ್ತದೆ' ಎಂದರು.

'ಗಾಂಧಿ ವಿಚಾರಧಾರೆಗಳತ್ತ ಹನುಮಂತಪ್ಪ ಒಲವು ತೋರಿದ್ದರು' ಎಂದು ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಕೃಷ್ಣ, 'ಮಹಾತ್ಮ ಗಾಂಧಿಯನ್ನು ಕೇಂದ್ರವಾಗಿ ಇಟ್ಟುಕೊಂಡು 50 ವರ್ಷಗಳಿಂದ ದತ್ತಿ ಉಪನ್ಯಾಸ ನಡೆಸಲಾಗುತ್ತಿದೆ. ಸರಳತೆಯ ಮೂಲಕ ಬದುಕು ಕಟ್ಟಿಕೊಳ್ಳಬೇಕು. ಸರಳತೆಯಿದ್ದರೆ ವೈಭೋಗವು ನೆನಪಿಗೆ ಬರುವುದಿಲ್ಲ' ಎಂದರು.

ತಿಂಗಳಿನಿಂದ ಕೆಟ್ಟುನಿಂತ ಮೆಟ್ರೊ ಲಿಫ್ಟ್ ದುರಸ್ತಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ಹಳೆ ಮದ್ರಾಸ್ ರಸ್ತೆಯ ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದ ಲಿಫ್ಟ್ ಸುಮಾರು ಒಂದು ತಿಂಗಳಿನಿಂದ ಕೆಟ್ಟು ನಿಂತಿದೆ ಎಂದು ನಗರದ ಜನಜಾಗೃತಿ ವೇದಿಕೆ ಆರೋಪಿಸಿದೆ.

ಇದರಿಂದ ವೃದ್ಧರು ಸ್ಕೈವಾಕ್ ಲಿಫ್ಟ್ ಹತ್ತಲು ತೊಂದರೆ ಅನುಭವಿಸುವಂತಾಗಿದೆ. ಈ ಹಿನ್ನೆಲೆಯಲ್ಲಿ ಲಿಫ್ಟ್ ಅನ್ನು ಶೀಘ್ರವೇ ದುರಸ್ತಿಗೊಳಿಸಬೇಕು ಎಂದು ವೇದಿಕೆ ಪದಾಧಿಕಾರಿಗಳು ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ಇ-ಮೇಲ್ ಮೂಲಕ ಮನವಿ ಮಾಡಿದ್ದಾರೆ.

ಬುಧವಾರ ಈ ಬಗ್ಗೆ ಮಾತನಾಡಿದ ವೇದಿಕೆ ನಿರ್ದೇಶಕ ಜಿ.ವಿ. ಮಂಜುನಾಥ್, 'ದೈನಂದಿನ ಚಟುವಟಿಕೆಗಳಿಗಾಗಿ ಚಿಂತಾಮಣಿ, ಕೋಲಾರ, ಕೆಜಿಎಫ್, ಮುಳಬಾಗಿಲು, ಆಂಧ್ರಪ್ರದೇಶದ ಮದನಪಲ್ಲಿ, ಕಡಪಾ ಕಡೆಯಿಂದ ಪ್ರತಿನಿತ್ಯ ಸಾವಿರಾರು ಜನರು ಹಳೆ ಮದ್ರಾಸ್ ರಸ್ತೆಯ ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣಕ್ಕೆ ಹೋಗುತ್ತಾರೆ. ಅಲ್ಲಿನ ಲಿಫ್ಟ್ ಸುಮಾರು ಒಂದು ತಿಂಗಳಿನಿಂದ ಕೆಟ್ಟು ನಿಂತಿದ್ದು, ಸಾವಿರಾರು ಮಂದಿ ಸಮಸ್ಯೆ ಎದುರಿಸುವಂತಾಗಿದೆ' ಎಂದರು.

ಚಿಂತಾಮಣಿ, ಕೋಲಾರ, ಕೆಜಿಎಫ್ ಮುಳಬಾಗಿಲು ಕಡೆಯಿಂದ ಹೋಗುವ ಬಸ್ಸುಗಳು ಬೈಯಪ್ಪನಹಳ್ಳಿ ನಿಲ್ದಾಣದ ಎಡಭಾಗದಲ್ಲಿ ನಿಲ್ಲಿಸುತ್ತವೆ. ಮೆಟ್ರೊ ಹತ್ತಲು ಬಲಭಾಗಕ್ಕೆ ಹೋಗಬೇಕು. ಆದರೆ, ಲಿಫ್ಟ್ ಕೆಟ್ಟು ನಿಂತಿದೆ. ಜತೆಗೆ ರಸ್ತೆ ವಿಭಜಕವು ಎತ್ತರದಲ್ಲಿದ್ದು, ಕಬ್ಬಿಣದ ಸರಳುಗಳನ್ನು ಅಳವಡಿಸಲಾಗಿದೆ. ಹೀಗಾಗಿ ರಸ್ತೆ ದಾಟಲು ಸಾಧ್ಯವೇ ಇಲ್ಲ. ಇನ್ನು ವಯಸ್ಸಾದವರು ರಸ್ತೆ ದಾಟುವುದು ಹೇಗೆ ಎಂದು ಜನಜಾಗೃತಿ ವೇದಿಕೆ ಸರ್ಕಾರವನ್ನು ಪ್ರಶ್ನಿಸಿದೆ.

'ಈ ಸಂಬಂಧ ಬಿಬಿಎಂಪಿ ಕಚೇರಿಗೆ ಹಲವು ಬಾರಿ ದೂರು ನೀಡಲಾಗಿದೆ. ಯಾವುದೇ ಪ್ರಯೋಜನವಾಗಿಲ್ಲ' ಎಂದು ದೂರಿದರು.


ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದ ಬಳಿ ಲಿಫ್ಟ್ ಕೆಟ್ಟಿದೆ ಎಂಬ ಫಲಕ ಹಾಕಲಾಗಿದೆ

ಮೇಲ್ಸೇತುವೆ ನಿರ್ಮಾಣಕ್ಕೆ ಬಿಬಿಎಂಪಿ ಯೋಜನೆ • ಪರಿಸರ ಪ್ರೇಮಿಗಳು, ಸ್ಥಳೀಯ ನಿವಾಸಿಗಳ ವಿರೋಧ

ರಸ್ತೆ ವಿಸ್ತರಣೆ: 40 ಮರ ತೆರವಿಗೆ ನಿರ್ಧಾರ

• ಸ್ನೇಹಾ ರಮೇಶ್

ಪ್ರಜಾವಾಣಿ ವಿಶೇಷ

ಬೆಂಗಳೂರು: 'ಸಿಲಿಕಾನ್ ಸಿಟಿ'ಯಲ್ಲಿ ರಸ್ತೆ ವಿಸ್ತರಣೆ, ಮೇಲ್ಸೇತುವೆ ನಿರ್ಮಾಣಕ್ಕೆ ಮರಗಳಿಗೆ ಕೊಡಲಿ ಪೆಟ್ಟು ಬೀಳುವುದು ಮುಂದುವರಿದಿದೆ. ಈಗ ಮತ್ತೊಂದು ರಸ್ತೆಯಲ್ಲಿ ಮರ ಕಡಿಯಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ತಯಾರಿ ನಡೆಸಿದೆ.

ಸ್ಯಾಂಕಿ ರಸ್ತೆಯ ವಿಸ್ತರಣೆ ಹಾಗೂ ಟಿ.ಚೌಡಯ್ಯ ರಸ್ತೆಯಿಂದ 18ನೇ ಕ್ರಾಸ್ ತನಕ ಮೇಲ್ಸೇತುವೆ ನಿರ್ಮಾಣಕ್ಕೆ ಬಿಬಿಎಂಪಿ ಯೋಜನೆ ರೂಪಿಸಿದೆ. ಈ ಯೋಜನೆಗಾಗಿ ಮಲ್ಲೇಶ್ವರದಲ್ಲೇ ದಶಕಗಳಷ್ಟು ಹಳೆಯದಾದ 40 ಮರಗಳನ್ನು ತೆರವುಗೊಳಿಸಲು ಮುಂದಾಗಿದೆ. ಮರ ತೆರವುಗೊಳಿಸುವ ನಿರ್ಧಾರಕ್ಕೆ ಪರಿಸರ ಪ್ರೇಮಿಗಳು ವಿರೋಧ ವ್ಯಕ್ತಪಡಿಸಿದ್ದಾರೆ. ಈ ಹಿಂದೆ ಇದೇ ಕಾಮಗಾರಿ ಕೈಗೆತ್ತಿಕೊಂಡಿದ್ದ ಬಿಬಿಎಂಪಿ, ವಿರೋಧ ವ್ಯಕ್ತವಾದ ಮೇಲೆ ಕೈಬಿಟ್ಟಿತ್ತು.

ಈಗ ಮತ್ತೆ ಬಿಬಿಎಂಪಿ ಬಾಷ್ಯಂ ವೃತ್ತದಿಂದ ಮಲ್ಲೇಶ್ವರದ 18ನೇ ಕ್ರಾಸ್‌ವರೆಗೆ 1.1 ಕಿ.ಮೀ. ರಸ್ತೆ ವಿಸ್ತರಿಸಲು ಮುಂದಾಗಿದೆ. ಜತೆಗೆ, ನಗರದ ಕೇಂದ್ರ ಭಾಗದಿಂದ ಉತ್ತರಕ್ಕೆ ಸಂಪರ್ಕಿಸಲು 560 ಮೀಟರ್ ಉದ್ದದ ಮೇಲ್ಸೇತುವೆ ನಿರ್ಮಾಣಕ್ಕೆ ಟೆಂಡರ್ ಆಹ್ವಾನಿಸಲಾಗಿದೆ.



ಸ್ಯಾಂಕಿ ರಸ್ತೆ

ಮರ ತೆರವುಗೊಳಿಸಿದರೆ ಪರಿಸರದ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಜತೆಗೆ ಸ್ಯಾಂಕಿ ಕೆರೆಗೂ ಆಪತ್ತು ಎದುರಾಗುವ ಸಾಧ್ಯತೆ ಇದೆ ಎಂದು ಪರಿಸರ ಪ್ರೇಮಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

'ಪ್ರಸ್ತುತ ಈ ರಸ್ತೆ ಕೇವಲ 15-18 ಮೀಟರ್ ಇದೆ. ಏಕಕಾಲದಲ್ಲಿ ಎರಡು ಕಾರುಗಳು ತೆರಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ರಸ್ತೆಯನ್ನು 24 ಮೀಟರ್‌ವರೆಗೆ ವಿಸ್ತರಿಸಲಾಗುವುದು' ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

'ಕೆರೆಯ ಬದುವಿನ ಮೇಲೆ ರಸ್ತೆ ನಿರ್ಮಾಣಕ್ಕೆ ಅನುಮೋದನೆ ನೀಡಿರುವುದೇ ಕಾನೂನು ಉಲ್ಲಂಘನೆಯಾಗಿದೆ. ಇದೀಗ ಮರ ತೆರವುಗೊಳಿಸಿ ರಸ್ತೆ ವಿಸ್ತರಣೆ ಮಾಡಲು ಮುಂದಾಗಿರುವುದು ಪರಿಸರದ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆ ಅಲ್ಲ' ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಟಿ.ವಿ.ರಾಮಚಂದ್ರ ಆತಂಕ ವ್ಯಕ್ತಪಡಿಸುತ್ತಾರೆ.

'ಸ್ಯಾಂಕಿ ಕೆರೆಯ ಬದಿಯಲ್ಲಿನ ಮರಗಳನ್ನು ತೆರವುಗೊಳಿಸಿದರೆ ಹಸಿರು ಹೊದಿಕೆ ನಾಶವಾಗಲಿದೆ. ಕೆರೆ ಬದುವಿನ ಮಣ್ಣು ಸಡಿಲಗೊಂಡು ಕೆರೆ ಏರಿ ದುರ್ಬಲಗೊಳ್ಳುತ್ತದೆ. ಈ ರಸ್ತೆ ವಿಸ್ತರಣೆಯಿಂದ ಹಾನಿಯೇ ಹೆಚ್ಚು' ಎಂದು ಮಲ್ಲೇಶ್ವರದ ಸ್ವಾಭಿಮಾನ ಸಂಘಟನೆಯ ಅಧ್ಯಕ್ಷರಾದ ರೇಖಾ ಚಾರಿ ಎಚ್ಚರಿಸಿದ್ದಾರೆ.

'ಈ ರಸ್ತೆಯು ನಗರದ ಬೇರೆ ರಸ್ತೆಗಳಂತೆ ಅಲ್ಲ. ಹಳೆಯದಾದ ರಸ್ತೆಯಲ್ಲಿ 80ರಿಂದ 100 ವರ್ಷದಷ್ಟು ಹಳೆಯ ಮರಗಳಿವೆ. ಈ ಯೋಜನೆಯಿಂದ ಹಸಿರು ಪರಂಪರೆಗೆ ಧಕ್ಕೆಯಾಗಲಿದೆ' ಎಂದು ಡಾ.ರಾಜನ್ ಹೇಳಿದರು. ಇವರು 2011ರಲ್ಲೇ ಯೋಜನೆ ವಿರೋಧಿಸಿದ್ದರು. ಅಧಿಕಾರಿಗಳು ಪರ್ಯಾಯ ಮಾರ್ಗಗಳತ್ತ ಯೋಚಿಸಬೇಕಿದೆ ಎಂದು ಸ್ಥಳೀಯರು ಕೋರಿದ್ದಾರೆ.

2011ರಲ್ಲಿ ಈ ಯೋಜನೆ ಕೈಗೆತ್ತಿಕೊಂಡಾಗ ಸ್ಥಳೀಯರು ನಿರಂತರ ಪ್ರತಿಭಟನೆ ನಡೆಸಿದ್ದರು. ಹೈಕೋರ್ಟ್ ಮೆಟ್ಟಿಲೇರಿದ್ದರು. ಬಿಬಿಎಂಪಿ ಪರವಾಗಿ ಆದೇಶ ಬಂದಿದ್ದು ಮತ್ತೆ ಬಿಬಿಎಂಪಿ ಅಧಿಕಾರಿಗಳು ಕಾಮಗಾರಿ ಆರಂಭಿಸಲು ಮುಂದಾಗಿದ್ದಾರೆ.

ಸುದ್ದಿ 2 ನಿಮಿಷ

ಕಟ್ಟಿಗೇಹಳ್ಳಿಯಿಂದ ಸಾಗಿಸುತ್ತಿದ್ದ 360 ಕೆ.ಜಿ. ರಕ್ತಚಂದನ ಜಪ್ತಿ

ಬೆಂಗಳೂರು: ಹೊಸಕೋಟೆ ಬಳಿಯ ಕಟ್ಟಿಗೇಹಳ್ಳಿಯಿಂದ ಅಕ್ರಮವಾಗಿ ಸಾಗಿಸುತ್ತಿದ್ದ 360 ಕೆ.ಜಿ ರಕ್ತಚಂದನ ತುಂಡುಗಳನ್ನು ಶೇಷಾದ್ರಿಪುರ ಠಾಣೆ ಪೊಲೀಸರು ಜಪ್ತಿ ಮಾಡಿದ್ದು, ಈ ಸಂಬಂಧ ಮೂವರನ್ನು ಬಂಧಿಸಿದ್ದಾರೆ.

'ಕಟ್ಟಿಗೇಹಳ್ಳಿಯ ಏಜಾಜ್ ಷರೀಫ್ (44), ಸೈಯದ್ ಇಮ್ತಿಯಾಜ್ (36) ಹಾಗೂ ಶೌಕತ್ (30) ಬಂಧಿತರು. ಮೂವರು ಸೇರಿಕೊಂಡು ಡಿ. 22ರಂದು ಟಾಟಾ ಏಸ್ ವಾಹನದಲ್ಲಿ ರಕ್ತಚಂದನ ತುಂಡುಗಳನ್ನು ಸಾಗಿಸುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಸಂಪಿಗೆ ರಸ್ತೆಯ ಬಿಬಿಎಂಪಿ ಕಚೇರಿ ಎದುರು ಆರೋಪಿಗಳ ಟಾಟಾ ಏಸ್ ವಾಹನ ನಿಂತಿತ್ತು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ ಪರಿಶೀಲಿಸಲಾಯಿತು. ರಕ್ತಚಂದನ ತುಂಡುಗಳ ಮೇಲೆ ಕಪ್ಪು ಬಣ್ಣದ ತಾಡಪತ್ರಿ ಮುಚ್ಚಿ ಸಾಗಿಸುತ್ತಿದ್ದ ಸಂಗತಿ ಪತ್ತೆಯಾಯಿತು. ಆರೋಪಿಗಳನ್ನು ವಿಚಾರಿಸಿದಾಗ, ಗ್ರಾಹಕರೊಬ್ಬರಿಗೆ ರಕ್ತಚಂದನ ತುಂಡುಗಳನ್ನು ನೀಡಲು ಹೊರಟಿದ್ದಾಗಿ ತಪ್ಪೊಪ್ಪಿಕೊಂಡರು' ಎಂದು ತಿಳಿಸಿದರು.

'ಹೊರ ರಾಜ್ಯದಿಂದ ರಕ್ತಚಂದನವನ್ನು ಅಕ್ರಮವಾಗಿ ಸಾಗಿಸಿ ತಂದು ಕಟ್ಟಿಗೇಹಳ್ಳಿಯಲ್ಲಿ ಬಚ್ಚಿಡಲಾಗಿತ್ತು. ಕೆಲ ತುಂಡುಗಳನ್ನು ಅಕ್ರಮವಾಗಿ ಸಾಗಿಸಲಾಗುತ್ತಿತ್ತು' ಎಂದೂ ಹೇಳಿದರು.

ಕಾರು–ಟೆಂಪೊ ಡಿಕ್ಕಿ: ಬೆಂಗಳೂರಿನ ಇಬ್ಬರ ಸಾವು



ಶಿರ್ವ (ಉಡುಪಿ ಜಿಲ್ಲೆ): ಶಿರ್ವ ಪೊಲೀಸ್ ಠಾಣಾವ್ಯಾಪ್ತಿಯ ಕಟಪಾಡಿ-ಶಿರ್ವ ಮುಖ್ಯರಸ್ತೆಯ ಪಂಜಿಮಾರು ಪಾಲಮೆ ಬಳಿ ಕಾರು ಮತ್ತು ಟೆಂಪೊ ನಡುವೆ ಡಿಕ್ಕಿ ಸಂಭವಿಸಿ ಕಾರಿನಲ್ಲಿದ್ದ ಮಹಿಳೆ ಮತ್ತು ಯುವಕ ಸಾವಿಗೀಡಾಗಿದ್ದಾರೆ. ಬೆಂಗಳೂರಿನ ಮಹಿಳೆ ಸ್ವಪ್ನ (42) ಹಾಗೂ ಯುವಕ ಪವನ್ ಬಿ.ಎಸ್ (27) ಮೃತಪಟ್ಟವರು.

ಮೂಡುಬಿದಿರೆಯಿಂದ ಉಡುಪಿ ಕಡೆಗೆ ಬರುತ್ತಿದ್ದ ಕಾರಿಗೆ ಕಟಪಾಡಿಯಿಂದ ಶಿರ್ವ ಕಡೆಗೆ ತೆರಳುತ್ತಿದ್ದ ಟೆಂಪೊ ಡಿಕ್ಕಿ ಹೊಡೆದಿದೆ. ಕಾರು ನಜ್ಜುಗುಜ್ಜಾಗಿದೆ. ಸ್ವಪ್ನ ಸ್ಥಳದಲ್ಲೇ ಸಾವಿಗೀಡಾಗಿದ್ದು ಗಾಯಗೊಂಡಿದ್ದ ಪವನ್ ಆಸ್ಪತ್ರೆಗೆ ಸಾಗಿಸುವ ಹಾದಿ ಮಧ್ಯೆ ಸಾವಿಗೀಡಾಗಿದ್ದಾರೆ. ಶಿರ್ವ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ರಸ್ತೆ ಬಂದ್ ನಗರದ ಬ್ರಿಗೇಡ್ ರಸ್ತೆಯಲ್ಲಿ ಶನಿವಾರ ರಾತ್ರಿ ಜನಸಂದಣಿ ಹೆಚ್ಚಿದ್ದರಿಂದ ವಾಹನ ಸಂಚಾರ ಬಂದ್ ಮಾಡಿದ್ದ ಪೊಲೀಸರು ಸ್ಥಳದಲ್ಲಿ ಮೊಕ್ಕಾಂ ಹೂಡಿದ್ದರು
– ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ದಾರಿಯಲ್ಲಿ ಸಿಕ್ಕ ಪೆನ್‌ಡ್ರೈವ್: ಬ್ಲ್ಯಾಕ್‌ಮೇಲ್ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ



ಶೋಯೆಬ್

ಬೆಂಗಳೂರು: ದಾರಿಯಲ್ಲಿ ಸಿಕ್ಕ ಪೆನ್‌ಡ್ರೈವ್‌ನಲ್ಲಿದ್ದ ಯುವತಿಯೊಬ್ಬರ ಖಾಸಗಿ ಫೋಟೊ ಹಾಗೂ ವಿಡಿಯೊ ಮುಂದಿಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆರೋಪಿ ಶೋಯೆಬ್ ಮೊಹಮ್ಮದ್ ಎಂಬುವವರನ್ನು ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ಯುವತಿಯೊಬ್ಬರು ಬ್ಲ್ಯಾಕ್‌ಮೇಲ್ ಬಗ್ಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಆರೋಪಿ ಶೋಯೆಬ್‌ನನ್ನು ಬಂಧಿಸಲಾಗಿದೆ. ಈತನಿಂದ ಪೆನ್‌ಡ್ರೈವ್ ಹಾಗೂ ಸಿಮ್‌ಕಾರ್ಡ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರ ಯುವತಿ ಕೆಲಸ ನಿಮಿತ್ತ ದ್ವಿಚಕ್ರ ವಾಹನದಲ್ಲಿ ಹೊರಟಿದ್ದರು. ಇದೇ ಸಂದರ್ಭದಲ್ಲೇ ಅವರ ಬ್ಯಾಗ್‌ನಿಂದ ಪೆನ್‌ಡ್ರೈನ್ ದಾರಿಯಲ್ಲಿ ಬಿದ್ದು ಕಳೆದುಹೋಗಿತ್ತು. ಎಷ್ಟೇ ಹುಡುಕಿದರೂ ಪೆನ್‌ಡ್ರೈವ್ ಪತ್ತೆಯಾಗಿರಲಿಲ್ಲ. ಎಲ್ಲಿಯಾದರೂ ಬಿದ್ದಿರಬಹುದೆಂದು ಯುವತಿ ಸುಮ್ಮನಾಗಿದ್ದರು' ಎಂದು ತಿಳಿಸಿದರು.

₹ 70 ಸಾವಿರಕ್ಕೆ ಬ್ಲ್ಯಾಕ್‌ಮೇಲ್: 'ಪೇಂಟರ್ ಕೆಲಸ ಮಾಡುತ್ತಿದ್ದ ಆರೋಪಿ ಶೋಯೆಬ್ ರಸ್ತೆಯಲ್ಲಿ ಹೋಗುವಾಗ ಪೆನ್‌ಡ್ರೈವ್ ಸಿಕ್ಕಿತ್ತು. ಅದನ್ನು ಮನೆಗೆ ತೆಗೆದುಕೊಂಡು ಹೋಗಿ ಕಂಪ್ಯೂಟರ್ ಮೂಲಕ ಪರಿಶೀಲಿಸಿದ್ದ. ಅದರಲ್ಲಿ ಯುವತಿಯ ಖಾಸಗಿ ಫೋಟೊ, ವಿಡಿಯೊಗಳು ಇದ್ದವು. ಅವುಗಳನ್ನು ಬಳಸಿಕೊಂಡು ಬ್ಲ್ಯಾಕ್‌ಮೇಲ್ ಮಾಡಲು ಆರೋಪಿ ಯೋಚಿಸಿದ್ದ' ಎಂದು ಪೊಲೀಸರು ಹೇಳಿದರು.

'ದೂರುದಾರ ಯುವತಿ ಸ್ನೇಹಿತೆಯೊಬ್ಬರ ಜೊತೆ ವಾಟ್ಸ್‌ಆ್ಯಪ್‌ನಲ್ಲಿ ಚಾಟಿಂಗ್ ಮಾಡಿದ್ದ ಸ್ಕ್ರೀನ್ ಶಾಟ್ ಪೆನ್‌ಡ್ರೈವ್‌ನಲ್ಲಿತ್ತು. ಅದರಲ್ಲಿ ನಮೂದಾಗಿದ್ದ ಯುವತಿ ಮೊಬೈಲ್ ನಂಬರ್‌ಗೆ ಕರೆ ಮಾಡಿದ್ದ ಆರೋಪಿ, 'ನಿಮ್ಮ ಫೋಟೊ ಹಾಗೂ ವಿಡಿಯೊಗಳು ನನ್ನ ಬಳಿ ಇವೆ. ನಾನು ಹೇಳಿದ ಖಾತೆಗೆ ₹ 70 ಸಾವಿರ ಜಮೆ ಮಾಡಿ. ಇಲ್ಲದಿದ್ದರೆ, ಫೋಟೊ ಹಾಗೂ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುತ್ತೇನೆ ಎಂದಿದ್ದ.'

ಆತಂಕಗೊಂಡಿದ್ದ ಯುವತಿ ಠಾಣೆಗೆ ಮಾಹಿತಿ ನೀಡಿದ್ದರು. ತ್ವರಿತ ಕಾರ್ಯಾಚರಣೆ ಕೈಗೊಂಡು ತಾಂತ್ರಿಕ ಪುರಾವೆಗಳನ್ನು ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದರು.

ಗುಪ್ತಾಂಗದಲ್ಲಿ ಎರಡು ಮೊಬೈಲ್: ಜೈಲಿನಲ್ಲಿ ಸಿಕ್ಕಿಬಿದ್ದ ಮಹಿಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಪ್ತಾಂಗದಲ್ಲಿ ಎರಡು ಮೊಬೈಲ್ ಬಚ್ಚಿಟ್ಟುಕೊಂಡು ಕೈದಿಗೆ ನೀಡಲು ಬಂದಿದ್ದ ಸಂದರ್ಶಕಿ ಉಮ್ಮೆಶಾಮ (25) ಎಂಬುವವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಭದ್ರತಾ ಸಿಬ್ಬಂದಿ ಕೈಗೆ ಸಿಕ್ಕಿಬಿದ್ದಿದ್ದಾರೆ.


'ಕಾಡುಗೊಂಡನಹಳ್ಳಿ (ಕೆ.ಜಿ. ಹಳ್ಳಿ) ನಿವಾಸಿಯಾದ 25 ವರ್ಷದ ಮಹಿಳೆ ಉಮ್ಮೆಶಾಮ, ಕೈದಿ ಮಹಮ್ಮದ್ ನದೀಮ್ ಅಲಿಯಾಸ್ ಬಡ್ಡೆಯನ್ನು ನೋಡಲು ಡಿ. 22ರಂದು ಸಂಜೆ ಜೈಲಿಗೆ ಬಂದಿದ್ದರು. ಮಹಿಳೆ ಮೇಲೆ ಅನುಮಾನಗೊಂಡು ತಪಾಸಣೆ ನಡೆಸಿದಾಗ ಗುಪ್ತಾಂಗದಲ್ಲಿ ಎರಡು ಬೇಸಿಕ್ ಮೊಬೈಲ್‌ಗಳು ಸಿಕ್ಕವು' ಎಂದು ಜೈಲಿನ ಮೂಲಗಳು ತಿಳಿಸಿವೆ.

'ಉಮ್ಮೆಶಾಮ ಅವರನ್ನು ವಶಕ್ಕೆ ಪಡೆದು ಪೊಲೀಸರ ಸುಪರ್ದಿಗೆ ಒಪ್ಪಿಸಲಾಗಿದೆ. ಉಮ್ಮೆಶಾಮ ಹಾಗೂ ಕೈದಿ ಮಹಮ್ಮದ್ ನದೀಮ್ ಇಬ್ಬರ ವಿರುದ್ಧವೂ ಪರಪ್ಪನ ಅಗ್ರಹಾರ ಠಾಣೆಗೆ ದೂರು ನೀಡಲಾಗಿದ್ದು, ಎಫ್‌ಐಆರ್ ದಾಖಲಾಗಿದೆ' ಎಂದೂ ಹೇಳಿವೆ.

ಅಕ್ರಮ ಕೃತ್ಯಕ್ಕೆ ಮೊಬೈಲ್: 'ಅಪರಾಧ ಪ್ರಕರಣದಲ್ಲಿ ಬಂಧಿತನಾಗಿ ಜೈಲಿಗೆ ಬಂದಿದ್ದ ಮಹಮ್ಮದ್ ನದೀಮ್, ಜೈಲಿನಿಂದಲೇ ಅಕ್ರಮ ಕೃತ್ಯ ಎಸಗಲು ಸಂಚು ರೂಪಿಸುತ್ತಿದ್ದ. ಇದಕ್ಕಾಗಿ ಮಹಿಳೆ ಉಮ್ಮೆಶಾಮ ಮೂಲಕ ಮೊಬೈಲ್ ತರಿಸಿಕೊಳ್ಳಲು ಮುಂದಾಗಿದ್ದ. ಮಹಿಳೆಯಿಂದ ಮೊಬೈಲ್ ತರಿಸಿಕೊಂಡರೆ ಭದ್ರತಾ ಸಿಬ್ಬಂದಿ ತಪಾಸಣೆ ಮಾಡುವುದಿಲ್ಲವೆಂದು ಕೈದಿ ಅಂದುಕೊಂಡಿದ್ದ. ಆದರೆ, ಮಹಿಳಾ ಭದ್ರತಾ ಸಿಬ್ಬಂದಿಯೇ ಉಮ್ಮೆಶಾಮ ಅವರನ್ನು ಕೊಠಡಿಗೆ ಕರೆದೊಯ್ದು ತಪಾಸಣೆ ನಡೆಸಿದಾಗ ಕೃತ್ಯ ಬಯಲಾಯಿತು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಹಂಪ್ಸ್‌ನಿಂದ ಉರುಳಿಬಿದ್ದ ಸ್ಕೂಟರ್: ಉದ್ಯಮಿ ಸಾವು

ಪ್ರಜಾವಾಣಿ ವಾರ್ತೆ



ಪ್ರವೀಣ್ ಕುಮಾರ್

ಬೆಂಗಳೂರು: ಎಚ್‌ಎಸ್‌ಆರ್ ಲೇಔಟ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ರಸ್ತೆ ಹಂಪ್ಸ್‌ನಿಂದಾಗಿ ಅಪಘಾತ ಸಂಭವಿಸಿದ್ದು, ರಿಯಲ್ ಎಸ್ಟೇಟ್ ಉದ್ಯಮಿ ಬಿ.ಪಿ. ಪ್ರವೀಣ್ ಕುಮಾರ್ (48) ಎಂಬುವವರು ಮೃತಪಟ್ಟಿದ್ದಾರೆ.

'ಜೆ.ಪಿ. ನಗರದ ಎಸ್.ಎಂ.ಎಸ್ ಬಡಾವಣೆ ನಿವಾಸಿ ಪ್ರವೀಣ್ ಕುಮಾರ್, ಶನಿವಾರ ನಸುಕಿನಲ್ಲಿ ತಮ್ಮ ಸ್ಕೂಟರ್‌ನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು.

'ಎಚ್‌ಎಸ್‌ಆರ್ ಲೇಔಟ್‌ನ 24ನೇ ಮುಖ್ಯರಸ್ತೆಯ ಅಲಂಕಾರ್ ಪ್ಲಾಜಾ ಎದುರು ಹಂಪ್ಸ್ ಇದೆ. ಇದೇ ಮಾರ್ಗದಲ್ಲಿ ಹೊರಟಿದ್ದ ಪ್ರವೀಣ್‌ಕುಮಾರ್, ಅತಿ ವೇಗವಾಗಿ ನಿರ್ಲಕ್ಷ್ಯದಿಂದ ಸ್ಕೂಟರ್ ಚಲಾಯಿಸಿದ್ದರು. ರಸ್ತೆ ಹಂಪ್ಸ್‌ನಲ್ಲಿ ಸ್ಕೂಟರ್ ಉರುಳಿಬಿದ್ದಿತ್ತು.'

'ತಲೆ ಹಾಗೂ ಕೈಗೆ ಪೆಟ್ಟಾಗಿದ್ದರಿಂದ ಪ್ರವೀಣ್‌ಕುಮಾರ್ ಅವರನ್ನು ಸಮೀಪದ ನಾರಾಯಣ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ಪ್ರವೀಣ್‌ಕುಮಾರ್ ಅವರ ನಿರ್ಲಕ್ಷ್ಯದ ಚಾಲನೆಯಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

ಹಂಪ್ಸ್‌ನಿಂದ ಅಪಘಾತವೆಂದು ಪತ್ರ: ಸಂಚಾರ ವಿಭಾಗದ ವಿಶೇಷ ಕಮಿಷನರ್ ಎಂ.ಎ. ಸಲೀಂ, 'ರಸ್ತೆಯಲ್ಲಿರುವ ಅವೈಜ್ಞಾನಿಕ ಹಂಪ್ಸ್‌ನಿಂದ ಅಪಘಾತಗಳು ಸಂಭವಿಸುತ್ತಿವೆ. ಅಂಥ ಹಂಪ್ಸ್ ತೆರವುಗೊಳಿಸಲು ಕ್ರಮ ಕೈಗೊಳ್ಳಿ' ಎಂಬುದಾಗಿ ಪಟ್ಟಿ ಸಮೇತ ಬಿಬಿಎಂಪಿ ಅಧಿಕಾರಿಗಳಿಗೆ ಪತ್ರ ಬರೆದಿದ್ದರು. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳು ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ.

ಚಿತ್ರಾವಳಿ



ನಗರದ ವಿಷನ್ ಪಿಯು ಕಾಲೇಜಿನಲ್ಲಿ ವ್ಯಾಸಂಗ ಮಾಡಿ ನೀಟ್ 2022 ಪರೀಕ್ಷೆಯಲ್ಲಿ 650ಕ್ಕೂ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಮೆಡಿಕಲ್ ಹಾಗೂ ಯುಜಿ ಮಾಡಲು ಆರ್ಥಿಕ ನೆರವು ವಿತರಣೆ ಮಾಡಲಾಯಿತು. ವಿಷನ್ ಗ್ರೂಪ್‌ನ ನಿರ್ದೇಶಕ ರಾಮ್ ಮನೋಹರ್ ರೆಡ್ಡಿ, ಇಡಮಕಂಟಿ ಲಕ್ಷ್ಮಿರೆಡ್ಡಿ, ಶ್ರೀನಿಕಾ ರೆಡ್ಡಿ ಹಾಜರಿದ್ದರು



ಸಮಾಜ ಸೇವೆ, ಕಾನೂನು ಅರಿವು ಕಾರ್ಯಕ್ರಮ ಮೊದಲಾದ ಕ್ಷೇತ್ರಗಳಲ್ಲಿ ಮಾಡಿರುವ ಸೇವೆಯನ್ನು ಗುರುತಿಸಿ ಮಾನವ ಹಕ್ಕುಗಳು ಮತ್ತು ಭ್ರಷ್ಟಾಚಾರ ವಿರೋಧಿ ಸಂಘಟನೆಯು ಭಾಗ್ಯಶ್ರೀ ಅವರಿಗೆ 'ರಾಷ್ಟ್ರೀಯ ಮಾನವ ಹಕ್ಕುಗಳ ಪ್ರಶಸ್ತಿ' ನೀಡಿದ್ದು, ನಗರದಲ್ಲಿ ಈಚೆಗೆ ನಡೆದ ಸಮಾರಂಭದಲ್ಲಿ ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರು ಪ್ರಶಸ್ತಿ ಪ್ರದಾನ ಮಾಡಿದರು

ಡಾ. ರಾಜ್ ಕುಟುಂಬದ ಅವಹೇಳನ: ಎರಡು ಗುಂಪಿನ ನಡುವೆ ಗಲಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ. ರಾಜ್‌ಕುಮಾರ್ ಕುಟುಂಬದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ ವಿಚಾರದಲ್ಲಿ ರಾಷ್ಟ್ರ ರಕ್ಷಣಾ ಪಡೆ ಸಂಘಟನೆಯ ಅಧ್ಯಕ್ಷ ಪುನೀತ್ ಕೆರೆಹಳ್ಳಿ ಹಾಗೂ ವಂದೇ ಮಾತರಂ ಸಮಾಜ ಸೇವಾ ಸಂಸ್ಥೆ ರಾಜ್ಯಾಧ್ಯಕ್ಷ ಶಿವಕುಮಾರ್ ನಾಯ್ಕ ಗುಂಪುಗಳ ನಡುವೆ ಗಲಾಟೆ ನಡೆದಿದ್ದು, ಈ ಸಂಬಂಧ ಚಾಮರಾಜಪೇಟೆಯಲ್ಲಿ ಪ್ರತ್ಯೇಕ ಎಫ್‌ಐಆರ್‌ಗಳು ದಾಖಲಾಗಿವೆ.

ಚಾಮರಾಜಪೇಟೆ 3ನೇ ಅಡ್ಡರಸ್ತೆಯಲ್ಲಿ ಶುಕ್ರವಾರ ರಾತ್ರಿ ಗಲಾಟೆ ಆಗಿದೆ. ಎರಡೂ ಗುಂಪಿನವರು ಪರಸ್ಪರ ಕೈ ಕೈ ಮಿಲಾಯಿಸಿ ಹೊಡೆದಾಡಿದ್ದಾರೆ. ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

'ಪುನೀತ್ ಕೆರೆಹಳ್ಳಿ ಹಾಗೂ ಶಿವಕುಮಾರ್ ಪ್ರತ್ಯೇಕ ದೂರು ನೀಡಿದ್ದಾರೆ. ಎರಡು ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಚಾಮರಾಜಪೇಟೆ ಪೊಲೀಸರು ತಿಳಿಸಿದರು.

ಆಗಿದ್ದೇನು?: ಹೊಸಪೇಟೆಯಲ್ಲಿ ಇತ್ತೀಚೆಗೆ ನಟರೊಬ್ಬರ ಮೇಲೆ ಚಪ್ಪಲಿ ಎಸೆದಿದ್ದ ಘಟನೆ ಉಲ್ಲೇಖಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದ ಕೆರೆಹಳ್ಳಿ, ಡಾ. ರಾಜ್‌ಕುಮಾರ್ ಕುಟುಂಬದವರ ಬಗ್ಗೆ ಅವಹೇಳನ ರೀತಿಯಲ್ಲಿ ಮಾತನಾಡಿದ್ದರೆಂದು ಹೇಳಲಾಗಿದೆ. ಇದನ್ನು ಖಂಡಿಸಿದ್ದ ಹಲವರು, ಕಾಮೆಂಟ್ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದರು.

ಶಿವಕುಮಾರ್ ಸಹ ಕರೆ ಮಾಡಿ, ಕ್ಷಮೆ ಕೇಳುವಂತೆ ಒತ್ತಾಯಿಸಿದ್ದರು. ಪುನೀತ್, 'ನಾನು ಅವಹೇಳನ ಮಾಡುವ ರೀತಿಯಲ್ಲಿ ಮಾತನಾಡಿಲ್ಲ. ಕ್ಷಮೆ ಕೇಳುವುದಿಲ್ಲ. ಬೇಕಾದರೆ ಚಾಮರಾಜಪೇಟೆಗೆ ಬರುತ್ತೇನೆ. ನೀನು ಬಾ' ಎಂದಿದ್ದರು. ಶಿವಕುಮಾರ್, ತಮ್ಮ ಗುಂಪಿನ ಜೊತೆ ಚಾಮರಾಜಪೇಟೆಗೆ ಬಂದಿದ್ದರು. ಪುನೀತ್ ಸಹ ಸ್ಥಳದಲ್ಲಿದ್ದರು. ಮಾತಿಗೆ ಮಾತು ಬೆಳೆದು ಎರಡೂ ಗುಂಪಿನ ನಡುವೆ ಗಲಾಟೆ ನಡೆದಿದೆ.

'ವಿನಾಕಾರಣ ಆರೋಪ ಮಾಡಿ ನನ್ನ ಕೊಲೆಗೆ ಯತ್ನಿಸಲಾಗಿದೆ' ಎಂದು ಪುನೀತ್ ದೂರಿದ್ದಾರೆ.

ಶಿವಕುಮಾರ್, 'ಡಾ. ರಾಜ್‌ಕುಮಾರ್ ಕುಟುಂಬದ ಬಗ್ಗೆ ಅವಹೇಳನ ಮಾಡಿದ್ದನ್ನು ಪ್ರಶ್ನಿಸಿದ್ದಕ್ಕೆ ನನ್ನ ಜಾತಿ ನಿಂದನೆ ಮಾಡಿ, ಹಲ್ಲೆ ಮಾಡಲಾಗಿದೆ' ಎಂದಿದ್ದಾರೆ.

ಪಾನಮತ್ತ ಚಾಲನೆ ವಿರುದ್ಧ 146 ಪ್ರಕರಣ

ಬೆಂಗಳೂರು: ಹೊಸ ವರ್ಷಾಚರಣೆಗೆ ದಿನಗಣನೆ ಶುರುವಾಗಿದ್ದು, ಪಾನಮತ್ತ ಚಾಲನೆ ಮಾಡುವವರ ಪತ್ತೆಗಾಗಿ ಸಂಚಾರ ಪೊಲೀಸರು ಶುಕ್ರವಾರದಿಂದ ವಿಶೇಷ ಕಾರ್ಯಾಚರಣೆ ಆರಂಭಿಸಿದ್ದಾರೆ.

'ಹೊಸ ವರ್ಷಾಚರಣೆ ಹತ್ತಿರವಾಗುತ್ತಿದ್ದು, ಕೆಲವರು ಪಾನಮತ್ತರಾಗಿ ವಾಹನ ಚಾಲನೆ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಹೀಗಾಗಿ, ವಿಶೇಷ ಕಾರ್ಯಾಚರಣೆ ಆರಂಭಿಸಲಾಗಿದೆ. ಡಿ. 31ರವರೆಗೂ ಕಾರ್ಯಾಚರಣೆ ಚಾಲ್ತಿಯಲ್ಲಿರಲಿದೆ' ಎಂದು ಸಂಚಾರ ವಿಭಾಗದ ವಿಶೇಷ ಕಮಿಷನರ್ ಎಂ.ಎ. ಸಲೀಂ ಹೇಳಿದರು.

'ನಗರದ ಹಲವು ಠಾಣೆಗಳ ವ್ಯಾಪ್ತಿಯಲ್ಲಿ ಶುಕ್ರವಾರ ರಾತ್ರಿ ವಾಹನಗಳನ್ನು ತಡೆದು ಚಾಲಕರನ್ನು ತಪಾಸಣೆಗೆ ಒಳಪಡಿಸಲಾಯಿತು. 146 ಚಾಲಕರು ಮದ್ಯ ಕುಡಿದು ವಾಹನ ಚಲಾಯಿಸುತ್ತಿದ್ದ ಸಂಗತಿ ಪತ್ತೆಯಾಯಿತು. ಅವರನ್ನು ಆಸ್ಪತ್ರೆಗೂ ಕರೆದೊಯ್ದು ವೈದ್ಯಕೀಯ ತಪಾಸಣೆ ಮಾಡಿಸಿ, ವಾಹನ ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

'ನ್ಯಾಯಾಲಯದಲ್ಲಿ ದಂಡ ಪಾವತಿಸಿ ವಾಹನ ಬಿಡಿಸಿಕೊಂಡು ಹೋಗುವಂತೆ ನೋಟಿಸ್ ನೀಡಲಾಗಿದೆ. ಜೊತೆಗೆ, ಕೆಲವರ ಚಾಲನಾ ಪರವಾನಗಿ ಅಮಾನತಿಗೂ ಕ್ರಮ ಕೈಗೊಳ್ಳಲಾಗಿದೆ' ಎಂದೂ ಅವರು ಕೋರಿದರು.

263 ಕೆ.ಜಿ. ಗಾಂಜಾ ಜಪ್ತಿ: ಬೆಂಗಳೂರು: ಹೊಸ ವರ್ಷಾಚರಣೆ ಪಾರ್ಟಿಗಳಿಗೆ ಸರಬರಾಜು ಮಾಡಲು ಒಡಿಶಾ ಹಾಗೂ ಆಂಧ್ರಪ್ರದೇಶದಿಂದ ಗಾಂಜಾ ತಂದು ಪಾಳು ಮನೆಗಳಲ್ಲಿ ಸಂಗ್ರಹಿಸಿದ್ದ ಇಬ್ಬರು ಆರೋಪಿಗಳನ್ನು ಕೋಣನಕುಂಟೆ ಪೊಲೀಸರು ಬಂಧಿಸಿದ್ದಾರೆ.

'ಒಡಿಶಾದ ಜಾಗಿಲ್ ಸೇಥಿ (44) ಹಾಗೂ ಮುರುಳಿ ಬೆಹ್ರ (26) ಬಂಧಿತರು. ಪಿಳ್ಳಗಾನಹಳ್ಳಿ ಡಿಪೊ ಬಳಿಯ ಪಾಳು ಬಿದ್ದ ಮನೆಯಲ್ಲಿ ಶೋಧ ನಡೆಸಿ, ₹ 35 ಲಕ್ಷ ಮೌಲ್ಯದ 263 ಕೆ.ಜಿ. 700 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ನಗರದಲ್ಲಿ ಇಂದು

ಸದ್ಗುರು ಅನಂತಸ್ವಾಮಿ ಮಹಾರಾಜರ 121ನೇ ದಿವ್ಯಾರಾಧನ ಮಹೋತ್ಸವ: ಆಯೋಜನೆ ಹಾಗೂ ಸ್ಥಳ: ಅನಂತಸ್ವಾಮಿ ಆಶ್ರಮ, ಸುಭೇದಾರ್ ಛತ್ರಂ ರಸ್ತೆ ಕ್ರಾಸ್, ಕಪಾಲಿ ಚಿತ್ರಮಂದಿರದ ಹಿಂಭಾಗ, ಗಾಂಧಿನಗರ, ಬೆಳಿಗ್ಗೆ 5ರಿಂದ

ನೃತ್ಯ ಕಲಾ ಸಂಭ್ರಮ: ಅತಿಥಿಗಳು: ಆರ್. ಚಂದ್ರಶೇಖರ್, ಉಷಾ ಬಸಪ್ಪ, ಆಯೋಜನೆ: ಪ್ರಣವಾಂಜಲಿ ಅಕಾಡೆಮಿ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಸ್ಥಳ: ನಯನ ಸಭಾಂಗಣ, ಜೆ.ಸಿ ರಸ್ತೆ, ಬೆಳಿಗ್ಗೆ 9

ಅಕ್ಷಯ ಬ್ರಾಹ್ಮಣರ ಮಹಾಸಂಘದ ನಾಲ್ಕನೇ ವಾರ್ಷಿಕೋತ್ಸವ: ಗೌರವಾರ್ಪಣೆ: ರಾಘವೇಂದ್ರ ಭಟ್, ಉಪಸ್ಥಿತಿ: ಭಾನುಪ್ರಕಾಶ್ ಶರ್ಮ, ಗಣೇಶ್ ದೀಕ್ಷಿತ, ಕೆ.ಎಸ್. ಸಚ್ಚಿದಾನಂದ ಮೂರ್ತಿ, ಪ್ರಕಾಶ್ ಅಯ್ಯಂಗಾರ್, ಎಸ್. ರಘುನಾಥ್, ಅನೂಪ್ ಅಯ್ಯಂಗಾರ, ಕೆ.ಎಸ್. ಶ್ರೀಕಂಠಪ್ರಸಾದ್, ಸ್ಥಳ: ಲಕ್ಷ್ಮೀವೆಂಕಟೇಶ್ವರ ಕಲ್ಯಾಣ ಮಂಟಪ, ತ್ರಿವೇಣಿ ರಸ್ತೆ, ಯಶವಂತಪುರ, ಬೆಳಿಗ್ಗೆ 9.30

ಸಂಗೀತ ಸಂಭ್ರಮ: ಉದ್ಘಾಟನೆ: ಮಹದೇವಯ್ಯ, ಅಧ್ಯಕ್ಷತೆ: ಎಚ್. ಕೆ. ಜಯಲಕ್ಷ್ಮಿ, ಅತಿಥಿಗಳು: ಕೆ.ವಿ. ನಾಗರಾಜಮೂರ್ತಿ, ಆರ್. ಚಂದ್ರಶೇಖರ್, ಉಪಸ್ಥಿತಿ: ಹೇಮಾ ಪಟ್ಟಣಶೆಟ್ಟಿ, ಗೀತ ಗೌರವ: ಸಿದ್ಧಲಿಂಗ ಪಟ್ಟಣಶೆಟ್ಟಿ, ಸಮೂಹ ಗಾಯನ: ಶಾರದಾ ಸುಗಮ ಸಂಗೀತ ಶಾಲೆ, ಆಯೋಜನೆ: ಸಂಗೀತ ಗಂಗಾ, ಸ್ಥಳ: ಜಿ.ವಿ. ಅತ್ರಿ ಕಲಾಮಂಟಪ, ವೈಷ್ಣವಿ ಬಡಾವಣೆ, ಕೊಮ್ಮಘಟ್ಟ, ಬೆಳಿಗ್ಗೆ 9.30

ಸ್ವರ್ಣ ಜಯಂತಿ ಸಮಾರೋಪ ಸಮಾರಂಭ: ಅಧ್ಯಕ್ಷತೆ: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸಾನ್ನಿಧ್ಯ: ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ, ಉದ್ಬೋಧನೆ: ಮುಕುಂದ ಸಿ.ಆರ್, ಆಯೋಜನೆ ಮತ್ತು ಸ್ಥಳ: ಜನಸೇವಾ ವಿಶ್ವಸ್ತ ಮಂಡಳಿ, ಮಾಗಡಿ ರಸ್ತೆ, ಚನ್ನೇನಹಳ್ಳಿ, ಬೆಳಿಗ್ಗೆ 11



ಯದುವೀರ ಒಡೆಯರ್

ರಾಜ್ಯ ಮಟ್ಟದ ಗೀತಾಗಾಯನ ಸ್ಪರ್ಧೆ: ಆಯೋಜನೆ: ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ, ಸ್ಥಳ: ಕರ್ನಾಟಕ ಸಂಸ್ಕೃತ ವಿದ್ಯಾಲಯ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಳಿಗ್ಗೆ 9.30

ಎಚ್. ನರಸಿಂಹಯ್ಯ ಅವರ ಜನ್ಮಶತಾಬ್ಧಿ ಮತ್ತು ಹಾಸ್ಯೋತ್ಸವ: ಚಾಲನೆ: ಶ್ರೀನಾಥ, ಅತಿಥಿಗಳು: ಎ.ಎಚ್. ರಾಮರಾವ್, ಎಸ್.ಎನ್. ನಾಗರಾಜ ರೆಡ್ಡಿ, ಪಿ. ಸದಾನಂದ ಮಯ್ಯ, ಭುವನೇಶ್ವರಿ ಹೆಗಡೆ, ಬೇಲೂರು ರಾಮಮೂರ್ತಿ, ಎಚ್. ಡುಂಡಿರಾಜ್, ಗಂಗಾವತಿ ಪ್ರಾಣೇಶ್, ವೈ.ವಿ. ಗುಂಡೂರಾವ್, ಮಿಮಿಕ್ರಿ ಗೋಪಿ, ಕೆ.ಪಿ. ಪುತ್ತೂರಾಯ, ಶಶಿಧರ ಕೋಟೆ, ಆಯೋಜನೆ: ದಿ ನ್ಯಾಷನಲ್ ಎಜುಕೇಷನ್ ಸೊಸೈಟಿ, ಅಕಾಡೆಮಿ ಆಫ್ ಹ್ಯೂಮರ್, ಸ್ಥಳ: ಎಚ್.ಎನ್. ಕಲಾಕ್ಷೇತ್ರ, ಜಯನಗರ, ಬೆಳಿಗ್ಗೆ 10

ಗಾಯನ, ಹಾಸ್ಯ, ರಸಪ್ರಶ್ನೆ ಮತ್ತು ಕವಿಗೋಷ್ಠಿ: ಅಧ್ಯಕ್ಷತೆ: ಸದಾನಂದ, ಅತಿಥಿಗಳು: ಎಸ್. ವಿಜಯ ಗುರುರಾಜ್, ಉಪಸ್ಥಿತಿ: ಎಸ್.ಎಸ್. ಪಡಶೆಟ್ಟಿ, ವಿಜಯ ಗುರುರಾಜ ಅವರ 'ಕರ್ಣಾವಸಾನ' ಪುಸ್ತಕ ಬಿಡುಗಡೆ, ಆಯೋಜನೆ: ಸಹಮತ, ಸ್ಥಳ: ಹೇಮ ಸದನ, ಸಿಕ್ಯೂಎಎಲ್ ಬಡಾವಣೆ, ಸಹಕಾರ ನಗರ, ಬೆಳಿಗ್ಗೆ 10

ಟಿ.ಕೆ. ಅನಂತನಾರಾಯಣ ಅವರ ಮೂರು ಪುಸ್ತಕಗಳು ಬಿಡುಗಡೆ: 'ಗಾದೆಗಳ ಗಣಿ', 'ವಸ್ತ್ರವಿದ್ಯಾ ಶಾಸ್ತ್ರ', 'ಕನ್ನಡ ಕವಿ ಕಾವ್ಯ ಚರಿತ್ರೆ', ಅಧ್ಯಕ್ಷತೆ: ಮಹೇಶ ಜೋಶಿ, ಮುಖ್ಯ ಅತಿಥಿಗಳು: ಹಂ.ಪ. ನಾಗರಾಜಯ್ಯ, ಕೆ.ವಿ. ನಾಗರಾಜು, ಜಿ.ವಿ. ನಾಗರಾಜ, ನೇ.ಭ. ರಾಮಲಿಂಗಶೆಟ್ಟಿ, ಪಟೇಲ್‌ಪಾಂಡು, ಸ್ಥಳ: ಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10


ಸ್ವರ್ಣ ಮಹೋತ್ಸವ: ಚಾಲನೆ: ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯ ಅತಿಥಿಗಳು: ಲೆಹರ್ ಸಿಂಗ್, ತೇಜಸ್ವಿ ಸೂರ್ಯ, ಆಯೋಜನೆ: ಆದರ್ಶ ಶಿಕ್ಷಣ ಸಂಸ್ಥೆ, ಸ್ಥಳ: ಚಾಮರ ವಜ್ರ ಮಾಣಿಕ್ಯ, ಅರಮನೆ ಮೈದಾನ, ಬೆಳಿಗ್ಗೆ 10

ರಾಜ್ಯ ಮಟ್ಟದ ಕವಿ–ಕಾವ್ಯ ಸಮಾಗಮ ಮತ್ತು 'ಕಾವ್ಯಯಾನ' ಕೃತಿ ಬಿಡುಗಡೆ: ಸುಬ್ಬು ಹೊಲೆಯಾರ್, ಉದ್ಘಾಟನೆ: ಎಮ್.ಎಸ್. ಆಶಾದೇವಿ, ಅಧ್ಯಕ್ಷತೆ: ಎಮ್.ಜಿ. ಬಾಲಸುಬ್ರಮಣ್ಯ, ಉಪಸ್ಥಿತಿ: ಸಿದ್ಧಲಿಂಗ ಪಟ್ಟಣಶೆಟ್ಟಿ, ಹೇಮಾ ಪಟ್ಟಣಶೆಟ್ಟಿ, ರಾಜಶೇಖರ ಮಠಪತಿ, ಸ್ಥಳ: ಹಳೆ ಎಚ್‌ಎಮ್‌ಎ ಸಭಾಂಗಣ , ಸುರಂಜನ್‌ದಾಸ್ ರಸ್ತೆ, ಎಚ್.ಎ.ಎಲ್, ಬೆಳಿಗ್ಗೆ 10

ಜಿ.ಎಸ್. ಶಿವರುದ್ರಪ್ಪ ಮತ್ತು ಯು.ಆರ್. ಅನಂತಮೂರ್ತಿ ಅವರ ನೆನಪಿನೋಕುಳಿ: ಉದ್ಘಾಟನೆ: ಪುಸ್ತಕಮನೆ ಹರಿಹರಪ್ರಿಯ, ಅಧ್ಯಕ್ಷತೆ: ಎಲ್. ಹನುಮಂತಯ್ಯ, ಬೈರಮಂಗಲ ರಾಮೇಗೌಡ, ಅತಿಥಿಗಳು: ವೀಣಾ ಶರ್ಮಾ ಬೂಸನೂರು ಮಠ, ಬೀರೂರು ವಿ. ಮೋಹನ್, ಕುಮಾರ್ ಕೆ.ಎಚ್, ರ. ನರಸಿಂಹಮೂರ್ತಿ, ಸಿರಿಮನೆ ನಾಗರಾಜ್, ಸುನೀಲ್ ಗೌಡ, ನೃತ್ಯ ಪ್ರದರ್ಶನ: ಕಲಾಗೌರಿ ನೃತ್ಯಾಲಯ, ಬಿಬಿಎಂಪಿ ಮಹಿಳಾ ಪ್ರಥಮ ದರ್ಜೆ ಕಾಲೇಜ್, ಆಯೋಜನೆ: ಪ್ರೊ.ಜಿ.ಎಸ್. ಶಿವರುದ್ರಪ್ಪ ಮತ್ತು ಪ್ರೊ.ಯು.ಆರ್. ಅನಂತಮೂರ್ತಿ ಸಾಂಸ್ಕೃತಿಕ ಜಗತಿ ಜಂಟಿ ಕ್ರಿಯಾಸಮಿತಿ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 10

ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಭಾವಚಿತ್ರ ಅನಾವರಣ: ಉದ್ಘಾಟನೆ: ಸ್ವಾಮಿಸಾ ಎಲ್. ಖೋಡೆ, ಎಸ್. ಎನ್ ಶ್ರೀನಿವಾಸಮೂರ್ತಿ, ಸತ್ಯಚರಣ ವಾಗಲೆ, ಅಧ್ಯಕ್ಷತೆ: ಮಗಜಿಬಾದ್ ಕೆ. ಸೋಮಶೇಖರ್, ಅತಿಥಿಗಳು: ಡಮಾಮ್ ವಿ. ಸತ್ಯನಾರಾಯಣ, ಅಮಿತ್ ಅಮರನಾಥ್, ಆಯೋಜನೆ: ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನದ ಸಭಾಂಗಣ, ಮಿಲ್ಲರ್ಸ್ ರಸ್ತೆ, ವಸಂತನಗರ, ಬೆಳಿಗ್ಗೆ 10.30

'ಎರಡು ಕಥೆಗಳು' ನಾಟಕ ಪ್ರದರ್ಶನ: ಅಭಿನಂದನೆ: ಶ್ರೀನಿವಾಸ ಜಿ. ಕಪ್ಪಣ್ಣ, ಅತಿಥಿಗಳು: ಆರ್. ಚಂದ್ರಶೇಖರ್, ಬಾಬು ಹಿರಣ್ಣಯ್ಯ, ವೀಣಾ ಶರ್ಮಾ, ಆಯೋಜನೆ ಮತ್ತು ಸ್ಥಳ: ವಿಜಯನಗರ ಬಿಂಬದ ಸರಳಾಂಗಣ, ಹಂಪಿನಗರ, ಸಂಜೆ 5.30



ಶ್ರೀನಿವಾಸ ಜಿ. ಕಪ್ಪಣ್ಣ

'ಸ್ಪಿರಿಟ್ ಆಫ್ ಇಂಡಿಯಾ' ಸಂವಾದ ಸರಣಿ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅತಿಥಿಗಳು: ಎನ್.ಆರ್. ನಾರಾಯಣಮೂರ್ತಿ, ಅನಂತನಾಗ್, ರವಿಂದ್ರ ಭಟ್ಟ, ಶಿವಾನಂದ ತಗಡೂರು, ಸಂವಾದ: ಆರ್. ಗಣೇಶ್, ಆಯೋಜನೆ: ಮೈಂಡ್‌ಪುಲ್ ಮೀಡಿಯಾ ಪ್ರೈವೇಟ್ ಲಿಮಿಟೆಡ್, ಸ್ಥಳ: ಬಸವ ಸಮಿತಿ ಸಭಾಂಗಣ, ಸಂಪಂಗಿರಾಮ ನಗರ, ಬೆಳಿಗ್ಗೆ 10.30

ಪದ್ಮಿನಿ ನಾಗರಾಜು ಅವರ ಕೃತಿಗಳ ಬಿಡುಗಡೆ: ಬಸವರಾಜ ಸಾದರ, ಅಧ್ಯಕ್ಷತೆ: ಮಹೇಶ ಜೋಶಿ, ಅತಿಥಿ: ಜೋಗಿ, ಉಪಸ್ಥಿತಿ: ಪದ್ಮಿನಿ ನಾಗರಾಜು, ಆರ್. ಪೂರ್ಣಿಮಾ, ಕೆ.ಎಸ್. ಮುರಳಿ, ಉಮೇಶ ನಾಗಮಂಗಲ, ಸ್ಥಳ: ಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತಿನ ಆವರಣ, ಚಾಮರಾಜಪೇಟೆ, ಸಂಜೆ 4

ವಿಜಯ್ ಪೂಣಚ್ಚ ತಂಬಂಡ ಅವರ ಮೂರು ಪುಸ್ತಕಗಳು ಬಿಡುಗಡೆ: 'ರಾಜೇಂದ್ರನಾಮೆ ಮರು ಓದು', ಅಮರಸುಳ್ಯ ಸಂಗ್ರಾಮ 1837', 'ಕಾಡುಮಕ್ಕಳ ಕೂಗು', ಉದ್ಘಾಟನೆ: ನಿರ್ಮಲಾನಂದನಾಥ ಸ್ವಾಮೀಜಿ, ಪುಸ್ತಕಗಳು ಬಿಡುಗಡೆ: ಡಿ.ವಿ. ಸದಾನಂದಗೌಡ, ತೇಜಸ್ವಿ ಸೂರ್ಯ, ಅಧ್ಯಕ್ಷತೆ: ಸ.ಚಿ. ರಮೇಶ, ಮುಖ್ಯ ಅತಿಥಿಗಳು: ಎಸ್. ಚಂದ್ರಶೇಖರ್, ಹಿ.ಚಿ. ಬೋರಲಿಂಗಯ್ಯ, ಪ್ರೊ.ಎಂ.ಕೆ. ರಮೇಶ್, ಆಯೋಜನೆ: ಇತಿಹಾಸ ದರ್ಪಣ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಸಂಜೆ 5.30



ನಿರ್ಮಲಾ ನಂದನಾಥ ಸ್ವಾಮೀಜಿ

ಗುರುಗೌರವ ಸಮರ್ಪಣೆ ಹಾಗೂ ಐಸಿರಿ ಪ್ರಕಾಶನದ ಕೃತಿಗಳು ಬಿಡುಗಡೆ: ಬೈರಮಂಗಲ ರಾಮೇಗೌಡ, ಗುರುಗೌರವ ಸ್ವೀಕಾರ: ಕೃಷ್ಣ ಪರಮೇಶ್ವರ ಭಟ್, ಕೃತಿ ಕುರಿತು ಮಾತು: ಎಚ್.ಎಸ್. ಭುವನೇಶ್ವರ್, ಸ್ಥಳ: ಎಂ.ವಿ.ಸಿ ಸಭಾಂಗಣ, ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್. ಆರ್. ಕಾಲೊನಿ, ಸಂಜೆ 4.30

ಭರತನಾಟ್ಯ ಪ್ರದರ್ಶನ: ಸಮೀಕ್ಷಾ ಮನುಕುಮಾರ, ಪೂಜಾ ಸುಗಮ್, ನಂದಿನಿ ಅಜ್ಜಂಪುರ, ಸುಜಯ್ ಶಾನಭಾಗ್, ಆಯೋಜನೆ: ವೆಂಕಟೇಶ ನಾಟ್ಯ ಮಂದಿರ, ಸ್ಥಳ: ಎ.ಡಿ.ಎ. ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5.30


ಜೇಂಗೊಡ ಜನಪದ ಗೀತೋತ್ಸವ: ಉದ್ಘಾಟನೆ: ಎಚ್.ಆರ್. ಲೀಲಾವತಿ, ಅಧ್ಯಕ್ಷತೆ: ಗೋಪಿ, ಅತಿಥಿಗಳು: ಬಿ.ವಿ. ಶ್ರೀನಿವಾಸ್, ಚಂದ್ರಶೇಖರ್, ಉಪಸ್ಥಿತಿ: ಹಿ.ಚಿ. ಬೋರಲಿಂಗಯ್ಯ, ವೇಮಗಲ್ ನಾರಾಯಣಸ್ವಾಮಿ, ಆಯೋಜನೆ: ಗಾಯನ ಗಂಗಾ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 5.30

ಕ್ಯಾಲೆಂಡರ್ ಬಿಡುಗಡೆ: ಸಹನಾ ಸುಂದರ್, ಅಧ್ಯಕ್ಷತೆ: ಬಿ.ವಿ. ರವಿಶಂಕರ್, ಉಪಸ್ಥಿತಿ: ಆರತಿ ವಿ.ಬಿ., ಆಯೋಜನೆ: ಕಲ್ಲಹಳ್ಳಿ ಶ್ರೀ ಶ್ರೀನಿವಾಸ ಸ್ವಾಮಿ ಸೇವಾ ಸಮಿತಿ, ಸ್ಥಳ: ಬಾಲಮೋಹನ ವಿದ್ಯಾಮಂದಿರ, 19ನೇ ಮುಖ್ಯ ರಸ್ತೆ, ರಾಜಾಜಿನಗರ, ಸಂಜೆ 5.30

ಅ'ಸಾಮಾನ್ಯ' ಗೀತೆ ಕಾರ್ಯಕ್ರಮ: ಅಭಿನಂದನೆ: ಬಿ.ಎಸ್. ನಂಜುಂಡ ಸ್ವಾಮಿ, ಉಪಸ್ಥಿತಿ: ಎ.ಎಮ್. ಚಂದ್ರಶೇಖರ್, ಆಯೋಜನೆ ಮತ್ತು ಸ್ಥಳ: ಪಂಚಾಮೃತ ಸುಗಮ ಸಂಗೀತ ಅಕಾಡೆಮಿ ಆವರಣ, ಅಪೂರ್ವ ಮ್ಯಾನ್‌ಷನ್, ದೊಡ್ಡಬೊಮ್ಮಸಂದ್ರ, ಸಂಜೆ 5.30

'ಬಿಜ್ಜಳ ನ್ಯಾಯ' ನಾಟಕ ಪ್ರದರ್ಶನ: ಉದ್ಘಾಟನೆ: ಎಚ್.ಎಸ್. ಸಿದ್ಧರಾಮಯ್ಯ, ಅಧ್ಯಕ್ಷತೆ: ಸಂತೋಷ್ ಹಾನಗಲ್, ಆಯೋಜನೆ: ಕುವೆಂಪು ಕಲಾನಿಕೇತನ, ಸ್ಥಳ: ಹಿರಿಯ ನಾಗರಿಕರ ವೇದಿಕೆ, ಕೆಂಪೇಗೌಡ ಉದ್ಯಾನ, ನಂದಿನಿ ಲೇಔಟ್, ಸಂಜೆ 6

ಪ್ರೊ.ಕಿ.ರಂ. ನಾಗರಾಜ ಸಂಸ್ಕೃತಿ ಪ್ರಶಸ್ತಿ ಪ್ರದಾನ: ಪ್ರೊ.ಎಸ್.ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ನಲ್ಲೂರು ಪ್ರಸಾದ್, ಪ್ರಶಸ್ತಿ ಪುರಸ್ಕೃತರು: ನಟರಾಜ್ ಹುಳಿಯಾರ್, ಉಪಸ್ಥಿತಿ: ಪಿ. ಮಲ್ಲಿಕಾರ್ಜುನಪ್ಪ, ಎಂ.ಎಸ್. ಆಶಾದೇವಿ, ಆಯೋಜನೆ: ಪ್ರಜ್ಞಾ ಸಾಂಸ್ಕೃತಿಕ ವೇದಿಕೆ, ಸ್ಥಳ: ಡಾ.ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜ್, ಬಸವನಗುಡಿ, ಸಂಜೆ 5



ಪ್ರೊ.ಎಸ್ ಜಿ.ಸಿದ್ಧರಾಮಯ್ಯ

ಚಿಕಿತ್ಸೆ ಯಶಸ್ವಿ; ಸಾನ್ವಿ ಗುಣಮುಖ



ಬದಿಯಡ್ಕ (ಕಾಸರಗೋಡು): ತಲಸ್ಸೇಮಿಯಾದಿಂದ ಬಳಲುತ್ತಿದ್ದ ಏಳು ವರ್ಷದ ಬಾಲೆ ಸಾನ್ವಿಗೆ ಉತ್ತಮ ಚಿಕಿತ್ಸೆ ಕೊಡಿಸುವಲ್ಲಿ ಕುಂಬಡಾಜೆ ಮತ್ತು ಸುತ್ತಮುತ್ತಲ ಗ್ರಾಮದ ಜನರು ಯಶಸ್ವಿಯಾಗಿದ್ದಾರೆ.

ಬಡ ಕುಟುಂಬದ ಸಾನ್ವಿಗೆ ಅಸ್ಥಿಮಜ್ಜೆ ಕಸಿ (ಬೋನ್ ಮ್ಯಾರೊ ಟ್ರಾನ್ಸ್‌ಪ್ಲಾಂಟೇಷನ್) ಚಿಕಿತ್ಸೆಗೆ ಅಗತ್ಯವಿದ್ದ ಅಂದಾಜು ₹40 ಲಕ್ಷ ಹಣವನ್ನು ಇಡೀ ಊರಿನ ಜನರು ಒಟ್ಟಾಗಿ ಸಮಿತಿ ರಚಿಸಿಕೊಂಡು ಸಂಗ್ರಹಿಸಿದ್ದರು.

ಬೆಂಗಳೂರಿನ ನಾರಾಯಣ ಹೃದಯಾಲಯದಲ್ಲಿ ಅಸ್ಥಿಮಜ್ಜೆ ಕಸಿ ಮಾಡಲಾಗಿದೆ. ಜುಲೈ ತಿಂಗಳಲ್ಲಿ ಆಸ್ಪತ್ರೆಗೆ ದಾಖಲಾಗಿದ್ದ ಸಾನ್ವಿಗೆ ಆಕೆಯ ಸಹೋದರಿ ಅನುಶ್ರೀ ಅಸ್ಥಿಮಜ್ಜೆ ದಾನ ಮಾಡಿದಳು. ಇದೀಗ ಸಾನ್ವಿ ಸಂಪೂರ್ಣ ಗುಣಮುಖಳಾಗಿದ್ದು, ಭಾನುವಾರ ಊರಿಗೆ ಮರಳುತ್ತಿದ್ದಾಳೆ.

ದೆಹಲಿಯಲ್ಲಿ ದಟ್ಟ ಮಂಜು, ರೈಲು ವಿಳಂಬ

ನವದೆಹಲಿ (ಪಿಟಿಐ): ದೇಶದ ರಾಜಧಾನಿಯ ಕೆಲ ಭಾಗಗಳಲ್ಲಿ ಶನಿವಾರ ದಟ್ಟವಾದ ಮಂಜು ಆವರಿಸಿದ್ದ ಕಾರಣ 100 ಮೀಟರ್‌ಗಿಂತ ದೂರ ಕಾಣಿಸದಂತಾಯಿತು. ಇದರಿಂದ ರೈಲು ಹಾಗೂ ಸಾರಿಗೆ ಸಂಚಾರದಲ್ಲಿ ವ್ಯತ್ಯಯವಾಗಿದೆ.

ಬೆಳಿಗ್ಗೆ 5.30ಕ್ಕೆ ಪಾಲಂನಲ್ಲಿ ವಸ್ತುಗಳ ಗೋಚರ ಮಟ್ಟವು 100 ಮೀಟರ್, ಸಫ್ದರ್‌ಜಂಗ್‌ನಲ್ಲಿ 200 ಮೀಟರ್ ಇತ್ತು ಎಂದು ದೆಹಲಿಯ ಹವಾಮಾನ ಕೇಂದ್ರ ತಿಳಿಸಿದೆ.



ಸೌಹಾರ್ದ ಗೋದಲಿಯ ಒಂದು ಭಾಗ

ಗ್ರಾಮಜೀವನದ ಸೌಹಾರ್ದ ಗೋದಲಿ

• ವಿಕ್ರಂ ಕಾಂತಿಕೆರೆ

ಮಂಗಳೂರು: ಹಸು-ಕರು, ಮೊಲ-ಪಾರಿವಾಳ, ಕೋಳಿಗಳ ನಡುವೆ ಬಾಲ ಯೇಸುವಿನ ಜನನ ಸಾರುವ ಈ ಗೋದಲಿ ಈಗ ಊರಿನ ವಿಶೇಷ ಆಕರ್ಷಣೆ. 200 ಚದರ ಅಡಿ ವ್ಯಾಪ್ತಿಯಲ್ಲಿ ನಿರ್ಮಿಸಿರುವ ಈ ಗೋದಲಿ ಸೌಹಾರ್ದ ಸಂದೇಶದ ವಿಶ್ವದರ್ಶನ ಮಾಡಿಸುತ್ತಿದೆ.

ಬೆಳ್ತಂಗಡಿ ತಾಲ್ಲೂಕಿನ ಚಿಕ್ಕ ಪಟ್ಟಣ ಮಡಂತ್ಯಾರು. ಇಲ್ಲಿ ಗುಂಪು ಮನೆಗಳಲ್ಲಿ ವಾಸಿಸುತ್ತಿರುವ ಹಿಂದೂ- ಮುಸ್ಲಿಮರು ಒಳಗೊಂಡ 12 ಮಂದಿ ಕೂಲಿ ಕಾರ್ಮಿಕರು ಕ್ರೈಸ್ತ ಸಮುದಾಯದ ಗೆಳೆಯನ ಮನೆಯಲ್ಲಿ ಗೋದಲಿ ನಿರ್ಮಿಸಿ ಕ್ರಿಸ್‌ಮಸ್ ಸಂಭ್ರಮಕ್ಕೆ ಮೆರುಗು ತುಂಬಿದ್ದಾರೆ.

ಗ್ರಾಮದ ಜೊಯೆಲ್ ಮೆಂಡೋನ್ಸ ಅವರ ಮನೆಯ ವಿಶಾಲ ಆವರಣದಲ್ಲಿ ನಿರ್ಮಿಸಿರುವ ಗೋದಲಿ ನೈಸರ್ಗಿಕ ಸೌಂದರ್ಯದಿಂದ ಕೂಡಿದೆ. ತೆಂಗು ಮತ್ತು ಕಂಗಿನ ಗರಿಗಳನ್ನು ಬಳಸಿಕೊಂಡು ನಿರ್ಮಿಸಿರುವ, ಹುಲ್ಲು ಹಾಸಿನ ಹಟ್ಟಿಯಲ್ಲಿ ಹಸು ಮತ್ತು ಕರುವನ್ನು ಕಟ್ಟಿ ಹಾಕಿದ್ದಾರೆ. ಮೊಲ, ಪಾರಿವಾಳ ಇತ್ಯಾದಿಗಳನ್ನು ಇರಿಸಿ ಇನ್ನಷ್ಟು ಸಹಜತೆಯನ್ನು ಹೆಚ್ಚಿಸಿದ್ದಾರೆ. ಒಂದು ಭಾಗದಲ್ಲಿ ಗಿಡಗಳನ್ನು ಬೆಳೆಸಿ ಉದ್ಯಾನ ಮಾಡಿದ್ದು ಅದರಲ್ಲಿ ಗುಡಿಸಲು, ಎತ್ತಿನ ಗಾಡಿಗಳ ಮಾದರಿಗಳನ್ನು ಇರಿಸಿದ್ದಾರೆ.

ದೊಡ್ಡ ಮನಸ್ಸಿನ ಕೂಲಿ ಕೆಲಸಗಾರರು: ಪ್ರವೀಣ್ ಪೂಜಾರಿ, ಸಂತೋಷ್ ಹೆಗ್ಡೆ, ಅರುಣ್, ಸೋಮಯ್ಯ, ಆಸಿಫ್, ಪ್ರವೀಣ್, ಗುರು, ಸಾಗರ್, ಶಿವರಾಜ್, ಸುಜಿತ್, ಶಿವರಾಜ್ ಆಚಾರ್ಯ ಮತ್ತು ಸುರೇಶ್ ಮಾಲಾಡಿ ಗ್ರಾಮದ ವಿವಿಧ ಕಡೆಗಳಲ್ಲಿ ವಾಸಿಸುತ್ತಿದ್ದಾರೆ. ಬಡಗಿ, ಪೇಂಟಿಂಗ್, ಕಟ್ಟಡ ನಿರ್ಮಾಣ ಮುಂತಾದ ಕೆಲಸಗಳನ್ನು ಮಾಡುತ್ತಿರುವ ಇವರು ಯಾರೂ ಹೆಚ್ಚು ಓದಿದವರು ಅಲ್ಲ. ಆದರೆ ಸೌಹಾರ್ದ ಜೀವನದ ಕನಸು ಕಂಡವರು.

'ಹಳ್ಳಿಯಲ್ಲಿ ಜಾತಿ-ಧರ್ಮ ಮರೆತು ಜೊತೆಯಾಗಿ ಜೀವನ ನಡೆಸುತ್ತಿದ್ದೇವೆ ಎಂಬುದನ್ನು ಸಾರುವ ಉದ್ದೇಶ ಈ ಗೋದಲಿ ನಿರ್ಮಾಣದ ಹಿಂದೆ ಇದೆ. ಒಡೆದ ಕೆಲವು ಮನಸ್ಸುಗಳಾದರೂ ನಮ್ಮ ಈ ಕಾರ್ಯದಿಂದ ಒಂದಾದರೆ ನಾವೆಲ್ಲರೂ ಧನ್ಯರು' ಎಂದು ಪ್ರವೀಣ್ ಪೂಜಾರಿ 'ಪ್ರಜಾವಾಣಿ' ತಿಳಿಸಿದರು.

> **ಸೌಹಾರ್ದ ಜೀವನದ ಕನಸು ನನಸು ಮಾಡಲು ಕ್ರಿಸ್‌ಮಸ್ ಸೂಕ್ತ ಸಂದರ್ಭ. ಎಲ್ಲ ಧರ್ಮದವರು ಗೋದಲಿ ನಿರ್ಮಿಸಿರುವುದು ಹಬ್ಬದ ಸಂಭ್ರಮವನ್ನು ನೂರ್ಮಡಿಗೊಳಿಸಿದೆ.**
> **ಜೋಯೆಲ್ ಮೆಂಡೋನ್ಸ,** ಮಡಂತ್ಯಾರು ನಿವಾಸಿ

> **ನಮ್ಮ ಈ ಕಾರ್ಯದಿಂದ ಕನಿಷ್ಠಪಕ್ಷ ನಮ್ಮ ಮಕ್ಕಳಲ್ಲಾದರೂ ಬದಲಾವಣೆ ಕಂಡುಬಂದರೆ ಸಾಮಾಜಿಕವಾಗಿ ದೊಡ್ಡ ಕೊಡುಗೆಯಾಗಬಹುದು.**
> **ಪ್ರವೀಣ್ ಪೂಜಾರಿ,** ಮಾಲಾಡಿ ನಿವಾಸಿ

ಫೆಬ್ರುವರಿಯಲ್ಲಿ ಬಜೆಟ್: ಸಿಎಂ

ಹಾವೇರಿ: 'ಫೆಬ್ರುವರಿಯಲ್ಲಿ ರಾಜ್ಯ ಬಜೆಟ್ ಮಂಡನೆ ಮಾಡಲಿದ್ದೇನೆ. ಈಗಾಗಲೇ ಹಣಕಾಸು ಇಲಾಖೆ ಜೊತೆ ಎರಡು ಸುತ್ತಿನ ಮಾತುಕತೆ ನಡೆಸಲಾಗಿದೆ. ಎಲ್ಲ ಇಲಾಖೆಯವರ ಜೊತೆಗೂ ಚರ್ಚೆ ಮಾಡಲಿದ್ದೇನೆ. ಎಲ್ಲ ಸಿದ್ಧತೆಗಳನ್ನು ಮುಂದಿನ ಜನವರಿ ತಿಂಗಳಿಂದಲೇ ಶುರು ಮಾಡಲಿದ್ದೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಶಿಗ್ಗಾವಿಯಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಡಿ.26ರಂದು ದೆಹಲಿಗೆ ತೆರಳಿ ಹೈಕಮಾಂಡ್ ಭೇಟಿ ಮಾಡಲಿದ್ದು, ಚುನಾವಣೆ ತಯಾರಿ ಕುರಿತು ಚರ್ಚಿಸಲಾಗುವುದು' ಎಂದರು.

ಕ್ರಿಸ್ತನ ಶಾಂತಿ ಸಂದೇಶ

• ಸಿ. ಮರಿಜೋಸೆಫ್

'ಕ್ರಿಸ್ತಜಯಂತಿ' ಅಥವಾ 'ಕ್ರಿಸ್‌ಮಸ್' ಎಂದಾಗ ಮೊದಲ ನೋಟಕ್ಕೆ ನಮಗೆ ಕಂಡುಬರುವುದು ಮೇರಿಯ ಮುಗ್ಧ ತಾಯ್ತನದ, ಜೋಸೆಫನ ನಿರ್ವ್ಯಾಜ ಪ್ರೇಮದ ಪುತ್ಥಳಿಗಳ ನಡುವೆ ಗೊಂದಳಿಗೆಯಲ್ಲಿ ಚಿಗುರುಹುಲ್ಲಿನ ಮೇಲೆ ಶಾಂತನೋಟ ಬೀರುತ್ತ ಮಲಗಿರುವ ಶಿಶುಯೇಸುವಿನ ನವಪಲ್ಲವದ ಚಿತ್ರಗಳು. ಕ್ರಿಸ್ತನ ಅನುಯಾಯಿಗಳು ಮಾತ್ರವಲ್ಲದೆ ಇತರರೂ ಸೇರಿದಂತೆ ಇಡೀ ಜಗತ್ತು ಕ್ರಿಸ್ತಜಯಂತಿಯನ್ನು ಉತ್ಸಾಹ ಮತ್ತು ಅಷ್ಟೇ ಆಪ್ತವಾಗಿ ಪರಿಭಾವಿಸುವುದೇಕೆ ಎಂಬುದರತ್ತ ನೋಟ ಬೀರಿದಾಗ, ಯೇಸುವಿನ ಬೋಧನೆ ಮತ್ತು ನಡೆನುಡಿಯ ಪ್ರಭಾವಳಿಯೇ ಎದ್ದುಕಾಣುತ್ತದೆ.



ಎರಡುಸಾವಿರ ವರ್ಷಗಳ ಹಿಂದೆ ಕೇವಲ ಮೂರುವರ್ಷಗಳ ಕಾಲ ಜುದೇಯ, ಗಲಿಲೇಯ ಮತ್ತು ಜೋರ್ದಾನ್ ನಾಡುಗಳಲ್ಲಿ ಹಗಲು ರಾತ್ರಿಯೆನ್ನದೆ ನಿರಂತರ ನಡೆದಾಡಿ ಮನುಜಪ್ರೇಮದ ನೂತನ ವಿಶ್ವವನ್ನು ಕಟ್ಟಲು ಶ್ರಮಿಸಿದ 'ಯೇಸುಕ್ರಿಸ್ತ' ಎಂಬ ಮಹಾಮಾನವನ ಬದುಕು ಮತ್ತು ಸಂದೇಶಗಳು ಇಂದು ಜಗತ್ತಿನ ಮೂರನೇ ಒಂದು ಭಾಗದಲ್ಲಿ ದಟ್ಟವಾದ ಪ್ರಭಾವ ಬೀರಿವೆ. ಪವಿತ್ರ ಬೈಬಲನ್ನು ನಿರುಕಿಸಿದಾಗ ಯೇಸುಕ್ರಿಸ್ತನ ಬರುವಿಕೆಯೇನೂ ಆಕಸ್ಮಿಕವಲ್ಲ ಅದಕ್ಕೆ ಸಹಸ್ರಾರು ವರ್ಷಗಳ ಪ್ರವಾದಿಗಳ ಭವಿಷ್ಯವಾಣಿ ಮತ್ತು ಕಾತರದ ಸಿದ್ಧತೆ ಇತ್ತು ಎಂದು ತಿಳಿದುಬರುತ್ತದೆ.

ದೇವನಿರ್ಮಿತ ಈಡನ್ ತೋಟದಲ್ಲಿ ಸರ್ವಶಕ್ತ ದೇವರ ಸತ್ಸಂಬಂಧದಲ್ಲಿ ಆದಿದಂಪತಿಯಾದ ಆದಾಮ ಮತ್ತು ಈವಾಳು ವಿಹರಿಸುತ್ತ ಒಂದು ದಿನ ತಿನ್ನಬಾರದ ಹಣ್ಣನ್ನು ತಿಂದು ದೇವರಿಂದ ಮಣ್ಣಿಗೆ ದೂಡಲ್ಪಡುವ ದುರಂತ ಕಥೆಯಿಂದ ಹಿಡಿದು, ಮಹಾಜಲಪ್ರಳಯ, ಅಂಕೆಯಿಲ್ಲದ ಅಲೆಮಾರಿ ಜೀವನ, ಪರದೇಶದಲ್ಲಿ ಗುಲಾಮಗಿರಿ, ಫಲವತ್ತಾದ ಭೂಮಿಯೆಡೆಗೆ ವಲಸೆಗಳು ಮತ್ತು ನಿರಂತರ ಯುದ್ಧಗಳ ನಡುವೆ ದೇವರ ಪ್ರತಿನಿಧಿಗಳೆನಿಸಿಕೊಂಡ ಪ್ರವಾದಿಗಳು ತೋರಿದ ಧರ್ಮದಾರಿಯಲ್ಲಿ ನಡೆದು ಪ್ರತಿದಿನ ಪ್ರತಿಕ್ಷಣ ದೇವರನ್ನು ನೆನೆಯುತ್ತಿದ್ದ ಧರ್ಮಭೀರು ಜನರ ಏಳುಬೀಳುಗಳ ಆಖ್ಯಾಯಿಕೆಗಳ ದಾಖಲೆಯೇ ಪವಿತ್ರ ಬೈಬಲ್. ಇದನ್ನು ದೇವರೊಡನೆ ಮಾನವನ ಅನುಸಂಧಾನ ಎಂದೂ ಕರೆಯಲಾಗುತ್ತದೆ.

ದೇವರ ಹತ್ತು ಕಟ್ಟಲೆಗಳನ್ನೂ ಪ್ರವಾದಿಗಳು ರೂಪಿಸಿದ ಸಾಮಾಜಿಕ ಕಟ್ಟುಪಾಡುಗಳನ್ನೂ ಮೀರಿ ಮಾನವಜನಾಂಗವು ಅಂಕೆ ತಪ್ಪಿ ಧರ್ಮವು ಅಧಃಪತನಕ್ಕಿಡಾದಾಗ ದೇವರು ಪದೇ ಪದೇ ಪ್ರವಾದಿಗಳ ಮುಖಾಂತರ ವಚನಿಸಿದ ಪ್ರಕಾರ ತಾವೇ ಬುವಿಗಿಳಿದು ಮಗುವಾಗಿ ಜನಿಸಿ ಲೋಕೋದ್ಧಾರ ಮಾಡಿದರು ಎಂಬುವ ಕಥನವೇ ಪವಿತ್ರ ಬೈಬಲಿನ ಎರಡನೇ ಭಾಗವಾಗಿ 'ದೇವರೊಡನೆ ನೂತನಸಂಧಾನ' ಎಂಬುದಾಗಿ ಹೆಸರುಗೊಂಡಿದೆ. 'ಹೊಸ ಒಡಂಬಡಿಕೆ' ಅಥವಾ 'ನ್ಯೂ ಟೆಸ್ಟಮೆಂಟ್' ಎಂದೂ ಕರೆಯಲಾಗುವ ಈ ಭಾಗದಲ್ಲಿ ಯೇಸುವಿನ ಜನನ ಮೊದಲ್ಗೊಂಡು ಆತನ ಬೋಧನೆ, ಶಿಲುಬೆಯಾತನೆ ಮತ್ತು ಅನಂತರದಲ್ಲಿ ಶಿಷ್ಯವೃಂದವು ಕ್ರಿಸ್ತಸಂದೇಶವನ್ನು ಜಗತ್ತಿನುದ್ದಕ್ಕೂ ಪಸರಿಸಿದ ಸಂಗತಿಗಳು ವಿವರವಾಗಿ ಪ್ರಸ್ತಾಪವಾಗುತ್ತದೆ.

ಯೇಸು ವೈಭವೋಪೇತ ಅರಮನೆಯಲ್ಲಿ ಹುಟ್ಟದೇ, ಹಸುಗಳ ನೆಲೆಯಾದ ಕೊಟ್ಟಿಗೆಯಲ್ಲಿ ಜನಿಸುತ್ತಾನೆ. ಅವನ ಜನನವು ಮಗುಮನಸ್ಸಿನ ಅಮಾಯಕರಿಗೆ ಮತ್ತು ಜ್ಞಾನಪಿಪಾಸುಗಳಿಗಷ್ಟೇ ತಿಳಿಯುತ್ತದೆ. 'ಎಲ್ಲರೂ ದೇವರ ಮಕ್ಕಳು, ಮತ್ತೊಬ್ಬನನ್ನು ನಿನ್ನಂತೆಯೆ ಪರಿಭಾವಿಸು' ಎಂಬ ಶುಭಸಂದೇಶವನ್ನು ಪ್ರತಿಪಾದಿಸಿ ಹುತಾತ್ಮನಾಗುತ್ತಾನೆ. ಅಂತಹ ಮಹಾತ್ಮನನ್ನು ಕುಲ ಕಾಲ ದೇಶವೆನ್ನದೆ ಜನರೆಲ್ಲರೂ ಸಂಭ್ರಮದಿಂದ ಬರಮಾಡಿಕೊಳ್ಳುವ ಹಬ್ಬ ಕ್ರಿಸ್‌ಮಸ್ ಹಬ್ಬ. ಯುದ್ಧ, ದ್ವೇಷ ಅಶಾಂತಿಗಳು ದಾಂಗುಡಿಯಿಡುತ್ತಿರುವ ಇಂದಿನ ಜಗತ್ತಿನಲ್ಲಿ ಯೇಸುಕ್ರಿಸ್ತನ ಶಾಂತಿಸಂದೇಶ ಅತ್ಯಗತ್ಯವಾಗಿದೆ. ಕ್ರಿಸ್ತನ ನೆನಪಿನಲ್ಲಿ ಮನೆಯ ಮುಂಬಾಗಿಲ ಬಳಿ ನಕ್ಷತ್ರ ಕಟ್ಟಿ, ಅದರಲ್ಲಿ ದೀಪವಿರಿಸುವಾಗ 'ವಸುಧೈವ ಕುಟುಂಬಕಮ್' ಎಂಬ ಹಿರಿದಾದ ಭಾವ ಸ್ಫುರಣೆಯಾಗುತ್ತದೆ.

ಹಣದ ಹೊಳೆ: ಹೊಲಕ್ಕಿಲ್ಲ ನೀರು

(₹ ಕೋಟಿಗಳಲ್ಲಿ)

ಆಲಮಟ್ಟಿ ಎಡದಂಡೆ ಕಾಲುವೆ ಆಧುನೀಕರಣ (2017 ರಿಂದ 2022)
- ಬಿಡುಗಡೆಯಾದ ಹಣ: 112
- ಖರ್ಚಾದ ಹಣ: 112



ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆ ಆಧುನೀಕರಣ
- ಬಿಡುಗಡೆಯಾದ ಹಣ: 986
- ಖರ್ಚಾದ ಹಣ: 695

ವಿತರಣಾ ಕಾಲುವೆ
- ಬಿಡುಗಡೆಯಾದ ಹಣ: 1,449
- ಖರ್ಚಾದ ಹಣ: 950

ತುಂಗಭದ್ರಾ ಕಾಲುವೆ ಆಧುನೀಕರಣ (2017–22)
- ಬಿಡುಗಡೆಯಾದ ಹಣ: 430

ಮಲಪ್ರಭಾ ಬಲದಂಡೆ ಕಾಲುವೆ ಆಧುನೀಕರಣ (2018–22)
- ಬಿಡುಗಡೆಯಾದ ಹಣ: 1065
- ಖರ್ಚಾದ ಹಣ: 1065

ಭದ್ರಾ ಮೇಲ್ದಂಡೆ ಯೋಜನೆ- ಎತ್ತಿನಹೊಳೆ ಯೋಜನೆ
- ಅಂದಾಜು ಯೋಜನಾ ವೆಚ್ಚ: 46,000
- ಕ್ರೋಡೀಕೃತ ವೆಚ್ಚ: 13,194
- ಉಳಿಕೆ ವೆಚ್ಚ: 32, 819



ಒಂದನೇ ಪುಟದಿಂದ...

ಇದರಲ್ಲಿ ಶೇ 50ರಷ್ಟು ಕಾಮಗಾರಿ ನಡೆದೇ ಇಲ್ಲ ಎಂದು ರೈತ ಹಾಗೂ ದಲಿತ ಸಂಘಟನೆಗಳು ಆರೋಪಿಸಿ ಹೋರಾಟ ನಡೆಸಿದ್ದವು.

ಒತ್ತಡಕ್ಕೆ ಮಣಿದ ಸರ್ಕಾರ ವಿಧಾನಸಭೆಯ ಅಂದಾಜು ಸಮಿತಿ ಅಧ್ಯಕ್ಷ ಅಭಯ ಪಾಟೀಲ ನೇತೃತ್ವದ ತಂಡವನ್ನು ರಾಯಚೂರು ಜಿಲ್ಲೆಗೆ ಕಳುಹಿಸಿತ್ತು. ಈ ಸಂದರ್ಭದಲ್ಲಿ ಗುತ್ತಿಗೆದಾರರ ಹಿಂಬಾಲಕರು ಅಭಯ ಪಾಟೀಲ ಹಾಗೂ ತಂಡದವರ ಮೇಲೆ ಹಲ್ಲೆಗೆ ಯತ್ನಿಸಿದ್ದರು. ಆ ಮೂಲಕ ಗುತ್ತಿಗೆದಾರರು ಯಾವ ಹಂತಕ್ಕೂ ಹೋಗಬಲ್ಲರು ಎಂಬ ಮಾತಿಗೆ ಪುಷ್ಟಿ ಒದಗಿತ್ತು.

ನೀರಾವರಿ ವಿಚಾರದಲ್ಲಿ ಸಾಕಷ್ಟು ಹಿಂದುಳಿದಿರುವ ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಹಲವು ನೀರಾವರಿ ಯೋಜನೆಗಳು 1970–80ರ ದಶಕದಲ್ಲಿ ಅನುಷ್ಠಾನಗೊಂಡಿವೆ. ಆದರೆ, ಕಾಲುವೆಗಳ ದುರಸ್ತಿಗೆ ಆದ್ಯತೆ ನೀಡದ ಕಾರಣ ಕೃಷಿ ಜಮೀನುಗಳಿಗೆ ನೀರು ಹರಿದಿಲ್ಲ. ರೈತರ ಬದುಕು ನಿರೀಕ್ಷಿಸಿದಷ್ಟು ಹಸನಾಗಿಲ್ಲ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಮುಲ್ಲಾಮಾರಿ ಕೆಳದಂಡೆ ಯೋಜನೆಯ ನಾಗರಾಳ ಜಲಾಶಯ ಅಣೆಕಟ್ಟು ದುರಸ್ತಿ ಹಾಗೂ ಕಾಲುವೆಗಳ ಆಧುನೀಕರಣಕ್ಕೆ ₹ 124 ಕೋಟಿ ಹಣ ಬಿಡುಗಡೆ ಮಾಡಿತ್ತು. 80 ಕಿ.ಮೀ. ಉದ್ದದ ಮುಖ್ಯ ಕಾಲುವೆಯ ದುರಸ್ತಿ, ವಿತರಣಾ ಕಾಲುವೆಗಳ ಆಧುನೀಕರಣ ಕಾಮಗಾರಿಯನ್ನು ಬೇಕಾಬಿಟ್ಟಿ, ಕಳಪೆಯಾಗಿ ನಡೆಸಲಾಗಿದೆ ಎಂದು ಕಾಂಗ್ರೆಸ್ ಹಾಗೂ ಬಿಜೆಪಿ ಮುಖಂಡರು ಆರೋಪ– ಪ್ರತ್ಯಾರೋಪ ಮಾಡಿದ್ದರು.

ಜಿಲ್ಲೆಯಲ್ಲಿ ಕೆಲಕಾಲ ಇದೊಂದು ಚರ್ಚೆಯ ವಿಷಯವಾಗಿತ್ತು. ಅದರಲ್ಲೂ ರಾಜಕೀಯ ವಿರೋಧಿಗಳಾದ ಸಂಸದ ಡಾ.ಉಮೇಶ ಜಾಧವ್ ಹಾಗೂ ಚಿತ್ತಾಪುರ ಶಾಸಕ ಪ್ರಿಯಾಂಕ್ ಖರ್ಗೆ ಅವರ ಮಧ್ಯೆ ಈ ಯೋಜನೆಗೆ ಬಿಡುಗಡೆಯಾದ ಹಣದ ದುರ್ಬಳಕೆ ಬಗ್ಗೆಯೇ ವಾಗ್ವಾದಗಳು ನಡೆದಿದ್ದವು.

ಒತ್ತಡಕ್ಕೆ ಮಣಿದ ಸರ್ಕಾರ ಕಾಲುವೆಗಳ ಆಧುನೀಕರಣಕ್ಕೆ ಬಿಡುಗಡೆಯಾದ ಹಣ ದುರ್ಬಳಕೆಯಾಗಿದೆಯೇ ಎಂಬ ಕುರಿತು ತನಿಖೆಗೆ ಆದೇಶ ಹೊರಡಿಸಿತ್ತು. ಹಲವು ತಿಂಗಳ ಬಳಿಕ ತನಿಖಾ ವರದಿ ಬಂದರೂ ತಪ್ಪಿತಸ್ಥರು ಯಾರು ಎಂಬುದನ್ನು ಗುರುತಿಸಲಿಲ್ಲ. ಬದಲಾಗಿ, ಬಾಕಿ ಇರುವ ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸಬೇಕು ಎಂಬ ಷರಾ ಬರೆದು ವರದಿಯನ್ನು ಮುಕ್ತಾಯಗೊಳಿಸಲಾಗಿತ್ತು ಎಂದು ಕರ್ನಾಟಕ ನೀರಾವರಿ ನಿಗಮದ ಎಂಜಿನಿಯರ್ ಒಬ್ಬರು ಹೇಳುತ್ತಾರೆ.

ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕಿನ ಬ್ಯಾಲಹಳ್ಳಿ ಗ್ರಾಮ ಸಮೀಪದ ಕಾರಂಜಾ ಯೋಜನೆ ಕಾಮಗಾರಿ 1969ರಲ್ಲಿ ಮುಕ್ತಾಯವಾದ ನಂತರ 1972ರಲ್ಲಿ ಕಾಲುವೆಗಳ ಮೂಲಕ ರೈತರಿಗೆ ನೀರು ಬಿಡಬೇಕಿತ್ತು. ಮಳೆಯ ಕೊರತೆಯಿಂದ ಕಾಲುವೆಗೆ ನೀರು ಹರಿಸದ ಕಾರಣ ಕಾಲುವೆಗಳು ಹಾಳಾಗಿದ್ದವು. 2016ರಲ್ಲಿ ಸಚಿವರಾಗಿದ್ದ ಈಶ್ವರ ಖಂಡ್ರೆ, ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ



ಹನಿ ನೀರಾವರಿ ಪದ್ಧತಿಗೆ ಅಳವಡಿಸುವ ಅಪಾರ ಪ್ರಮಾಣದ ಸಣ್ಣ ಗಾತ್ರದ ಪೈಪ್ ಮುಂಡರಗಿ ಪಟ್ಟಣದ ಜಮೀನಿನಲ್ಲಿ ಹಾಳು ಬಿದ್ದಿದೆ

ಮೇಲೆ ನಿರಂತರ ಒತ್ತಡ ತಂದು ಕಾಲುವೆ ಆಧುನೀಕರಣಕ್ಕೆ ₹ 500 ಕೋಟಿ ಅನುದಾನ ಮಂಜೂರು ಮಾಡಿಸಿದ್ದರು. ನಂತರ 131 ಕಿ.ಮೀ. ಬಲದಂಡೆ ಮತ್ತು 31 ಕಿ.ಮೀ. ಎಡದಂಡೆ ಕಾಲುವೆ ಆಧುನೀಕರಣ ಕಾಮಗಾರಿ ಪೂರ್ಣಗೊಂಡಿದೆ.

2017ರ ಜನವರಿ 18ರಂದು ಅಂದಿನ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು ಬೆಂಗಳೂರಿನ ಗೃಹ ಕಚೇರಿಯಲ್ಲಿ ಕಾರಂಜಾ ನೀರಾವರಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿ ಕಾಮಗಾರಿ ವಿಳಂಬಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು.

‘ಯೋಜನೆಗೆ ನೂರಾರು ಕೋಟಿ ಹಣ ಖರ್ಚಾದರೂ ಅದರಿಂದ ರೈತರಿಗೆ ಮಾತ್ರ ಅನುಕೂಲವಾಗಿಲ್ಲ. ಎಂಜಿನಿಯರುಗಳ ನಿರ್ಲಕ್ಷ್ಯವೇ ಇದಕ್ಕೆ ಕಾರಣ. ಈ ಬಗ್ಗೆ ತಜ್ಞರ ಸಮಿತಿಯಿಂದ ತನಿಖೆ ನಡೆಸಿ ವರದಿ ಪಡೆಯಬೇಕು’ ಎಂದು ಜಲಸಂಪನ್ಮೂಲ ಇಲಾಖೆಗೆ ಸೂಚಿಸಿದ್ದರು. ಅಧಿಕಾರಿಗಳು ಗೋಪ್ಯ ವರದಿಯನ್ನೂ ಕೊಟ್ಟಿದ್ದರು.

ಕಾರಂಜಾ ಯೋಜನೆಯಡಿ ಕೈಗೊಳ್ಳಲಾದ ಕಾಲುವೆ ಆಧುನೀಕರಣ ಕಾಮಗಾರಿ ಸಮರ್ಪಕವಾಗಿ ನಡೆದಿಲ್ಲ. ಕಾಲುವೆಗಳು ಅನೇಕ ಕಡೆ ಸಮತಟ್ಟಾಗಿಲ್ಲ. ನೀರು ಸರಾಗವಾಗಿ ಹರಿದುಹೋಗುತ್ತಿಲ್ಲ. ಹಿಂದೆ ಅರಗಲ್ಲು ಹಾಸಿ ಸಿಮೆಂಟ್ ಲೇಪಿಸಿದ್ದರು. ನೀರು ಹೆಚ್ಚು ಹರಿದಾಗ ಎಲ್ಲವೂ ಕಿತ್ತುಕೊಂಡು ಹೋಗುತ್ತಿದ್ದವು. ಮುಖ್ಯ ಕಾಲುವೆಯಿಂದ ವಿತರಣಾ ಕಾಲುವೆ ಕಾಮಗಾರಿ ಕಳಪೆಯಾಗಿವೆ ಎನ್ನುವ ಆರೋಪಗಳು ಇವೆ.

‘ಸರ್ಕಾರ ಕಾಲುವೆ ಆಧುನೀಕರಣ ಕಾಮಗಾರಿಗೆ ₹ 500 ಕೋಟಿ ಖರ್ಚು ಮಾಡಿದೆ. ಕಬ್ಬಿಣದ ಸಲಾಕೆಗಳನ್ನು ಬಳಸದೇ ಕಾಂಕ್ರೀಟ್ ಬೆಡ್ ಹಾಕಿದ್ದಾರೆ. ಕಪ್ಪು ಮಣ್ಣಿನ ನೆಲದಲ್ಲಿ ಬಹುಬೇಗ ಬಿರುಕು ಕಾಣಿಸಿಕೊಳ್ಳುತ್ತದೆ. 100 ಕಿ.ಮೀ ಕಾಲುವೆ ಮಾಡುವ ಬದಲು ಕಬ್ಬಿಣದ ಸಲಾಕೆಗಳನ್ನು ಹಾಕಿ ಅದೇ ವೆಚ್ಚದಲ್ಲಿ 80 ಕಿ.ಮೀ ವರೆಗೆ ಕಾಲುವೆ ಮಾಡಬಹುದಿತ್ತು. ಇದರಿಂದ 50 ವರ್ಷ ಕಾಲುವೆಗಳು ಗಟ್ಟಿಮುಟ್ಟಾಗಿ ಉಳಿದುಕೊಳ್ಳುತ್ತಿದ್ದವು’ ಎಂದು ರೈತ ಸಂಘದ (ಪುಟ್ಟಣ್ಣಯ್ಯ ಬಣ) ಜಿಲ್ಲಾ ಘಟಕದ ಅಧ್ಯಕ್ಷ ಮಲ್ಲಿಕಾರ್ಜುನ ಹೇಳುತ್ತಾರೆ.



ಕೆಳದಂಡೆ ಮುಲ್ಲಾಮಾರಿ ಯೋಜನೆಯ ನಾಗರಾಳ ಜಲಾಶಯದ ಆಧುನೀಕರಣ ಕಾಮಗಾರಿಯಲ್ಲಿ ಅವ್ಯವಹಾರ ನಡೆದಿದ್ದರ ಬಗ್ಗೆ ಧ್ವನಿ ಎತ್ತಿದ್ದೆವು. ತನಿಖೆಯೂ ನಡೆಯಿತು. ಆದರೆ, ಯಾರನ್ನೂ ಹೊಣೆ ಮಾಡಲಿಲ್ಲ. ಹಾಗಿದ್ದರೆ ಹಣ ಹೋಗಿದ್ದಾದರೂ ಎಲ್ಲಿ?

ಪ್ರಿಯಾಂಕ್ ಖರ್ಗೆ, ಶಾಸಕ, ಚಿತ್ತಾಪುರ



ಜಲಾಶಯ ನಿರ್ಮಾಣವಾಗಿ ನಮ್ಮ ಹೊಲಗಳಿಗೆ ನೀರು ಬರುತ್ತದೆ ಎಂಬ ಆಸೆಯಿಂದ ಮನೆಗಳು ಮುಳುಗಡೆಯಾದರೂ ಸುಮ್ಮನಿದ್ದೆವು. ಪುನರ್ವಸತಿ ಕೇಂದ್ರದಲ್ಲಿ ಕಾಟಾಚಾರಕ್ಕೆ ಕಾಮಗಾರಿ ಕೈಗೊಂಡಿದ್ದು, ಸಂಚಾರ ಇಲ್ಲದಿದ್ದರೂ ರಸ್ತೆಗಳು ಕಿತ್ತು ಹೋಗಿವೆ

ಗೌರಿಶಂಕರ ಉಪ್ಪಿನ, ಗ್ರಾ.ಪಂ. ಅಧ್ಯಕ್ಷ, ಗಡಿಲಿಂಗದಳ್ಳಿ, ಚಿಂಚೋಳಿ ತಾಲ್ಲೂಕು

ಬೀದರ್, ಕಲಬುರಗಿ ಜಿಲ್ಲೆಗಳಲ್ಲಿ ನೀರಿದೆ, ಅಣೆಕಟ್ಟುಗಳಿವೆ. ಸೇತುವೆಗಳಿವೆ. ಕಾಲುವೆ ಇವೆ. ಆದರೆ ಅದರ ಉಪಯೋಗ ಮಾತ್ರ ತುಂಬಾ ಕಡಿಮೆ. ಇದಕ್ಕೆ ಕಾರಣ ಆಡಳಿತಗಾರರ ಬೇಜವಾಬ್ದಾರಿ ಮತ್ತು ಅವೈಜ್ಞಾನಿಕ ಹಂಚಿಕೆ

ಭೀಮಶೆಟ್ಟಿ ಮುಕ್ಕಾ, ನೀರಾವರಿ ಹೋರಾಟಗಾರ, ಕಲಬುರಗಿ

‘ಕಾರಂಜಾ ಯೋಜನೆ ಉಪಯುಕ್ತವಾಗಿದೆ. ವಿತರಣಾ ವ್ಯವಸ್ಥೆ ಸರಿ ಇಲ್ಲ. ಅಧಿಕಾರಿಗಳು ಕೋಟ್ಯಂತರ ರೂಪಾಯಿ ಗಳಿಸಿದ್ದಾರೆ. ರಾಜಕಾರಣಿಗಳೂ ಇದರಲ್ಲಿ ಶಾಮೀಲಾಗಿದ್ದಾರೆ’ ಎಂದು ಆರೋಪಿಸುತ್ತಾರೆ.

‘ಇವತ್ತಿನವರೆಗೂ ಕಾಲುವೆಯಲ್ಲಿ ಸರಿಯಾಗಿ ನೀರು ಹರಿದಿಲ್ಲ. ರೈತರು ಕಾಲುವೆ ನೀರು ಪಡೆದು ಸಮೃದ್ಧವಾಗಿ ಬೆಳೆ ಬೆಳೆದ ಉದಾಹರಣೆ ಇಲ್ಲ. ಕಾಲುವೆಗಳಲ್ಲಿ ಸರಿಯಾಗಿ ನೀರು ಹರಿದರೆ ಮಾತ್ರ ಭತ್ತ ಬೆಳೆಯಲು ಸಾಧ್ಯವಿದೆ’ ಎಂದು ರೈತ ಸಂಘದ(ಕೋಡಿಹಳ್ಳಿ ಬಣ) ಜಿಲ್ಲಾ ಘಟಕದ ಅಧ್ಯಕ್ಷ ಸಿದ್ರಾಮಪ್ಪ ಅಣದೂರೆ ವಿವರಿಸುತ್ತಾರೆ.

‘ಕಾಲುವೆ ಮೂಲಕ ಹೊಲಕ್ಕೆ ನೀರು ಬಂದರೆ ರೈತರು ಕರ ಪಾವತಿಸಬಹುದು. ನೀರು ಬರದೇ ತೆರಿಗೆ ಪಾವತಿಸಲು ಹೇಗೆ ಸಾಧ್ಯ. ಕರ್ನಾಟಕ ನೀರಾವರಿ ನಿಗಮವು ಜಿಲ್ಲೆಯಲ್ಲಿ 2020ರ ವರೆಗೂ ನೀರಾವರಿ ಯೋಜನೆಗೆ ₹ 698 ಕೋಟಿ ಖರ್ಚು ಮಾಡಿದೆ. ಆದರೆ, ರೈತರಿಗೆ ಪೂರ್ಣ ಪ್ರಮಾಣದಲ್ಲಿ ಅನುಕೂಲ ವಾಗದಿರುವುದು ದುರ್ದೈವ’ ಎಂದು ಬೇಸರ ವ್ಯಕ್ತಪಡಿಸುತ್ತಾರೆ.

‘ರೈತರು ಹೊಲಗಾಲುವೆಗಳಲ್ಲಿ ಕಸ ಹಾಗೂ ಮಣ್ಣು ಬೀಳದಂತೆ ಎಚ್ಚರ ವಹಿಸಬೇಕು. ಆಗ ಮಾತ್ರ ಕೊನೆಯ ಹಂತದವರೆಗೂ ನೀರು ಸುಲಭವಾಗಿ ಹರಿಯುತ್ತದೆ’ ಎನ್ನುತ್ತಾರೆ ನೀರಾವರಿ ನಿಗಮದ ಕಾರ್ಯಕಾರಿ ಎಂಜಿನಿಯರ್ ಶಿವಕುಮಾರ.

ಅತಿವಾಳ ಏತ ನೀರಾವರಿ: ₹ 78.77 ಕೋಟಿ ವೆಚ್ಚದಲ್ಲಿ 600 ಎಕರೆಗೆ ನೀರು ಪೂರೈಸುವ ಅತಿವಾಳ ಏತ ನೀರಾವರಿ ಯೋಜನೆಗೆ 2012ರ ಜನವರಿ 27ರಂದು ಬೀದರ್ ತಾಲ್ಲೂಕಿನ ಅತಿವಾಳದಲ್ಲಿ ಅಂದು ಜಲ ಸಂಪನ್ಮೂಲ ಸಚಿವರಾಗಿದ್ದ ಬಸವರಾಜ ಬೊಮ್ಮಾಯಿ ಶಂಕುಸ್ಥಾಪನೆ ನೆರವೇರಿಸಿದ್ದರು. ಭೂಸ್ವಾಧೀನ ಸಮಸ್ಯೆಯಿಂದಾಗಿ ವಿಳಂಬವಾಗಿತ್ತು. ಕಂದಾಯ ಇಲಾಖೆ ಮಾಡಿದ ಸರ್ವೆ ಸರಿ ಇರಲಿಲ್ಲ. ಕೆಲ ರೈತರು ಕೋರ್ಟ್ ಮೆಟ್ಟಿಲೇರಿದ್ದು, ಸಮಸ್ಯೆ ಇನ್ನೂ ಮುಂದುವರಿದಿದೆ. ಕಾಮಗಾರಿ ಆರಂಭವಾದರೂ ಗುತ್ತಿಗೆದಾರರು ಕಬ್ಬಿಣದ ಸಲಾಕೆಗಳನ್ನು ಅಳವಡಿಸದೇ ಸಿಸಿ ಬೆಡ್ ಹಾಕುತ್ತಿದ್ದರಿಂದ ಬೀದರ್ ತಾಲ್ಲೂಕಿನ ಬಾವಗಿ ಸಮೀಪ ರೈತರು ಪ್ರತಿಭಟನೆ ನಡೆಸಿ ಕಾಮಗಾರಿಯನ್ನು ತಡೆದಿದ್ದರು.

ಕೊಪ್ಪಳ ಜಿಲ್ಲೆಯಲ್ಲಿ ನೀರಾವರಿ ಅಭಿವೃದ್ಧಿ ಮಾಡಲು ಸಾಕಷ್ಟು ನೀರು ಇದ್ದರೂ ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆಯಿಂದಾಗಿ ಜನರಿಗೆ ಅನುಕೂಲವಾಗಿಲ್ಲ. ತುಂಗಭದ್ರಾ ಜಲಾಶಯದಿಂದ ಈ ವರ್ಷ 404 ಟಿಎಂಸಿ ಅಡಿ ನೀರು ವ್ಯರ್ಥವಾಗಿ ಹರಿದು ಹೋಗಿದೆ. ಪ್ರತಿ ವರ್ಷ ನೀರು ಪೋಲಾಗುವುದನ್ನು ತಪ್ಪಿಸಿ ಜನರಿಗೆ ನೀರಾವರಿ ಕಲ್ಪಿಸಲು ರಾಜ್ಯ ಸರ್ಕಾರ ಸಿಂಗಟಾಲೂರು ಏತ ನೀರಾವರಿ ಯೋಜನೆ ಆರಂಭಿಸಿತು. ಈ ಯೋಜನೆ ಲೋಕಾರ್ಪಣೆಗೊಂಡು ರೈತರಿಗೆ ಹತ್ತು ವರ್ಷಗಳಾದರೂ ಹನಿ ನೀರೂ ಸಿಕ್ಕಿಲ್ಲ.

ಸಿಂಗಟಾಲೂರು ಏತ ನೀರಾವರಿ ಯೋಜನೆಯನ್ನು ಪೂರ್ಣಗೊಳಿಸಿದರೂ, ಕೊಳವೆ ಮಾರ್ಗ ಮಾಡುವುದಕ್ಕೆ ಹಿಂದೇಟು ಹಾಕಲಾಗುತ್ತಿದೆ. ಯಾವ ಮಾದರಿಯ ನೀರಾವರಿ ಮಾಡಬೇಕು ಎನ್ನುವುದರ ಬಗ್ಗೆ ಪದೇ ಪದೇ ಯೋಜನೆ ಬದಲಿಸಿದ್ದು ಕೂಡ ಸಮಸ್ಯೆಗೆ ಕಾರಣವಾಗಿದೆ.

ಕೊಪ್ಪಳ ಸಮೀಪದ ಭಾಗ್ಯನಗರ ಬಳಿ ಹಿರೇಹಳ್ಳ ಕಾಮಗಾರಿಗೆ ₹ 12.42 ಕೋಟಿ ಅನುದಾನ ನೀಡಲು ರಾಜ್ಯ ಸರ್ಕಾರ ಸಚಿವ ಸಂಪುಟದಲ್ಲಿ ಇತ್ತೀಚೆಗೆ ಒಪ್ಪಿಗೆ ನೀಡಿದೆ. ಯಲಬುರ್ಗಾ, ಕುಷ್ಟಗಿ ತಾಲ್ಲೂಕುಗಳಿಗೆ ನಿರಂತರ ನೀರು ಪೂರೈಕೆಗೆ ಕೃಷ್ಣಾ ನದಿಯಿಂದ ನೀರು ಪಡೆಯುವ ಕೊಪ್ಪಳ ಏತ ನೀರಾವರಿ ಯೋಜನೆ 10 ವರ್ಷಗಳಾದರೂ ಪೂರ್ಣಗೊಂಡಿಲ್ಲ.

ಕಿನ್ನಾಳ ಬಳಿ ಇರುವ ಜಲಾಶಯ ನಿರ್ಮಾಣವಾದಾಗಿನಿಂದ ಇಲ್ಲಿಯವರೆಗೆ ಹಿರೇಹಳ್ಳ ಯೋಜನೆ ಆಶಯ ಈಡೇರಿಲ್ಲ. ಕಾಲುವೆಗಳು ಪೂರ್ಣಗೊಂಡಿಲ್ಲ. ಅರ್ಧ ಭಾಗಕ್ಕೆ ನೀರು ಬಂದರೆ ಇನ್ನರ್ಧಕ್ಕೆ ನೀರಿಲ್ಲ!

ಮಂಡ್ಯ ಜಿಲ್ಲೆಯಲ್ಲಿ ಕೆಆರ್‌ಎಸ್ ಜಲಾಶಯ ನಿರ್ಮಾಣವಾಗಿ ದಶಕಗಳೇ ಮುಗಿದರೂ ಮಳವಳ್ಳಿ ತಾಲ್ಲೂಕು, ಹಲಗೂರು ಹೋಬಳಿ ವ್ಯಾಪ್ತಿಯ ಯತ್ತಂಬಾಡಿ ಭಾಗದ ರೈತರು ಇಂದಿಗೂ ಎರಡು ಬೆಳೆ ಭತ್ತ ಬೆಳೆದುಕೊಳ್ಳಲು ಸಾಧ್ಯವಾಗಿಲ್ಲ. ಯತ್ತಂಬಾಡಿ ಭಾಗ ವಿಶ್ವೇಶ್ವರಯ್ಯ ನಾಲೆಯ ಕೊನೆ (ಟೇಲ್ ಎಂಡ್) ಭಾಗವಾಗಿದ್ದು, ಅಲ್ಲಿಯವರೆಗೆ ಇಂದಿಗೂ ನೀರು ತಲುಪುತ್ತಿಲ್ಲ.

ನಾಲೆಗಳ ಆಧುನೀಕರಣಕ್ಕಾಗಿ ಹಲವು ಸರ್ಕಾರಗಳು ಸಾವಿರಾರು ಕೋಟಿ ರೂಪಾಯಿ ವೆಚ್ಚ ಮಾಡಿವೆ. ಏತ ನೀರಾವರಿ, ಬಹುಗ್ರಾಮ ನೀರಾವರಿ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಆದರೂ ನಾಲೆಯ ಕೊನೆ ಭಾಗಕ್ಕೆ ನೀರು ಬಾರದಿರುವುದು ಯೋಜನೆಗಳ ಔಚಿತ್ಯದ ಮೇಲೆಯೇ ಅನುಮಾನ ಹುಟ್ಟಿಸುತ್ತದೆ.

ಮಳವಳ್ಳಿ ತಾಲ್ಲೂಕು ಮಾತ್ರವಲ್ಲದೇ ಕೆಆರ್‌ಎಸ್ ಜಲಾಶಯದ ಸಮೀಪವೇ ಇರುವ ಮದ್ದೂರು ತಾಲ್ಲೂಕಿನ ಕೆಲ ಭಾಗ ‘ಟೇಲ್ ಎಂಡ್’ ಸಮಸ್ಯೆಯಿಂದ ಬಳಲುತ್ತಿದೆ. ಶಿಂಷಾ ನದಿ ಮೇಲ್ಭಾಗದಲ್ಲಿ ಬರುವ ಹಳ್ಳಿಗಳಿಗೆ ನೀರು ತಲುಪುತ್ತಿಲ್ಲ. ಬಿಜೆಪಿ ಮುಖಂಡ ಎಸ್.ಎಂ.ಕೃಷ್ಣ ತವರು ಸೋಮನಹಳ್ಳಿ, ಕೆಸ್ತೂರು, ಕೆ.ಹೊನ್ನಲಗೆರೆ ಭಾಗಕ್ಕೆ ಶಿಂಷಾ, ಕಾವೇರಿ ನೀರು ತಲುಪುತ್ತಿಲ್ಲ. ‘ಟೇಲ್ ಎಂಡ್’ ಭಾಗಕ್ಕೆ ನೀರು ಒದಗಿಸಲು ಜಾರಿಗೊಳಿಸಲಾದ ಏತ ನೀರಾವರಿ ಯೋಜನೆಗಳು ಕೂಡ ವಿಫಲಗೊಂಡಿದ್ದು ಸಮಸ್ಯೆ ಬಗೆಹರಿದಿಲ್ಲ.

ಹಾಸನ ಜಿಲ್ಲೆ ಹೇಮಾವತಿ ಜಲಾಶಯದ ನೀರು ಪಡೆಯುವ ನಾಗಮಂಗಲ ಹಾಗೂ ಕೆ.ಆರ್.ಪೇಟೆ ತಾಲ್ಲೂಕಿನ ಹಲವು ಭಾಗಗಳಿಗೆ ನೀರು ತಲುಪದೆ ರೈತರು ಸಂಕಷ್ಟಕ್ಕೀಡಾಗಿದ್ದಾರೆ.

ಬೆಳಗಾವಿ ಜಿಲ್ಲೆ ಸವದತ್ತಿಯ ನವಿಲುತೀರ್ಥ ಜಲಾಶಯದ ಬಲ ದಂಡೆ ಕಾಲುವೆ ಮೂಲಕ ಹರಿಯುವ ಮಲಪ್ರಭಾ ನೀರು ಶಿರೂರು ಗ್ರಾಮದ ಮೂಲಕ ಧಾರವಾಡ ಜಿಲ್ಲೆ ಪ್ರವೇಶಿಸುತ್ತದೆ. ಅಲ್ಲಿಂದ 82 ಕಿ.ಮೀ. ದೂರದ ದಾಟನಾಳ ಬಳಿ ಸಾಗಿ ಗದಗ ಜಿಲ್ಲೆ ಪ್ರವೇಶಿಸುತ್ತದೆ.

ಹಿಂಗಾರಿನಲ್ಲಿ ಮೂರು ತಿಂಗಳು ನಿತ್ಯ 300 ಕ್ಯುಸೆಕ್ ನೀರು ಹರಿಯುವ ಮಲಪ್ರಭಾ ಬಲದಂಡೆ ಕಾಲುವೆಯಲ್ಲಿ ಶೇ 38ರಷ್ಟು ಸೋರಿಕೆ ಇತ್ತು. ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ₹ 1,065 ಕೋಟಿ ಅನುದಾನ ಬಿಡುಗಡೆಯಾಗಿತ್ತು. ಗುತ್ತಿಗೆ ಪಡೆದ ಡಿ.ವೈ.ಉಪ್ಪಾರ ಕನ್‌ಸ್ಟ್ರಕ್ಷನ್ಸ್ ಕಂಪನಿಯು, ಕಾಲುವೆಯ ಎರಡೂ ದಂಡೆಗಳಿಗೆ ಕಾಂಕ್ರೀಟ್ ಹಾಕುವ ಕೆಲಸ ಮಾಡುತ್ತಿದೆ.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಮುನವಳ್ಳಿ ಬಳಿ ನಿರ್ಮಿಸಿದ ನವಿಲುತೀರ್ಥ ಜಲಾಶಯದಿಂದ ಗದಗ ಜಿಲ್ಲೆ ನರಗುಂದ ತಾಲ್ಲೂಕಿನ ಗ್ರಾಮಗಳ ಜಮೀನುಗಳಿಗೆ ಕಾಲುವೆ ಮೂಲಕ ನೀರು ಹರಿಸುವುದಕ್ಕಾಗಿಯೇ ಉಗರಗೋಳ ಬಳಿ ಪ್ರತ್ಯೇಕ ನರಗುಂದ ಬ್ಲಾಕ್ ಕಾಲುವೆಯನ್ನು (ಎನ್‌ಬಿಸಿ) ನಾಲ್ಕು ದಶಕಗಳ ಹಿಂದೆಯೇ ನಿರ್ಮಿಸಲಾಗಿದೆ. 40 ಕಿ.ಮೀ. ಉದ್ದ ಇರುವ ಈ ಕಾಲುವೆ ಸುಮಾರು 80 ಸಾವಿರ ಹೆಕ್ಟೇರ್ ಭೂಮಿಗೆ ನೀರುಣಿಸಬೇಕು. ಆದರೆ, ಈ ಮಾರ್ಗದಲ್ಲಿ ಹಲವೆಡೆ ಕಾಲುವೆ ಎರಡೂ ಬದಿಯ ಕಾಂಕ್ರೀಟ್ ಒಡೆದಿದ್ದು, ಬೆಳಗಾವಿ ಜಿಲ್ಲಾ ವ್ಯಾಪ್ತಿಯಲ್ಲೇ ಸಾಕಷ್ಟು ಪ್ರಮಾಣದಲ್ಲಿ ನೀರು ಸೋರಿಕೆಯಾಗುತ್ತಿದೆ.

ಹಾಗಾಗಿ ಗದಗ ಜಿಲ್ಲೆಯ ಹಳ್ಳಿಗಳಿಗೆ ನಿರೀಕ್ಷಿತ ಮಟ್ಟದಲ್ಲಿ ನೀರು ಹರಿಯುತ್ತಿಲ್ಲ. ತಾಲ್ಲೂಕಿನ ಕೊನೆಯ ಗ್ರಾಮಗಳಾದ ಕುರಗೋವಿನಕೊಪ್ಪ, ಹದಲಿ, ಸುರಕೋಡ ಗ್ರಾಮಗಳ ವ್ಯಾಪ್ತಿಯ ಜಮೀನುಗಳಿಗೆ ಸರಿಯಾಗಿ ನೀರು ತಲುಪುತ್ತಿಲ್ಲ.

‘ರೋಣ ತಾಲ್ಲೂಕಿನಲ್ಲಿ ಕೊನೆಯವರೆಗೂ ಸರಾಗವಾಗಿ ಮಲಪ್ರಭಾ ಬಲದಂಡೆ ಕಾಲುವೆ ನೀರು ತಲುಪುತ್ತದೆ. ಕಾಲುವೆಯ ದುರಸ್ತಿ ಕಾರ್ಯ ಸಂಪೂರ್ಣವಾಗಿದೆ. ಆದರೆ, ಉಪ ವಿಭಾಗ ಕಾಲುವೆಗಳ ಕಾಮಗಾರಿ ದುರಸ್ತಿಯಲ್ಲಿ ಇರುವುದರಿಂದ ಅವುಗಳಲ್ಲಿ ನೀರು ಸರಬರಾಜು ಆಗುತ್ತಿಲ್ಲ’ ಎಂದು ಬಿಎಂಆರ್‌ಬಿಸಿ ಎಇಇ ಜಗದೀಶ ತಿಳಿಸಿದ್ದಾರೆ.

ಘಟಪ್ರಭಾ ನದಿಗೆ ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಬಳಿ ನಿರ್ಮಿಸಿರುವ ಜಲಾಶಯದ ಘಟಪ್ರಭಾ ಎಡದಂಡೆ ಕಾಲುವೆಯ ವ್ಯಾಪ್ತಿಗೆ ಬರುವ ಮೂಡಲಗಿ ಭಾಗದ ಕೊನೆಯ ತುದಿ (ಟೇಲ್‌ಎಂಡ್)ಯಲ್ಲಿ ಪಟಗುಂದಿ, ಕಮಲದಿನ್ನಿ ಮತ್ತು ರಂಗಾಪುರ ಗ್ರಾಮಗಳಿವೆ. ಕಾಲುವೆ ನೀರು ಅಧಿಸೂಚಿತ ಪ್ರದೇಶಗಳಿಗೆ ತಲುಪುತ್ತಿಲ್ಲ. ದಶಕಗಳ ಹಿಂದೆ ನಿರ್ಮಿಸಿರುವ ಕಾಲುವೆಗಳ ಕಾಂಕ್ರೀಟ್, ಗೇಟ್‌ಗಳು ಮತ್ತು ತಡೆಗೋಡೆಗಳ ಕಲ್ಲುಗಳು ಕಿತ್ತು ಹೋಗಿವೆ. ಕಾಲುವೆ ತುಂಬೆಲ್ಲಾ ಗಿಡಗಂಟಿಗಳು ತುಂಬಿದ್ದು, ನೀರು ಹರಿಯುವಿಕೆಗೆ ಅಡೆತಡೆಯಾಗಿದೆ. ನೀರು ಹರಿಯದೆ ಪೋಲಾಗುತ್ತಿದೆ. ಚನ್ನಮ್ಮನ ಕಿತ್ತೂರು ತಾಲ್ಲೂಕಿನ ತಿಗಡಿ, ಹರಿನಾಲಾ ಯೋಜನೆಯ ಲಾಭ ತಾಲ್ಲೂಕಿನ ಹೊಳಿಹೊಸೂರು, ನೇಗಿನಹಾಳ ಸೇರಿದಂತೆ ಕೆಲವು ಊರುಗಳಿಗೆ ಸಿಗಬೇಕಾಗಿತ್ತು. ಆದರೆ, ಕೊನೆಯವರೆಗೆ ನೀರು ಇನ್ನೂ ಹರಿದಿಲ್ಲ ಎಂದು ರೈತರು ಆರೋಪಿಸುತ್ತಾರೆ.

ಪೂರಕ ಮಾಹಿತಿ: ಚಂದ್ರಕಾಂತ ಮಸಾನಿ, ನಾಗರಾಜ ಚಿನಗುಂಡಿ, ಸೂರ್ಯನಾರಾಯಣ ವಿ., ಎಂ.ಎನ್. ಯೋಗೇಶ್, ಪ್ರಮೋದ, ಸತೀಶ್ ಬೆಳ್ಳಕ್ಕಿ, ಬಾಲಕೃಷ್ಣ ಶಿಬಾರ್ಲ, ಸಂತೋಷ ಈ. ಚಿನಗುಡಿ, ಜಗನ್ನಾಥ ಡಿ. ಶೇರಿಕಾರ

ಕಿತ್ತು ಹೋದ ನಾಲೆಗಳು

‘ಭದ್ರಾ ಜಲಾಶಯದಿಂದ ನೀರು ಬಿಡುಗಡೆ ಮಾಡಿ 24 ಗಂಟೆಯ ಒಳಗೆ ಕೊನೆಯ ಭಾಗಕ್ಕೆ ತಲುಪಬೇಕು. ಅದಕ್ಕಾಗಿ ಸೆಮಿ ಮಾಡೆಲ್ ಎಂದು ಐದು ವರ್ಷಗಳ ಹಿಂದೆ ಕಾಡಾದವರು ಯೋಜನೆ ರೂಪಿಸಿ ₹ 1,200 ಕೋಟಿ ಖರ್ಚು ಮಾಡಿದ್ದರು. ಆದರೆ ಕಳಪೆ ಕಾಮಗಾರಿಯಿಂದ ಒಂದೇ ವರ್ಷದಲ್ಲಿ ಸೆಮಿ ಮಾಡೆಲ್ ನಾಲೆಗಳು ಕಿತ್ತುಹೋಗಿವೆ. ಕೊನೆಭಾಗಕ್ಕೆ ನೀರು ತಲುಪುವುದು ಸಮಸ್ಯೆಯಾಗಲು ಇದೂ ಒಂದು ಕಾರಣ’ ಎಂದು ರಾಜ್ಯ ರೈತ ಸಂಘದ ಕಾರ್ಯದರ್ಶಿ ಹೊನ್ನೂರು ಮುನಿಯಪ್ಪ ಹೇಳುತ್ತಾರೆ.

ಚಾಮರಾಜನಗರ ಜಿಲ್ಲೆಯ ಸುವರ್ಣಾವತಿ, ಗುಂಡಾಲ, ಚಿಕ್ಕಹೊಳೆ ಜಲಾಶಯಗಳನ್ನು ನಿರ್ಮಿಸಿ ಮೂರು ದಶಕಗಳು ಸಂದಿವೆ. ಆದರೆ ಸಮರ್ಪಕ ನಿರ್ವಹಣೆ ಇಲ್ಲದ್ದರಿಂದ ಜಲಾಶಯಗಳು ಶಿಥಿಲಗೊಂಡು ಯೋಜನೆಗಳು ವಿಫಲವಾಗಿವೆ.

ಪ್ರತ್ಯೇಕ ನಿಗಮದ ಕೂಗು


ತುಂಗಭದ್ರಾ ಜಲಾಶಯದಿಂದ ನೀರು ವ್ಯರ್ಥವಾಗಿ ಹರಿದು ಹೋಗುವುದನ್ನು ತಡೆಯಲು ಕೊಪ್ಪಳ ಜಿಲ್ಲೆಯ ನವಲಿ ಬಳಿ ಸಮಾನಾಂತರ ಜಲಾಶಯ ನಿರ್ಮಿಸುವ ಯೋಜನೆಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧವಾಗಿದೆ.

ಆದರೆ, ಕಲ್ಯಾಣ ಕರ್ನಾಟಕ ಭಾಗದ ಬೃಹತ್ ನೀರಾವರಿ ಯೋಜನೆಯಾದ ತುಂಗಭದ್ರಾ ಜಲಾಶಯ ವ್ಯಾಪ್ತಿಗೆ ಅನುದಾನ ನೀಡಲು ಸರ್ಕಾರ ಮೀನಮೇಷ ಎಣಿಸುತ್ತಿದೆ. ವಿಶ್ವೇಶ್ವರಯ್ಯ ಜಲಭಾಗ್ಯ, ಕಾವೇರಿ ನೀರಾವರಿ ಮತ್ತು ಕೃಷ್ಣ ಜಲಭಾಗ್ಯ ನಿಗಮಗಳು ತುಂಗಭದ್ರಕ್ಕಿಂತಲೂ ಕಡಿಮೆ ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿವೆ. ಅವುಗಳಿಗೆ ಭರಪೂರ ಅನುದಾನ ಸಿಗುತ್ತದೆ. ಈ ತಾರತಮ್ಯ ಹೋಗಲಾಡಿಸಲು ಕಲ್ಯಾಣ ಕರ್ನಾಟಕ ಭಾಗಕ್ಕೂ ಪ್ರತ್ಯೇಕ ನಿಗಮವಾಗಬೇಕು ಎನ್ನುತ್ತಾರೆ ರಾಜ್ಯ ಗುತ್ತಿಗೆ ಕಾರ್ಮಿಕರ ಸಲಹಾ ಮಂಡಳಿಯ ಸದಸ್ಯ ಪಂಪಾಪತಿ ರಾಟಿ.



ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಬಿದರಳ್ಳಿ ಗ್ರಾಮದಲ್ಲಿ ಸಂಪೂರ್ಣವಾಗಿ ಗಿಡಗಳಿಂದ ಆವೃತ್ತವಾಗಿರುವ ಸಿಂಗಟಾಲೂರು ಏತ ನೀರಾವರಿ ಯೋಜನೆಯ ಬೃಹತ್ ಕಾಲುವೆ

ಗುಂಡಣ್ಣ



25 ವರ್ಷಗಳ ಹಿಂದೆ
ಗುರುವಾರ, 25-12-1997

● ಡೀಸೆಲ್ ಬೆಲೆಯಲ್ಲಿ 11 ಪೈಸೆ ಏರಿಕೆ

ನವದೆಹಲಿ, ಡಿಸೆಂಬರ್ 24 (ಪಿಟಿಐ, ಯುಎನ್‌ಐ)– ಡೀಸೆಲ್ ಬೆಲೆ ಪ್ರತಿ ಲೀ.ಗೆ 10ರಿಂದ 11 ಪೈಸೆಯಷ್ಟು ಹೆಚ್ಚಲಿದ್ದು ಪರಿಷ್ಕೃತ ದರ ಇಂದು ಮಧ್ಯರಾತ್ರಿಯಿಂದಲೇ ಜಾರಿಯಾಗಲಿದೆ.

ಆಮದು ಬೆಲೆಯಲ್ಲಿನ ವ್ಯತ್ಯಾಸ ಸರಿಪಡಿಸಲು ದರ ಹೆಚ್ಚಿಸಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಬೆಂಗಳೂರು ವರದಿ: ಬೆಂಗಳೂರು, ಮೈಸೂರು ನಗರಗಳಲ್ಲಿ ಡೀಸೆಲ್ ಮಾರಾಟ ಬೆಲೆಯನ್ನು ಪ್ರತಿ ಲೀಟರ್‌ಗೆ ರೂ. 12.57 ಎಂದು ನಿಗದಿಪಡಿಸಲಾಗಿದೆ. ಬೆಂಗಳೂರು, ಮೈಸೂರು ನಗರಗಳಲ್ಲಿ ಇದುವರೆಗೆ ಡೀಸೆಲ್ ಮಾರಾಟ ಬೆಲೆ ರೂ. 12.46 ಇತ್ತು.

50 ವರ್ಷಗಳ ಹಿಂದೆ
ಸೋಮವಾರ, 25-12-1972

● ಆಂಧ್ರ ಚಳವಳಿಗಾರರ ಮೇಲೆ ಎರಡು ಬಾರಿ ಗೋಲಿಬಾರ್: 3 ಸಾವು

ವಿಜಯವಾಡ, ಡಿಸೆಂಬರ್ 24– ಪ್ರತ್ಯೇಕ ಆಂಧ್ರವಾದಿ ಚಳವಳಿಕಾರರು ಪೊಲೀಸರ ಮೇಲೆ ಕಲ್ಲೆಸೆದು ಹಿಂಸಾಚಾರಕ್ಕೆ ತೊಡಗಿದಾಗ ಮತ್ತು ಗೌರ್ನರ್‌ಪೇಟೆ ಪ್ರದೇಶದಲ್ಲಿ ವಿಭಜನೆ ವಿರೋಧಿಗಳು ಮೆರವಣಿಗೆ ಹೊರಟಾಗ ಗೊಂದಲ ನಡೆದು ಇಂದು ರಾತ್ರಿ ಕೇಂದ್ರ ರಿಸರ್ವ್ ಪೊಲೀಸರು ಐದು ಸುತ್ತು ಗುಂಡು ಹಾರಿಸಿದರು. ಗೋಲಿಬಾರ್‌ನಿಂದ ಕನಿಷ್ಠ ಮೂವರು ಸತ್ತಿರುವರೆಂದು ಶಂಕಿಸಲಾಗಿದೆ.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಡಿಸೆಂಬರ್ 25, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ದ್ವಿತೀಯ ಗಂ. 08-25, ತೃತೀಯ ಗಂ. 28-52 ನಕ್ಷತ್ರ: ಉತ್ತರಾಷಾಢ ಗಂ. 19-21 ಯೋಗ: ವ್ಯಾಘಾತ ಗಂ. 24-59 ಕರಣ: ಕೌಲವ ಗಂ. 08-25, ಧನುರ್ ಮಾಸದ 09 ನೇ ದಿನ. ರಾಹುಕಾಲ : ಸಾಯಂಕಾಲ 04-30 –06-00 ಸೂರ್ಯೋದಯ : 06-54 ಸೂರ್ಯಾಸ್ತ : 06-07 ಮುಸ್ಲಿಂ ದಿನಾಂಕ : 01 ಜುಮಾದುಸ್ಸಾನಿ ದಿನ ವಿಶೇಷ : ಟಿ.ಎಲ್. ವಾಸ್ವಾನಿಯವರ ಜನ್ಮದಿನ, ಕ್ರಿಸ್ಮಸ್ ದಿನ (ಕ್ರಿಶ್ಚಿಯನ್)
ಅದೃಷ್ಟ ಸಂಖ್ಯೆ : 3, 5

ಮೇಷ: ನಿಮ್ಮಲ್ಲಿರುವ ಜಾಣ್ಮೆಗೆ ಸಂಬಂಧಪಟ್ಟವರಿಂದ ಸರಿಯಾದ ಪ್ರೋತ್ಸಾಹ ದೊರೆಯಲಿದೆ. ನಿಮ್ಮ ಧ್ಯೇಯದಲ್ಲಿ ಗಂಭೀರವಾದ ಬದಲಾವಣೆ. ನಿಮ್ಮಿಚ್ಛೆಯ ಭೂಮಿಯನ್ನೇ ಖರೀದಿಸುವ ಭಾಗ್ಯ ಇಂದು ನಿಮ್ಮದಾಗಲಿದೆ.

ವೃಷಭ: ಧಾರ್ಮಿಕ ಕ್ಷೇತ್ರದಲ್ಲಿರುವವರು ತಮ್ಮ ವೃತ್ತಿ ಜೀವನದತ್ತ ಗಮನ ಹರಿಸುವುದು ಒಳ್ಳೆಯದು. ಮಕ್ಕಳ ಜೀವನದ ಬಗ್ಗೆ ನಿರ್ಧಾರ ಮಾಡುವ ದಿನ ಇದಾಗಲಿದೆ. ವೈಯಕ್ತಿಕ ನಿಲುವುಗಳಿಗೆ ಆದ್ಯತೆ ಕೊಡುವುದು ಲೇಸು.

ಮಿಥುನ: ಕಾರ್ಯಕ್ಷೇತ್ರದಲ್ಲಿ ಹೆಚ್ಚಿನ ಜವಾಬ್ದಾರಿ ಜೊತೆಗೆ ಕಲಿಕೆಗಾಗಿ ಪ್ರಯಾಣ ಮಾಡಬೇಕಾಗುತ್ತದೆ. ನಿಮಗೆ ಜನ್ಮತಃ ಬಂದಿರುವ ಧೈರ್ಯ ಹಾಗೂ ಸಹಿಷ್ಣುತೆ ಈ ದಿನ ನಿಮ್ಮ ನೆರವಿಗೆ ಬರಲಿದೆ. ಆಂಜನೇಯನನ್ನು ಆರಾಧಿಸಿ.

ಕರ್ಕಾಟಕ: ಇಷ್ಟು ದಿನ ನೀವು ತೋರಿದ ತಾಳ್ಮೆಗೆ ಪ್ರತಿಯಾಗಿ ಇಂದು ನಿಮ್ಮ ನಿಜವಾದ ಕಾರ್ಯಗಳಿಗೆ ಕಾಲ ಕೂಡಿಬರಲಿದೆ. ಬಂದ ಅವಕಾಶವನ್ನು ಬಿಡದೆ ಕೈಗೆತ್ತಿಕೊಳ್ಳಿರಿ. ಚಾಲಕ ವೃತ್ತಿಯವರು ಉದ್ಯೋಗದಲ್ಲಿ ಜಾಗ್ರತರಾಗಿರಿ.

ಸಿಂಹ: ಜವಾಬ್ದಾರಿಯುತ ಸ್ಥಾನವನ್ನು ನಿಭಾಯಿಸಲು ಈ ದಿನ ತೀರ್ಮಾನಿಸುವುದು ಸರಿಯಲ್ಲ. ಈಗಾಗಲೇ ಆರಂಭಿಸಿರುವ ಕೆಲಸಗಳನ್ನು ಮುಂದುವರೆಸಲು ಪ್ರಯತ್ನಿಸಿ. ಸಹೋದ್ಯೋಗಿಯೊಂದಿಗೆ ಮದುವೆ ಪ್ರಸ್ತಾಪ ಬರಲಿದೆ.

ಕನ್ಯಾ: ಹಣಕಾಸಿನ ಲೆಕ್ಕಾಚಾರವನ್ನು ನೋಡುವವರು ಜಾಗರೂಕತೆಯಿಂದ ಕಾರ್ಯ ನಿರ್ವಹಿಸಿ. ನಿಮ್ಮ ಪ್ರೀತಿ ಪಾತ್ರರಲ್ಲಿ ಮನಸ್ಸಿನ ಭಾವನೆಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಲು ಇಂದು ಸೂಕ್ತ ದಿನ. ವಾಗ್ಮಿಗಳಿಗೆ ಶುಭವಾಗುವುದು.

ತುಲಾ: ನಿಮ್ಮ ಮನೆಯವರಿಗೆ ನೀವು ತೋರಿದ ಹೆಚ್ಚಿನ ಪ್ರೀತಿ, ಕಾಳಜಿಯಿಂದ ಬದಲಾದ ಮನೆಯ ವಾತಾವರಣ ನಿಮ್ಮನ್ನು ಬಹಳ ಸಂತೋಷವಾಗಿಡುವುದು. ದುರಭ್ಯಾಸಗಳಿಂದ ಹೊರಬರುವ ಬಗ್ಗೆ ಹೆಚ್ಚಿನ ಪ್ರಯತ್ನವಿರಲಿ.

ವೃಶ್ಚಿಕ: ಪ್ರಶಾಂತತೆಯನ್ನು ಕಂಡುಕೊಳ್ಳುವ ಬಗ್ಗೆ ನಿಮ್ಮ ಕಾರ್ಯವೈಖರಿಯನ್ನು ರೂಪಿಸಿಕೊಳ್ಳಿ. ಸಾಂಪ್ರದಾಯಕ ವಿಚಾರದ ಚಿಂತನೆ ಅಥವಾ ಅಂತಹ ಕಾರ್ಯಕ್ರಮದಲ್ಲಿ ಭಾಗವಹಿಸುವುದರಿಂದ ನಿಮ್ಮ ಘನತೆ ಗೌರವ ಹೆಚ್ಚಲಿದೆ.

ಧನು: ವಾಹನ ವಹಿವಾಟುಗಳಲ್ಲಿ ಅನಿರೀಕ್ಷಿತ ನಷ್ಟವಾದರೂ ಅಸಲಿಗೆ ಯಾವ ರೀತಿಯ ತೊಂದರೆ ಉಂಟಾಗುವುದಿಲ್ಲ. ಮತ್ಸರ ಗುಣವನ್ನು ಹೊಂದಿದ ಬಂಧುಗಳ ಅಥವಾ ಗೆಳೆಯರ ಯಾವ ಮಾತಿಗೂ ಕಿವಿಗೊಡದಿರಿ.

ಮಕರ: ಈ ದಿನ ನೀವು ತೆಗೆದುಕೊಳ್ಳುವ ತೀರ್ಮಾನಗಳು ಸರಿಯಾಗಿಯೇ ಇರುವುದು. ಹಣದ ದುರ್ಬಳಕೆ ಆರೋಪ ನಿವಾರಣೆಯಾಗಲಿದೆ. ಅಧಿಕ ಒತ್ತಡದಿಂದ ದೇಹದಲ್ಲಿ ಅನಾರೋಗ್ಯ ಸಮಸ್ಯೆಗಳು ಎದುರಾಗಬಹುದು.


ಕುಂಭ: ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವಿಷಯಗಳಲ್ಲಿ ಆಸಕ್ತಿ ಮೂಡಲಿದೆ. ಕರ್ತವ್ಯ ನಿಷ್ಠೆಯಿಂದ ಉತ್ತಮ ಹೆಸರು ಸಂಪಾದನೆಯಾಗುವುದು. ವ್ಯಾಪಾರದಲ್ಲಿ ವಂಚನೆಗೆ ಒಳಗಾಗುವ ಸನ್ನಿವೇಶ ನಷ್ಟವನ್ನು ಮತ್ತು ನೋವನ್ನು ತರಲಿದೆ.

ಮೀನ: ವೈಜ್ಞಾನಿಕ ಸಂಶೋಧನಕಾರರಿಗೆ ಸಾಧನೆಯ ಸಂತೋಷ ಸಿಗಲಿದೆ. ಋಣಬಾಧೆ ಕಡಿಮೆಯಾಗುವುದು. ದುರ್ಗಾಪರಮೇಶ್ವರಿ ಆರಾಧನೆಯಿಂದ ವೈಯಕ್ತಿಕ ವ್ಯವಹಾರಗಳ ಇರುಸುಮುರುಸುಗಳು ದೂರವಾಗಲಿವೆ.

ಪದಬಂಧ 5179
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಶಿವನ ಹತ್ತಿರವಿರಿಸಿದ ಮಣ್ಣಿನ ಬಾನಿ (3)
3. ಅತ್ಯಂತ ತಂಪು ಹವೆಯುಳ್ಳ ಭೂ ಭಾಗ (5)
5. ವಿರಸದ ವಿರುದ್ಧ ಪದ (3)
6. ಶಾಂತಿ ಸಂಕೇತವೆಂದು ಭಾವಿಸಲಾದ ಪಕ್ಷಿ (4)
7. ಬೆಂಕಿಯನ್ನು ಆರಿಸುವ ಸಿಬ್ಬಂದಿ (7)
10. ರುಚಿಕಟ್ಟಾದ ಅಡುಗೆಯಿದು (4)
11. ನಾಯಕನ ನಾಯಿಯಿದು (3)
14. ನೀರಿನಲ್ಲಿದ್ದೂ ನೀರಿನ ಬಾಧೆ ತಟ್ಟದಂತೆ ತಡೆಯುವ ಮಂತ್ರವಿದ್ಯೆ (5)
15. ಮಾಂಸವನ್ನು ಮಾರಿ ಜೀವಿಸುವವನು (3)

ಮೇಲಿಂದ ಕೆಳಕ್ಕೆ
1. ಮೈಮೇಲೆ ಅಲಂಕಾರಿಕವಾಗಿ ಬರೆಸಿಕೊಳ್ಳುವ ಚಿತ್ರ (2)
2. ಚಾರ ತಿಳಿಸಿದ ಸಂಗತಿ (3)
4. ನರಕಾಧಿಪನ ಬಳಿರುವ ಜೋಡಿ (3)
5. ಮಡಿವಾಳ ಏಕೋ ತಿರುಗಿದ್ದಾನಲ್ಲಾ? (3)
6. ಪಾಕದ ನಂತರ ಕುಡಿದಿರುವ ಶರಬತ್ತು (3)
8. ಶಾಸನಗಳನ್ನು ರಚಿಸುವವನು (3)
9. ಕಳವಳದಿಂದ ತಿನ್ನುವ ತುತ್ತು ಉಲ್ಟಾ ಆಗಿದೆಯಲ್ಲಾ! (3)
10. ಭೀಷ್ಮನ ಮತ್ತೊಂದು ಹೆಸರು (3)
12. ನಡುವೆಯೇ ಆರಂಭವಾದ ಕಂಪನ (3)
13. ಹಣ್ಣಾಗದಿರುವ ಫಲ (2)



5178ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮಹಾರಾಜ 3.ಹಾಲಾಹಲ 5.ನವಿಲು 7.ಕರುಣೆ 9.ಆಸ್ಥಾನ 11.ಭವಿಷ್ಯ 12.ಅಂಕಣ 13.ಮಂಟಪ 15.ವಾನರ 17.ರತ್ನಾಕರ 18.ವಿದೂಷಕ

ಮೇಲಿಂದ ಕೆಳಕ್ಕೆ: 1.ಮಶಕ 2.ಜನ 3.ಹಾಲು 4.ಲಕ್ಷುನ 6.ವಿವಾಹವಿಚ್ಛೇದನ 8.ರುದ್ರನಾಟಕ 10.ಸ್ಥಾನಪಲ್ಲಟ 12.ಅಂಬರ 14.ಪದಕ 15.ವಾರ 16.ರವಿ

ಸುಡೊಕು 5565

		5	8			4	1	
2								
		4			2	8		6
3		6			8	5		9
	7						8	
8		1				3		7
4			6		1		9	
	3				5	7		8
6		8	2	3			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5564 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕೂಡಲಸಂಗಮ ಶ್ರೀಗೆ ನಿರಾಣಿ ಸವಾಲು

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡಬಾರದು ಎಂದು ಎಲ್ಲಿಯಾದ್ರು ನಾನು ಹೇಳಿದ್ದನ್ನು ಸಾಬೀತು ಪಡಿಸಿದರೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ' ಎಂದು ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ, ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿಗೆ ಸವಾಲು ಹಾಕಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಮಾಜದ ಸಚಿವರಿಂದ ಮೀಸಲಾತಿ ಘೋಷಣೆ ತಪ್ಪಿತು ಎಂದು ಸ್ವಾಮೀಜಿ ಪದೇಪದೇ ಹೇಳುತ್ತಾರೆ. ಅದನ್ನು ಸಾಬೀತು ಪಡಿಸಲು ಸಾಧ್ಯವಾಗದಿದ್ದರೆ ಅವರು ಪೀಠ ಬಿಟ್ಟು ರಾಜಕಾರಣಕ್ಕೆ ಬರಲಿ' ಎಂದು ಆಗ್ರಹಿಸಿದರು.

'ಸ್ವಾಮೀಜಿ ಬಗ್ಗೆ ಅಪಾರ ಗೌರವವಿದೆ. ರಾಜ್ಯದಲ್ಲಿ ಸಮಾಜದ 80 ಲಕ್ಷ ಜನರು ಇರುವುದರಿಂದ ಎರಡು ಪೀಠ ಮಾಡಿದೆವು. ಮೂರನೇ ಪೀಠವನ್ನೂ ನಾನೇ ಮಾಡಿದ್ದೇನೆ. ಇನ್ನೂ ಎರಡು ಪೀಠ ಮಾಡುತ್ತೇನೆ. ಪೀಠ ಹುಟ್ಟುವ ಮೊದಲೇ ಮಂತ್ರಿಯಾಗಿದ್ದೆ' ಎಂದು ತಿರುಗೇಟು ನೀಡಿದರು.

ಹಿಂದುಳಿದವರಿಗೂ ಒಳ ಮೀಸಲಾತಿ ನೀಡಲಿ: ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹ

'ಒಬಿಸಿಗೆ ಅನ್ಯಾಯವಾಗಲು ಬಿಡಲ್ಲ'

ಪ್ರಜಾವಾಣಿ ವಾರ್ತೆ

ತುಮಕೂರು: ಹಿಂದುಳಿದ ಜಾತಿ, ಸಮುದಾಯದವರಿಗೆ ಮೀಸಲಾತಿಯಲ್ಲಿ ಅನ್ಯಾಯವಾದರೆ ಸಹಿಸುವುದಿಲ್ಲ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಇಲ್ಲಿ ಶನಿವಾರ ಎಚ್ಚರಿಕೆ ನೀಡಿದರು.

ಜನತಾ ಪರಿವಾರದ ಮುಖಂಡ ಲಕ್ಷ್ಮಿನರಸಿಂಹಯ್ಯ ಸ್ಮರಣೆ ಹಾಗೂ ಸ್ವಾಮಿ ವಿವೇಕಾನಂದ ಸಹಕಾರ ಸಂಘದ ರಜತ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಲಿಂಗಾಯತ ಪಂಚಮಸಾಲಿ ಸಮುದಾಯವನ್ನು ಹಿಂದುಳಿದ 2-ಎ ಪ್ರವರ್ಗಕ್ಕೆ ಸೇರಿಸುವ ಸಂಬಂಧ ಡಿ. 29ರಂದು ನಿರ್ಧಾರ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆಗೆ ಹಿಂದೂ ಸಾದರ ಸಮುದಾಯದ ಮುಖಂಡ, ನಟ 'ಮುಖ್ಯಮಂತ್ರಿ' ಚಂದ್ರು ವಿರೋಧ ವ್ಯಕ್ತಪಡಿಸಿದರು. ಇದನ್ನು ಪ್ರಸ್ತಾಪಿಸಿದ ಸಿದ್ದರಾಮಯ್ಯ, 'ಹಿಂದುಳಿದವರಿಗೆ ಅನ್ಯಾಯವಾದರೆ ರಾಜಕೀಯ ಅಧಿಕಾರಕ್ಕೆ ಅಂಟಿಕೊಂಡು ಕುಳಿತುಕೊಳ್ಳುವುದಿಲ್ಲ. ಸಾಮಾಜಿಕ ನ್ಯಾಯದ ಪರವಾಗಿ ಹೋರಾಟ ಮುಂದುವರಿಸುತ್ತೇನೆ' ಎಂದರು.

'ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಯಲ್ಲಿ 102 ಜಾತಿಗಳಿದ್ದು, ಎಲ್ಲಾ ಸಮುದಾಯಕ್ಕೂ ಒಳಮೀಸಲಾತಿ ಕಲ್ಪಿಸಿದರೆ ತಮ್ಮದೇನೂ ತಕರಾರು ಇಲ್ಲ. ಒಳ ಮೀಸಲಾತಿ ಕೊಟ್ಟರೆ ಸಣ್ಣಪುಟ್ಟ ಸಮುದಾಯಗಳಿಗೂ ನ್ಯಾಯ ಸಿಗಲಿದೆ. ಜನಸಂಖ್ಯೆಗೆ ಅನುಗುಣವಾಗಿ ಎಲ್ಲ ಸಮುದಾಯಗಳಿಗೂ ಮೀಸಲಾತಿ ಕಲ್ಪಿಸಬೇಕು' ಎಂದು ಹೇಳಿದರು.

'ಹಿಂದುಳಿದ ವರ್ಗಗಳ ಒಟ್ಟು ಜನಸಂಖ್ಯೆ ಶೇ 52ರಷ್ಟು ಇದ್ದು, ಶೇ 27ರಷ್ಟು ಮೀಸಲಾತಿ ಕಲ್ಪಿಸಲಾಗಿದೆ. ಆದರೆ ಶೇ 4ರಷ್ಟು ಇರುವ ಮೇಲ್ವರ್ಗದ ಜನರಿಗೆ ಶೇ 10ರಷ್ಟು ಮೀಸಲಾತಿ ಕೊಡಲಾಗಿದೆ. ಬೇರೆ ರಾಜ್ಯಗಳಲ್ಲಿ ಒಟ್ಟು ಮೀಸಲಾತಿ ಪ್ರಮಾಣ ಶೇ 50ರಷ್ಟು ದಾಟಿದರೆ ಅದನ್ನು ರದ್ದುಪಡಿಸುತ್ತಾರೆ. ಆದರೆ ರಾಜ್ಯದ ಬಿಜೆಪಿ ಸರ್ಕಾರ ನಿಯಮ ಮೀರಿ ಮೀಸಲಾತಿ ಪ್ರಮಾಣ ಹೆಚ್ಚಿಸುತ್ತಿದ್ದರೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ' ಎಂದು ಟೀಕಿಸಿದರು.

'ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಮೀಸಲಾತಿ ವಿಚಾರದಲ್ಲಿ ಹಿಂದೂ ಸಾದರ ಸಮುದಾಯಕ್ಕೆ ಅನ್ಯಾಯ ಮಾಡಿದರು. ಲಿಂಗಾಯತ ಸಾದರಿಗೆ 2-ಎ ಜಾತಿ ಪ್ರಮಾಣ ಪತ್ರ ನೀಡಿ ಅನ್ಯಾಯವೆಸಗಿದರು' ಎಂದು 'ಮುಖ್ಯಮಂತ್ರಿ' ಚಂದ್ರು ಆರೋಪಿಸಿದರು. 'ಈಗ ನಮ್ಮ ಮೀಸಲಾತಿ ಕಿತ್ತುಕೊಂಡು ಬೇರೆಯವರಿಗೆ ಕೊಟ್ಟರೆ ರಾಜ್ಯದಾದ್ಯಂತ ಹೋರಾಟ ಮಾಡಲಾಗುವುದು' ಎಂದು ಎಚ್ಚರಿಸಿದರು.

'ಪೈಲ್ವಾನರಿಗೇಕೆ ಊರುಗೋಲು'

'ಅಂಗವಿಕಲರಿಗೆ, ಕಾಲು ಊನ ಇದ್ದವರಿಗೆ ಊರುಗೋಲು ಕೊಡುವುದು ಬಿಟ್ಟು ಪೈಲ್ವಾನರಿಗೆ ಕೊಡಲು ಹೊರಟಿದ್ದಾರೆ' ಎಂದು ಹೇಳಿದ ಶಾಸಕ ಕೆ.ಆರ್.ರಮೇಶ್ ಕುಮಾರ್, ಪಂಚಮಸಾಲಿ ಸಮುದಾಯಕ್ಕೆ 2-ಎನಲ್ಲಿ ಮೀಸಲಾತಿ ಕಲ್ಪಿಸುವುದಕ್ಕೆ ಪರೋಕ್ಷವಾಗಿ ವಿರೋಧ ವ್ಯಕ್ತಪಡಿಸಿದರು.

'ಪೈಲ್ವಾನರಿಗೆ ನಡೆಯಲು ಊರುಗೋಲು ಕೊಟ್ಟರೆ ಅದನ್ನು ನಡೆಯಲು ಬಳಸದೆ ಬೇರೆಯವರನ್ನು ಹೊಡೆಯಲು ಬಳಸುತ್ತಾರೆ. ಅಂತಹವರಿಗೆ ಮೀಸಲಾತಿ ಕೊಡಬೇಕೆ' ಎಂದು ಪ್ರಶ್ನಿಸಿದರು.

ಕುರುಬ ಸಮಾಜಕ್ಕೆ ಎಸ್‌ಟಿ ಸ್ಥಾನಮಾನ ಆಗ್ರಹ: ನಾಳೆಯಿಂದ ಪ್ರತಿಭಟನೆ- ಸ್ವಾಮೀಜಿ

ಹುಬ್ಬಳ್ಳಿ: 'ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂದು ಆಗ್ರಹಿಸಿ ಹಿಂದುಳಿದ ವರ್ಗಗಳ ಒಕ್ಕೂಟ ಹಾಗೂ ಕರ್ನಾಟಕ ಪ್ರದೇಶ ಕುರುಬ ಸಂಘದಿಂದ ಡಿ.26 ಮತ್ತು 27ರಂದು ಬೆಳಗಾವಿಯ ಸುವರ್ಣಸೌಧದ ಎದುರು ಬೃಹತ್ ಪ್ರತಿಭಟನೆ ನಡೆಸಲಾಗುವುದು' ಎಂದು ತಿಂಥಣಿ ಬ್ರಿಡ್ಜ್‌ನಲ್ಲಿರುವ ಕಲಬುರಗಿ ವಿಭಾಗದ ಕನಕ ಗುರುಪೀಠದ ಸಿದ್ದರಾಮಾನಂದಪುರಿ ಸ್ವಾಮೀಜಿ ಹೇಳಿದರು.

ಶನಿವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕುರುಬ ಸಮುದಾಯವನ್ನು ಎಸ್.ಟಿಗೆ ಸೇರಿಸಲು ನಾಲ್ಕು ವರ್ಷಗಳಿಂದ ಕುಲಶಾಸ್ತ್ರೀಯ ಅಧ್ಯಯನ ಮಾಡಲಾಗುತ್ತಿದೆ. ಒಂದು ವರದಿ ಪಡೆಯಲು ನಾಲ್ಕು ವರ್ಷ ಬೇಕೆ' ಎಂದು ಪ್ರಶ್ನಿಸಿದ ಅವರು,'ಕುರುಬ ಸಮಾಜವನ್ನು ಎಸ್.ಟಿಗೆ ಸೇರಿಸುವವರೆಗೆ, ಪಂಚಮಸಾಲಿಗಳಿಗೆ 2(ಎ) ಮೀಸಲಾತಿ ನೀಡಲು ಬಿಡೆವು. ಪಂಚಮ ಸಾಲಿ ಮುಂದುವರಿದ ಸಮುದಾಯವಾಗಿದ್ದು, ಹಿಂದುಳಿದ ವರ್ಗಗಳ ಆಯೋಗದ ವರದಿ ಇಲ್ಲದೆ ಮೀಸಲಾತಿ ನೀಡಲು ಹೊರಟಿರುವುದು ಖಂಡನೀಯ' ಎಂದರು.

'ಪ್ರಬಲರಿಗೆ ಮೀಸಲಾತಿ: ಹಿಂದುಳಿದವರಿಗೆ ಅನ್ಯಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನಬಲದ ಆಧಾರದ ಮೇಲೆ ಪ್ರಬಲ ಜಾತಿಗಳನ್ನು ಪ್ರವರ್ಗ 1 ಮತ್ತು ಪ್ರವರ್ಗ 2 (ಎ) ಪಟ್ಟಿಗೆ ಸೇರಿ ಸಿದರೆ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ಹಿಂದುಳಿದ ಜಾತಿಗಳಿಗೆ ಅನ್ಯಾಯವಾಗುತ್ತದೆ' ಎಂದು ಕರ್ನಾಟಕ ರಾಜ್ಯ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಕಳವಳ ವ್ಯಕ್ತಪಡಿಸಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆಯ ಅಧ್ಯಕ್ಷ ಎಂ.ಸಿ. ವೇಣುಗೋಪಾಲ್, 'ಸಂವಿಧಾನದ ಅಡಿ ಮೀಸಲಾತಿ ನೀಡಲು ಶೈಕ್ಷಣಿಕ ಮತ್ತು ಸಾಮಾಜಿಕ ಹಿನ್ನೆಲೆಯನ್ನು ಮಾನದಂಡವಾಗಿ ಪರಿಗಣಿಸಲಾಗಿದೆ. ಸರ್ಕಾರ ಅವೈಜ್ಞಾನಿಕವಾಗಿ ಪ್ರಬಲ ಸಮುದಾಯಗಳನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಿದರೆ, ಹಿಂದುಳಿದ ಸಮುದಾಯಗಳ ಪಾಲು ಬಲಿಷ್ಠರ ಪಾಲಾಗುತ್ತದೆ.

ಪ್ರಸ್ತುತ ಪ್ರವರ್ಗ 2 (ಎ)ರಲ್ಲಿ 102 ಜಾತಿಗಳು ಇದ್ದು, ಶೇ 15ರಷ್ಟು ಮೀಸಲಾತಿ ನೀಡಲಾಗಿದೆ. 2 (ಎ) ಪ್ರವರ್ಗದಲ್ಲಿರುವ ಅನೇಕ ಸಮುದಾಯದ ಜನರು ಕುಶಲಕರ್ಮಿಗಳು ಮತ್ತು ಭೂಹೀನರು. ಇವರು ಕುಲಕಸಬುಗಳನ್ನು ನಂಬಿರುವವರು. ಇವರಿಗೆ ಇಲ್ಲಿಯವರೆಗೆ ಒಮ್ಮೆಯೂ ಮೀಸಲಾತಿ ಸೌಲಭ್ಯ ದೊರೆತಿಲ್ಲ. ಆದ್ದರಿಂದ ದುರ್ಬಲ ಮತ್ತು ಅಸಹಾಯಕ ಸಮುದಾಯಗಳನ್ನು ರಕ್ಷಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಬೇಕು' ಎಂದು ಹೇಳಿದರು.

'ಪ್ರಬಲರ ಒತ್ತಾಯಕ್ಕೆ ಮಣಿದು, ಮೀಸಲಾತಿ ನೀಡಿದರೆ ಪ್ರವರ್ಗ 1 ಮತ್ತು ಪ್ರವರ್ಗ 2 (ಎ) ಪಟ್ಟಿಯಲ್ಲಿರುವ ಎಲ್ಲ 197 ಜಾತಿಗಳು ರಾಜ್ಯದಾದ್ಯಂತ ಬೀದಿಗಿಳಿದು ಹೋರಾಟ ಮಾಡಲಿವೆ. ಅವಶ್ಯಕತೆ ಬಿದ್ದರೆ ಕಾನೂನು ಹೋರಾಟವನ್ನೂ ನಡೆಸಲಾಗುವುದು' ಎಂದು ಎಚ್ಚರಿಕೆ ನೀಡಿದರು.

ಮೂಡುಬಿದಿರೆ: ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೂರಿಯಲ್ಲಿ ಮೇಳೈಸಿದ ಜನಪದ ಸೊಬಗು

ಹಾಡು–ಕುಣಿತ: ಭಾರತದ ಜನಪದ ಮಿಡಿತ

ಪ್ರಜಾವಾಣಿ ವಾರ್ತೆ



ಮೂಡುಬಿದಿರೆಯಲ್ಲಿ ನಡೆಯುತ್ತಿರುವ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯಲ್ಲಿ ಹಿಮಾಚಲ ಪ್ರದೇಶ ತಂಡದ ವಿದ್ಯಾರ್ಥಿಗಳು ಲುಡೀ ನೃತ್ಯ ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ

ಮೂಡುಬಿದಿರೆ (ದಕ್ಷಿಣ ಕನ್ನಡ): ಮಹಾರಾಷ್ಟ್ರದ ಕೋಲೀ ನೃತ್ಯ, ಹರಿಯಾಣದ 'ಹರಿಯಾಣವಿ' ನೃತ್ಯ, ಗೋವಾದ ಮುಸೋಲ್ ಕುಣಿತ, ಹಿಮಾಚಲ ಪ್ರದೇಶದ ಲುಡೀ ನೃತ್ಯ, ಕರ್ನಾಟಕದ ಬೇಡರ ನೃತ್ಯ... ದೇಶದ ಬೇರೆ ಬೇರೆ ರಾಜ್ಯಗಳ ಜನಪದ ಕುಣಿತಗಳನ್ನು ಒಂದೇ ವೇದಿಕೆಯಲ್ಲಿ ಕಣ್ತುಂಬಿಕೊಳ್ಳುವ ಅವಕಾಶ ವಿದ್ಯಾರ್ಥಿಗಳ ಪಾಲಿಗೆ ಶನಿವಾರ ಇಲ್ಲಿ ಒದಗಿ ಬಂತು.

ಇಲ್ಲಿನ ಆಳ್ವಾಸ್ ವಿದ್ಯಾಸಂಸ್ಥೆಗಳ ಪ್ರಾಂಗಣದಲ್ಲಿ ನಡೆಯುತ್ತಿರುವ 'ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ 2022'ರಲ್ಲಿ ನಡೆದ ಜಾನಪದ ನೃತ್ಯಗಳ ಪ್ರದರ್ಶನ ದೇಶದ ವಿವಿಧ ರಾಜ್ಯಗಳ ಜನಪದ ಸೊಬಗನ್ನು ಪ್ರೇಕ್ಷಕರಿಗೆ ಉಣಬಡಿಸಿತು.

ಹಿಮಾಚಲ ಪ್ರದೇಶದ ವಿದ್ಯಾರ್ಥಿಗಳು ಪ್ರದರ್ಶಿಸಿದ ಲುಡೀ ನೃತ್ಯವಂತೂ ಜನಪದ ಲಾಲಿತ್ಯಕ್ಕೆ ಕನ್ನಡಿ ಹಿಡಿಯಿತು. ತೀರಾ ನಿಧಾನವೂ ಅಲ್ಲ, ಅತ್ತ ವೇಗವೂ ಅಲ್ಲದ ಈ ಲಯಬದ್ಧ ಕುಣಿತ ಮನಸೂರೆಗೊಂಡಿತು. ಉದ್ದನೆಯ ಲಂಗ ಧರಿಸಿದ್ದ ವಿದ್ಯಾರ್ಥಿನಿಯರು ಕೈಯಲ್ಲಿ ಬಿಳಿಯ ವಸ್ತ್ರ ಹಿಡಿದು, ಅರ್ಧವೃತ್ತಾಕಾರದಲ್ಲಿ ಬಿಡುಬೀಸಾಗಿ ಹೆಜ್ಜೆ ಹಾಕುತ್ತಾ ವಯ್ಯಾರದಿಂದ ಕುಣಿಯುವುದನ್ನು ಕಂಡು ಪ್ರೇಕ್ಷಕರು ಮೂಕವಿಸ್ಮಿತರಾದರು.

ಹರಿಯಾಣ ರಾಜ್ಯದ ವಿದ್ಯಾರ್ಥಿನಿಯರು ಹಳದಿ ಹಾಗೂ ಕೆಂಬಣ್ಣದ ಸಾಂಪ್ರದಾಯಿಕ ಉಡುಗೆ ಧರಿಸಿ ಲೀಲಾಜಾಲವಾಗಿ ಪ್ರದರ್ಶಿಸಿದ ಹರಿಯಾಣವಿ ಜನಪದ ನೃತ್ಯದ ಲಯ ಮಾಧುರ್ಯ ಮನಸೂರೆಗೊಂಡಿತು.

ಮಹಾರಾಷ್ಟ್ರದ ತಂಡವು 'ಕೋಲೀ' ಕುಣಿತವನ್ನು ಪ್ರದರ್ಶಿಸಿತು. ಮೀನುಗಾರ ಸಮುದಾಯದವರು ಪ್ರದರ್ಶಿಸುವ ಈ ನೃತ್ಯ ಸಮುದ್ರದ ಅಲೆಗಳ ನಡುವೆ ದೋಣಿಯಲ್ಲಿ ಹುಟ್ಟು ಹಾಕುತ್ತಾ ಸಾಗಿ ಬಲೆ ಬೀಸಿ ಮೀನು ಹಿಡಿಯುವ ಮೀನುಗಾರರ ಸಂಭ್ರಮವನ್ನು ಕಟ್ಟಿಕೊಟ್ಟಿತು.

ಗೋವಾ ವಿದ್ಯಾರ್ಥಿಗಳ ತಂಡವು 'ಮುಸೋಲ್ ಖೇಲ್' ಕುಣಿತವನ್ನು ಪ್ರದರ್ಶಿಸಿತು. ವಿಜಯೋತ್ಸವದ ನೆನಪಿನಾರ್ಥ ಕೈಯಲ್ಲಿ ಒನಕೆಹಿಡಿದು ಪ್ರದರ್ಶಿಸುವ ಈ ಕುಣಿತಕ್ಕೆ ನೂರಾರು ವರ್ಷದ ಇತಿಹಾಸವಿದೆ. ಹಿಂದೂರಾಜರ ಗೆಲುವನ್ನು ಸಂಭ್ರಮಿಸುವ ಈ ಕುಣಿತದ ಪರಂಪರೆ ಯನ್ನು ಈಗಲೂ ಕ್ರೈಸ್ತ ಸಮುದಾಯದವರು ಕಾಪಾಡಿಕೊಂಡು ಬಂದಿದ್ದಾರೆ.

60 ತಂಡಗಳು ನೃತ್ಯ ಪ್ರದರ್ಶನಕ್ಕೆ ಹೆಸರು ನೋಂದಾಯಿಸಿದ್ದವು. ಕೆಲವು ತಂಡಗಳು ಜನಪದದ ಬದಲು ಸಿನಿಮಾ ಹಾಡುಗಳಿಗೆ ನೃತ್ಯ ಪ್ರದರ್ಶಿಸಿದವು. ಅಂತಹವುಗಳನ್ನು ಸ್ಪರ್ಧೆಗೆ ಪರಿಗಣಿಸುವುದಿಲ್ಲ ಎಂದು ಆಯೋಜಕರು ಪ್ರಕಟಿಸಿದರು. ಉತ್ತರ ಪ್ರದೇಶ, ಮಧ್ಯ ಪ್ರದೇಶ, ಕೇರಳ, ರಾಜಸ್ಥಾನದ ತಂಡಗಳೂ ನೃತ್ಯ ಪ್ರದರ್ಶಿಸಿದವು. ಕರ್ನಾಟಕದ ಬೇರೆ ಬೇರೆ ಜಿಲ್ಲೆಯ ತಂಡಗಳು ಜನಪದ ನೃತ್ಯವನ್ನು ಪ್ರದರ್ಶಿಸಿದವು. ಬೇಡರ ನೃತ್ಯ ಗಮನ ಸೆಳೆಯಿತು.

ಪೂರ್ವ ತಯಾರಿಯ ಸಡಗರ

ವೇದಿಕೆಯಲ್ಲಿ ನೃತ್ಯ ಪ್ರದರ್ಶಿಸುವ ಸಡಗರ ಒಂದೆಡೆಯಾದರೆ, ಅದಕ್ಕೆ ಸಜ್ಜುಗೊಳ್ಳುವ ವಿದ್ಯಾರ್ಥಿಗಳ ಸಂಭ್ರಮ ಹೊಸತೊಂದು ಲೋಕವನ್ನೇ ಸೃಷ್ಟಿಸಿತ್ತು. ನೃತ್ಯಕ್ಕೆ ಪೂರಕವಾಗಿ ಉಡುಗೆ-ತೊಡುಗೆ ಧರಿಸುವುದು, ಅದಕ್ಕೆ ಬೇಕಾದ ಪರಿಕರಗಳನ್ನು ಅಣಿಗೊಳಿಸುವುದರಲ್ಲಿ ವಿದ್ಯಾರ್ಥಿಗಳ ಜೊತೆಗೆ ಶಿಕ್ಷಕರೂ ಮಗ್ನರಾಗಿದ್ದರು.

ಪ್ರತಿ ತಂಡಕ್ಕೂ 10 ನಿಮಿಷ ಕಾಲಾವಕಾಶವನ್ನು ಮಾತ್ರ ನೀಡಲಾಗಿತ್ತು. ಆದರೆ, ಅಷ್ಟರೊಳಗೆ ನೃತ್ಯವನ್ನು ಪೂರ್ತಿಯಾಗಿ ಪ್ರದರ್ಶಿಸಲು ಸಾಧ್ಯವಾಗದೇ ಕೆಲವು ತಂಡಗಳ ಸದಸ್ಯರು ನಿರಾಸೆ ಅನುಭವಿಸಿದರು. ವಾರಗಟ್ಟಲೆ ತಾಲೀಮು ನಡೆಸಿಯೂ ಪೂರ್ತಿ ನೃತ್ಯ ಪ್ರದರ್ಶಿಸಲು ಅವಕಾಶ ಸಿಗಲಿಲ್ಲ ಎಂದು ಕೆಲ ವಿದ್ಯಾರ್ಥಿಗಳು ಬಿಕ್ಕಿ ಬಿಕ್ಕಿ ಅಳುತ್ತಿದ್ದುದೂ ಕಂಡುಬಂತು.

ಒಕ್ಕಲಿಗ ಸಮುದಾಯಕ್ಕೆ ಮೀಸಲಾತಿ ಹೆಚ್ಚಳ: ಮತ್ತೆ ಹೋರಾಟ- ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಕ್ಕಲಿಗ ಸಮುದಾಯಕ್ಕೆ ಮೀಸಲಾತಿ ಪ್ರಮಾಣ ಹೆಚ್ಚಿಸುವ ಕುರಿತು ರಾಜ್ಯ ಸರ್ಕಾರವು ನಿರ್ಲಕ್ಷ್ಯ ಧೋರಣೆ ತಳೆದಿದ್ದು, ಮುಂದಿನ ಹೋರಾಟ ರೂಪಿಸುವ ಕುರಿತು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅವರೊಂದಿಗೆ ರಾಜ್ಯ ಒಕ್ಕಲಿಗರ ಸಂಘದ ನಿಯೋಗವು ಚರ್ಚೆ ನಡೆಸಿತು.

ಸಂಘದ ಅಧ್ಯಕ್ಷ ಸಿ.ಎನ್.ಬಾಲಕೃಷ್ಣ ಅವರ ನೇತೃತ್ವದ ನಿಯೋಗವು ಇಲ್ಲಿನ ವಿಜಯನಗರ ಶಾಖಾಮಠದಲ್ಲಿ ಸ್ವಾಮೀಜಿ ಅವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದೆ.

ಒಕ್ಕಲಿಗರ ಸಮುದಾಯದ ಮೀಸಲಾತಿ ಪ್ರಮಾಣ ಹೆಚ್ಚಳಕ್ಕಾಗಿ ಯಾವ ಸ್ವರೂಪದ ಹೋರಾಟ ನಡೆಸಬೇಕು. ಎಂದಿನಿಂದ ಹೋರಾಟ ರೂಪಿಸಬೇಕು ಎಂದು ಚರ್ಚೆ ನಡೆಸಲಾಯಿತು ಎಂದು ಬಾಲಕೃಷ್ಣ ತಿಳಿಸಿದರು.

ಒಕ್ಕಲಿಗರ ಸಂಘದ ಆವರಣದಲ್ಲಿ ಈಚೆಗೆ ನಡೆದಿದ್ದ ಮೀಸಲಾತಿ ಹೋರಾಟದ ಪೂರ್ವಭಾವಿ ಸಭೆಯಲ್ಲಿ ಒಕ್ಕಲಿಗರ ಸಮುದಾಯದ ಮೀಸಲಾತಿ ಪ್ರಮಾಣವನ್ನು (3ಎ) ಶೇ 4ರಿಂದ ಶೇ 12ಕ್ಕೆ ಹೆಚ್ಚಿಸುವಂತೆ ಆಗ್ರಹಿಸಲಾಗಿತ್ತು. ರಾಜ್ಯ ಸರ್ಕಾರಕ್ಕೆ ಗಡುವು ನೀಡಲಾಗಿತ್ತು. ಆದರೆ, ಇದುವರೆಗೂ ಮೀಸಲಾತಿ ಹೆಚ್ಚಿಸುವ ಕುರಿತು ಸರ್ಕಾರ ನಿರ್ಧಾರ ಪ್ರಕಟಿಸಿಲ್ಲ. ಆದ್ದರಿಂದ, ಮುಂದಿನ ಹೋರಾಟ ನಡೆಸುವ ಕುರಿತು ಚರ್ಚೆ ನಡೆಸಲಾಗಿದೆ ಎಂದು ಹೇಳಿದರು.



ಬೆಂಗಳೂರಿನ ವಿಜಯನಗರದ ಆದಿಚುಂಚನಗಿರಿ ಮಠದಲ್ಲಿ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಒಕ್ಕಲಿಗರ ಸಂಘದ ನಿಯೋಗವು ಭೇಟಿ ಮಾಡಿ ಚರ್ಚಿಸಿತು

'ಒಕ್ಕಲಿಗರ ಮೀಸಲಾತಿ ಹೋರಾಟ: ರಾಜಕೀಯ ಹಿತಾಸಕ್ತಿ ಇಲ್ಲ'

ರಾಮನಗರ: 'ಒಕ್ಕಲಿಗರಿಗೆ ಮೀಸಲಾತಿ ಬೇಕು ಎನ್ನುವುದು ಸಮುದಾಯದ ಜನರ ಬೇಡಿಕೆಯಾಗಿದ್ದು ಇದರ ಹಿಂದೆ ಯಾವುದೇ ರಾಜಕೀಯ ಹಿತಾಸಕ್ತಿ ಇಲ್ಲ' ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಒಕ್ಕಲಿಗ ಸಮುದಾಯಕ್ಕೆ ಮೀಸಲಾತಿ ನೀಡುವಂತೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿರುವ ಕುರಿತು ರಾಮನಗರದಲ್ಲಿ ಶನಿವಾರ ಪತ್ರಕರ್ತರಿಗೆ ಅವರು ಪ್ರತಿಕ್ರಿಯೆ ನೀಡಿದರು. 'ಒಕ್ಕಲಿಗ ಸಮುದಾಯಕ್ಕೆ ಹಲವು ಸಮಸ್ಯೆಗಳಿವೆ. ಗ್ರಾಮೀಣ ಭಾಗದಲ್ಲಿ ಸಾಕಷ್ಟು ಮಂದಿ ಜಮೀನು ಕಳೆದುಕೊಂಡಿದ್ದಾರೆ. ಈ ಎಲ್ಲದನ್ನೂ ಗಮನಿಸಿ ಸರ್ಕಾರ ನಿರ್ಧಾರ ಕೈಗೊಳ್ಳಬೇಕಿದೆ. ನಿರ್ಮಲಾನಂದನಾಥ ಶ್ರೀಗಳು ಸಹ ಕಳೆದ ಒಂದೂವರೆ ವರ್ಷದಿಂದ ಈ ಬಗ್ಗೆ ಹೋರಾಟ ಮಾಡುತ್ತಿದ್ದಾರೆ' ಎಂದರು.

ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಬಂಧನ

ಪ್ರಜಾವಾಣಿ ವಾರ್ತೆ



ಡಿ.ಕೆಂಪಣ್ಣ

ಬೆಂಗಳೂರು: 'ಸಚಿವ ಮುನಿರತ್ನ ಶೇ 40ರಷ್ಟು ಕಮಿಷನ್ ಪಡೆದಿದ್ದಾರೆ' ಎಂಬುದಾಗಿ ಆರೋಪಿಸಿದ್ದ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಸೇರಿ ನಾಲ್ವರನ್ನು ವೈಯಾಲಿಕಾವಲ್‌ನ ಪೊಲೀಸರು ಶನಿವಾರ ಬಂಧಿಸಿದ್ದು, ನ್ಯಾಯಾಲಯಕ್ಕೆ ಹಾಜರುಪಡಿಸಲು ಪ್ರಕ್ರಿಯೆ ಆರಂಭಿಸಿದ್ದಾರೆ.

'ಕೆಂಪಣ್ಣ ಹಾಗೂ ಇತರೆ 18 ಮಂದಿ ನನ್ನ ವಿರುದ್ಧ ಸುಳ್ಳು ಆರೋಪ ಮಾಡಿ ಮಾನಹಾನಿ ಮಾಡಿದ್ದಾರೆ' ಎಂಬುದಾಗಿ ತೋಟಗಾರಿಕೆ ಸಚಿವ ಮುನಿರತ್ನ ಅವರು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಾಲಯ, ಕೆಂಪಣ್ಣ ಸೇರಿ 19 ಮಂದಿಗೆ ವಿಚಾರಣೆಗೆ ಬರುವಂತೆ ನೋಟಿಸ್ ಜಾರಿ ಮಾಡಿತ್ತು.

ನೋಟಿಸ್ ನೀಡಿದ ಬಳಿಕವೂ 19 ಮಂದಿ ವಿಚಾರಣೆಗೆ ಗೈರಾಗಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಾಲಯ, ಎಲ್ಲರ ವಿರುದ್ಧ ಜಾಮೀನುರಹಿತ ವಾರಂಟ್ ಹೊರಡಿಸಿತ್ತು. ಎಲ್ಲರನ್ನೂ ಬಂಧಿಸಿ ನ್ಯಾಯಾಲಯದ ಎದುರು ಹಾಜರುಪಡಿಸುವಂತೆ ಪೊಲೀಸರಿಗೆ ಸೂಚಿಸಿತ್ತು.

ಹಲವೆಡೆ ಶೋಧ: 'ನ್ಯಾಯಾಲಯದ ಆದೇಶ ಜಾರಿಗಾಗಿ ಪೊಲೀಸರ ವಿಶೇಷ ತಂಡ ರಚಿಸಲಾಗಿತ್ತು. ಕೆಂಪಣ್ಣ ಹಾಗೂ ಇತರರ ಪತ್ತೆಗಾಗಿ ನಗರದ ಹಲವೆಡೆ ಶೋಧ ನಡೆಸಲಾಯಿತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಕೆಂಪಣ್ಣ, ಉಪಾಧ್ಯಕ್ಷ ವಿ. ಕೃಷ್ಣರೆಡ್ಡಿ, ಖಜಾಂಚಿ ಎಚ್. ಎಸ್. ನಟರಾಜ್ ಹಾಗೂ ಗುರುಸಿದ್ದಪ್ಪ ಅವರನ್ನು ಬಂಧಿಸಲಾಗಿದೆ' ಎಂದು ತಿಳಿಸಿದರು.

ಲಂಚ: ಲೋಕೋಪಯೋಗಿ ಇಲಾಖೆಯ ಎಫ್‌ಡಿಎಗೆ ಐದು ವರ್ಷ ಜೈಲು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಎರಡನೇ ದರ್ಜೆ ಗುತ್ತಿಗೆ ಪರವಾನಗಿ ಕೋರಿದ್ದ ಅರ್ಜಿ ನೋಂದಣಿ ಮಾಡಿಸಲು ಗುತ್ತಿಗೆದಾರರಿಂದ ₹9,000 ಲಂಚ ಪಡೆದಿದ್ದ ಪ್ರಕರಣದಲ್ಲಿ ಲೋಕೋಪಯೋಗಿ ಇಲಾಖೆಯ ದಕ್ಷಿಣ ವಲಯದ ಮುಖ್ಯ ಎಂಜಿನಿಯರ್ ಕಚೇರಿಯ ಪ್ರಥಮ ದರ್ಜೆ ಸಹಾಯಕ ಶೇಖರ್ ಕೆ. ಎಂಬುವವರಿಗೆ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯ ಐದು ವರ್ಷಗಳ ಕಠಿಣ ಜೈಲು ಶಿಕ್ಷೆ ಹಾಗೂ ₹ 25,000 ದಂಡ ವಿಧಿಸಿದೆ.

2018ರಲ್ಲಿ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಪ್ರಕರಣ ದಾಖಲಿಸಿಕೊಂಡು, ಶೇಖರ್ ಹಾಗೂ ಅವರ ಕಚೇರಿಯಲ್ಲಿ ಹೊರಗುತ್ತಿಗೆ ನೌಕರನಾಗಿದ್ದ ಚೇತನ್ ಎಂ.ಎಂ. ಎಂಬುವವರನ್ನು ಬಂಧಿಸಿತ್ತು. ಚೇತನ್ 2021ರಲ್ಲಿ ಮೃತಪಟ್ಟಿದ್ದು, ಅವರ ವಿರುದ್ಧದ ವಿಚಾರಣೆಯನ್ನು ಕೈಬಿಡಲಾಗಿತ್ತು. ಲಂಚ ಪ್ರಕರಣದಲ್ಲಿ, 'ಶೇಖರ್ ಅಪರಾಧಿ' ಎಂದು ಸಾರಿರುವ ನ್ಯಾಯಾಲಯ, ಜೈಲು ಶಿಕ್ಷೆ ಮತ್ತು ದಂಡ ವಿಧಿಸಿ ಡಿಸೆಂಬರ್ 20ರಂದು ಆದೇಶ ಹೊರಡಿಸಿದೆ.

ಲೋಕೋಪಯೋಗಿ ಇಲಾಖೆಯಲ್ಲಿ ಮೂರನೇ ದರ್ಜೆ ಗುತ್ತಿಗೆ ಪರವಾನಗಿ ಹೊಂದಿದ್ದ ಬಸನಗೌಡ ಪೊಲೀಸ್ ಪಾಟೀಲ ಎಂಬುವವರು, ಎರಡನೇ ದರ್ಜೆ ಗುತ್ತಿಗೆ ಪರವಾನಗಿ ಪಡೆಯಲು 2017ರ ಸೆಪ್ಟೆಂಬರ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಆ ಅರ್ಜಿಯನ್ನು ನೋಂದಣಿ ಮಾಡಿಸಲು ಶುಲ್ಕವನ್ನೂ ಪಾವತಿಸಿದ್ದರು. ಆದರೆ, ಅರ್ಜಿ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸಲು ₹15,000 ಲಂಚ ನೀಡುವಂತೆ ಶೇಖರ್ ತಮ್ಮ ಕಚೇರಿಯಲ್ಲಿ ಗುತ್ತಿಗೆ ನೌಕರನಾಗಿದ್ದ ಚೇತನ್ ಮೂಲಕ ಬೇಡಿಕೆ ಇಟ್ಟಿದ್ದರು.

ಆರಂಭದಲ್ಲಿ ₹4,000 ಲಂಚ ನೀಡಿದ್ದ ಅರ್ಜಿದಾರರು, ಪುನಃ ಲಂಚಕ್ಕೆ ಬೇಡಿಕೆ ಹೆಚ್ಚಿದಾಗ ಎಸಿಬಿ ಪೊಲೀಸರಿಗೆ ದೂರು ನೀಡಿದ್ದರು. 2018ರ ಫೆಬ್ರುವರಿ 9ರಂದು ಬಸನಗೌಡ ಪೊಲೀಸ್ ಪಾಟೀಲ ಅವರಿಂದ ₹5,000 ಲಂಚ ಪಡೆಯುತ್ತಿದ್ದಾಗ ಶೇಖರ್ ಮತ್ತು ಚೇತನ್ ಇಬ್ಬರನ್ನೂ ಎಸಿಬಿ ಅಧಿಕಾರಿಗಳು ಬಂಧಿಸಿದ್ದರು. ಬಳಿಕ ಪ್ರಕರಣದ ತನಿಖೆ ಪೂರ್ಣಗೊಳಿಸಿದ್ದ ಅಧಿಕಾರಿಗಳು, ವಿಶೇಷ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು.

ಎಂಟು ಸಾಕ್ಷಿಗಳ ವಿಚಾರಣೆ ನಡೆಸಿದ ನ್ಯಾಯಾಲಯ, 66 ದಾಖಲೆಗಳನ್ನೂ ಪರಿಶೀಲನೆ ನಡೆಸಿತ್ತು. ಪ್ರಕರಣದ ವಿಚಾರಣೆಯನ್ನು ಪೂರ್ಣಗೊಳಿಸಿ ಡಿ.20ರಂದು ಅಂತಿಮ ಆದೇಶ ಹೊರಡಿಸಿದ ನ್ಯಾಯಾಧೀಶ ಲಕ್ಷ್ಮೀನಾರಾಯಣ ಭಟ್ ಕೆ. ಅವರು, ಪ್ರಕರಣದಲ್ಲಿ ಶೇಖರ್ ವಿರುದ್ಧದ ದೋಷಾರೋಪ ದೃಢಪಟ್ಟಿದೆ ಎಂದು ಘೋಷಿಸಿದರು.

ಅಪರಾಧಿಗೆ ಐದು ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು ₹25,000 ದಂಡ ವಿಧಿಸಿ ಆದೇಶ ಹೊರಡಿಸಿದರು. ದಂಡದ ಮೊತ್ತವನ್ನು ಪಾವತಿಸಲು ಅಪರಾಧಿಯು ವಿಫಲವಾದರೆ, ಹೆಚ್ಚುವರಿಯಾಗಿ ಎರಡು ತಿಂಗಳ ಜೈಲು ಶಿಕ್ಷೆ ವಿಧಿಸುವಂತೆ ನಿರ್ದೇಶನ ನೀಡಿದರು.

ಶಾಹಿ ಈದ್ಗಾ ಮಸೀದಿ ಸಮೀಕ್ಷೆ ಮಥುರಾ ಕೋರ್ಟ್ ಆದೇಶ

ಒಂದನೇ ಪುಟದಿಂದ...

ಅರ್ಜಿದಾರರು ತಾವು ವಾಸಿಸುತ್ತಿರುವ 13.37 ಎಕರೆ ಪ್ರದೇಶದ ಮಾಲೀಕತ್ವವನ್ನು ಪ್ರತಿಪಾದಿಸಿದ್ದಾರೆ. ಶಾಹಿ ಈದ್ಗಾ ಮಸೀದಿ ಅಸ್ತಿತ್ವದಲ್ಲಿರಲು ಹಾಗೂ ಅದರ ಭೂಮಿಯನ್ನು ಬಳಸಿಕೊಳ್ಳಲು ಅವಕಾಶ ನೀಡಿರುವ ಶಾಹಿ ಈದ್ಗಾ ಮಸೀದಿ ಸಮಿತಿ ಮತ್ತು ಶ್ರೀಕೃಷ್ಣ ಜನ್ಮಭೂಮಿ ಟ್ರಸ್ಟ್‌ನ 1968ರ ಒಪ್ಪಂದವನ್ನೂ ಅರ್ಜಿದಾರರು ಪ್ರಶ್ನಿಸಿದ್ದಾರೆ.

'ವಾರಾಣಸಿಯ ಕಾಶಿ ವಿಶ್ವನಾಥ ದೇಗುಲದ ಪಕ್ಕದಲ್ಲಿರುವ ಜ್ಞಾನವಾಪಿ ಮಸೀದಿಯ ವಿಡಿಯೊಗ್ರಫಿ ಸಮೀಕ್ಷೆ ಮಾಡಲಾಗಿದ್ದು, ಅದೇ ಮಾದರಿಯಲ್ಲಿಯೇ ಶಾಹಿ ಈದ್ಗಾ ಮಸೀದಿ ಸಂಕೀರ್ಣದ ವಿಡಿಯೊಗ್ರಫಿ ಸಮೀಕ್ಷೆ ನಡೆಸಬೇಕು' ಎಂದೂ ಅರ್ಜಿದಾರರು ಕೋರಿದ್ದಾರೆ.

ಶ್ರೀಕೃಷ್ಣ ಜನ್ಮಭೂಮಿ- ಶಾಹಿ ಈದ್ಗಾ ಮಸೀದಿ ಸಂಕೀರ್ಣದ ಮಾಲೀಕತ್ವದ ಹಕ್ಕುಗಳಿಗೆ ಸಂಬಂಧಿಸಿದಂತೆ ಮಥುರಾ ಜಿಲ್ಲಾ ನ್ಯಾಯಾಲಯಗಳಲ್ಲಿ ಒಟ್ಟು ಒಂಬತ್ತು ಅರ್ಜಿಗಳು ಬಾಕಿ ಉಳಿದಿವೆ. ಎಲ್ಲಾ ಅರ್ಜಿಗಳನ್ನು ಹಿಂದೂಗಳ ಪರ ಕಕ್ಷಿದಾರರು ಸಲ್ಲಿಸಿದ್ದಾರೆ. '2024ರಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆ ವೇಳೆ ಶ್ರೀಕೃಷ್ಣ ಜನ್ಮಭೂಮಿ ವಿಚಾರ ಮುಂದಿಟ್ಟುಕೊಂಡು ಹೋರಾಟ ನಡೆಸುತ್ತೇವೆ' ಎಂದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಹೇಳಿದೆ.

ಮುರುಘಾ ಮಠಕ್ಕೆ ಆಡಳಿತಾಧಿಕಾರಿ ನೇಮಕ ವಿರೋಧಿಸಿ ನಾಳೆ ಧರಣಿ

ಚಿತ್ರದುರ್ಗ: ಮುರುಘಾ ಮಠಕ್ಕೆ ಸರ್ಕಾರ ನೇಮಕ ಮಾಡಿರುವ ಆಡಳಿತಾಧಿಕಾರಿಯನ್ನು ಕೂಡಲೇ ವಾಪಸ್ ಕರೆಸಿಕೊಳ್ಳುವಂತೆ ಆಗ್ರಹಿಸಿ ಡಿ. 26ರಂದು ಬಸವ ಕೇಂದ್ರ ಮುರುಘ ರಾಜೇಂದ್ರ ಬೃಹನ್ಮಠದಿಂದ ನಗರದಲ್ಲಿ ಧರಣಿ ಹಮ್ಮಿಕೊಳ್ಳಲಾಗಿದೆ.

ಡಿಸಿ ಕಚೇರಿ ಆವರಣದಲ್ಲಿ, ಮಠದ ಉಸ್ತುವಾರಿಯಾಗಿದ್ದ ಬಸವಪ್ರಭು ಸ್ವಾಮೀಜಿ ನೇತೃತ್ವದಲ್ಲಿ ಧರಣಿ ನಡೆಯಲಿದೆ ಎಂದು ಮಠ ತಿಳಿಸಿದೆ. ಡಿ. 20ರಂದು ಮಠದಲ್ಲಿ ನಡೆದ ಸಭೆಯಲ್ಲಿ ಪಾಲ್ಗೊಂಡಿದ್ದ ವಿವಿಧ ಸಮುದಾಯಗಳ 30ಕ್ಕೂ ಹೆಚ್ಚು ಮಠಾಧೀಶರು ಬೆಳಗಾವಿ ಅಥವಾ ಚಿತ್ರದುರ್ಗದಲ್ಲಿ ಧರಣಿ ನಡೆಸುವ ಕುರಿತು ನಿರ್ಣಯ ಕೈಗೊಂಡಿದ್ದರು. ಅಂತಿಮವಾಗಿ ಚಿತ್ರದುರ್ಗದಲ್ಲಿ ಧರಣಿ ನಡೆಸಲು ನಿರ್ಧರಿಸಿದ್ದಾರೆ.

ಜನವರಿಯಲ್ಲೇ ಶಿಕ್ಷಕರ ವರ್ಗಾವಣೆ: ಶೀಘ್ರ ವೇಳಾಪಟ್ಟಿ

ಒಂದನೇ ಪುಟದಿಂದ...

2,771 ಆಕ್ಷೇಪಣೆಗಳು ಸಲ್ಲಿಕೆಯಾಗಿದ್ದವು. 10ರಿಂದ 20 ವರ್ಷಗಳು ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸಿ ಪದೋನ್ನತಿ ಪಡೆದ ಪ್ರೌಢಶಾಲಾ ಶಿಕ್ಷಕರಲ್ಲಿ ಬಹುತೇಕರು ಸೇವಾ ಅಂಕಗಳನ್ನು ನೀಡುವಂತೆ ಕೋರಿದ್ದರು. ಆಕ್ಷೇಪಣೆಗಳಿಗೆ ಉತ್ತರ ನೀಡಿದ ನಂತರ ಸಚಿವಾಲಯ ಅಂತಿಮ ಕರಡು ಪ್ರಕಟಿಸಲು ಸಿದ್ಧತೆ ನಡೆಸಿದೆ.

'ಅಂತಿಮ ಕರಡು ಅಧಿಸೂಚನೆ ಸಿದ್ಧವಾಗಿದೆ. ಅಧಿವೇಶನ ಮುಕ್ತಾಯವಾದ ತಕ್ಷಣ ಗೆಜೆಟ್‌ನಲ್ಲಿ ಪ್ರಕಟಿಸಲಾಗುವುದು. ಜನವರಿ ಅಂತ್ಯದ ಒಳಗೆ ವರ್ಗಾವಣೆ ಪ್ರಕ್ರಿಯೆಗಳನ್ನು ಆರಂಭಿ ಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಸಚಿವ ಬಿ.ಸಿ.ನಾಗೇಶ್ ಪ್ರತಿಕ್ರಿಯಿಸಿದರು.

ಹಿಂದೆ ಪರಸ್ಪರ ವರ್ಗಾವಣೆಗೆ ಒಂದು ಬಾರಿ ಮಾತ್ರ ಅವಕಾಶ ಇತ್ತು. ಇನ್ನು ಮುಂದೆ ಆ ನಿರ್ಬಂಧ ಇರುವುದಿಲ್ಲ. ಕೆಲಸಕ್ಕೆ ಸೇರಿದ ಮೊದಲ ಐದು ವರ್ಷ ಹಾಗೂ ನಿವೃತ್ತಿಗೆ ಮೊದಲಿನ ಐದು ವರ್ಷಗಳು ವರ್ಗಾವಣೆಗೆ ಅವಕಾಶ ಇರುವುದಿಲ್ಲ. ಆದರೆ, ಒಮ್ಮೆ ವರ್ಗಾವಣೆಯಾದ ಬಳಿಕ ಮತ್ತೆ ಮೂರು ವರ್ಷ ಅರ್ಜಿ ಸಲ್ಲಿಸುವಂತಿಲ್ಲ. ಕಲ್ಯಾಣ ಕರ್ನಾಟಕದ ಆರು ಜಿಲ್ಲೆಗಳು (371 ಜೆ ಅನ್ವಯ), ಮಲೆನಾಡು ವಲಯ ಹಾಗೂ ನಂಜುಂಡಪ್ಪ ವರದಿಯ ಅನ್ವಯ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶ ಎಂದು ಗುರುತಿಸಲಾಗಿರುವ ತಾಲ್ಲೂಕುಗಳಿಗೆ ಹೋಗಬಯಸುವವರಿಗೆ ವಿಶೇಷ ಆದ್ಯತೆ ಸಿಗಲಿದೆ.

ರಾಜ್ಯದಲ್ಲಿ 47,516 ಸರ್ಕಾರಿ ಶಾಲೆಗಳಿದ್ದು, 1.77 ಲಕ್ಷ ಶಿಕ್ಷಕರು ಇದ್ದಾರೆ. ಸಾರ್ವತ್ರಿಕ ವರ್ಗಾವಣೆ ವೇಳೆ ಒಟ್ಟು ವೃಂದ ಬಲದ ಶೇ 11ರಷ್ಟು ಮಿತಿಯ ಒಳಗೆ ಮಾತ್ರ ವರ್ಗಾವಣೆ ಮಾಡಲು ಅವಕಾಶ ಇರುತ್ತದೆ. ವಿಶೇಷ ಆದ್ಯತೆಯಡಿ ವರ್ಗಾವಣೆ ಬಯಸುವವರಿಗೆ ಈ ನಿಯಮ ಅನ್ವಯವಾಗದು. ಉಳಿದೆಲ್ಲ ನಿಯಮಗಳು ಮುಂದುವರಿಯಲಿವೆ. ಯಾವುದೇ ಒಂದು ಘಟಕ ಹಾಗೂ ವೃಂದದಲ್ಲಿ ಕನಿಷ್ಠ 10 ವರ್ಷ ಅಥವಾ ಎಲ್ಲ ವೃಂದಗಳೂ ಸೇರಿ 15 ವರ್ಷ ಕೆಲಸ ಮಾಡಿದ ಶಿಕ್ಷಕರನ್ನು ಶೇ 25ರಷ್ಟು ಮಿತಿಯ ಒಳಗೆ ಖಾಲಿ ಹುದ್ದೆಗಳಿರುವ ತಾಲ್ಲೂಕಿಗೆ ವರ್ಗಾವಣೆ ಮಾಡಲು ಅವಕಾಶ ಇರುತ್ತದೆ.

ಬೋಧಕರ ವರ್ಗ ನಾಳೆಯಿಂದ

ಬೆಂಗಳೂರು: ಕಾಲೇಜು ಶಿಕ್ಷಣ ಇಲಾಖೆ ಸರ್ಕಾರಿ ಪದವಿ ಕಾಲೇಜುಗಳ ಬೋಧಕರ ವರ್ಗಾವಣೆ ಪ್ರಕ್ರಿಯೆಯ ಪರಿಷ್ಕೃತ ವೇಳಾಪಟ್ಟಿ ಪ್ರಕಟಿಸಿದ್ದು, ಇದೇ 26ರಿಂದ ಕೌನ್ಸೆಲಿಂಗ್ ಆರಂಭವಾಗಲಿವೆ.

26 ಹಾಗೂ 27ರಂದು ವಿಶೇಷ ವರ್ಗಗಳಿಗೆ, 28 ಹಾಗೂ 29ರಂದು ಸಾಮಾನ್ಯ ವರ್ಗದವರೆಗೆ ಕೌನ್ಸೆಲಿಂಗ್ ಇರುತ್ತದೆ. ಈ ಮೊದಲು ಡಿ.21ರಿಂದ ವರ್ಗಾವಣೆ ಕೌನ್ಸೆಲಿಂಗ್ ಆರಂಭಿಸಲು ವೇಳಾಪಟ್ಟಿ ಪ್ರಕಟಿಸಲಾಗಿತ್ತು.

ರಾಜ್ಯದಲ್ಲಿ 430 ಸರ್ಕಾರಿ ಪದವಿ ಕಾಲೇಜುಗಳಿದ್ದು, 9 ಸಾವಿರಕ್ಕೂ ಹೆಚ್ಚು ಕಾಯಂ ಬೋಧಕ ಸಿಬ್ಬಂದಿ ಇದ್ದಾರೆ. ದಂಪತಿ ಪ್ರಕರಣಗಳಲ್ಲಿ ಶೇ 3, ಏಕ ಪೋಷಕರು- ವಿಧವೆಯರು, ಅಂಗವಿಕಲರು, ತೀವ್ರತರ ಕಾಯಿಲೆಗಳಿಂದ ಬಳಲುತ್ತಿರುವ ವರ್ಗಗಳಿಗೆ ತಲಾ ಶೇ 1ರಷ್ಟು, ಸಾಮಾನ್ಯ ವರ್ಗಕ್ಕೆ ಶೇ 9ರಷ್ಟು ಸೇರಿ ಒಟ್ಟು ಸಂಖ್ಯೆಯ ಶೇ 15ರಷ್ಟು ವರ್ಗಾವಣೆಗೆ ಅವಕಾಶ ಕಲ್ಪಿಸಲಾಗಿದೆ.

ಹಾವೇರಿಯಲ್ಲಿ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಕೊನೆಗೂ ಆಮಂತ್ರಣ ಪತ್ರಿಕೆ ಬಿಡುಗಡೆ

ಪ್ರಜಾವಾಣಿ ವಾರ್ತೆ



ಸಾಹಿತ್ಯ ಸಮ್ಮೇಳನದ ಆಮಂತ್ರಣ ಪತ್ರಿಕೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಿಡುಗಡೆ ಮಾಡಿದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಗೋಸಾಯಿ ಮಠದ ಮಂಜುನಾಥ ಭಾರತೀ ಸ್ವಾಮೀಜಿ, ಕಸಾಪ ಅಧ್ಯಕ್ಷ ಮಹೇಶ ಜೋಶಿ, ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಲಿಂಗಯ್ಯ ಹಿರೇಮಠ, ಜಿಲ್ಲಾಧಿಕಾರಿ ರಘುನಂದನಮೂರ್ತಿ ಇದ್ದಾರೆ

ಹಾವೇರಿ: ಏಲಕ್ಕಿ ಕಂಪಿನ ನಾಡಿನಲ್ಲಿ ಜ.6ರಿಂದ 8ವರೆಗೆ ನಡೆಯುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಆಮಂತ್ರಣ ಪತ್ರಿಕೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶನಿವಾರ ಬಿಡುಗಡೆಗೊಳಿಸಿದರು.

ಶಿಗ್ಗಾವಿ ಪಟ್ಟಣದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಸಮುದಾಯ ಭವನದ ಶಂಕುಸ್ಥಾಪನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, 'ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಬೇಕು. ಎಲ್ಲೆಡೆ ಕನ್ನಡದ ಕಂಪು ಹರಡಬೇಕು. ಇತರ ಸಮ್ಮೇಳನಗಳಿಗಿಂತ ಹಾವೇರಿ ಸಾಹಿತ್ಯ ಸಮ್ಮೇಳನ ಉತ್ಕೃಷ್ಟವಾಗಿರುತ್ತದೆ' ಎಂದು ಹೇಳಿದರು.

'ಕನ್ನಡ ಭಾಷೆ, ನೆಲ, ಜಲ ಹಾಗೂ ಜನರನ್ನು ಯಾರೂ ಮುಟ್ಟಲು ಸಾಧ್ಯವಿಲ್ಲ. ಕನ್ನಡಿಗರ ಸಮಸ್ಯೆಗಳನ್ನು ಸಮ್ಮೇಳನದಲ್ಲಿ ಚರ್ಚಿಸಿ ಪರಿಹಾರ ಕಂಡುಕೊಳ್ಳಲಾಗುವುದು. ಇದು ಎಲ್ಲ ಕನ್ನಡಿಗರ ಕಾರ್ಯಕ್ರಮವಾಗಿದ್ದು ಎಲ್ಲರೂ ಆಗಮಿಸುವ ಮೂಲಕ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಗೊಳಿಸಬೇಕು' ಎಂದು ಕೋರಿದರು.

32 ಪುಟಗಳ ಆಮಂತ್ರಣ ಪತ್ರಿಕೆ: ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಪ್ರಕಟಗೊಂಡಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಆಮಂತ್ರಣ ಪತ್ರಿಕೆಯು 32 ಪುಟಗಳನ್ನು ಹೊಂದಿದೆ. ಮುಖಪುಟದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್.ಎಂ. ವಿಶ್ವೇಶ್ವರಯ್ಯ, ಸರ್ ಮಿರ್ಜಾ ಇಸ್ಮಾಯಿಲ್ ಭಾವಚಿತ್ರ ಪ್ರಕಟಿಸಲಾಗಿದೆ. ಜತೆಗೆ ಸಮ್ಮೇಳನದ ಲಾಂಛನ, ಭುವನೇಶ್ವರಿ ದೇವಿ, ಸಮ್ಮೇಳನಾಧ್ಯಕ್ಷ ಡಾ.ದೊಡ್ಡರಂಗೇಗೌಡ ಹಾಗೂ ಪುರಸಿದ್ಧೇಶ್ವರ ದೇವಸ್ಥಾನದ ಚಿತ್ರವನ್ನು ಒಳಗೊಂಡಿದೆ.

ಬೆನ್ನುಡಿಯಲ್ಲಿ ಸಾಹಿತ್ಯ ಸಮ್ಮೇಳನಗಳ ಪರಂಪರೆ ಕುರಿತು ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರ ಸಂದೇಶವಿದೆ. 'ಬನ್ನಿ ಹಾವೇರಿಗೆ ಬನ್ನಿ ನಮ್ಮೂರಿಗೆ...' ಎಂಬ ಘೋಷವಾಕ್ಯ ಗಮನ ಸೆಳೆಯುತ್ತಿದೆ.

> ಕೋವಿಡ್ ಆತಂಕದ ಹಿನ್ನೆಲೆಯಲ್ಲಿ ಸಾಹಿತ್ಯ ಸಮ್ಮೇಳನದಲ್ಲಿ ಮಾಸ್ಕ್, ಸ್ಯಾನಿಟೈಸರ್ ಹಾಗೂ ಅಂತರ ಕಾಯ್ದುಕೊಳ್ಳುವಂತೆ ಸೂಚಿಸಿದ್ದೇನೆ
>
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಮಹಾತ್ಮ ಗಾಂಧಿ ವಿವಿ ವಿದ್ಯಾರ್ಥಿನಿಯರಿಗೆ 60 ದಿನ ಹೆರಿಗೆ ರಜೆ

ಕೊಟ್ಟಯಂ, (ಕೇರಳ) (ಪಿಟಿಐ): ಯಾವುದೇ ಅಡೆತಡೆಗಳಿಲ್ಲದೆ ಅಧ್ಯಯನ ಮುಂದುವರಿಸುವ ಸಲುವಾಗಿ ಕೇರಳದಲ್ಲಿ ಮೊದಲ ಬಾರಿಗೆ ಮಹಾತ್ಮ ಗಾಂಧಿ ವಿಶ್ವವಿದ್ಯಾಲಯ (ಎಂಜಿಯು) 18 ವರ್ಷಕ್ಕಿಂತ ಮೇಲಿನ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರಿಗೆ 60 ದಿನಗಳ ಹೆರಿಗೆ ರಜೆ ನೀಡಲು ನಿರ್ಧರಿಸಿದೆ.

ಕುಲಪತಿ ಸಿ.ಟಿ. ಅರವಿಂದ ಕುಮಾರ್ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಸಿಂಡಿಕೇಟ್ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

ಹೆರಿಗೆ ರಜೆಯನ್ನು ಹೆರಿಗೆಗೆ ಮೊದಲು ಅಥವಾ ನಂತರ ತೆಗೆದುಕೊಳ್ಳಬಹುದು. ರಜೆಯನ್ನು ಮೊದಲ ಅಥವಾ ಎರಡನೇ ಗರ್ಭಧಾರಣೆಗೆ ಮಾತ್ರ ನೀಡಲಾಗುತ್ತದೆ ಮತ್ತು ಕೋರ್ಸ್ ಅವಧಿಯಲ್ಲಿ ಒಮ್ಮೆ ಮಾತ್ರ ನೀಡಲಾಗುತ್ತದೆ.

ಕೋವಿಡ್: ದೇಶದಲ್ಲಿ ಪರಿಸ್ಥಿತಿ ನಿಯಂತ್ರಣದಲ್ಲಿದೆ, ಆತಂಕ ಬೇಡ – ತಜ್ಞರ ಅಭಿಮತ • 24 ಗಂಟೆಗಳಲ್ಲಿ 201 ಹೊಸ ಪ್ರಕರಣ ಪತ್ತೆ

ಲಾಕ್‌ಡೌನ್, ವಿಮಾನ ಸಂಚಾರ ನಿರ್ಬಂಧ ಸದ್ಯ ಅನಗತ್ಯ

ನವದೆಹಲಿ (ಪಿಟಿಐ): ದೇಶದಲ್ಲಿ ಸದ್ಯದ ಕೋವಿಡ್ ಪರಿಸ್ಥಿತಿಯನ್ನು ಗಮನಿಸಿದರೆ, ಲಾಕ್‌ಡೌನ್ ವಿಧಿಸುವ ಅಥವಾ ಅಂತರರಾಷ್ಟ್ರೀಯ ವಿಮಾನ ಸಂಚಾರವನ್ನು ನಿಷೇಧಿಸುವ ಅಗತ್ಯವಿಲ್ಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಹಲವು ದೇಶಗಳಲ್ಲಿ ಕೋವಿಡ್ ಪ್ರಕರಣಗಳು ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ, ದೇಶದಲ್ಲಿ ಕಟ್ಟುನಿಟ್ಟಿನ ನಿಗಾ ಅಗತ್ಯ ಎಂದು ಹೇಳಿದ್ದಾರೆ.

ಸೋಂಕು ಹಾಗೂ ಕೋವಿಡ್ ತಡೆ ಲಸಿಕೆಗಳಿಂದ ದೇಶದ ಜನರಲ್ಲಿ 'ಹೈಬ್ರಿಡ್ ಇಮ್ಯುನಿಟಿ' ಸಹಜವಾಗಿ (ರೋಗ ನಿರೋಧಕ ಶಕ್ತಿ) ಅಭಿವೃದ್ಧಿಯಾಗಿದೆ. ಹೀಗಾಗಿ ದೇಶದಲ್ಲಿ ಕೋವಿಡ್‌ನ ದೊಡ್ಡ ಅಲೆ ಸೃಷ್ಟಿಯಾಗುವ ಅಥವಾ ಗಂಭೀರ ಸ್ವರೂಪದ ಪ್ರಕರಣಗಳು ಉಲ್ಬಣವಾಗುವ ಸಾಧ್ಯತೆ ಇಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

'ಒಟ್ಟಾರೆ ಕೋವಿಡ್ ಪ್ರಕರಣಗಳ ಏರಿಕೆ ಅಷ್ಟಾಗಿ ಇಲ್ಲ. ದೇಶದಲ್ಲಿ ಈಗ ಸಹಜಸ್ಥಿತಿ ಇದೆ. ಲಾಕ್‌ಡೌನ್ ಅಥವಾ ವಿಮಾನ ಸಂಚಾರ ನಿರ್ಬಂಧ ಸದ್ಯಕ್ಕೆ ಅಗತ್ಯವಿಲ್ಲ' ಎಂದು ಏಮ್ಸ್ ಮಾಜಿ ನಿರ್ದೇಶಕ ಡಾ. ರಣದೀಪ್ ಗುಲೇರಿಯಾ ಹೇಳಿದ್ದಾರೆ.



ರಾಂಚಿಯ ರಾಜೇಂದ್ರ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಇರಿಸಿದ್ದ ಆಮ್ಲಜನಕ ಸಿಲಿಂಡರ್‌ಗಳನ್ನು ಸಿಬ್ಬಂದಿಯೊಬ್ಬರು ಶನಿವಾರ ಸ್ವಚ್ಛಗೊಳಿಸಿದರು – ಪಿಟಿಐ ಚಿತ್ರ

'ಸೋಂಕು ಪ್ರಸರಣ ತಡೆಗೆ ವಿಮಾನ ಸಂಚಾರ ನಿರ್ಬಂಧಿಸುವುದು ಅಷ್ಟೊಂದು ಪರಿಣಾಮಕಾರಿ ವಿಧಾನ ಅಲ್ಲ ಎಂಬುದು ಸ್ಪಷ್ಟವಾಗಿದೆ. ಮೇಲಾಗಿ, ಚೀನಾದಲ್ಲಿ ಪ್ರಕರಣ ಹೆಚ್ಚಳಕ್ಕೆ ಕಾರಣವಾಗಿರುವ ಬಿಎಫ್.7 ಉಪತಳಿ ಈಗಾಗಲೇ ದೇಶದಲ್ಲಿ ಕಂಡುಬಂದಿದೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ದೇಶದಲ್ಲಿ ಕೋವಿಡ್ ಪರಿಸ್ಥಿತಿ ನಿಯಂತ್ರಣದಲ್ಲಿದ್ದು, ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ ಎಂದು ರೋಗನಿರೋಧಕ ಶಕ್ತಿ ಕುರಿತ ರಾಷ್ಟ್ರೀಯ ತಾಂತ್ರಿಕ ಸಲಹಾ ಮಂಡಳಿಯ ಮುಖ್ಯಸ್ಥ ಡಾ. ಎನ್.ಕೆ. ಅರೋರಾ ಅಭಿಪ್ರಾಯಪಟ್ಟಿದ್ದಾರೆ.

201 ಹೊಸ ಪ್ರಕರಣ ಪತ್ತೆ: ದೇಶದಲ್ಲಿ ಕೋವಿಡ್‌ನ 201 ಹೊಸ ಪ್ರಕರಣಗಳು ಪತ್ತೆಯಾಗಿದ್ದು, ಸಕ್ರಿಯ ಸೋಂಕಿತರ ಸಂಖ್ಯೆ 3,397ಕ್ಕೆ ತಲುಪಿದೆ ಎಂದು ಕೇಂದ್ರ ಸರ್ಕಾರ ಶನಿವಾರ ತಿಳಿಸಿದೆ.

ಶನಿವಾರ ಬೆಳಿಗ್ಗೆ 8 ಗಂಟೆವರೆಗಿನ ಮಾಹಿತಿ ಪ್ರಕಾರ, 24 ಗಂಟೆ ಅವಧಿಯಲ್ಲಿ 1.36 ಲಕ್ಷ ಕೋವಿಡ್ ತಪಾಸಣೆ ನಡೆಸಲಾಗಿದೆ. ಕೇರಳದಲ್ಲಿ ಒಂದು ಸಾವು ಸಂಭವಿಸಿದ್ದು, ದೇಶದಲ್ಲಿ ಶೇ 0.15ರಷ್ಟು ಪಾಸಿಟಿವಿಟಿ ದರ ದಾಖಲಾಗಿದೆ.

ರೋಗನಿರೋಧಕ ಶಕ್ತಿ ಕಡಿಮೆ ಇರುವುದು ಹಾಗೂ ಲಸಿಕೆ ಕಾರ್ಯಕ್ರಮದ ಲೋಪದಿಂದಾಗಿ ಚೀನಾದಲ್ಲಿ ಅಲೆ ಸೃಷ್ಟಿಯಾಗಿದೆ. ಭಾರತಕ್ಕೆ ಈ ಭಯ ಇಲ್ಲ
ಡಾ. ನೀರಜ್ ಗುಪ್ತಾ, ಪ್ರಾಧ್ಯಾಪಕ, ಸಫ್ದರ್‌ಜಂಗ್ ಆಸ್ಪತ್ರೆ

ಒಂದು ವರ್ಷದಿಂದಲೂ ದೇಶದಲ್ಲಿ ಓಮೈಕ್ರಾನ್ ಇದ್ದು, ಅದರ 250ಕ್ಕೂ ಹೆಚ್ಚು ಉಪತಳಿಗಳು ಹರಡಿವೆ. ವಿಮಾನ ನಿಲ್ದಾಣಗಳಲ್ಲಿ ಆಯ್ದ ಪ್ರಯಾಣಿಕರ ತಪಾಸಣೆ ಸಾಕು
ಡಾ. ಚಂದ್ರಶೇಖರ ಲಹರಿಯಾ, ಸಾಂಕ್ರಾಮಿಕ ರೋಗಶಾಸ್ತ್ರಜ್ಞ

ಆಮ್ಲಜನಕ ಸಿಲಿಂಡರ್, ವೆಂಟಿಲೇಟರ್ ಸನ್ನದ್ಧ: ಕೇಂದ್ರ ಸೂಚನೆ

ಆಮ್ಲಜನಕ ಸಿಲಿಂಡರ್, ವೆಂಟಿಲೇಟರ್ ಮೊದಲಾದ ಜೀವರಕ್ಷಕ ಉಪಕರಣಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಿಕೊಳ್ಳುವಂತೆ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಸರ್ಕಾರ ಶನಿವಾರ ಸೂಚನೆ ನೀಡಿದೆ.

ಆಸ್ಪತ್ರೆಗಳಲ್ಲಿ ಆಮ್ಲಜನಕ ಉತ್ಪಾದನಾ ಘಟಕಗಳನ್ನು ಸಜ್ಜುಗೊಳಿಸಬೇಕು ಹಾಗೂ ಅವುಗಳ ಕಾರ್ಯಕ್ಷಮತೆಯನ್ನು ಪರೀಕ್ಷಿಸಿ ಖಚಿತಪಡಿಸಿಕೊಳ್ಳಬೇಕು ಎಂದು ನಿರ್ದೇಶನ ನೀಡಿದೆ. ಆಮ್ಲಜನಕ ಸಿಲಿಂಡರ್‌ಗಳ ದಾಸ್ತಾನು, ಸಿಲಿಂಡರ್ ಭರ್ತಿ ಪ್ರಕ್ರಿಯೆ ಹಾಗೂ ಅವುಗಳ ಸರಬರಾಜಿಗೆ ಅಗತ್ಯ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ತಿಳಿಸಲಾಗಿದೆ.

ಒಂದು ವೇಳೆ ಪ್ರಕರಣಗಳು ಹೆಚ್ಚಳವಾದರೆ, ಪರಿಸ್ಥಿತಿಯನ್ನು ನಿಭಾಯಿಸುವ ದೃಷ್ಟಿಯಿಂದ ಎಲ್ಲ ರೀತಿಯ ವೈದ್ಯಕೀಯ ಮೂಲಸೌಕರ್ಯವನ್ನು ಕಾರ್ಯಾಚರಣೆಯ ಸ್ಥಿತಿಯಲ್ಲಿ ಇರಿಸಬೇಕು ಎಂದು ಆರೋಗ್ಯ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಮನೋಹರ್ ಅಗನಾನಿ ಅವರು ಸೂಚಿಸಿದ್ದಾರೆ.

ವಿಮಾನ ನಿಲ್ದಾಣಗಳಲ್ಲಿ ತಪಾಸಣೆ ಆರಂಭ

ಬೆಂಗಳೂರು, ದೆಹಲಿ, ಹೈದರಾಬಾದ್, ಮುಂಬೈ, ಚೆನ್ನೈ, ಅಹಮದಾಬಾದ್, ಪುಣೆ, ಇಂದೋರ್ ಹಾಗೂ ಗೋವಾದ ವಿಮಾನ ನಿಲ್ದಾಣಗಳಿಗೆ ವಿದೇಶದಿಂದ ಬಂದಿಳಿಯುವ ಆಯ್ದ ಕೆಲವು ಪ್ರಯಾಣಿಕರನ್ನು (ರ‍್ಯಾಂಡಮ್) ಶನಿವಾರದಿಂದ ತಪಾಸಣೆಗೆ ಒಳಪಡಿಸುವ ಪ್ರಕ್ರಿಯೆ ಶುರುವಾಗಿದೆ. ವಿದೇಶಗಳಿಂದ ಬರುವ ಶೇ 2ರಷ್ಟು ಪ್ರಯಾಣಿಕರನ್ನು ಕೋವಿಡ್ ಪತ್ತೆ ಪರೀಕ್ಷೆಗೆ ಒಳಪಡಿಸಬೇಕು ಎಂದು ಸರ್ಕಾರ ಮಾರ್ಗಸೂಚಿಯಲ್ಲಿ ತಿಳಿಸಿತ್ತು.

ಚೆನ್ನೈ ವಿಮಾನ ನಿಲ್ದಾಣಕ್ಕೆ ಶನಿವಾರ ಬಂದಿಳಿದ 37 ಪ್ರಯಾಣಿಕರನ್ನು ತಪಾಸಣೆ ನಡೆಸಲಾಯಿತು. ಕ್ವಾಲಾಲಂಪುರ, ದುಬೈ, ಕೊಲಂಬೊ ಮತ್ತು ಢಾಕಾದಿಂದ ಬಂದ ಶೇ 2ರಷ್ಟು ಪ್ರಯಾಣಿಕರನ್ನು ತಪಾಸಣೆ ನಡೆಸಲಾಯಿತು. ಯಾವ ಪ್ರಯಾಣಿಕರಲ್ಲೂ ಸೋಂಕು ಕಂಡುಬಂದಿಲ್ಲ.

ದೇಶದ 29 ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಶುಕ್ರವಾರ 87,966 ಪ್ರಯಾಣಿಕರು ವಿವಿಧ ದೇಶಗಳಿಂದ ಬಂದಿದ್ದಾರೆ.

'ಹೊಸ ವರ್ಷಕ್ಕೆ ನೂತನ ಮಾರ್ಗಸೂಚಿ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ವಿದೇಶಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಮುಂಜಾಗ್ರತಾ ಕ್ರಮವಾಗಿ ಹೊಸ ವರ್ಷಾಚರಣೆಗೆ ನೂತನ ಮಾರ್ಗಸೂಚಿಗಳನ್ನು ಹೊರಡಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಕಂದಾಯ ಸಚಿವ ಆರ್.ಅಶೋಕ ಮತ್ತು ಆರೋಗ್ಯ ಸಚಿವ ಡಾ.ಸುಧಾಕರ್ ಅವರು ಭಾನುವಾರ ಸಭೆ ನಡೆಸಿ, ಮಾರ್ಗಸೂಚಿಗಳನ್ನು ಪ್ರಕಟಿಸಲಿದ್ದಾರೆ' ಎಂದರು.

'ಬೂಸ್ಟರ್ ಡೋಸ್ ನೀಡಲು ತಾಲ್ಲೂಕು ಮತ್ತು ಜಿಲ್ಲಾಮಟ್ಟದಲ್ಲಿ ಶಿಬಿರ ಏರ್ಪಡಿಸಬೇಕು. ಆರೋಗ್ಯ ಪರಿಕರಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಂಡು, ಔಷಧ ಹಾಗೂ ಲಸಿಕೆ ಕೊರತೆ ಆಗದಂತೆ ನೋಡಿಕೊಳ್ಳಬೇಕು ಎಂದು ಆರೋಗ್ಯ ಇಲಾಖೆಗೆ ಸೂಚಿಸಲಾಗಿದೆ. ಆಸ್ಪತ್ರೆಗಳಲ್ಲಿರುವ ಆಮ್ಲಜನಕ ಘಟಕಗಳು ತುರ್ತು ಸಂದರ್ಭದಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ, ಅವುಗಳನ್ನು ಪ್ರಾಯೋಗಿಕವಾಗಿ ಚಾಲನೆಯಲ್ಲಿಡಲು ತಿಳಿಸಲಾಗಿದೆ' ಎಂದು ಹೇಳಿದರು.

ಕಾಂಗ್ರೆಸ್‌ನಲ್ಲಿ ಒಳಜಗಳ: 'ಅವಧಿಪೂರ್ವ ಚುನಾವಣೆ ನಡೆಸುವ ಯೋಚನೆಯೂ ನಮ್ಮಲ್ಲಿಲ್ಲ. ಪಕ್ಷದ ಯೋಜನೆಗಳನ್ನು ಜನರಿಗೆ ತಲುಪಿಸಲು ಯತ್ನಿಸುತ್ತಿದ್ದೇವೆ. ಚುನಾವಣೆಗೆ ಇನ್ನೂ ಸಮಯ ಇರುವುದರಿಂದ ಕಾಂಗ್ರೆಸ್ ನಾಯಕರಲ್ಲಿ ಒಳಜಗಳಗಳು ಹೆಚ್ಚಾಗುತ್ತಿವೆ. ಅದಕ್ಕಾಗಿ ಕಾರ್ಯಕರ್ತರಿಗೆ ಅವಧಿಪೂರ್ವ ಚುನಾವಣೆ ನಡೆಯುತ್ತದೆ ಎಂದು ಸಂದೇಶ ನೀಡುತ್ತಿದ್ದಾರೆ' ಎಂದು ಪ್ರಶ್ನೆಯೊಂದಕ್ಕೆ ಮುಖ್ಯಮಂತ್ರಿ ಬೊಮ್ಮಾಯಿ ಪ್ರತಿಕ್ರಿಯಿಸಿದರು.

ನಾಲ್ವರಿಗೆ ಮಾತ್ರ ಆಸ್ಪತ್ರೆ ಚಿಕಿತ್ಸೆ

ಬೆಂಗಳೂರು: ರಾಜ್ಯದಲ್ಲಿ ಸಾವಿರಕ್ಕೂ ಅಧಿಕ ಕೋವಿಡ್ ಸಕ್ರಿಯ ಪ್ರಕರಣಗಳಿದ್ದರೂ ನಾಲ್ವರಿಗೆ ಮಾತ್ರ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿದೆ.

ಚೀನಾ ಸೇರಿ ಕೆಲ ದೇಶಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳದಿಂದ ಪರೀಕ್ಷೆಗಳ ಸಂಖ್ಯೆಯನ್ನು ಏರಿಕೆ ಮಾಡಲಾಗುತ್ತಿದೆ. ವಾರದಿಂದ ರಾಜ್ಯದಲ್ಲಿ ಸೋಂಕು ದೃಢ ಪ್ರಮಾಣ ಶೇ 0.51ರಷ್ಟಿದೆ. ರೋಗದ ತೀವ್ರತೆ ಕಡಿಮೆ ಇರುವುದರಿಂದ ಸೋಂಕಿತರಲ್ಲಿ ಬಹುತೇಕರು ಮನೆ ಆರೈಕೆಗೆ ಒಳಗಾಗುತ್ತಿದ್ದಾರೆ. ಆಸ್ಪತ್ರೆಗೆ ದಾಖಲಾದವರಿಗೂ ಸಾಮಾನ್ಯ ಹಾಸಿಗೆಯಲ್ಲಿಯೇ ಚಿಕಿತ್ಸೆ ಒದಗಿಸಲಾಗುತ್ತಿದೆ.

ಎರಡು ಸಾವಿರದ ಆಸುಪಾಸಿಗೆ ಇಳಿಕೆ ಕಂಡಿದ್ದ ದೈನಂದಿನ ಕೋವಿಡ್ ಪರೀಕ್ಷೆಗಳ ಸಂಖ್ಯೆ, ಈಗ ಐದು ಸಾವಿರದ ಗಡಿಗೆ ಏರಿಕೆ ಕಂಡಿದೆ. ವಿಮಾನ ನಿಲ್ದಾಣಗಳಲ್ಲಿಯೂ ಪರೀಕ್ಷೆ ನಡೆಸಲಾಗುತ್ತಿದೆ. ಕೋವಿಡ್ ಹೊಸ ಪ್ರಕರಣಗಳು ಸದ್ಯ ಎರಡಂಕಿಯಲ್ಲಿವೆ. ವಾರದಿಂದ ಚೇತರಿಕೆ ಪ್ರಮಾಣ ಶೇ 98.97 ರಷ್ಟಿದೆ.

'ಚೀನಾ, ಹಾಂಕಾಂಗ್, ದಕ್ಷಿಣ ಕೊರಿಯಾ ಮೊದಲಾದ ದೇಶಗಳಿಂದ ಬರುತ್ತಿರುವವರನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಸೋಂಕು ಹರಡದಂತೆ ಅಗತ್ಯ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

'ಕೋವಿಡ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್ ಪಡೆಯದವರು ಸಮೀಪದ ಆಸ್ಪತ್ರೆಗೆ ತೆರಳಿ, ಲಸಿಕೆ ಪಡೆದುಕೊಳ್ಳಬೇಕು. ಕೋವಿಡ್ ವಿರುದ್ಧದ ಹೋರಾಟದಲ್ಲಿ ಸರ್ಕಾರದ ಜತೆಗೆ ಕೈಜೋಡಿಸಬೇಕು' ಎಂದು ಮನವಿ ಮಾಡಿಕೊಂಡಿದ್ದಾರೆ.

ದೆಹಲಿ ಪ್ರವೇಶಿಸಿದ 'ಭಾರತ್ ಜೋಡೊ'

ಯಾತ್ರೆಯಲ್ಲಿ ಜನಸ್ತೋಮ: ರಾಹುಲ್ ಜೊತೆ ಹೆಜ್ಜೆ ಹಾಕಿದ ಕಮಲ್ ಹಾಸನ್

ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷ ಹಮ್ಮಿಕೊಂಡಿರುವ ಭಾರತ್ ಜೋಡೊ ಯಾತ್ರೆ ಶನಿವಾರ ರಾಷ್ಟ್ರರಾಜಧಾನಿ ದೆಹಲಿಯನ್ನು ಪ್ರವೇಶಿಸಿತು.

ಬದರ್‌ಪುರ ಗಡಿಯಿಂದ ದೆಹಲಿಯ ಆಶ್ರಮ ಚೌಕ್‌ಗೆ ಬಂದ ಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದ ಯಾತ್ರೆಗೆ ಭವ್ಯ ಸ್ವಾಗತ ಕೋರಲಾಯಿತು.

ಯಾತ್ರೆಯು ನಗರವನ್ನು ಪ್ರವೇಶಿಸಿದ ಮಾರ್ಗವನ್ನು ಸಿಂಗರಿಸಲಾಗಿತ್ತು. ದಾರಿಯುದ್ದಕ್ಕೂ ತ್ರಿವರ್ಣ ಧ್ವಜಗಳು, ಬಲೂನ್‌ಗಳು ಹಾರಾಡುತ್ತಿದ್ದವು. ರಾಷ್ಟ್ರಧ್ವಜಗಳನ್ನು ಹಿಡಿದಿದ್ದ ಕಾರ್ಯಕರ್ತರು, ರಾಹುಲ್ ಹಿಂದೆ ಉತ್ಸಾಹದಿಂದ ಹೆಜ್ಜೆ ಹಾಕಿದರು. ಮಾರ್ಗದ ಇಕ್ಕೆಲಗಳಲ್ಲಿ ನಿಂತಿದ್ದವರು ಯಾತ್ರಿಗಳ ಮೇಲೆ ಹೂವಿನ ಪಕಳೆಗಳ ಮಳೆಗರೆದು, ಸಂಭ್ರಮದ ಸ್ವಾಗತ ಕೋರಿದರು.

ದೆಹಲಿ ಹಾಗೂ ಹರಿಯಾಣದ ಜನರು ಯಾತ್ರೆಯನ್ನು ಸೇರಿಕೊಂಡರು.

'ಚೀನಾ, ಜಪಾನ್‌ನಲ್ಲಿ ಕೋವಿಡ್‌ನಿಂದಾಗಿ ಜನ ಸಾಯುತ್ತಿದ್ದಾರೆ. ಇಡೀ ಜಗತ್ತಿಗೆ ಅಪಾಯ ಎದುರಾಗಿದೆ. ಇಂತಹ ಸಮಯದಲ್ಲಿ ಕಾಂಗ್ರೆಸ್‌ಗೆ ದೇಶದ ಹಿತಾಸಕ್ತಿಗಿಂತಲೂ ಕುಟುಂಬವೊಂದರ ಹಿತವೇ ಮುಖ್ಯವಾಗಿದೆ. ಕೋವಿಡ್ ಶಿಷ್ಟಾಚಾರ ಉಲ್ಲಂಘಿಸುವ ಮೂಲಕ ಕಾಂಗ್ರೆಸ್ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ' ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಕಿಡಿಕಾರಿದ್ದಾರೆ.

• ಯಾತ್ರೆಯು ಅಪೊಲೊ ಆಸ್ಪತ್ರೆ ಬಳಿ ಬಂದಾಗ, ತಮ್ಮ ನಡಿಗೆಯನ್ನು ನಿಲ್ಲಿಸಿದ ರಾಹುಲ್, ಆ ಮಾರ್ಗವಾಗಿ ಬಂದ ಆಂಬುಲೆನ್ಸ್‌ಗೆ ದಾರಿ ಮಾಡಿಕೊಟ್ಟರು. ಆಂಬುಲೆನ್ಸ್ ಸಾಗಲು ಅನುವು ಮಾಡಿಕೊಡುವಂತೆ ಸಹ ಯಾತ್ರಿಗಳಿಗೂ ಸೂಚಿಸಿದರು.

• ಯಾತ್ರೆಯು ದಕ್ಷಿಣ ದೆಹಲಿಯ ಲಜಪತ್ ನಗರಕ್ಕೆ ಬಂದಾಗ, ಅಂಧ ವಿದ್ಯಾರ್ಥಿಗಳ ಗುಂಪೊಂದು ಸ್ವಾಗತಿಸಿತು. 15–20 ಅಂಧ ವಿದ್ಯಾರ್ಥಿಗಳು, 'ದ್ವೇಷ ಬಿಡಿ, ದೇಶ ಒಗ್ಗೂಡಿಸಿ' ಎಂಬ ಘೋಷಣೆಗಳನ್ನು ಕೂಗಿದರು.



ದೆಹಲಿಯಲ್ಲಿ ನಡೆದ 'ಭಾರತ್ ಜೋಡೊ ಯಾತ್ರೆ'ಯಲ್ಲಿ ಶನಿವಾರ ಸೇರಿದ್ದ ಜನಸ್ತೋಮ –ಪಿಟಿಐ ಚಿತ್ರ

ಯಾತ್ರೆ ಮೂಲಕ ರಾಹುಲ್ ಅವರು ದೇಶದೆಲ್ಲೆಡೆ ಪ್ರೀತಿ-ಶಾಂತಿಯನ್ನು ಪಸರಿಸುತ್ತಿದ್ದಾರೆ. ಆದರೆ, ಹಲವು ನೆಪಗಳನ್ನು ಒಡ್ಡುವ ಮೂಲಕ ಬಿಜೆಪಿಯವರು ಯಾತ್ರೆ ತಡೆಯಲು ಹುನ್ನಾರ ನಡೆಸುತ್ತಿದ್ದಾರೆ
ಕನ್ಹಯ್ಯ ಕುಮಾರ್, ಕಾಂಗ್ರೆಸ್ ಮುಖಂಡ

ಸೋನಿಯಾ ಗಾಂಧಿ ಹೆಜ್ಜೆ



ಸೋನಿಯಾ ಗಾಂಧಿ ಅವರನ್ನು ಅಪ್ಪಿಕೊಂಡಿರುವ ರಾಹುಲ್ –ಪಿಟಿಐ ಚಿತ್ರ

ಕಾಂಗ್ರೆಸ್ ನಾಯಕಿ ಹಾಗೂ ಸಂಸದೀಯ ಪಕ್ಷದ ಮುಖ್ಯಸ್ಥೆ ಸೋನಿಯಾ ಗಾಂಧಿ ಅವರು ಯಾತ್ರೆಯಲ್ಲಿ ಭಾಗಿಯಾದರು.

ಕೆಲ ದೂರದವರೆಗೆ ಮಗ ರಾಹುಲ್ ಜೊತೆ ಹೆಜ್ಜೆ ಹಾಕಿದರು. ಪುತ್ರಿ ಪ್ರಿಯಾಂಕಾ ಗಾಂಧಿ ವಾದ್ರಾ ಕೂಡ ಸಾಥ್ ನೀಡಿದರು.

ಮಕ್ಕಳ್ ನೀಧಿ ಮಯ್ಯಂ (ಎಂಎನ್‌ಎಂ) ಪಕ್ಷದ ಅಧ್ಯಕ್ಷ, ಬಹುಭಾಷಾ ನಟ ಕಮಲ್ ಹಾಸನ್ ಅವರೂ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

'ನನ್ನ ವರ್ಚಸ್ಸು ಕೆಡಿಸಲು ಸಾವಿರಾರು ಕೋಟಿ ವೆಚ್ಚ'

ನವದೆಹಲಿ: 'ನನ್ನ ವರ್ಚಸ್ಸು ಕೆಡಿಸಲು ಪ್ರಧಾನಿ ನರೇಂದ್ರ ಮೋದಿ ಹಾಗೂ ಆಡಳಿತಾರೂಢ ಬಿಜೆಪಿಯು ಸಾವಿರಾರು ಕೋಟಿ ಹಣ ವೆಚ್ಚ ಮಾಡಿದೆ. ಆದರೆ ಸತ್ಯ ಏನೆಂಬುದನ್ನು ಕೇವಲ ಒಂದೇ ತಿಂಗಳಲ್ಲಿ ನಾನು ಇಡೀ ದೇಶಕ್ಕೆ ತೋರಿಸಿಕೊಟ್ಟಿದ್ದೇನೆ' ಎಂದು ರಾಹುಲ್ ಗಾಂಧಿ ಅವರು ಹೇಳಿದ್ದಾರೆ.

ಕೆಂಪು ಕೋಟೆಯ ಹೊರಭಾಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಬೃಹತ್ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ವಾಸ್ತವಾಂಶಗಳಿಂದ ಜನರ ಗಮನ ಬೇರೆಡೆ ಸೆಳೆಯುವ ಸಲುವಾಗಿ ಟಿ.ವಿ ಮೂಲಕ ಹಿಂದೂ–ಮುಸ್ಲಿಂ ಹೆಸರಿನಲ್ಲಿ ದ್ವೇಷ ಹರಡುವ ಕೆಲಸ ಮಾಡಲಾಗುತ್ತಿದೆ. ಅಧಿಕಾರಸ್ಥರು ಮಾಧ್ಯಮಗಳನ್ನು ನಿಯಂತ್ರಿಸುತ್ತಿದ್ದಾರೆ' ಎಂದರು.

'ಜನರ ಹಣ, ಬಂದರು, ವಿಮಾನ ನಿಲ್ದಾಣ, ರಸ್ತೆ ಹೀಗೆ ಸಾರ್ವಜನಿಕ ಆಸ್ತಿಗಳನ್ನೆಲ್ಲಾ ಮೋದಿ ಅವರ ಆಪ್ತರ ಸುಪರ್ದಿಗೆ ಒಪ್ಪಿಸಲಾಗುತ್ತಿದೆ. ಕೇಂದ್ರದಲ್ಲಿರುವುದು ಮೋದಿ ಸರ್ಕಾರವಲ್ಲ. ಅದಾನಿ–ಅಂಬಾನಿ ಸರ್ಕಾರ' ಎಂದು ವಾಗ್ದಾಳಿ ನಡೆಸಿದ್ದಾರೆ.

'ಸಾವಿರಾರು ಕೋಟಿ ಹಣವನ್ನು ಕೈಗಾರಿಕೋದ್ಯಮಿಗಳಿಗೆ ನೀಡಲಾಗುತ್ತಿದೆಯೇ ಹೊರತು ನಾಗರಿಕರಿಗಲ್ಲ. ಇವು ನೀತಿಗಳಲ್ಲ. ಸಣ್ಣ ವ್ಯಾಪಾರ, ಉದ್ಯಮ ಹಾಗೂ ರೈತರನ್ನು ನಾಶಪಡಿಸಲು ಪ್ರಯೋಗಿಸಲಾಗುತ್ತಿರುವ ಅಸ್ತ್ರಗಳು' ಎಂದು ಕಿಡಿಕಾರಿದ್ದಾರೆ.

ವಾಹನ ಪ್ರಪಾತಕ್ಕೆ ಉರುಳಿ 8 ಶಬರಿಮಲೆ ಯಾತ್ರಾರ್ಥಿಗಳ ಸಾವು

ಥೇಣಿ, ತಮಿಳುನಾಡು (ಪಿಟಿಐ): ಶಬರಿಮಲೆಯಿಂದ ಹಿಂದಿರುಗುತ್ತಿದ್ದ ವಾಹನ ಪ್ರಪಾತಕ್ಕೆ ಉರುಳಿದ ಪರಿಣಾಮ ಎಂಟು ಮಂದಿ ಮೃತಪಟ್ಟಿದ್ದಾರೆ ಎಂದು ಜಿಲ್ಲಾಧಿಕಾರಿ ಕೆ.ವಿ.ಮುರಳೀಧರನ್ ತಿಳಿಸಿದ್ದಾರೆ.

ಶುಕ್ರವಾರ ತಡರಾತ್ರಿ ಈ ಘಟನೆ ಸಂಭವಿಸಿದೆ. ಗಾಯಗೊಂಡ ಇಬ್ಬರನ್ನು ಇಲ್ಲಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಗುಡ್ಡಗಾಡು ಮಾರ್ಗದ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಈ ದುರ್ಘಟನೆ ಸಂಭವಿಸಿದೆ ಎಂದು ಶಂಕಿಸಲಾಗಿದೆ.

ಏಳು ಜನರು ಸ್ಥಳದಲ್ಲೇ ಮೃತಪಟ್ಟರೆ, ಒಬ್ಬರು ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಸಾವಿಗೀಡಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೃತರಲ್ಲಿ ಬಾಲಕ ಸೇರಿದ್ದು, ಎಲ್ಲರೂ ಜಿಲ್ಲೆಯ ಆಂಡಿಪಟ್ಟಿ ನಿವಾಸಿಗಳು.

ಚನ್ನಪಟ್ಟಣ: ಮಂಡ್ಯದ ಮೂವರು ಸಾವು

ಚನ್ನಪಟ್ಟಣ: ತಾಲ್ಲೂಕಿನ ಮುದುಗೆರೆ ಬಳಿ ಖಾಸಗಿ ಹೋಟೆಲ್‌ವೊಂದರ ಮುಂಭಾಗ ಶನಿವಾರ ಬೆಳಿಗ್ಗೆ ಟೆಂಪೊ ಟ್ರಾವೆಲರ್ ಹಾಗೂ ಕ್ಯಾಂಟರ್ ವಾಹನ ನಡುವೆ ಸಂಭವಿಸಿದ ಅಪಘಾತದಲ್ಲಿ ಬಾಲಕ ಸೇರಿದಂತೆ ಮೂವರು ಸಾವಿಗೀಡಾಗಿದ್ದಾರೆ.

ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಚಿಕ್ಕಾಡಿ ಗ್ರಾಮದ ಶ್ರೀನಿವಾಸ್ (14), ಕೃಷ್ಣೇಗೌಡ (45), ಮಹೇಶ್ (45) ಮೃತರು. ಟಿ.ಟಿ ವಾಹನದಲ್ಲಿ ತಿರುಪತಿ ಪ್ರವಾಸಕ್ಕೆ ತೆರಳಿದ್ದ ಗ್ರಾಮದ ಹತ್ತಕ್ಕೂ ಹೆಚ್ಚು ಮಂದಿ ವಾಪಸ್ ಬರುತ್ತಿದ್ದ ವೇಳೆ ಈ ದುರ್ಘಟನೆ ನಡೆದಿದೆ.

ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ತೆರಳುತ್ತಿದ್ದ ವಾಹನ, ಕ್ಯಾಂಟರ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ವಾಹನದಲ್ಲಿದ್ದ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ತೀವ್ರವಾಗಿ ಗಾಯಗೊಂಡಿದ್ದ ಬಾಲಕ ಶ್ರೀನಿವಾಸ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ. ಘಟನೆಯಲ್ಲಿ ಹಲವರು ಗಾಯಗೊಂಡಿದ್ದಾರೆ. ಚನ್ನಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹56,050
ಒಡವೆ ಚಿನ್ನ 1ಗ್ರಾಂ	₹5,157
ಬೆಳ್ಳಿ ಕೆ.ಜಿಗೆ	₹69,600

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹560
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹562

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1560 (1560)
ಸೋಯಾ (ರಿಫೈನ್ಡ್)	₹1275 (1235)
ಸೂರ್ಯಕಾಂತಿ (ರಿಫೈನ್ಡ್)	₹1330 (1320)
ಪಾಮೋಲಿನ್	₹938 (935)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹390-680
ದ್ವಿತಳಿ (ಬಿ.ವಿ)	₹263-773

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹133
ಆರ್‌ಎಸ್‌ಎಸ್-5	₹125
ಗುಡ್ ಲಾಟ್	₹119

ತಿಪಟೂರು ಕೊಬ್ಬರಿ

(ಕ್ವಿಂಟಲ್‌ಗೆ)

ಕನಿಷ್ಠ	₹10800
ಗರಿಷ್ಠ	₹12000
ಮಾದರಿ	₹11500
ಒಟ್ಟು ಆವಕ (ಚೀಲ)	2929

ಆಧಾರ್ ಜೊತೆ ಪ್ಯಾನ್ ಜೋಡಣೆ 2023ರ ಮಾರ್ಚ್ ಗಡುವು



ನವದೆಹಲಿ (ಪಿಟಿಐ): ಪ್ಯಾನ್ ಅನ್ನು ಆಧಾರ್ ಜೊತೆ ಸಂಪರ್ಕಿಸದೇ ಇದ್ದರೆ ಅಂತಹ ಪ್ಯಾನ್‌ಗಳು 2023ರ ಮಾರ್ಚ್ ನಂತರ ನಿಷ್ಕ್ರಿಯ ಆಗಲಿವೆ ಎಂದು ಆದಾಯ ತೆರಿಗೆ ಇಲಾಖೆಯು ಶನಿವಾರ ಹೇಳಿದೆ.

ತಡ ಮಾಡಬೇಡಿ. ಇಂದೇ ಪ್ಯಾನ್ ಅನ್ನು ಆಧಾರ್ ಜೊತೆ ಸಂಪರ್ಕಿಸಿ ಎಂದು ಇಲಾಖೆಯು ಸಾರ್ವಜನಿಕ ಪ್ರಕಟಣೆಯಲ್ಲಿ ತಿಳಿಸಿದೆ.

ಆದಾಯ ತೆರಿಗೆ ಕಾಯ್ದೆ 1961ರ ಪ್ರಕಾರ, 2023ರ ಮಾರ್ಚ್ 31ರ ಒಳಗಾಗಿ ಆಧಾರ್ ಜೊತೆ ಪ್ಯಾನ್ ಜೋಡಣೆ ಮಾಡುವುದು ಕಡ್ಡಾಯ. ಹಾಗೆ ಮಾಡದೇ ಇದ್ದರೆ 2023ರ ಏಪ್ರಿಲ್ 1 ರಿಂದ ಪ್ಯಾನ್ ನಿಷ್ಕ್ರಿಯ ಆಗಲಿದೆ. ಗಡುವಿನ ಒಳಗಾಗಿ ಪ್ಯಾನ್–ಆಧಾರ್ ಜೋಡಣೆ ಮಾಡದೆ ಇದ್ದರೆ ಪ್ಯಾನ್ ನಿಷ್ಕ್ರಿಯ ಆಗುತ್ತದೆ. ಅದರಿಂದಾಗಿ ಆದಾಯ ವಿವರ ಸಲ್ಲಿಸಲು, ತೆರಿಗೆ ರೀಫಂಡ್ ಪಡೆಯಲು ಆಗುವುದಿಲ್ಲ ಎಂದು ನೇರ ತೆರಿಗೆಗಳ ಕೇಂದ್ರೀಯ ಮಂಡಳಿ (ಸಿಬಿಡಿಟಿ) ಈಗಾಗಲೇ ಎಚ್ಚರಿಕೆ ನೀಡಿದೆ.

ರಿಲಯನ್ಸ್ ಕ್ಯಾಪಿಟಲ್ ಸ್ವಾಧೀನ: ಬಿಡ್ ಮೊತ್ತ ಹೆಚ್ಚಿಸಿದ ಹಿಂದುಜಾ

ನವದೆಹಲಿ (ಪಿಟಿಐ): ಅನಿಲ್ ಅಂಬಾನಿ ಒಡೆತನದ ರಿಲಯನ್ಸ್ ಕ್ಯಾಪಿಟಲ್ ಕಂಪನಿಯನ್ನು ಸ್ವಾಧೀನಪಡಿಸಿಕೊಳ್ಳಲು ಹಿಂದುಜಾ ಸಮೂಹವು ತನ್ನ ಬಿಡ್ ಮೊತ್ತವನ್ನು ₹9,500 ಕೋಟಿಗೆ ಹೆಚ್ಚಿಸಲಿದೆ ಎಂದು ಮೂಲಗಳು ಹೇಳಿವೆ. ಆದರೆ, ಈ ಕುರಿತು ಸಮೂಹವು ಪ್ರತಿಕ್ರಿಯೆ ನೀಡಿಲ್ಲ.

ಇದೇ 21ರಂದು ನಡೆದಿದ್ದ ಮೊದಲ ಹಂತದ ಹರಾಜಿನಲ್ಲಿ ಅಹಮದಾಬಾದ್‌ನ ಟೊರೆಂಟ್ ಸಮೂಹವು ₹8,640 ಕೋಟಿ ಮೊತ್ತದ ಬಿಡ್ ಸಲ್ಲಿಸಿತ್ತು. ಹಿಂದುಜಾ ಸಮೂಹವು ₹8,110 ಕೋಟಿ ಮೊತ್ತಕ್ಕೆ ಖರೀದಿ ಮಾಡುವುದಾಗಿ ಹೇಳಿತ್ತು. ಆದರೆ, ಇದೀಗ ತನ್ನ ಬಿಡ್ ಮೊತ್ತವನ್ನು ಬದಲಾಯಿಸಲು ಮುಂದಾಗಿದೆ. ಸಲ್ಲಿಕೆ ಆಗಿರುವ ಬಿಡ್‌ಗಳ ಪರಿಶೀಲನೆ ನಡೆಸಲು ಸಾಲ ನೀಡಿರುವ ಕಂಪನಿಗಳು ಸೋಮವಾರ ಸಭೆ ಸೇರಲಿವೆ ಎಂದು ಮೂಲಗಳು ತಿಳಿಸಿವೆ.

ರಾಷ್ಟ್ರೀಯ ಕಂಪನಿ ಕಾಯ್ದೆ ನ್ಯಾಯಮಂಡಳಿಯ (ಎನ್‌ಸಿಎಲ್‌ಟಿ) ಆದೇಶದ ಪ್ರಕಾರ, 2023ರ ಜನವರಿ 31ರ ಒಳಗಾಗಿ ದಿವಾಳಿ ಪ್ರಕ್ರಿಯೆ ಪೂರ್ಣಗೊಳ್ಳಬೇಕಿದೆ.

ವಿಡಿಯೊಕಾನ್ ಸಮೂಹಕ್ಕೆ ಸಾಲ ಮಂಜೂರಾತಿಯಲ್ಲಿ ಅಕ್ರಮ

26ರವರೆಗೆ ಸಿಬಿಐ ವಶಕ್ಕೆ ಕೊಚ್ಚರ್



ಚಂದಾ ಕೊಚ್ಚರ್

ಮುಂಬೈ (ಪಿಟಿಐ): ವಿಡಿಯೊಕಾನ್ ಸಮೂಹಕ್ಕೆ ಸಾಲ ಮಂಜೂರಾತಿಯಲ್ಲಿ ಅಕ್ರಮ ಎಸಗಿರುವ ಸಂಬಂಧ ಐಸಿಐಸಿಐ ಬ್ಯಾಂಕ್‌ನ ಮಾಜಿ ಸಿಇಒ ಚಂದಾ ಕೊಚ್ಚರ್ ಹಾಗೂ ಅವರ ಪತಿ ದೀಪಕ್ ಕೊಚ್ಚರ್ ಅವರನ್ನು ಸೋಮವಾರದವರೆಗೆ (ಡಿ.26) ಸಿಬಿಐ ವಶಕ್ಕೆ ಒಪ್ಪಿಸಲಾಗಿದೆ.

ಸಿಬಿಐನ ವಿಶೇಷ ನ್ಯಾಯಲಯವು ಶನಿವಾರ ಆದೇಶ ನೀಡಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಅಧಿಕಾರಿಗಳು ಶುಕ್ರವಾರ ಇಬ್ಬರನ್ನು ಬಂಧಿಸಿದ್ದರು. ಪ್ರತಿಕ್ರಿಯೆ ನೀಡದೇ ನುಣುಚಿಕೊಳ್ಳುತ್ತಿರುವುದರ ಜೊತೆಗೆ ತನಿಖೆಗೆ ಸಹಕರಿಸುತ್ತಿಲ್ಲ ಎಂದು ಸಿಬಿಐ ಅಧಿಕಾರಿಗಳು ಆರೋಪ ಮಾಡಿದ್ದಾರೆ.

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿ ಚಂದಾ ಕೊಚ್ಚರ್, ದೀಪಕ್ ಕೊಚ್ಚರ್ ಮತ್ತು ವೀಡಿಯೊಕಾನ್ ಸಮೂಹದ ವೇಣುಗೋಪಾಲ್ ಧೂತ್ ಅವರ ವಿರುದ್ಧ ಸಿಬಿಐ ಪ್ರಕರಣ ದಾಖಲು ಮಾಡಿಕೊಂಡಿತ್ತು. ಕಂಪನಿಗಳಾದ ನ್ಯೂಪವರ್ ರಿನ್ಯೂವಬಲ್ಸ್, ಸುಪ್ರೀಂ ಎನರ್ಜಿ, ವಿಡಿಯೊಕಾನ್ ಇಂಟರ್‌ನ್ಯಾಷನಲ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಮತ್ತು ವಿಡಿಯೊಕಾನ್ ಇಂಡಸ್ಟ್ರೀಸ್ ಲಿಮಿಟೆಡ್ ವಿರುದ್ಧವೂ ಸಿಬಿಐ 2019ರಲ್ಲಿ ಎಫ್‌ಐಆರ್ ದಾಖಲು ಮಾಡಿತ್ತು.

ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, ಆರ್‌ಬಿಐ ಮಾರ್ಗಸೂಚಿಗಳು ಹಾಗೂ ಬ್ಯಾಂಕ್‌ನ ಸಾಲ ನೀತಿಗಳ ಉಲ್ಲಂಘನೆ ಮಾಡಿ, ವಿಡಿಯೊಕಾನ್ ಸಮೂಹಕ್ಕೆ ₹3,250 ಕೋಟಿ ಸಾಲ ಮಂಜೂರು ಮಾಡಲಾಗಿದೆ ಎಂದು ಐಸಿಐಸಿಐ ಬ್ಯಾಂಕ್ ವಿರುದ್ಧ ಸಿಬಿಐ ಆರೋಪ ಮಾಡಿದೆ.

2012ರಲ್ಲಿ ಐಸಿಐಸಿಐ ಬ್ಯಾಂಕ್‌ನಿಂದ ₹ 3,250 ಕೋಟಿ ಸಾಲ ಪಡೆದ ಕೆಲವೇ ತಿಂಗಳಲ್ಲಿ ಧೂತ್ ಅವರು ನ್ಯೂಪವರ್ ಕಂಪನಿಯಲ್ಲಿ ಕೋಟ್ಯಂತರ ರೂಪಾಯಿ ಹೂಡಿಕೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ಐಸಿಐಸಿಐ ಬ್ಯಾಂಕ್‌ಗೆ ವಂಚಿಸುವ ಉದ್ದೇಶದಿಂದ ಆರೋಪಿಗಳು ಇತರ ಕೆಲವರ ಜೊತೆ ಶಾಮೀಲಾಗಿ ಖಾಸಗಿ ಕಂಪನಿಗಳಿಗೆ ಸಾಲ ಮಂಜೂರು ಮಾಡಿದ್ದಾರೆ ಎಂದು ಕೂಡ ಆರೋಪ ಹೊರಿಸಲಾಗಿದೆ.

RO No. 803: DIPR/CTA/MCA/2022-23

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	250-300
ನಡುಗೋಲು	450-480
ರಾಶಿ	480-500
ರಾಶಿ ಉತ್ತಮ	550-600
ಜರಡಿ	700-750
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1250-1350
ಕಾಳು ಮೆಣಸು	500

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13500	13500	13450	164.30 ಸೆಂಟ್ಸ್
ಎಸಿ	7000	6850	6100	
ಆರ್‌ಪಿ	8000	8300	8000	ಲಂಡನ್
ಆರ್‌ಸಿ	4510	165 on OT	4250	1945 ಡಾಲರ್ಸ್

ಕೊಬ್ಬರಿ: ಎಂಎಸ್‌ಪಿ ಹೆಚ್ಚಳ



ನವದೆಹಲಿ (ಪಿಟಿಐ): ತೆಂಗಿನ ಎಣ್ಣೆ ಉತ್ಪಾದನೆಗೆ ಬಳಸುವ ಕೊಬ್ಬರಿಯ (ಮಿಲ್ಲಿಂಗ್ ಕೊಪ್ರಾ) ಮತ್ತು ತಿನ್ನುವ ಕೊಬ್ಬರಿಯ (ಬಾಲ್ ಕೊಪ್ರಾ) ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ಕೇಂದ್ರ ಸರ್ಕಾರವು ಕ್ರಮವಾಗಿ ಕ್ವಿಂಟಲ್‌ಗೆ ₹ 270ರಷ್ಟು ಮತ್ತು ₹ 750ರಷ್ಟು ಏರಿಕೆ ಮಾಡಿದೆ.

ಎಂಎಸ್‌ಪಿ ಹೆಚ್ಚಳದಿಂದಾಗಿ ಸಾಮಾನ್ಯ ಗುಣಮಟ್ಟದ (ಎಫ್‌ಎಕ್ಯು) ಮಿಲ್ಲಿಂಗ್ ಕೊಪ್ರಾದ ಎಂಎಸ್‌ಪಿಯನ್ನು ಕ್ವಿಂಟಲ್‌ಗೆ ₹ 10,860ಕ್ಕೆ ಮತ್ತು ಬಾಲ್ ಕೊಪ್ರಾ ಬೆಲೆ ಕ್ವಿಂಟಲ್‌ಗೆ ₹11,750ಕ್ಕೆ ಏರಿಕೆಯಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಆರ್ಥಿಕ ವ್ಯವಹಾರಗಳ ಸಂಸತ್ ಸಮಿತಿಯು 2023ರ ಅವಧಿಗೆ ಈ ಎಂಎಸ್‌ಪಿಗೆ ಒಪ್ಪಿಗೆ ನೀಡಿತು ಎಂದು ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕೇಂದ್ರ ಸರ್ಕಾರದ ಬೆಲೆ ಸಲಹಾ ಸಂಸ್ಥೆಯಾಗಿರುವ ಕೃಷಿ ವೆಚ್ಚ ಮತ್ತು ಬೆಲೆ ಆಯೋಗ (ಸಿಎಸಿಪಿ) ಹಾಗೂ ಕೊಬ್ಬರಿ ಬೆಳೆಯುವ ಪ್ರಮುಖ ರಾಜ್ಯಗಳ ಶಿಫಾರಸಿಗೆ ಅನುಗುಣವಾಗಿ ಈ ನಿರ್ಧಾರಕ್ಕೆ ಬರಲಾಗಿದೆ.

ಮಿಲ್ಲಿಂಗ್ ಕೊಪ್ರಾದ ಎಂಎಸ್‌ಪಿಯು ಉತ್ಪಾದನಾ ವೆಚ್ಚಕ್ಕಿಂತಲೂ ಶೇ 51.82ರಷ್ಟು ಹಾಗೂ ಬಾಲ್ ಕೊಪ್ರಾ ಎಂಎಸ್‌ಪಿ ಶೇ 64.26ರಷ್ಟು ಹೆಚ್ಚಿಗೆ ಇದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಎಂಎಸ್‌ಪಿಯು ಬೆಳೆಗಳಿಗೆ ಸ್ಥಿರ ಬೆಲೆಯನ್ನು ಖಾತರಿಪಡಿಸುತ್ತದೆಯೇ ಹೊರತು ಉತ್ತಮ ಬೆಲೆಯನ್ನು ಅಲ್ಲ. ಬೆಳೆಗಳಿಗೆ ಉತ್ತಮ ಬೆಲೆ ಸಿಗಬೇಕು ಎಂದಾದರೆ ಮಾರುಕಟ್ಟೆಯಲ್ಲಿ ನ್ಯಾಯುತವಾದ ಸ್ಪರ್ಧೆ ಇರಬೇಕು. ಬೆಲೆ ಏರಿಳಿತದಿಂದ ರೈತರಿಗೆ ರಕ್ಷಣೆ ಸಿಗಬೇಕು ಎಂದು ನೀತಿ ಆಯೋಗದ ಸದಸ್ಯ ರಮೇಶ್ ಚಂದ ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

24–12-2022

ಜಾವಾ 70/80(ಹೊಸ)	11650-11700
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1175 (1175)
ಪಾಮ್ ವಾರದ ಡೆಲಿವರಿ	940 (938)
ಸೂರ್ಯಕಾಂತಿ ಎಣ್ಣೆ ಕಚ್ಚಾ	1220 (1230)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
54,115 (54,200)
ಬೆಳ್ಳಿ ಕೆ.ಜಿ 67,400 (67,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಒಬಿಸಿಗೆ ಜಾತಿ ಆಧಾರಿತ ಗಣತಿ ಅರ್ಜಿ: ಕೇಂದ್ರಕ್ಕೆ ನೋಟಿಸ್

ನವದೆಹಲಿ (ಪಿಟಿಐ): ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಸಂಬಂಧಿಸಿ ಜಾತಿ ಆಧಾರಿತ ಗಣತಿ ನಡೆಸುವಂತೆ ನಿರ್ದೇಶಿಸಲು ಕೋರಿದ ಅರ್ಜಿ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದೆ.

ಅರ್ಜಿ ವಿಚಾರಣೆ ನಡೆಸಿದ ಮುಖ್ಯ-ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿ ಪಿ.ಎಸ್.ನರಸಿಂಹ ಅವರನ್ನು ಒಳಗೊಂಡ ನ್ಯಾಯಪೀಠ, ಈ ಸಂಬಂಧ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯಕ್ಕೂ ನೋಟಿಸ್ ಜಾರಿ ಮಾಡಿತು.

ವಕೀಲ ಕ್ರಿಶನ್ ಕನ್ಹಯ್ಯ ಪಾಲ್ ಎಂಬುವವರು ಅರ್ಜಿ ಸಲ್ಲಿಸಿದ್ದಾರೆ.

ಟೆಲಿಕಾಂ: 10 ಅಧಿಕಾರಿಗಳಿಗೆ ಕಡ್ಡಾಯ ನಿವೃತ್ತಿ

ನವದೆಹಲಿ (ಪಿಟಿಐ): ದೂರಸಂಪರ್ಕ ಇಲಾಖೆಯ ಜಂಟಿ ಕಾರ್ಯದರ್ಶಿ ಸಹಿತ ಇಲಾಖೆಯ 10 ಮಂದಿ ಹಿರಿಯ ಅಧಿಕಾರಿಗಳಿಗೆ ಕಡ್ಡಾಯ ನಿವೃತ್ತಿಗೆ ಸಚಿವ ಅಶ್ವಿನ್ ವೈಷ್ಣವ್ ಅನುಮತಿ ನೀಡಿದ್ದಾರೆ. ಶೂನ್ಯ ಭ್ರಷ್ಟಾಚಾರ ಸರ್ಕಾರ ಕಾರ್ಯಕ್ರಮದ ಮುಂದುವರಿದ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ.

ನಿರ್ದೇಶಕ ಹಂತದಲ್ಲಿ ಕೆಲಸ ಮಾಡುತ್ತಿದ್ದ 9 ಅಧಿಕಾರಿಗಳು ಹಾಗೂ ಜಂಟಿ ಕಾರ್ಯದರ್ಶಿ ಶ್ರೇಣಿಯಲ್ಲಿದ್ದ ಒಬ್ಬರು ಸೇರಿ 10 ಅಧಿಕಾರಿಗಳಿಗೆ ಕಡ್ಡಾಯ ನಿವೃತ್ತಿಗೆ ಅನುಮೋದನೆ ನೀಡಲಾಗಿದೆ. ಪ್ರತಿ ವರ್ಷ ಸರ್ಕಾರ ಆಚರಿಸುವ 'ಉತ್ತಮ ಆಡಳಿತ ದಿನ' ಮುನ್ನಾ ದಿನ ಈ ಕ್ರಮ ಕೈಗೊಳ್ಳಲಾಗಿದೆ.

ಕಮ್ಯುನಿಸ್ಟ್ ದೇಶದಲ್ಲಿ ಕೋವಿಡ್ ಸ್ಫೋಟ: ಐಸಿಯು, ಸ್ಮಶಾನ, ಚಿತಾಗಾರ ಭರ್ತಿ

ಚೀನಾ: ನಗರವೊಂದರಲ್ಲೇ 5 ಲಕ್ಷ ಪ್ರಕರಣ

ಬೀಜಿಂಗ್ (ಎಎಫ್‌ಪಿ): ಚೀನಾದ ನಗರವೊಂದರಲ್ಲಿಯೇ ನಿತ್ಯ ಐದು ಲಕ್ಷಕ್ಕೂ ಹೆಚ್ಚು ಕೋವಿಡ್ ಸೋಂಕಿತ ಪ್ರಕರಣಗಳು ವರದಿಯಾಗುತ್ತಿವೆ ಎಂದು ಹಿರಿಯ ಆರೋಗ್ಯಾಧಿಕಾರಿಯೊಬ್ಬರು ಶುಕ್ರವಾರ ಮಾಹಿತಿ ನೀಡಿದ್ದರು. ಇದು ಗಮನಕ್ಕೆ ಬಂದ ತಕ್ಷಣವೇ ಚೀನಿ ಸರ್ಕಾರ, ಇದು ತನ್ನ ಅಧಿಕೃತ ಅಂಕಿಅಂಶಗಳಲ್ಲಿ ಪ್ರತಿಫಲಿಸುವುದಿಲ್ಲ ಎಂದೂ ಆರೋಗ್ಯಾಧಿಕಾರಿಗಳ ಮಾಹಿತಿಗೆ ಶನಿವಾರ ಕತ್ತರಿ (ಸೆನ್ಸಾರ್) ಪ್ರಯೋಗಿಸಿದೆ.

ಕಿಂಗ್ಡಾವೊದ ಪೂರ್ವ ನಗರದಲ್ಲಿ ನಿತ್ಯ 4.90 ಲಕ್ಷದಿಂದ 5.30 ಲಕ್ಷ ಹೊಸ ಕೋವಿಡ್ ಪ್ರಕರಣಗಳು ವರದಿಯಾಗುತ್ತಿವೆ ಎಂದು ಸ್ಥಳೀಯ ನಗರಾಡಳಿತದ ಆರೋಗ್ಯ ಇಲಾಖೆ ಮುಖ್ಯಸ್ಥರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿರುವುದಾಗಿ ಆಡಳಿತಾರೂಢ ಕಮ್ಯುನಿಸ್ಟ್ ಪಕ್ಷದ ಸುದ್ದಿವಾಹಿನಿಯೊಂದು ವರದಿ ಮಾಡಿತ್ತು.

ಸೋಂಕಿನ ಪ್ರಮಾಣ ವಾರಾಂತ್ಯದಲ್ಲಿ ಮತ್ತೆ ಶೇ 10ರಷ್ಟು ಏರುವ ಸಾಧ್ಯತೆ ಇದೆ ಎಂದು 'ಬೋ ಟೌ' ವರದಿ ಮಾಡಿತ್ತು. ಈ ವರದಿಯನ್ನು ಇತರ ಹಲವು ಸುದ್ದಿಸಂಸ್ಥೆಗಳು ಹಂಚಿಕೊಂಡಿದ್ದವು. ಆದರೆ, ಈ ವರದಿಗೆ ಕತ್ತರಿಹಾಕಿ, ಪ್ರಕರಣದ ಅಂಕಿ ಅಂಶಗಳನ್ನು ತೆಗೆದಿರುವುದು ಶನಿವಾರ ಕಂಡುಬಂದಿದೆ.

ಹೈನನ್‌ನ ಹಿರಿಯ ಆರೋಗ್ಯ ಅಧಿಕಾರಿಯೊಬ್ಬರು ದ್ವೀಪ ಪ್ರಾಂತ್ಯದಲ್ಲಿ ಶೀಘ್ರವೇ ಗರಿಷ್ಠ ಸೋಂಕಿತ ಪ್ರಕರಣಗಳು ವರದಿಯಾಗಲಿವೆ. ಶಾಂಘೈನ ಪೂರ್ವ ಮೆಗಾಸಿಟಿಯಲ್ಲಿ 40,000ಕ್ಕೂ ಹೆಚ್ಚು ರೋಗಿಗಳಿಗೆ ಜ್ವರಕ್ಕಾಗಿ ಚಿಕಿತ್ಸೆ ನೀಡಲಾಗಿದೆ ಎಂದು ಹೇಳಿರುವುದನ್ನು ಸರ್ಕಾರಿ ಪೀಪಲ್ಸ್ ಡೈಲಿ ಪತ್ರಿಕೆ ಶನಿವಾರ ವರದಿ ಮಾಡಿದೆ.

ಪೂರ್ವದ ಜಿಯಾಂಗ್‌ಷಿ ಪ್ರಾಂತ್ಯದ ಶೇ 80ರಷ್ಟು (ಸುಮಾರು 3.6 ಕೋಟಿ) ಜನರಿಗೆ ಮಾರ್ಚ್ ಒಳಗೆ ಸೋಂಕು ಹರಡಲಿದೆ ಎಂದು ಪ್ರಾಂತೀಯ ಆಡಳಿತವು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿತ್ತು. ಅಲ್ಲದೇ ಸುಮಾರು 18 ಸಾವಿರ ಕೋವಿಡ್ ರೋಗಿಗಳು ಪ್ರಾಂತ್ಯದ ಪ್ರಮುಖ ವೈದ್ಯಕೀಯ ಸಂಸ್ಥೆಗಳಲ್ಲಿ ದಾಖಲಾಗಿದ್ದರು. ಇದರಲ್ಲಿ ಸುಮಾರು 500 ಗಂಭೀರ ಪ್ರಕರಣಗಳಿವೆ. ಆದರೆ, ಈ ವರೆಗೆ ಯಾವುದೇ ಸಾವು ಸಂಭವಿಸಿಲ್ಲ ಎಂದು ಹೇಳಿಕೆ ಬಿಡುಗಡೆ ಮಾಡಿದೆ.

ಚೀನಾದ ರಾಷ್ಟ್ರೀಯ ಆರೋಗ್ಯ ಆಯೋಗವು ಶುಕ್ರವಾರ ದೇಶದಾದ್ಯಂತ 4,103 ಸೋಂಕಿತ ಪ್ರಕರಣಗಳು ಹಾಗೂ ಶೂನ್ಯ ಸಾವು ಸಂಭವಿಸಿದೆ.

ಕಿಂಗ್ಡಾವೊ ಇರುವ ಪ್ರಾಂತ್ಯದ ಶಾನ್‌ಡಾಂಗ್‌ನ ಅಧಿಕಾರಿಗಳು ಕೇವಲ 31 ಹೊಸ ಪ್ರಕರಣಗಳು ಪತ್ತೆಯಾಗಿರುವುದಾಗಿ ಅಧಿಕೃತ ಹೇಳಿಕೆ ನೀಡಿದ್ದಾರೆ.

ಚಿತಾಗಾರ, ಸ್ಮಶಾನ ಭರ್ತಿ: ದೇಶದಾದ್ಯಂತ ಸೋಂಕಿತ ಪ್ರಕರಣಗಳು ಏರುತ್ತಿರುವ ಪರಿಣಾಮ ಔಷಧಾಲಯಗಳಲ್ಲಿ ಔಷಧಿಗಳು ಬರಿದಾಗಿವೆ. ಆಸ್ಪತ್ರೆಗಳ ವಾರ್ಡ್‌ಗಳು, ತೀವ್ರ ನಿಗಾ ಘಟಕಗಳು ಸೋಂಕಿತರಿಂದ ತುಂಬಿವೆ. ಸೋಂಕಿತರನ್ನು, ಶವಗಳನ್ನು ಸಾಗಿಸಲು ಆಂಬುಲೆನ್ಸ್‌ಗಳು ಬಿಡುವಿಲ್ಲದೆ ಕಾರ್ಯಾಚರಿಸುತ್ತಿವೆ. ಸ್ಮಶಾನಗಳು ಮತ್ತು ಚಿತಾಗಾರಗಳಲ್ಲಿ ಅಂತ್ಯಕ್ರಿಯೆಗೆ ಸರದಿ ಸಾಲು ಹೆಚ್ಚುತ್ತಿದೆ.

'ಒಂದೊಂದು ಚಿತಾಗಾರದಲ್ಲಿ ದಿನವೂ ಕನಿಷ್ಠ 25ರಿಂದ 30 ಶವಗಳ ದಹನ ನಡೆಯುತ್ತಿದೆ. ಕೋವಿಡ್‌ಗಿಂತ ಮೊದಲು 3ರಿಂದ 4 ಶವಗಳಷ್ಟೇ ಬರುತ್ತಿದ್ದವು' ಚಿತಾಗಾರದ ಕಾರ್ಮಿಕರು ಮಾಹಿತಿ ಹಂಚಿಕೊಂಡಿದ್ದಾರೆ.

ದೇಶದಲ್ಲಿ ಕೋವಿಡ್ ಶೂನ್ಯಕ್ಕಿಳಿಸಲು ಜನರು ಮನೆಯಿಂದ ಆಚೆ ಬರದಂತೆ ಹೇರಿದ್ದ ಕಠಿಣ ನಿರ್ಬಂಧಗಳನ್ನು ಷಿ ಜಿನ್‌ಪಿಂಗ್ ಆಡಳಿತ ಜನಾಕ್ರೋಶಕ್ಕೆ ಮಣಿದು ಅಷ್ಟೇ ತ್ವರಿತವಾಗಿ ಸಡಿಲಗೊಳಿಸಿತು. ಕೆಲ ದಿನಗಳಲ್ಲೇ ಸೋಂಕು ಉಲ್ಬಣಿಸಿ, ಸರ್ಕಾರದ ನೀತಿ ದೇಶಕ್ಕೆ ವ್ಯತಿರಿಕ್ತವಾಗಿ ಪರಿಣಮಿಸಿದೆ.

ಬೀಜಿಂಗ್‌ನ ಕೈಗಾರಿಕಾ ನಗರ ಹೆಬೆ ಪ್ರಾಂತ್ಯದ ಕೌಂಟಿ ಆಸ್ಪತ್ರೆಯ ಜ್ವರ ಚಿಕಿತ್ಸಾಲಯದ ಹೊರಗೆ ರೋಗಿಗಳ ಸರದಿ ಸಾಲಿನಲ್ಲಿ ನಿಂತಿದ್ದ ಸೋಂಕಿತ ಯೌ ರುಯಾನ್, ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದರು.

'ಕೋವಿಡ್ ಸೋಂಕಿತ ಅತ್ತೆಗೆ ತಕ್ಷಣ ಚಿಕಿತ್ಸೆಯ ಅಗತ್ಯವಿದೆ. ಆದರೆ, ಎಲ್ಲ ಆಸ್ಪತ್ರೆಗಳು ತುಂಬಿ ತುಳುಕುತ್ತಿವೆ. ಯಾವ ಆಸ್ಪತ್ರೆಯಲ್ಲೂ ಹಾಸಿಗೆ ಖಾಲಿ ಇಲ್ಲ' ಎಂದು ಅವರು ಅಳಲು ತೋಡಿಕೊಂಡರು.



ಚೀನಾದ ಉತ್ತರ ಹೆಬೆ ಪ್ರಾಂತ್ಯದ ಬಾಝೌ ನಗರದಲ್ಲಿ ಕೋವಿಡ್ ಪ್ರಕರಣಗಳು ಕ್ಷಿಪ್ರಗತಿಯಲ್ಲಿ ಉಲ್ಬಣಿಸುತ್ತಿದ್ದು, ಕೊರೊನಾ ಸೋಂಕಿತರಿಂದ ಆಸ್ಪತ್ರೆಗಳು ಭರ್ತಿಯಾಗಿವೆ —ಎಪಿ/ಪಿಟಿಐ ಚಿತ್ರ

ಟೆಸ್ಲಾ ಘಟಕ ತಾತ್ಕಾಲಿಕ ಸ್ಥಗಿತ

ಕೋವಿಡ್ ವ್ಯಾಪಕಗೊಳ್ಳುತ್ತಿರುವ ಕಾರಣ ಟೆಸ್ಲಾ ಕಾರು ತಯಾರಿಕಾ ಕಂಪನಿಯು ಶಾಂಘೈ ನಗರದಲ್ಲಿನ ತನ್ನ ಘಟಕದ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ ಎಂದು ಕಂಪನಿಯ ಆಂತರಿಕ ಮೂಲಗಳು ತಿಳಿಸಿವೆ.

₹33 ಕೋಟಿ ಗೆದ್ದ ಭಾರತೀಯ ಮೂಲದ ಚಾಲಕ

ದುಬೈ (ಪಿಟಿಐ): ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ (ಯುಎಇ) ನೆಲೆಸಿರುವ ಭಾರತ ಮೂಲದ ಚಾಲಕ ಅಜಯ್ ಒಗುಲಾ (31) ಅವರು ₹33 ಕೋಟಿ (15 ದಶಲಕ್ಷ ದಿರ್ಹಾಮ್ಸ್) ಮೊತ್ತದ ಲಾಟರಿ ಜಯಿಸಿದ್ದಾರೆ.

ಆಭರಣ ಸಂಸ್ಥೆಯೊಂದರಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿರುವ ಅಜಯ್ ಅವರು ಇದೇ ಮೊದಲ ಬಾರಿಗೆ 2 ಲಾಟರಿ ಟಿಕೆಟ್ ಖರೀದಿಸಿದ್ದರು. ಅವರು ಈ ಹಣದಲ್ಲಿ ಮನೆಯೊಂದನ್ನು ಕಟ್ಟಿಸಿ, ನಿರ್ಮಾಣ ಕಂಪನಿಯೊಂದನ್ನು ಸ್ಥಾಪಿಸುವ ಗುರಿ ಹೊಂದಿದ್ದಾರೆ.

'ಬಾಂಬ್ ಸೈಕ್ಲೋನ್' ಪರಿಣಾಮ: ಅಮೆರಿಕ ತತ್ತರ

ಷಿಕಾಗೊ (ಎಎಫ್‌ಪಿ): ಕ್ರಿಸ್‌ಮಸ್ ಸಂಭ್ರಮಾಚರಣೆಗೆ ಸಿದ್ಧವಾಗುತ್ತಿರುವ ಅಮೆರಿಕಕ್ಕೆ ತೀವ್ರ ಶೀತ ಚಂಡಮಾರುತ (ಬಾಂಬ್ ಸೈಕ್ಲೋನ್) ಅಪ್ಪಳಿಸಿದ್ದು, ತಾಪಮಾನ 'ಮೈನಸ್ 40' ಡಿಗ್ರಿವರೆಗೆ ಕುಸಿದಿದೆ. ಎಲ್ಲ ರಾಜ್ಯಗಳ ಮೇಲೂ ಪರಿಣಾಮ ಬೀರಿದೆ.

ಹಲವು ಕಡೆಗಳಲ್ಲಿ ಹೆದ್ದಾರಿ ಸಂಪರ್ಕ ಬಂದ್ ಆಗಿದೆ. ಸಾವಿರಾರು ವಿಮಾನಗಳ ಸಂಚಾರ ರದ್ದಾಗಿದ್ದು, ಕ್ರಿಸ್‌ಮಸ್ ಸಂದರ್ಭದಲ್ಲಿ ಪ್ರಯಾಣಿಕರು ಪರಿತಪಿಸುತ್ತಿದ್ದಾರೆ. ಹಲವು ರಾಜ್ಯಗಳಲ್ಲಿ ಜನಜೀವನ ಅಸ್ತವ್ಯಸ್ತವಾಗಿದೆ.

ಕೆಲ ಸ್ಥಳಗಳಲ್ಲಿ ತಾಪಮಾನ ವಿಪರೀತ ಕುಸಿದಿದ್ದು, ಜನರು ತತ್ತರಿಸಿದ್ದಾರೆ. ಲಕ್ಷಾಂತರ ಮನೆಗಳಿಗೆ ವಿದ್ಯುತ್ ವ್ಯತ್ಯಯವಾಗಿದೆ.

ಡಲ್ಲಾಸ್, ಟೆಕ್ಸಾಸ್‌ನಲ್ಲಿ ಶುಕ್ರವಾರ -10 ಡಿಗ್ರಿ ದಾಖಲಾಗಿದೆ. ಭಾರಿ ಚಳಿಯ ಪರಿಣಾಮ ಮನೆಯಿಂದ ಹೊರಗೆ ಬಂದರೆ ನಿಮಿಷಗಳಲ್ಲಿ ಫ್ರಾಸ್ಟ್‌ಬೈಟ್ (ಚಳಿಯ ಹೊಡೆತಕ್ಕೆ ಚರ್ಮಕ್ಕೆ ಆಗುವ ಗಾಯ) ಎದುರಿಸಬೇಕಾಗುತ್ತದೆ ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ.

ಉತ್ತರ ಮತ್ತು ದಕ್ಷಿಣ ಡಕೋಟಾ, ಓಕ್ಲಹಾಮ, ಅಯೋವಾ ಮತ್ತು ಇತರೆಡೆ ರಸ್ತೆಗಳು ಮಂಜುಗಡ್ಡೆಯಿಂದ ಆವೃತವಾಗಿದೆ. ಜನರಿಗೆ ಮನೆಯಿಂದ ಹೊರಗೆ ಬಾರದಂತೆ ಎಚ್ಚರಿಕೆ ನೀಡಲಾಗಿದೆ.

ನ್ಯೂಯಾರ್ಕ್, ಸಿಯಾಟಲ್ ಮತ್ತು ಷಿಕಾಗೋದ ಓ'ಹೇರ್‌ನಲ್ಲಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಸುಮಾರು 3,520 ವಿಮಾನಗಳ ಸಂಚಾರವನ್ನು ಶುಕ್ರವಾರ ರದ್ದುಗೊಳಿಸಲಾಗಿದೆ ಮತ್ತು 1,900 ವಿಮಾನಗಳು ವಿಳಂಬವಾಗಿದೆ. ದಕ್ಷಿಣದ ರಾಜ್ಯಗಳಲ್ಲೂ ವಿಪರೀತ ಚಳಿ ಆವರಿಸಿದೆ.

ಏನಿದು ಬಾಂಬ್ ಸೈಕ್ಲೋನ್: ಭೂಮಿಯ ಮೇಲ್ಮೈ ಭಾಗದ ಬೆಚ್ಚನೆಯ ಗಾಳಿಗೆ ಭಾರಿ ಶೀತಗಾಳಿ ಡಿಕ್ಕಿ ಹೊಡೆದಾಗ ಉಂಟಾಗುವ ಒತ್ತಡಕ್ಕೆ ಬಾಂಬ್ ಸೈಕ್ಲೋನ್ ಎಂದು ಕರೆಯಲಾಗುತ್ತದೆ. 24 ಗಂಟೆಯೊಳಗೆ ಗಾಳಿಯ ಒತ್ತಡ 20 ಮಿಲಿಬಾರ್ ಅಥವಾ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕುಸಿದಾಗ ಉಂಟಾಗುವ ತೀವ್ರಗತಿಯ ಮಾರುತವನ್ನು ಸಹ ಇದೇ ಹೆಸರಿನಿಂದ ಕರೆಯಲಾಗುತ್ತದೆ.

ಸಂಕ್ಷಿಪ್ತ ಸುದ್ದಿ

'ಆಧಾರ್: ದಾಖಲೆ ನವೀಕರಿಸಿ'

ನವದೆಹಲಿ (ಪಿಟಿಐ): '10 ವರ್ಷಗಳ ಹಿಂದೆ ಆಧಾರ್ ಕಾರ್ಡ್ ಪಡೆದಿದ್ದವರು ಹಾಗೂ ಈವರೆಗೂ ದಾಖಲೆಗಳನ್ನು ನವೀಕರಿಸದೇ ಇರುವವರು ಶೀಘ್ರವೇ ತಮ್ಮ ಮಾಹಿತಿಯನ್ನು ನವೀಕರಣ ಮಾಡಿಕೊಳ್ಳಬೇಕು' ಎಂದು ಭಾರತೀಯ ವಿಶಿಷ್ಟ ಗುರುತು ಪ್ರಾಧಿಕಾರವು (ಯುಐಡಿಎಐ) ಆಧಾರ್ ಬಳಕೆದಾರರಿಗೆ ಶನಿವಾರ ಸೂಚನೆ ನೀಡಿದೆ.

'ಬಳಕೆದಾರರು 'ಮೈ ಆಧಾರ್' ಪೋರ್ಟಲ್‌ನಲ್ಲಿ ಗುರುತಿನ ಚೀಟಿ ಮತ್ತು ವಿಳಾಸ ದೃಢೀಕರಣ ಪತ್ರವನ್ನು ಅಪ್ಲೋಡ್ ಮಾಡುವ ಮೂಲಕ ತಮ್ಮ ಮಾಹಿತಿಯನ್ನು ನವೀಕರಿಸಬಹುದು. ಇಲ್ಲವೇ ಹತ್ತಿರದ ಆಧಾರ್ ಕೇಂದ್ರಕ್ಕೆ ಭೇಟಿ ನೀಡಿ ತಿದ್ದುಪಡಿ ಮಾಡಿಕೊಳ್ಳಬಹುದು' ಎಂದು ಯುಐಡಿಎಐ ಪ್ರಕಟಣೆ ತಿಳಿಸಿದೆ.

ಕೆರ್ಸಾನ್ ಮೇಲೆ ದಾಳಿ: ಐವರ ಸಾವು

ಕೀವ್/ವಾಷಿಂಗ್ಟನ್ (ಎಎಫ್‌ಪಿ/ರಾಯಿಟರ್ಸ್): ಉಕ್ರೇನ್ ದಕ್ಷಿಣ ನಗರ ಕೆರ್ಸಾನ್ ಕೇಂದ್ರ ಭಾಗವನ್ನು ಗುರಿಯಾಗಿಸಿ ರಷ್ಯಾ ಸೇನೆ ಶನಿವಾರ ನಡೆಸಿದ ದಾಳಿಯಲ್ಲಿ ಕನಿಷ್ಠ ಐವರು ಮೃತಪಟ್ಟಿದ್ದು, 20 ಮಂದಿ ಗಾಯಗೊಂಡಿದ್ದಾರೆ ಎಂದು ಉಕ್ರೇನ್ ತಿಳಿಸಿದೆ.



ಕ್ಯಾಮೆರಾ v/s ಕುವೆಂಪು

ಮಗುವೊಂದನ್ನು ಆಡಲು ಬಿಟ್ಟು ಅದರ ಛಾಯಾಚಿತ್ರಗಳನ್ನು ಮತ್ತೊಂದು ಮಗು ಚಿತ್ರಿಸಿದರೆ ಹೇಗಿರುತ್ತದೆ? ಅದಕ್ಕೆ ಉದಾಹರಣೆ ರೂಪದಲ್ಲಿ ನೋಡಬಹುದಾದ ಕೃತಿ – 'ಕ್ಯಾಮರಾ v/s ಕುವೆಂಪು'.

'ಸಾವಿರ ವರ್ಷಗಳ ಮಗು' ಎನ್ನುವುದು ಗೊಮ್ಮಟನ ಕುರಿತು ಕವಿಬಣ್ಣನೆ. ಇಲ್ಲಿರುವುದು ಗೊಮ್ಮಟನಷ್ಟೇ ಉನ್ನತ ವ್ಯಕ್ತಿತ್ವದ ತೊಂಬತ್ತು ದಾಟಿದ ಮಗು. ಪಟ ತೆಗೆದವರೂ ಸಾಮಾನ್ಯರಲ್ಲ. ನಾಡಿಗಿಂತಲೂ ಕಾಡಿನ ಬಗ್ಗೆಯೇ ಹೆಚ್ಚು ಸೆಳೆತವುಳ್ಳವರು, ಅಂತರರಾಷ್ಟ್ರೀಯ ಖ್ಯಾತಿಯ ವನ್ಯಜೀವಿ ಛಾಯಾಗ್ರಾಹಕರು, ನಡವಳಿಕೆಯಲ್ಲಿ 'ಮಗುತನ' ಉಳಿಸಿಕೊಂಡವರು.

ಕುವೆಂಪು ಅವರ ಕುರಿತ ಚಿತ್ರಸಂಪುಟ ಮಾಡುವ ಕನಸಿನ ಬೆನ್ನತ್ತಿದ **ಕೃಪಾಕರ–ಸೇನಾನಿ** ಅವರ ಪ್ರಯತ್ನದ ಫಲ, 'ಕ್ಯಾಮರಾ v/s ಕುವೆಂಪು' ಚಿತ್ರಪಟ ಸಂಪುಟ. 1989ರಲ್ಲಿ ನಡೆದ ನೆರಳುಬೆಳಕಿನ ಅನುಸಂಧಾನ, ಮೂರು ದಶಕಗಳ ನಂತರ ಕೃತಿರೂಪದಲ್ಲಿ ಬೆಳಕುಕಂಡಿದೆ. ಆಧುನಿಕ ಕರ್ನಾಟಕದ ಮಹಾನ್ ದಾರ್ಶನಿಕ ಪ್ರತಿಭೆಯೊಂದರ ದೈನಿಕ ಚಿತ್ರಗಳನ್ನು ದಾಖಲಿಸುವ ಪ್ರಾಂಜಲ ಪ್ರಯತ್ನದಂತೆ ಈ ಕೃತಿ ಗಮನಸೆಳೆಯುತ್ತದೆ.

ವಿವೇಕಾನಂದ, ರಾಮಕೃಷ್ಣ ಪರಮಹಂಸ, ಶಾರದಾದೇವಿ ಅವರಿಗೆ ಕುವೆಂಪು ಪೂಜಾಗೃಹದಲ್ಲಿ ಎದುರಾಗಿದ್ದಾರೆ. ನಮಗೆ ಬೇಕಾದ ಭಕ್ತಿ ಮತ್ತು ವೈಚಾರಿಕತೆಯನ್ನು ಆ ಚಿತ್ರಪಟ ಸೂಚಿಸುವಂತಿದೆ.

ಕೃಪಾಕರ–ಸೇನಾನಿ ಅವರ ಚಿತ್ರಪಟ ಸಂಪುಟದ ಉದ್ದಕ್ಕೂ ಕೆಲಸ ಮಾಡಿರುವುದು, 'ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ, ಯಾವುದೂ ಯಃಕಶ್ಚಿತವಲ್ಲ' ಎನ್ನುವ ಅರಿವು. ಬುಟ್ಟಿಯಲ್ಲಿ ಹಣ್ಣು ತರುವ ಹಣ್ಣಮ್ಮ, ಹೇರ್ ಕಟಿಂಗ್ ಕಲಾವಿದ ಅಶ್ವಥ್ ಇಲ್ಲಿದ್ದಾರೆ. ಇಲ್ಲಿನ ಚಿತ್ರಪಟಗಳಲ್ಲಿ ಕುವೆಂಪು ನೆರಳಿನಂತೆ, ಬೆಳಕಿನಕೋಲಿನಂತೆ, ನಡಿಗೆ ಕಲಿತ ಮಗುವೊಂದರ ಎಚ್ಚರದ ಚಲನೆಯಂತೆ, ಪ್ರಕೃತಿಯ ಚಲನೆ–ನಿಶ್ಚಲದಂತೆ ಕಾಣಿಸುತ್ತಾರೆ. ಕವಿಯ ಕುರ್ಚಿ, ಊರುಗೋಲು, ಪತ್ರಿಕೆಗೂ ಇಲ್ಲಿ ಜೀವವಿದೆ. ಮೇಜಿನ ಹಿಂದೆ ಇಣುಕುವ ಪಿಳಿಪಿಳಿ ಕಣ್ಣುಗಳ ಕವಿ, ಕ್ಷೌರಕ್ಕೆ ಒಪ್ಪಿಸಿಕೊಂಡ ಕವಿ ಎದೆಗಿಳಿಯುತ್ತಾರೆ. 'ಉದಯರವಿ'ಯ ಅಂಗಳದ ಮರಗಳು ಪಿಸುನುಡಿಯುತ್ತವೆ.

ಮಹಾಕಾವ್ಯದಂಥ ವ್ಯಕ್ತಿತ್ವವನ್ನು ಕಾವ್ಯದ ಭಾಷೆಯಲ್ಲಿ ಚಿತ್ರಿಸುವ ಪ್ರಯತ್ನಕ್ಕೆ ದೃಶ್ಯಭಾಷೆಯ ವ್ಯಾಕರಣ ಇಲ್ಲಿ ಕೈಜೋಡಿಸಿದೆ. ಮಹಾಕವಿಯನ್ನು ಅಬ್ಬರವಿಲ್ಲದೆ ಸಹೃದಯರಿಗೆ ಆಪ್ತವಾಗಿಸುವ ಹಂಬಲದ ಅರ್ಥಪೂರ್ಣ ಪ್ರಯತ್ನ, 'ಕ್ಯಾಮರಾ v/s ಕುವೆಂಪು'. ಮೂರು ದಶಕಗಳ ನಂತರ ಈ ಫೋಟೊಗಳು ಸಂಕಲನದ ರೂಪು ಪಡೆದಿರುವುದು, 'ಅವಸರವೂ ಸಾವಧಾನದ ಬೆನ್ನೇರಿದೆ' ಮಾತನ್ನು ನಿಜಗೊಳಿಸುವ ಪ್ರಯತ್ನದಂತಿದೆ.

ಚಿತ್ರಪಟಗಳಿಗೆ ಕೃಪಾಕರ– ಸೇನಾನಿ ಅವರೇ ಬರೆದ ಟಿಪ್ಪಣಿಗಳು ಇಲ್ಲಿವೆ...

ಅಂದಹಾಗೆ, ಇದೇ 29ರಂದು ಕುವೆಂಪು ಅವರ ಜನ್ಮದಿನ.

ಮಂಗಳವಾರ. ಅದು ಮಂಗಳಕರ ದಿನವಲ್ಲ. ಆ ದಿನ ಏನೆಲ್ಲಾ ಮಾಡಬಾರದೆಂಬುದನ್ನು ತಿಳಿದುಕೊಳ್ಳುವ ವೇಳೆಗೆ ಬುಧವಾರ ಆಗಮಿಸಿರುತ್ತದೆ.

ಕುವೆಂಪು ಅವರ ಹೇರ್ ಕಟಿಂಗ್, ಶೇವಿಂಗ್‌ಕಾರ್ಯಕ್ರಮಗಳುಜರುಗುತ್ತಿದ್ದುದೇ ಮಂಗಳವಾರಗಳಂದು, ಆದರೆ, ಅದು ಮೂಢನಂಬಿಕೆಗಳನ್ನು ಧಿಕ್ಕರಿಸಿ ಪ್ರಗತಿಪರ ಧೋರಣೆಯನ್ನು ಅನುಸರಿಸಲೇಬೇಕೆಂಬ ಉದ್ದೇಶದಿಂದೇನಲ್ಲ. 'ಮಂಗಳವಾರ'ದ ಇಕ್ಕಟ್ಟಿನಿಂದಾಗಿ, ವ್ಯಾಪಾರವಿಲ್ಲದೆ ಅನಿವಾರ್ಯವಾಗಿ ಅಂಗಡಿ ಮುಚ್ಚಲೇಬೇಕಿದ್ದ ಅಶ್ವಥ್‌ಗೂ ಸಹ ಬಿಡುವಿರುತ್ತದೆ ಎಂಬ ಕಾರಣದಿಂದಷ್ಟೆ.

ಮಂಗಳವಾರ ಬೆಳಗ್ಗೆ ಹತ್ತು ಗಂಟೆಗೆ ಸರಿಯಾಗಿ ಉದಯರವಿಯಲ್ಲಿ ಅಶ್ವಥ್ ಹಾಜರಿರುತ್ತಿದ್ದರು. ಶಸ್ತ್ರ ಚಿಕಿತ್ಸೆ ಮಾಡುವ ವೈದ್ಯರಂತೆ, ಬಿಳಿಬಟ್ಟೆ ಧರಿಸಿ, ಮೂಗುಬಾಯಿಯನ್ನು ಬಿಳಿಯ ಶುಭ್ರವಸ್ತ್ರದಿಂದ ಬಿಗಿಯಾಗಿ ಕಟ್ಟಿಕೊಂಡು ಹೇರ್‌ಕಟಿಂಗ್ ಆರಂಭಿಸುತ್ತಿದ್ದರು (ಫೋಟೊ ಸೆಷನ್‌ಗಾಗಿ ಆ ಶಿಷ್ಟಾಚಾರಕ್ಕೆ ಒಮ್ಮೆ ಬಿಡುವು ಕೊಡಲಾಗಿತ್ತು!). ಕುವೆಂಪು ಸಹ ತಮ್ಮ ಎಂದಿನ ಬಿಳಿ ಸಮವಸ್ತ್ರದ ಮೇಲೊಂದು ಬಿಳಿಯ ಹೊದಿಕೆಯನ್ನು ಹೊದ್ದು ಕುಳಿತಿರುತ್ತಿದ್ದರು.

'ಕುವೆಂಪು ಜೊತೆಗೆ ಒಂದು ಒಳ್ಳೆ ಫೋಟೊ ತೆಗೆದು ಕೊಡಬೇಕು' ಎಂದು ಅಶ್ವಥ್ ವಿನಂತಿಸಿದ್ದರು. ಅದಕ್ಕೇನಂತೆ ಪುಸ್ತಕ ಮಾಡುತ್ತಿದ್ದೇವೆ. ಅದರ ಪ್ರತಿಯನ್ನೇ ನಿಮಗೆ ನೀಡುತ್ತೇವೆ ಎಂದು ಹೇಳಿದಾಗ ಅವರ ಸಂತೋಷಕ್ಕೆ ಪಾರವೇ ಇಲ್ಲದಾಯಿತು. ನಾವು ಫೋಟೊ ಕೊಡುವುದನ್ನು, ಪುಸ್ತಕ ಮಾಡುವುದನ್ನು ಮರೆತೇ ಬಿಟ್ಟಿದ್ದೆವು. ಈಗ ಪುಸ್ತಕ ಸಿದ್ಧವಾಗಿದೆ. ಆದರೆ ಅಶ್ವಥ್ ಇಲ್ಲ. ಪುಸ್ತಕದಲ್ಲಿ ಮಾತ್ರ ಇದ್ದಾರೆ.




ಉದಯರವಿಯಲ್ಲಿ ಯಾವಾಗಲೂ ಕಿಟಕಿ, ಬಾಗಿಲುಗಳೆಲ್ಲಾ ಮುಚ್ಚಿದ್ದ ಕೊಠಡಿಯೊಂದಿತ್ತು. ಹಿಂದೊಮ್ಮೆ ಕುವೆಂಪು ಅವರು ಓದುತ್ತಾ, ಬರೆಯುತ್ತಾ, ಸಾವಿರಾರು ಗಂಟೆಗಳನ್ನು ಕಳೆದಿದ್ದ ಕೊಠಡಿಯದು. ಅವರ ಬರಹಗಳು ಜಿನುಗಿ, ಹೊಳೆಯಾಗಿ, ಭೋರ್ಗರೆದು ಮಹಾಕಾವ್ಯ, ಕಾದಂಬರಿಗಳ ರೂಪ ಪಡೆದಿದ್ದು ಈ ಕೊಠಡಿಯಲ್ಲೆ...

ಅಂದು ವರಾಂಡದಲ್ಲಿ ವಿಶ್ರಮಿಸಿದ್ದ ಕುವೆಂಪು ಅವರನ್ನು ಆ ಕೊಠಡಿಗೆ ಕರೆದುಕೊಂಡು ಹೋಗಬಹುದೆ ಎಂದು ತಾರಿಣಿಯವರನ್ನು ಸ್ವಲ್ಪ ಹಿಂಜರಿಕೆಯಿಂದಲೇ ಕೇಳಿದೆವು. ಕೆಲವೇ ಕ್ಷಣಗಳಲ್ಲಿ ಕುವೆಂಪು ಅವರ ಒಪ್ಪಿಗೆ ಕೂಡ ಸಿಕ್ಕಿತು.

ಅಂದಹಾಗೆ, ಪ್ರಜಾವಾಣಿ ಪತ್ರಿಕೆಯನ್ನು ಗಹನವಾಗಿ ತಿರುವಿ ಹಾಕುವುದು ಅವರ ನಿತ್ಯದ ರೂಢಿಯಾಗಿತ್ತು.



ಕುವೆಂಪು ವಿವರಿಸಿದ ಝೆನ್ ತತ್ವ ಕ್ಯಾಮೆರಾಗಳಿಗೆ ಅರ್ಥವಾಗಿತ್ತು. ನಮಗೆ...?



ಒಮ್ಮೆ ಕುವೆಂಪು ಮನೆಯಂಗಳದ ತೋಟದಲ್ಲಿ ವಿಶ್ರಮಿಸಿದ್ದರು. ಇನ್ನೂರ ಗಿಡಗಳಲ್ಲಿ ತೂಗುತ್ತಿದ್ದ ಕಡುಗೆಂಪು ಹೂವುಗಳನ್ನು, ಗಿಡವನ್ನು ಏರಿ ಇಳಿ ಬಿದ್ದಿದ್ದ ಬಳ್ಳಿಗಳಲ್ಲಿ ತುಂಬಿದ್ದ ಮಲ್ಲಿಗೆ ಹೂವುಗಳನ್ನು, ಬಣ್ಣದ ಓಕುಳಿಯಲ್ಲಿ ಮಿಂದಂತಿದ್ದ ಕೋಟನ್ ಎಲೆಗಳನ್ನು ನೋಡಿ, ಆನಂದಿಸುತ್ತಿದ್ದರು. ನಾವು ಅಲ್ಲೇ ಓಡಾಡುತ್ತಾ ಅವರ ಚಿತ್ರಗಳನ್ನು ತೆಗೆಯುತ್ತಿದ್ದೆವು. ಇದ್ದಕ್ಕಿದ್ದಂತೆ "ಅಣ್ಣಾ ಈಗ ಹಾರಿ ಹೋಯ್ತಲ್ಲ, ಆ ಹಕ್ಕಿಯನ್ನು ಏನೆಂದು ಕರೆಯುತ್ತೀ" ಎಂದು ವಿಚಾರಿಸಿದರು.

ಅದು 'Tickell's flowerpecker' ಎಂಬ ಪುಟಾಣಿ ಹಕ್ಕಿಯಾಗಿತ್ತು. ಒಂದೆರಡು ನಿಮಿಷಗಳ ಬಳಿಕ ಕುವೆಂಪು 'ನಾನು ಆ ಹಕ್ಕಿಗೆ 'ಬಂದಳಿಕೆ ಹಕ್ಕಿ' ಎಂದು ಕರೆಯುತ್ತೇನೆ' ಎಂದರು. ಗುಬ್ಬಿಗಿಂತಲೂ ಸಣ್ಣದಾದ, ಶರವೇಗದಲ್ಲಿ ಹಾರುವ ಅಷ್ಟು ಚಿಕ್ಕ ಹಕ್ಕಿಯನ್ನು ಕುವೆಂಪು ಕಂಡಿದ್ದಾದರೂ ಹೇಗೆಂದು ಆ ಕ್ಷಣ ನಮಗೆ ಅಚ್ಚರಿಯಾಯಿತು. ಅದೇ ರೀತಿ ಅವರು ಸೂಚಿಸಿದ ಹಕ್ಕಿಯ ಹೆಸರು ಸಹ ನಮಗೆ ರೋಮಾಂಚನವನ್ನು ಉಂಟುಮಾಡಿತ್ತು.




ಅರವತ್ತು ಎಪ್ಪತ್ತು ವರ್ಷಗಳ ಹಿಂದೆ, ಗಡಿಯಾರ ಸ್ವಲ್ಪ ಸ್ಥಿತಿವಂತರ ಮನೆಗಳಲ್ಲಿ ಮಾತ್ರ ಇರುತ್ತಿತ್ತು. ಉಳಿದವರಿಗೆ ಅದು ಕೈಗೆಟುಕದ ವಸ್ತುವಾಗಿತ್ತು. ಹಾಗಾಗಿ ಹೆಚ್ಚಿನವರಿಗೆ ಸೂರ್ಯನೇ ಗಡಿಯಾರದ ಕೆಲಸ ಕೂಡ ನಿರ್ವಹಿಸುತ್ತಿದ್ದ.


ಆ ದಿನಗಳಲ್ಲಿ ಇಂಗ್ಲೆಂಡಿನ ಸರಕು ಸಾಗಣೆಯ ಹಡಗುಗಳು ಬಗೆಬಗೆಯ ವಸ್ತುಗಳನ್ನು ಹೊತ್ತು ಭಾರತಕ್ಕೆ ತರುತ್ತಿದ್ದವು. ಗಡಿಯಾರವೂ ಹಾಗೆಯೇ ಬಂದು ಬಟವಾಡೆ ಆಗುತ್ತಿತ್ತು.

ಕುವೆಂಪು ಸಹ, ಹಡಗೊಂದರಲ್ಲಿ ಬಂದಿದ್ದ ಗಡಿಯಾರವನ್ನು ಐದು ರೂಪಾಯಿಗಳಿಗೆ ಖರೀದಿಸಿದ್ದರಂತೆ. ಅದು ಉದಯರವಿಯ ಊಟದ ಮನೆಯಲ್ಲಿತ್ತು. ಈ ಗಡಿಯಾರದ ಬಗೆಗೆ ಕುವೆಂಪು ಅವರಿಗೆ ವಿಶೇಷ ಮಮತೆ, ಕೀ ಕೊಡುವ ಕೆಲಸವನ್ನು ಅವರೇ ಎಚ್ಚರಿಕೆಯಿಂದ ಗಮನಕೊಟ್ಟು ನಿರ್ವಹಿಸುತ್ತಿದ್ದುದರಿಂದ, ಈ ಗಡಿಯಾರಕ್ಕೆ ರಿಪೇರಿ ಅಂಗಡಿಯ ಪರಿಚಯವಿರಲಿಲ್ಲ. ನಂತರದ ದಿನಗಳಲ್ಲಿ ಕುವೆಂಪು ಅವರಿಗೆ ವಯಸ್ಸಾಗಿದ್ದರಿಂದ ಕುರ್ಚಿಯ ಮೇಲೇರಿ ಕೀ ಕೊಡುವುದು ಕಷ್ಟವಾಗಿ ಗಡಿಯಾರವನ್ನು ಎರಡು ಅಡಿ ಕೆಳಗಿಳಿಸಿದ್ದರು.





ಕ್ಯಾಮರಾ v/s ಕುವೆಂಪು
ಕೃಪಾಕರ– ಸೇನಾನಿ
ಪುಸ್ತಕ ಪ್ರಕಾಶನ
ಸಂ. 94482 03730
ಬೆಲೆ ₹ 750



ಕುವೆಂಪು ಅವರ ಛಾಯಾಚಿತ್ರಗಳನ್ನು ನಾವು ತೆಗೆಯುತ್ತಿದ್ದ ಸಮಯದಲ್ಲಿ, ಸಣ್ಣ ಸಣ್ಣ ಅಕ್ಷರಗಳನ್ನು ಓದಲು ಅವರ ಕನ್ನಡಕ ನಿರಾಕರಿಸುತ್ತಿತ್ತು. ಆದರೆ ಅವರ ಓದುವ ಉತ್ಸಾಹವನ್ನು ಕಸಿದುಕೊಳ್ಳಲು ಅದಕ್ಕೆ ಸಾಧ್ಯವಾಗಿರಲಿಲ್ಲ. ಬದಲಾಗಿ ಕನ್ನಡಕವೇ ತನ್ನ ಉದ್ಯೋಗವನ್ನು ಕಳೆದುಕೊಂಡಿತ್ತು.



ಕೊಠಡಿಯೊಳಗಿನ ಕುರ್ಚಿಯಲ್ಲೇ ತುಂಬಾ ಹೊತ್ತು ಕುಳಿತಿದ್ದ ಕುವೆಂಪು ಅವರಿಗೆ ಏನೆಲ್ಲ ನೆನಪುಗಳು ಆವರಿಸಿರಬಹುದು. ಅಡವಿಯಲ್ಲಿ ಕಳೆದು ಹೋಗಿ, ಮಳೆಯಲ್ಲಿ ಮಿಂದು, ಮಲೆನಾಡಿನೊಡನೆ ಅನುಸಂಧಾನ ನಡೆಸುತ್ತಿದ್ದರೋ ಏನೋ ಎಂಬಂತಿತ್ತು ಅವರ ಮುಖದ ಮೇಲಿದ್ದ ಸ್ನಿಗ್ಧ ಮಂದಹಾಸ.

***

ಜನ ಕೆಲಸ ಮಾಡುವ ಕಾರ್ಪೋರೇಟ್ ಆಫೀಸ್‌ಗಳಿಗೆ ಬರುವಂತೆ, 'ಉದಯರವಿ'ಗೆ ಪ್ರತಿದಿನ ಲೆಕ್ಕವಿಲ್ಲದಷ್ಟು ಅಂಚೆಪತ್ರಗಳು, ಪಾರ್ಸೆಲ್‌ಗಳು ಬರುತ್ತಿದ್ದವು. ಇವುಗಳಲ್ಲಿ ಅನೇಕ ಪತ್ರಗಳ ವಿಳಾಸ ಕೇವಲ 'ಕುವೆಂಪು, ಮೈಸೂರು' ಎಂದಷ್ಟೇ ಇರುತ್ತಿತ್ತು. ಆದರೆ ಅವು ಎಂದೂ ದಾರಿ ತಪ್ಪುತ್ತಿರಲಿಲ್ಲ.


ಪತ್ರಗಳನ್ನು ಎಚ್ಚರಿಕೆಯಿಂದ ಓದಿ, ವಿಂಗಡಿಸಿ, ಸೂಕ್ತವೆನಿಸಿದ ಪತ್ರಗಳನ್ನು ಆಯ್ದು, ಆಪ್ತ ಕಾರ್ಯದರ್ಶಿಯಂತೆ ಕುವೆಂಪು ಅವರಿಗೆ ಓದಿ ಹೇಳುವುದು ತಾರಿಣಿಯವರ ದಿನ ನಿತ್ಯದ ಕೆಲಸಗಳಲ್ಲಿ ಒಂದು. ಜಾತಕ, ನಕ್ಷತ್ರಗಳಿಗೆ ಅನ್ವಯವಾಗುವಂತೆ, ಹೆಸರು ಯಾವ ಅಕ್ಷರದಿಂದ ಆರಂಭವಾಗಬೇಕೆಂಬುದನ್ನು ಕೂಡಾ ತಿಳಿಸಿ, ತನ್ನ ಮುದ್ದು ಮೊಮ್ಮಗಳಿಗೆ ಅಥವಾ ಮೊಮ್ಮಗನಿಗೆ ಸುಂದರವಾದ ಹೆಸರೊಂದನ್ನು ಸೂಚಿಸಬೇಕೆಂದು ಕುವೆಂಪು ಅವರಿಗೆ ಮನವಿ ಮಾಡಿರುವಂತಹ ಪತ್ರಗಳೂ ಅದರಲ್ಲಿರುತ್ತಿದ್ದವು. ಇಂತಹ ಗಂಭೀರ ವಿಷಯಗಳನ್ನು ಕುವೆಂಪು ಅವರ ಗಮನಕ್ಕೆ ತರುತ್ತಿಲ್ಲವೆಂಬ ಗುರುತರವಾದ ಆಪಾದನೆಗಳಿಗೆ ತಾರಿಣಿ ಆಗಾಗ್ಗೆ ಈಡಾಗುತ್ತಿದ್ದರು.

ರಾಷ್ಟ್ರಕವಿ ಜತೆಗೆ ರಾಜಕಾರಣಿಗಳು

ರಹಮತ್ ತರೀಕೆರೆ

ಕುಪ್ಪಳಿಯಲ್ಲಿರುವ ಕವಿಮನೆ ಸ್ಮಾರಕಕ್ಕೆ ಹೋದಾಗಲೆಲ್ಲ ಕುತೂಹಲ ಹುಟ್ಟಿಸುವುದು, ಕುವೆಂಪುರವರ ಸಾರ್ವಜನಿಕ ಬದುಕಿನ ಪಟಗಳು; ಈ ಪಟಗಳಲ್ಲಿರುವ ಅವರ ವಿವಿಧ ಭಾವಸೂಚಕ ಕಣ್ನೋಟ, ಮುಖ, ಮಾತಾಡುವಾಗಿನ ಕೈವರಸೆ, ಕುಳಿತ-ನಿಂತ ಭಂಗಿಗಳು. ಲೇಖಕರ ಚಿಂತನೆ ಮತ್ತು ಸಾರ್ವಜನಿಕ ವ್ಯಕ್ತಿತ್ವವನ್ನು, ಅವರ ಮಾತು, ಜೀವನಶೈಲಿ, ಬರೆಹಗಳ ಮೂಲಕ ಕಟ್ಟಿಕೊಳ್ಳುವಂತೆ, ಪಟಗಳಲ್ಲಿರುವ ದೇಹಭಾಷೆಯ ಮೂಲಕವೂ ಕಟ್ಟಿಕೊಳ್ಳಬಹುದು.

ಕುವೆಂಪು ಆಕರ್ಷಕ ಮುಖದ ಆಜಾನುಬಾಹು. ಬಿಳಿಯ ಖಾದಿಜುಬ್ಬ ಮತ್ತು ಪೈಜಾಮ; ಅವುಗಳ ಮೇಲೆ ಉಣ್ಣೆಯ ನೀಳಕೋಟು. ತಲೆಯ ನಡುವೆ ಬೈತಲೆ ತೆಗೆದು ಎರಡೂ ಕಡೆ ಬಾಚಿದ ಗುಂಗುರುಕೂದಲು. ಬಹಳಷ್ಟು ಫೋಟೊಜೆನಿಕ್ ಚಹರೆಗಳಿದ್ದರೂ ಕುವೆಂಪು ಅವರಿಗೆ ಕ್ಯಾಮೆರಾಕ್ಕೆ ಪೋಸುಕೊಟ್ಟು ಪಟ ತೆಗೆಸಿಕೊಳ್ಳುವುದು ಪ್ರಿಯ ಸಂಗತಿಯಾಗಿರಲಿಲ್ಲ. ಎಂ.ಎ. ವಿದ್ಯಾರ್ಥಿಯಾಗಿದ್ದಾಗ ತೆಗೆದ (1927), ಬಿಎಂಶ್ರೀ, ಟಿ.ಎಸ್. ವೆಂಕಣ್ಣಯ್ಯ ಎ. ಆರ್. ಕೃಷ್ಣಶಾಸ್ತ್ರಿ ಮೊದಲಾದ ಗುರುಗಳೂ; ಡಿ.ಎಲ್. ನರಸಿಂಹಾಚಾರ್, ತೀನಂಶ್ರೀ ಮೊದಲಾಗಿ ಸಹಪಾಠಿಗಳೂ ಇರುವ ಪಟದಲ್ಲಿ, ತರುಣ ಕುವೆಂಪು ಎತ್ತಲೊ ಕಣ್ಣು ನೆಟ್ಟಿರುವರು. ಡಿವಿಜಿ, ಮಾಸ್ತಿ, ಕಾರಂತ, ವಿಸೀ, ಅನಕೃ, ರಾಜರತ್ನಂ ಜತೆ ಆಕಾಶವಾಣಿಯ ಮಾತುಕತೆಗೆಂದು ಕೂತಿರುವ ಪಟದಲ್ಲೂ ಹೀಗೇ. ಆದರೆ ಅವರನ್ನು ವೈಚಾರಿಕವಾಗಿ ಪ್ರಭಾವಿಸಿದ್ದ ಟ್ಯಾಗೋರ್ ಹಾಗೂ ವಿವೇಕಾನಂದರು, ಪ್ರಜ್ಞಾಪೂರ್ವಕ ಸಿದ್ಧತೆ ಮಾಡಿಕೊಂಡು ಕ್ಯಾಮೆರಾಕ್ಕೆ ಬಗೆಬಗೆಯ ಪೋಸು ಕೊಡಬಲ್ಲವರಾಗಿದ್ದರು. ಈ ದೃಷ್ಟಿಯಿಂದ ಕುವೆಂಪು ಅವರದು ಪರಹಮಹಂಸರಂತೆ ಉದಾಸಭಾವ. ಬೇಂದ್ರೆ ಹಾಗೂ ಕಾರಂತರಿಗೂ ಕ್ಯಾಮೆರಾಕ್ಕೆ ಮುಖಕೊಡುವ ಬಗ್ಗೆ ಅಷ್ಟೊಂದು ಲಕ್ಷ್ಯವಿರಲಿಲ್ಲ.



ಎಸ್. ನಿಜಲಿಂಗಪ್ಪ ಅವರೊಂದಿಗೆ ಹಸನ್ಮುಖಿ ಕುವೆಂಪು

ತೇಜಸ್ವಿಯವರೇ ಮಾಡಿರುವ ಕ್ಲಿಕ್ಕುಗಳಲ್ಲಿ ಕುವೆಂಪು ಕೆಲವು ಪೋಸು ಕೊಟ್ಟಿದ್ದಾರೆ. ಅವುಗಳಲ್ಲಿ ಅವರ ಚಿಂತನಾಮಗ್ನ ಮುಖಭಾವದ ಪಟವೊಂದರಲ್ಲಿ ಆಳವಾದ ಭಾವಗಳಿವೆ. ನಿಸಾರ್ ಅಹಮದರಿಗೆ ಆಗಸಕ್ಕೆ ಕೈಯೆತ್ತಿ ಅದೇನನ್ನೊ ತನ್ಮಯವಾಗಿ ವಿವರಿಸುತ್ತಿರುವ, ನಟ ರಾಜಕುಮಾರ್ ಅವರಿಂದ ಹೂಮಾಲೆ ಹಾಕಿಸಿಕೊಳ್ಳುತ್ತಿರುವ ಪಟಗಳು, ಅವರ ಭಾವದ ವಿವಿಧ ಮಗ್ಗುಲುಗಳನ್ನು ಕಾಣಿಸುತ್ತಿವೆ.

ಇವುಗಳಲ್ಲೆಲ್ಲ ವಿಶೇಷವಾದವು, ಕುವೆಂಪು ಕರ್ನಾಟಕದ ಮುಖ್ಯಮಂತ್ರಿಗಳ ಜತೆಗಿರುವ ಪಟಗಳು. ಒಂದು ಸಭೆಯಲ್ಲಿ ಕೆ.ಸಿ.ರೆಡ್ಡಿಯವರು ದಿಂಬಿಗೊರಗಿ ಕೂತು, ಕುವೆಂಪು ಅವರತ್ತ ತೀಕ್ಷ್ಣವೆನ್ನಬಹುದಾದ ನೋಟ ಬೀರುತ್ತಿದ್ದಾರೆ. ಇದರ ಪರಿವೆಯಿಲ್ಲದೆ ಕುರ್ಚಿಯಲ್ಲಿ ಕೂತಿರುವ ಕುವೆಂಪು, ಎದುರುಗಡೆ ಪುಸ್ತಕವನ್ನು ಇಟ್ಟುಕೊಂಡು ತನ್ಮಯವಾಗಿ ಮಾತಾಡುತ್ತಿದ್ದಾರೆ. ಕೆಂಗಲ್ ಜತೆಗಿರುವ ಪಟದಲ್ಲಿ ಕೊರಳ ತುಂಬ ಹಾರ ಹಾಕಿಸಿಕೊಂಡಿರುವ ಅವರು, ಕೈಮುಗಿದು ಸಂಕೋಚದಲ್ಲಿದ್ದಾರೆ.

ಎಸ್. ಆರ್. ಕಂಠಿಯವರ ಜತೆಗಿನ ಚಿತ್ರದಲ್ಲಿ, ಅವರು ಅಗತ್ಯಕ್ಕಿಂತ ಹೆಚ್ಚಾಗಿ ತಲೆಯೆತ್ತಿ ಎದೆಸೆಟೆಸಿ ನಿಂತಂತಿದೆ. ಅವರ ಪಕ್ಕ ಮುಖ್ಯಮಂತ್ರಿ, ಗುರುವಿನ ಪಕ್ಕ ಶಿಷ್ಯನಂತೆ ನಮ್ರವಾಗಿದ್ದಾರೆ. ಮತ್ತೊಂದು ಪಟದಲ್ಲಿ, ಕುವೆಂಪು ಗಂಭೀರಭಾವದಲ್ಲಿ ಇದು ಹೇಗಾಯಿತು ಎಂಬ ಕೈಭಂಗಿಯಲ್ಲಿ ಏನನ್ನೊ ವಿವರಿಸುತ್ತಿದ್ದರೆ, ಜತ್ತಿಯವರು ಗೌರವ ಶ್ರದ್ಧೆಗಳಿಂದ ನೋಡುತ್ತಿದ್ದಾರೆ. ವೀರೇಂದ್ರ ಪಾಟೀಲರ ಜತೆಗಿನ ಫೋಟೊದಲ್ಲಿ, ಪಾಠ ಮಾಡುತ್ತಿರುವಂತೆ ತೋರುತ್ತಿರುವ ಅವರ ಮಾತನ್ನು, ಮುಖ್ಯಮಂತ್ರಿಯವರು ಬೆರಗು-ಹರುಷಗಳಿಂದ ಮೈಯೆಲ್ಲ ಕಣ್ಣು ಕಿವಿಯಾಗಿ ಆಲಿಸುತ್ತಿದ್ದಾರೆ.

ಇವುಗಳಲ್ಲೆಲ್ಲ ನಿಜಲಿಂಗಪ್ಪನವರ ಜತೆಗಿರುವ ಪಟ ಮತ್ತೂ ವಿಶಿಷ್ಟ. ಇದರಲ್ಲಿ ಕುವೆಂಪು ಅವರ ಬೆನ್ನಹಿಂದೆ ಅಂಟಿಕೊಂಡಂತೆ ನಿಂತಿದ್ದಾರೆ. ಬಹುಕಾಲದ ಗೆಳೆತನದ ಸಲುಗೆ ಅಲ್ಲಿದೆ. ನಿಜಲಿಂಗಪ್ಪನವರು ಮುಕ್ತವಾಗಿ ನಗುತ್ತಿದ್ದರೆ, ಕುವೆಂಪು ತುಸುವೇ ತುಟಿಯರಳಿಸಿ ಮುಗುಳ್ನಗೆ ಸೂಸುತ್ತಿದ್ದಾರೆ. ಅವರು ನಿಜಲಿಂಗಪ್ಪ ಮತ್ತು ದೇವರಾಜ ಅರಸು ಅವರ ಜತೆಗಿನ ಪಟಗಳಲ್ಲಿ ಹೆಚ್ಚು ಆಪ್ತತೆಯಲ್ಲಿ ಸಮಾನಸ್ಕಂಧರಾಗಿ ಕಾಣಿಸುತ್ತಾರೆ. ಕಾರಣ, ಇಬ್ಬರೂ ಕರ್ನಾಟಕ ಏಕೀಕರಣ, ಕನ್ನಡ ಆಡಳಿತ ಭಾಷೆ ಮತ್ತು ಕರ್ನಾಟಕದ ನಾಮಕರಣ ವಿಷಯದಲ್ಲಿ, ಅವರ ಚಿಂತನೆಯನ್ನು ಸಾಕಾರಗೊಳಿಸಿದ ಆಡಳಿತಗಾರರು. ಅವರು ನಿಜಲಿಂಗಪ್ಪನವರಿಗೆ ಬರೆದ ಪತ್ರಗಳಲ್ಲೂ ಇದೇ ವಿಷಯಗಳ ಪ್ರಸ್ತಾಪವಿದೆ. ಯಾವುದೊ ಖಾಸಗಿ ಕಾರ್ಯಕ್ರಮದಲ್ಲಿ ತೆಗೆದ ಪಟದಲ್ಲಿ ಕಡಿದಾಳು ಮಂಜಪ್ಪನವರು ಸಂಭ್ರಮದಿಂದ ನಿಂತಿದ್ದರೆ, ಕುವೆಂಪು ನಿರ್ಲಿಪ್ತ ನೋಟವನ್ನು ಎತ್ತಲೊ ಬೀರುತ್ತಿದ್ದಾರೆ.

11ನೇ ಪುಟಕ್ಕೆ...



ದೇವರಾಜ ಅರಸು ಅವರೊಂದಿಗೆ



ಚಳಿಗಾಲದಲ್ಲಿ ಕವಿ ಊರಲ್ಲಿ...



ನಿಮ್ಮ ಜೊತೆ ಸುತ್ತುತ್ತಾ ಕವಿಯೂರನ್ನು ತೋರಿಸಲೇ...!

ಮಂಜಿನೊಳಗೆ ಕವಿಮನೆ ಅರಳುತ್ತಾ...



ಚಿತ್ರ-ಬರಹ: ಪ್ರಸಾದ್ ಶೆಣೈ ಆರ್.ಕೆ.

ಹಸಿರು ತೆಪ್ಪಗೆ ಮಲಗಿದ ದಾರಿಯಲ್ಲಿ ಮಂಜು ಶುಭ್ರವಾದ ಒಂದು ಕನಸಿನಂತೆ ಹರಡಿಕೊಳ್ಳುತ್ತಲೇ ಇತ್ತು. ವನರಾಶಿಗಳು ಸದ್ದಿಗೆ ತೂಕಡಿಸುತ್ತ 'ಇನ್ನೊಂದಿಷ್ಟು ಹೊತ್ತು ಹಾಗೇ ಮಲಗುತ್ತೇವೆ, ಸೂರ್ಯ ಎಬ್ಬಿಸಿದ ಕೂಡಲೇ ಎದ್ದುಬಿಡುತ್ತೇವೆ' ಎಂದು ಸುರಿಯುತ್ತಿರುವ ಮಂಜಿನ ಕಂಬಳಿಯನ್ನು ಬೆಚ್ಚಗೆ ಹೊದ್ದುಕೊಂಡು ಮಲಗಿಯೇಬಿಟ್ಟಿವು.

ಪೀವ್ ಪೀವ್, ಟು..ಟು.. ಟುವ್ವಿ.... ಕೀ..ಕೀ ಕೀ..ಚೀಂವ್ ಚೀಂವ್ ಎಂದು ಸುತ್ತಲಿದ್ದ ಮರ, ಗಿಡಗಂಟ, ಪೊದೆ, ಗದ್ದೆ ಬಯಲಿನಿಂದ ಕರ್ಣರಂಜಿತವಾಗಿ ಹಾಡುತ್ತ ಕಾಜಾಣ, ಗದ್ದೆಗೊರವ, ಸಿಪಿಲೆ, ನವರಂಗ, ಬಾಲದಂಡೆ ಹಕ್ಕಿಗಳೆಲ್ಲ 'ಮಂಜಿನ ನಡುವೆ ನಾವಿದ್ದೇವೆ' ಎಂದು ಅಲ್ಲಿಂದಿಲ್ಲಿಗೆ ತೂಗುತ್ತ, ಹಾರುತ್ತ ಸದ್ದು ಮಾಡುತ್ತಿದ್ದವು.

ಅಷ್ಟೊತ್ತಿಗೆ ಬಿಳಿಗೊಂಡೆಬಾಲದ ನವಿರಾದ ನಾಯಿಯೊಂದು ನಮ್ಮ ಕಾಲಬಳಿ ಬಂದು ಏನನ್ನೋ ಕನವರಿಸುತ್ತ 'ಬನ್ನಿ ಬನ್ನಿ... ಈ ಚಳಿಯಲ್ಲಿ, ಮಂಜಿನಲ್ಲಿ ಕವಿ ಊರಿಗೆ ಬಂದಿದ್ದೀರಿ, ಮಂಜು ಓಡಿ ಹೋಗುವ ಮೊದಲು ಕವಿಮನೆಯನ್ನು ನೋಡಿ, ಮಂಜಿನ ರಂಗಿನಲ್ಲಿ ಕವಿಶೈಲದಲ್ಲಿ ಕೂತು ಹೂವೂ, ಕಲ್ಲು, ನೆಲ ಎಲ್ಲವೂ ಮಂಜಾಗುವುದನ್ನು ನೋಡಿಬಿಡಿ. ನಂಗೂ ಮಂಜೆಂದರೆ ಭಾರೀ ಇಷ್ಟ, ನಿಮಗೆ ಇಡೀ ಕವಿ ಊರನ್ನು ಸುತ್ತಿಸುವೆ' ಎಂದೆನ್ನುತ್ತ ನಮಗೆ ದಾರಿ ತೋರಿಸಿತು ಆ ಗೊಂಡೆಬಾಲದ ನಾಯಿ. ಸಾಕ್ಷಾತ್ ಕುವೆಂಪು ಅವರ ಗುತ್ತಿ ನಾಯಿಯೇ ಅವತರಿಸಿ ಬಂದಂತನ್ನಿಸಿ ನಮಗೆ ಪುಳಕವಾಯಿತು.

ಕುವೆಂಪು ಅವರ ಕುಪ್ಪಳಿಯನ್ನು ಬೇರೆ ಬೇರೆ ಕಾಲದಲ್ಲಿ ಎಷ್ಟೋ ಸಲ ನೋಡಿದ್ದೆವು. ಈ ಚಳಿಗಾಲದಲ್ಲಿ, ಅದೂ ನಮ್ಮ ಹವಾಮಾನವೆಲ್ಲ ಬದಲಾಗಿ, ಮಲೆನಾಡಿನ ಕಾಡುಗಳು ಬರಡಾಗುತ್ತಿರುವ, ಅಭಿವೃದ್ಧಿ ಅನ್ನೋ ಬ್ರಹ್ಮರಾಕ್ಷಸ ಕಬಂಧಬಾಹುಗಳು ಮಲೆನಾಡಿನ ಸುಂದರ ಪ್ರಕೃತಿಯನ್ನು ಆವರಿಸಿಕೊಳ್ಳುತ್ತಿರುವ ಹೊತ್ತಿನಲ್ಲಿ, ಆಧುನಿಕತೆ ಅವಸರ ಮತ್ತು ಸಾವಧಾನದ ಬೆಸೆದುಬಿಟ್ಟಂತಹ ಈ ವಿಲಕ್ಷಣ ಕಾಲದಲ್ಲಿ ಕವಿ ಊರಿನ ಮಂಜು, ಇಬ್ಬನಿ, ಹಕ್ಕಿ ಹಾಡು, ಹುಲ್ಲುಹಾದಿ, ಕಾಡುದಾರಿ ಇವೆಲ್ಲವನ್ನು ಸುಮ್ಮನೇ ಕಣ್ತುಂಬಿಕೊಂಡುಬಿಡಬೇಕು ಎನ್ನುವ ಪುಟ್ಟ ಬೆರಗಿನಿಂದ ಕವಿ ಊರಿಗೆ ಮತ್ತೆ ಬಂದಿದ್ದೆವು.

ಎಷ್ಟು ಸಲ ಬಂದರೂ ಕುಪ್ಪಳಿ ಒಂದು ನವ್ಯತೆಯ ಕವಿತೆ. ತನ್ನ ಹಳೆತನದಲ್ಲಿಯೇ ಮತ್ತೆ ಮತ್ತೆ ಹೊಚ್ಚಹೊಸತಾಗಿ ಕಾಡುವ ಎದೆಯ ಗೂಡಿನ ಹಾಡು ಕುಪ್ಪಳಿ. ಲೋಕದ ಸಂಗತಿಗಳೆಲ್ಲವನ್ನೂ ಸೂಕ್ಷ್ಮವಾಗಿ ತನ್ನೊಳಗೆ ತಂದುಕೊಂಡರೂ ತನ್ನತನ ಬಿಟ್ಟುಕೊಡದೇ ಚಂಚಲವಾಗದ ಕವಿ ಊರು ಕುಪ್ಪಳಿ.

ಕವಿ ಮನೆಯ ದಾರಿಯಲ್ಲಿ ಇನ್ನೂ ಸರಿಯಾಗಿ ಬೆಳಕಾಗಿರಲಿಲ್ಲ, ಯಾವ ಪ್ರವಾಸಿಗರೂ ಕಾಲಿಟ್ಟು ಮಾತು ಮೈಲಿಗೆ ಮಾಡಿರಲಿಲ್ಲ. ಚೆಂದುಗ ಪಾರಿವಾಳವೊಂದು ಮಂಜಿನಲ್ಲೇ ಕೂತು ಧ್ಯಾನಸ್ಥವಾಗಿಬಿಟ್ಟಿತ್ತು. ದನವೊಂದು ಅಂಬಾ ಎಂದು ಮಂಜಿನ ಹಿನ್ನೆಲೆಯಲ್ಲಿ ನಿಂತು ಕುವೆಂಪು ಬಾಳಿದ ಮುದ್ದು ಮನೆಯನ್ನು ಮುದ್ದಾಗಿ ನೋಡುತ್ತ 'ಹೀಗೆ ಬಂದು ಕವಿಮನೆಯ ಎದುರು ಧ್ಯಾನ ಮಾಡುವುದು ನನ್ನ ನಿತ್ಯದ ದಿನಚರಿ, ನೀವೆಲ್ಲಾ ಇಲ್ಲಿ ಬಂದು ಹೋಗುವವರು, ನಾವಿಲ್ಲಿ ಅನುದಿನವೂ ಕವಿಯ ನೆನಪಲ್ಲೇ, ಕವಿಯ ಸಗ್ಗದಲ್ಲೇ ಬಾಳಿ ಬೆಳೆಯುವವರು' ಎನ್ನುತ್ತಾ ಸುಮಾರು ಅರ್ಧ ಗಂಟೆ ನಿಂತಲ್ಲೇ ನಿಂತು ಚಳಿಗಾಲದ ದಿವ್ಯ ಬೆಳಗನ್ನು ಸಂಭ್ರಮಿಸುತ್ತಿತ್ತು.

ಗೊಂಡೆಬಾಲದ ನಾಯಿ 'ಬನ್ನಿ ಬನ್ನಿ ಕವಿ ಮನೆಯ ಹಿಂದೆ ನೋಡಿ ಕಪಿರಾಯನ ಕಾರುಬಾರು' ಎಂದು ಮನೆಯ ಹಿಂಬದಿಯ ಎತ್ತರದಲ್ಲಿ ಸಾಲಾಗಿ ಕೂತು ಹಂಚಿನ ಮೇಲೆ ನೆಗೆದು ಗಲಾಟೆ ಮಾಡುತ್ತಿದ್ದ ಮಂಗಗಳನ್ನು ತೋರಿಸಿತು. ನಾವು ಸುಮ್ಮನೇ ಅದನ್ನು ನೋಡಿ ನಿಂತದ್ದನ್ನು ಕಂಡು ಅದಕ್ಕೆ ಬೇಸರವಾಗಿ 'ಕವಿಮನೆಯನ್ನು ಹಾಳು ಮಾಡಿದರೆ ಜಾಗ್ರತೆ' ಎಂದು ಬೌ ಬೌ ಬೌ ಎಂದು ಕೂಗಿಮಂಗಗಳನ್ನು ಓಡಿಸಿತು. ಕವಿಶೈಲದ ತನಕ ಜೊತೆಗೆ ಬಂದು ಗುತ್ತಿ ನಾಯಿಯಂತೆ ಕಾಡಿದ ಈ ನಾಯಿ, ಕೊನೆಗೆ ಏನೋ ಬೇಟೆ ಹುಡುಕಿ ಪೊದೆಗಳಲ್ಲಿ ಮಾಯವಾಯ್ತು.

ಆಹಾ ಕವಿಶೈಲದ ಚಳಿಯ ಬೆಳಗಿಗಂತೂ ನೂರಾರು ಮಂಜಿನ ರೆಕ್ಕೆಗಳು ಮೂಡಿದ್ದವು. ಸುತ್ತಲೂ ಮುತ್ತಿರುವ ಹೂಗೊಂಚಲ ಮರಗಳೂ ಮಂಜಿನ ಹಾಡನ್ನೇ ಪಿಸುಗುಡುತ್ತಿದ್ದವು. ಹುಲ್ಲು ಇಬ್ಬನಿಯಾಗಿತ್ತೋ, ಇಬ್ಬನಿ ಹುಲ್ಲಾಗಿತ್ತೋ ಅಂತೂ ಕುಪ್ಪಳಿ ಮೂಡಿಸುವ ಬೆರಗು, ಸೌಂದರ್ಯ, ಸ್ವರಗಳೆಲ್ಲವನ್ನೂ ಅನುಭವಿಸುತ್ತ ಕುಪ್ಪಳಿ ಮಣ್ಣಲ್ಲಿ ಒಂದಾಗಿತ್ತು ಹೂ ಇಬ್ಬನಿ. ಕವಿ ಸಮಾಧಿಯ ಮೇಲೆ ಸಿಪಿಲೆ ಹಕ್ಕಿ ಹಾಡುತ್ತ ನಡೆಯುತ್ತಿತ್ತು, ಬೋಳು ಮರವೊಂದರ ಮೇಲೆ ಕೂತು ಚಂದ್ರಮುಕುಟ ಹಕ್ಕಿ ತನ್ನ ಮುಕುಟ ತೆರೆಯುತ್ತ ಇನ್ನೇನು ಬರುವ ಎಳೆಬಿಸಿಲನ್ನೇ ಕಾಯುತ್ತಿತ್ತು. ಇವರೆಲ್ಲರೂ ನಮ್ಮೆಲ್ಲಾ ಹಾಡುಗಳನ್ನು ರವಿ ರಸವಶವಾಗುತ ಕೇಳುತ್ತಾನೆ ಎನ್ನುವ ತೆರದಲ್ಲಿ ಅಮರ ಕವಿ ಕುವೆಂಪು ಅವರಿಗಾಗಿ ಇಬ್ಬನಿಯಂತೆ ನೂರಾರು ರಾಗಗಳನ್ನು ಪೋಣಿಸುತ್ತ ಹಾಡುತ್ತಲೇ ಇದ್ದವು.

ಮತ್ತೆ ಕವಿಶೈಲದಿಂದ ರಾಜಬೀದಿಗಿಳಿದರೆ ದನಗಳ ಹಿಂಡನ್ನು ಕಾಯುತ್ತ, ಹಿಂಡೇ ತಾನಾಗುತ್ತ ಸಾಗುವ ಗೋಪಾಲಕಿ. ಕಂಬಳಿಕೊಪ್ಪೆಯ ಮರೆಯಲ್ಲಿ ಇಡೀ ಮಲೆನಾಡಿನ ಅಸ್ಮಿತೆ, ಭವ್ಯತೆ, ಬದುಕು, ಸಂಭ್ರಮವನ್ನು ಕಾಪಿಟ್ಟುಕೊಳ್ಳುತ್ತ ನಡೆಯುವ ಹಿರಿಯಜೀವ. ಇಂತಹ ಮನೋಹರವಾದ ಮಲೆನಾಡಿನ, ಕವಿ ಊರಿನ ಚಿತ್ರಗಳನ್ನು ನೋಡುತ್ತ ಕುಪ್ಪಳಿಯ ಚಳಿಗಾಲದ ಬೆಳಗನ್ನು ಸುಖಿಸುತ್ತಿದ್ದೆವು. ಅಷ್ಟರಲ್ಲಿ ಮಂಜು ಮೈಮುರಿದು 'ಇನ್ನು ನೀವು ಹೊರಡಿ, ನಾವೂ ನಮ್ಮ ಕೆಲಸಕ್ಕೆ ಹೋಗಿ ಇರುಳಾಗುತ್ತಲೇ ಮತ್ತೆ ಬರುತ್ತೇವೆಂದೂ ಅಲ್ಲೆಲ್ಲೋ ಹೋಗಿಕರಗಿತು. ಅಷ್ಟೊತ್ತು ಬೆಳ್ಳಗಾಗಿದ್ದ ವನರಾಶಿಗಳು ಈಗ ಹಸಿರಾಗಿ ಗಾಳಿಗೆ ತೂಗಿದವು.

ಕವಿ ಭೌತಿಕವಾಗಿ ನಮ್ಮನ್ನೆಲ್ಲಾ ಬಿಟ್ಟು ಹೋಗಿದ್ದರೂ ಅವರು ಕಾವ್ಯವಾಗಿಸಿದ ಬಗೆ ಬಗೆಯ ಹಕ್ಕಿಗಳು, ಪ್ರಕೃತಿ, ಜೀವಜಗತ್ತು, ಮಂಜು, ಗೋವು, ತೆನೆಗಾಳಿ ಇವೆಲ್ಲವೂ ಕುವೆಂಪು ಅವರ ಕಾವ್ಯವನ್ನು, ಕವಿ ಊರನ್ನು ಮತ್ತಷ್ಟು ಧ್ಯಾನಿಸುತ್ತ ಜೀವಂತವಾಗಿರಿಸಿವೆ. ಕವಿಯ ಈ ಊರು ಜೀವಜಗತ್ತನ್ನು ಕಾಯ್ದಂತೆ, ಜೀವಜಗತ್ತು ಕವಿಯ ಕಾವ್ಯವನ್ನು ಕಾಯುತ್ತ ನಮ್ಮೊಳಗಿನ ಮಲೆನಾಡನ್ನೂ ಕೂಡ ಕಾಪಿಟ್ಟಿದೆ ಅಂತನ್ನಿಸುತ್ತದೆ. ಹೌದು, ಕವಿ ಊರಿನ ಚಳಿಗಾಲದ ಬೆಳಗುಗಳಿವೆ ಅಲ್ಲವೇ, ಅವು ನಮ್ಮ ಬದುಕಿಗೊಂದು ವಿಶಿಷ್ಟವಾದ ಅನುಭೂತಿ. ನೆಮ್ಮದಿಯ ನಾಳೆಗಳಿಗೆ ಜೀವನ ಪ್ರೀತಿ.





ಕುವೆಂಪು ಜತೆಗೆ...


ಕೆಂಗಲ್ ಹನುಮಂತಯ್ಯ ಜೊತೆ


ಬಿ.ಡಿ.ಜತ್ತಿ ಜೊತೆ


ವೀರೇಂದ್ರ ಪಾಟೀಲ್ ಜೊತೆ


ಆರ್.ಗುಂಡೂರಾವ್ ಜೊತೆ


ರಾಮಕೃಷ್ಣ ಹೆಗಡೆ ಜೊತೆ

10ನೇ ಪುಟದಿಂದ...

'ಉದಯರವಿ'ಯಲ್ಲಿ ತೆಗೆಸಿಕೊಂಡ ಪಟದಲ್ಲಿ ಗುಂಡೂರಾಯರು, ಕವಿಯ ಜತೆ ವಿಚಾರವಿನಿಮಯ ಮಾಡುತ್ತಿದ್ದಾರೆ. ಯಾವುದೊ ವಿನೋದಕ್ಕೆ ಇಬ್ಬರೂ ನಗುತ್ತಿದ್ದಾರೆ. ಪ್ರಥಮ ವಿಶ್ವಕನ್ನಡ ಸಮ್ಮೇಳನದಲ್ಲಿ (1985) ಬಿಳಿದಲೆಯ ಕುವೆಂಪು, ಬಿಳಿಯ ಉಡುಪು ಧರಿಸಿ, ಹಣೆಗಿಟ್ಟ ತಿಲಕದೊಂದಿಗೆ ಮದುಮಗನಂತೆ ಆಸೀನರಾಗಿದ್ದಾರೆ. ಪಕ್ಕದಲ್ಲಿ ರಾಮಕೃಷ್ಣ ಹೆಗಡೆ, ಶಿವರಾಮ ಕಾರಂತ, ರಾಜೀವ್ ಗಾಂಧಿ. ಕುವೆಂಪು ವಿಸ್ಮಯದಿಂದ ನೆರೆದ ಸಂದಣಿಯನ್ನು ದಿಟ್ಟಿಸುತ್ತಿದ್ದಾರೆ.

ಸಭೆಯೊಂದರಲ್ಲಿ ದೇವೇಗೌಡರು ನಿಂತುಕೊಂಡು ಕೊಟ್ಟಿರುವ ಪುಸ್ತಕದ ಮೇಲೆ, ಕುಳಿತಿರುವ ಕುವೆಂಪು ಕಣ್ಣಾಡಿಸುತ್ತಿರುವ ಪಟವೂ ಇದೆ. ಬಂಗಾರಪ್ಪನವರು ಭಾಷಣ ಮಾಡುತ್ತಿರುವ ಸಭೆಯಲ್ಲಿ ಜೀರ್ಣದೇಹಿಯಾದ ಅವರು ತಲೆತಗ್ಗಿಸಿ ಸುಸ್ತಾದಂತೆ ಕೂತಿದ್ದಾರೆ. 'ಕರ್ನಾಟಕ ರತ್ನ' ಪ್ರದಾನ ಸಮಾರಂಭದಲ್ಲಿ ಮತ್ತಷ್ಟು ಮೆತ್ತಗಾಗಿದ್ದಾರೆ. ಅವರನ್ನು ವಿಶಾಲ ಸೋಫಾದಲ್ಲಿ ಕೂರಿಸಲಾಗಿದೆ. ಪಕ್ಕ ನಿಂತು ಎಸ್.ಆರ್. ಬೊಮ್ಮಾಯಿ ಸ್ಮರಣಿಕೆ ನೀಡುತ್ತಿರುವರು.

ಸಾರ್ವಜನಿಕ ವ್ಯಕ್ತಿಗಳ ಜತೆಯಿದ್ದಾಗ ಕುವೆಂಪು ತೋರುತ್ತಿದ್ದ ಸಂಕೋಚ, ತನ್ಮಯತೆ, ಮುಗ್ಧತೆ ಇಲ್ಲಿ ಕಾಣುತ್ತವೆ. ಅವರು ಏನನ್ನಾದರೂ ವಿವರಿಸುವಾಗ ರಾಜಕಾರಣಿಗಳ ಕಣ್ಣಲ್ಲಿ ಕಣ್ಣಿಟ್ಟು ಮಾತಾಡುತ್ತಿದ್ದರೆ, ನಗುವಾಗ ಕಣ್ಣನ್ನು ನೆಲದತ್ತ ಹೊರಳಿಸುವುದೂ ತಿಳಿಯುತ್ತದೆ. ಹೆಚ್ಚಿನ ಪಟಗಳಲ್ಲಿ ಅವರು ಧೀಮಂತವಾಗಿ ನಿರಾಸಕ್ತವಾಗಿ ಇದ್ದಾರೆ. ರಾಜಕಾರಣಿಗಳು ದೊಡ್ಡ ಸಂತನ ಸನ್ನಿಧಿಯಲ್ಲಿರುವ ಉಪಾಸಕರಂತಿದ್ದಾರೆ. ಕುವೆಂಪು ಅವರ ದೇಹಭಾಷೆ ಹೊರಸೂಸುತ್ತಿರುವ ಈ ಸ್ವಘನತೆಗೆ ಹಲವು ಕಾರಣಗಳಿವೆ.

1 ಕುವೆಂಪು ಅವರಿಗೆ ಕವಿಯ ವ್ಯಕ್ತಿತ್ವದ ಘನತೆ ಮತ್ತು ಅಲೌಕಿಕತೆಯ ಮೇಲೆ ಅಪಾರ ನಂಬಿಕೆಯಿತ್ತು. ಅವರು ಸಂಸ್ಕೃತ ಕಾವ್ಯಮೀಮಾಂಸೆಯ 'ಅಪಾರೇ ಕಾವ್ಯಸಂಸಾರೆ ಕವಿರೇವ ಪ್ರಜಾಪತಿಃ', ಶೆಲ್ಲಿಯ 'ಕವಿಗಳು ನಾಡಿನ ಅನಧಿಕೃತ ಶಾಸಕರು' ಮೊದಲಾದ ತಾತ್ವಿಕ ಹೇಳಿಕೆಗಳನ್ನು ಪ್ರಾಮಾಣಿಕವಾಗಿ ನಂಬಿದ್ದವರು. ಕವಿಗಳು ಮೂಲತಃ ಋಷಿಗಳು; ನಾಡನ್ನು ಕಟ್ಟುವ ಕಣಸು ಕಾಣಬಲ್ಲ ದ್ರಷ್ಟಾರರು; ಅವರ ಕೃತಿಗಳಲ್ಲಿ ಜನರನ್ನು ಸಂವೇದನಶೀಲಗೊಳಿಸಿ ಆ ಮೂಲಕ ಲೋಕ ಬದಲಿಸುವ ಶಕ್ತಿಯಿದೆ ಎಂಬ ಮೀಮಾಂಸೆ ಅವರದು. ಇದಕ್ಕೆ ತಕ್ಕಂತೆ, ಬಿಎಂಶ್ರೀ, ಕಾರಂತ, ಕುವೆಂಪು ಅವರ 1947ರ ಹಿಂದಿನ ಬರೆಹಗಳು, ಬಿಡುಗಡೆಗೊಳ್ಳಲಿರುವ ಭಾರತದ ಜನಮಾನಸವನ್ನು ರೂಪಿಸುವುದಕ್ಕಾಗಿ ಮಾಡಿದ ತುಡಿತಗಳಂತಿವೆ.

2 ಲೌಕಿಕ ಯಶಸ್ಸು ಮತ್ತು ಕೀರ್ತಿಗಳ ಬಗ್ಗೆ ಕುವೆಂಪು ಅವರಿಗೆ ಅನಾಸಕ್ತಿಯಿತ್ತು. ಲೇಖಕರು ಅತಿಯಾಗಿ ಸಾರ್ವಜನಿಕ ಬದುಕಿನಲ್ಲಿ ತೊಡಗುವುದು ಅಥವಾ ಅಧಿಕಾರಸ್ಥ ಸ್ಥಾನಮಾನದಲ್ಲಿರುವುದು, ಬರೆಹದ ಕಾಯಕಕ್ಕೆ ಬೇಕಾದ ಅಧ್ಯಯನ-ಧ್ಯಾನಶೀಲತೆ ಕಳೆಯುತ್ತವೆ ಎಂಬ ಗ್ರಹಿಕೆಯಿತ್ತು. ಇದಕ್ಕೆ 'ಕೀರ್ತಿಶನಿ' ಪದ್ಯವನ್ನಾಗಲಿ, ಕುಲಪತಿಯಾಗಿ ತನ್ನ ಹಾಡನ್ನು ಕೇಳುವ ವ್ಯವಧಾನ ಕಳೆದುಕೊಂಡು ರಸಚ್ಯುತಿಗೆ ಒಳಗಾದ ಕವಿಯನ್ನು ಪುಟ್ಟಹಕ್ಕಿಯೊಂದು ಕಿಚಾಯಿಸುವ ಪದ್ಯವನ್ನಾಗಲಿ ಗಮನಿಸಬಹುದು.

3 ಪ್ರಜಾಪ್ರಭುತ್ವವಾದಿಯಾದ ಕುವೆಂಪು, ರಾಜಪ್ರಭುತ್ವವನ್ನು ವಿಮರ್ಶೆ ಮಾಡುತ್ತಿದ್ದರು. ಅವರು ತಾರುಣ್ಯದಲ್ಲಿ, ಬಿಎಂಶ್ರೀ ಪ್ರೇರಣೆಯಿಂದ ನಾಲ್ವಡಿಯವರ ಮೇಲೆ ಪ್ರಗಾಥ ಬರೆದದ್ದುಂಟು. ಅದರಲ್ಲಿ ನಾಡನ್ನು ಕಟ್ಟುವ ದೊರೆಯ ಬಗ್ಗೆ ಮೆಚ್ಚುಗೆಯಿದೆ. ಆದರೆ ದೇಶವು ರಾಜಕೀಯ ಸ್ವಾತಂತ್ರ್ಯ ಪಡೆದ ಬಳಿಕ ಅವರು 'ಶ್ರೀಸಾಮಾನ್ಯನ ದೀಕ್ಷಾಗೀತೆ' ಬರೆದು ಸಂಭ್ರಮಿಸಿದರು. ಆ ಬಳಿಕವೂ ಹಳೆಯ ದೊರೆಗಳು ರಾಜ್ಯಪಾಲರಾಗಿ ಮುಂದುವರೆದಾಗ, ಪ್ರಜಾಪ್ರಭುತ್ವದಲ್ಲಿ ಪ್ರಭುವಿನ ವೈಭವೀಕರಣ ಸಲ್ಲದೆಂದು ಪ್ರತಿಪಾದಿಸಿದರು. ಈ ಹಿನ್ನೆಲೆಯಿಂದ ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದಾಗ ಅವರು ರಾಜ್ಯಪಾಲರಾಗಿದ್ದ ಜಯಚಾಮರಾಜೇಂದ್ರ ಒಡೆಯರವರ ಜತೆ ಕುಳಿತಿರುವ ಪಟವನ್ನು ಗಮನಿಸಬೇಕು. ಅವರು ಮಿರಿವ ಶೂಧರಿಸಿ ಕತ್ತರಿಗಾಲು ಹಾಕಿಕೊಂಡು ಗಂಭೀರವಾಗಿ ಕೂತಿದ್ದರೆ, ಚಿಕ್ಕವಯಸ್ಸಿನ ಒಡೆಯರವರು ವಿನಯದಲ್ಲಿ ಕೂತಿದ್ದಾರೆ. ಇದಕ್ಕೆ ಒಂದು ಕಾರಣ ಒಡೆಯರವರು ಕುವೆಂಪು ವಿದ್ಯಾರ್ಥಿಯಾಗಿದ್ದುದೂ ಇರಬೇಕು. ಅವರು ಕನ್ನಡದಲ್ಲಿ ಫೇಲಾದಾಗ, ನಾಲ್ವಡಿಯವರು ವಿಭಾಗ ಮುಖ್ಯಸ್ಥರಾದ ಟಿ.ಎಸ್. ವೆಂಕಣ್ಣಯ್ಯನವರನ್ನು ಕರೆಯಿಸಿಕೊಂಡು ಸಮಸ್ಯೆಯ ಪರಾಮರ್ಶೆ ನಡೆಸುತ್ತಾರೆ. ಆಗ ವೆಂಕಣ್ಣಯ್ಯನವರು ರಾಜಕುಮಾರನಿಗೆ ಕುವೆಂಪುರವರಿಂದ ಟ್ಯೂಶನ್ ಹೇಳಿಸಿ, ಮರುಪರೀಕ್ಷೆ ಬರೆಯುವ ಮಾರ್ಗ ಸೂಚಿಸುತ್ತಾರೆ. ಆದರೆ ಕುವೆಂಪು ಗುರುಗಳ ಸೂಚನೆಯನ್ನು ನಯವಾಗಿ ನಿರಾಕರಿಸುತ್ತಾರೆ. ಇಲ್ಲಿ ಕೆಲವು ಸೂಫಿಗಳು, ಸುಲ್ತಾನರ ಭೇಟಿಯನ್ನು ತಪ್ಪಿಸಿಕೊಳ್ಳುತ್ತಿದ್ದ, ಭೇಟಿಯಾಗಲೇ ಬೇಕಾದಾಗ ನಿಷ್ಠುರವಾಗಿ ವರ್ತಿಸುತ್ತಿದ್ದ ನಿದರ್ಶನಗಳು ನೆನಪಾಗುತ್ತವೆ. ಶಾಹುಮಹಾರಾಜರ ಜತೆಗೆ ಕುಳಿತಿರುವ ಸಿದ್ಧಾರೂಢ ಸ್ವಾಮಿಗಳು ಕುಳಿತಿರುವ ಪಟವೂ ನೆನಪಾಗುತ್ತದೆ.

4 ತಮ್ಮ ಕಾಲದ ಸೆಲೆಬ್ರಿಟಿಯಾಗಿದ್ದ ಕುವೆಂಪು, ಕನ್ನಡಕ್ಕೆ ಮೊದಲ ಜ್ಞಾನಪೀಠ ತಂದುಕೊಟ್ಟು, ಕನ್ನಡತ್ವದ ಪ್ರತೀಕವೆನಿಸಿದ್ದರು. ಅವರೊಟ್ಟಿಗೆ ಗುರುತಿಸಿಕೊಳ್ಳುವುದನ್ನು ರಾಜಕಾರಣಿಗಳು ಹೆಮ್ಮೆಯೆಂದು ಭಾವಿಸಿದ್ದರು. ನಾಡು-ನುಡಿಯ ವಿಷಯಗಳಿದ್ದಾಗ ರಾಜಗುರುವಿನಂತಿದ್ದ ಅವರ ಮನೆಗೆ ಹೋಗಿ ಚರ್ಚಿಸುತ್ತಿದ್ದರು. ಜತೆಗೆ ಕಡಿದಾಳು, ರಾಮಕೃಷ್ಣ ಹೆಗಡೆ, ಎಸ್.ಎಂ. ಕೃಷ್ಣ, ವೀರಪ್ಪ ಮೊಯಿಲಿ, ಬಂಗಾರಪ್ಪ ಮೊದಲಾದವರು ಸಾಹಿತ್ಯ ಕಲೆಗಳ ಲೋಕದ ಬಗ್ಗೆ ವೈಯಕ್ತಿಕವಾಗಿ ಆಸಕ್ತಿ-ಆದರ ಹೊಂದಿದ್ದರು.

5 ಪ್ರಜಾಪ್ರಭುತ್ವವಾದಿಯಾದ ಕುವೆಂಪು ಅವರಿಗೆ ಜನಪ್ರತಿನಿಧಿಗಳ ಬಗ್ಗೆ ಗೌರವವಿತ್ತು. ವೈಯಕ್ತಿಕ ಆಶೋತ್ತರಗಳಿರಲಿಲ್ಲವಾಗಿ, ಅಧಿಕಾರಸ್ಥರ ಎದುರು ತಗ್ಗಿಬಗ್ಗುವ ಸನ್ನಿವೇಶ ಅವರಿಗೆ ಬಂದಂತಿಲ್ಲ. ಆದರೆ ಕನ್ನಡದ ಅಥವಾ ವಿಶ್ವವಿದ್ಯಾಲಯದ ವಿಷಯದಲ್ಲಿ ಸರ್ಕಾರದ ನೀತಿನಿರೂಪಣೆ ಬಂದಾಗ, ಅವರು ಪ್ರಭುತ್ವದವರನ್ನು ಭೇಟಿ ಮಾಡುತ್ತಿದ್ದರು. ರಾಜಕೀಯ ಅಧಿಕಾರಸ್ಥರು ಕನ್ನಡ-ಕರ್ನಾಟಕದ ವಿಷಯದಲ್ಲಿ ಆಲಸ್ಯ ತೋರಿದಾಗ ವ್ಯಗ್ರರಾಗುತ್ತಿದ್ದರು. ಅವರು ಅಧಿಕಾರಸ್ಥ ರಾಜಕಾರಣಿಗಳನ್ನು ಕಟುವಾಗಿ ಟೀಕಿಸುವ 'ಅಖಂಡ ಕರ್ನಾಟಕ' ಪದ್ಯದಲ್ಲಿ, 'ಇಂದು ಬಂದು ನಾಳೆ ಸಂದುಹೋಹ ಸಚಿವ ಮಂಡಲ'ದ ವಿಡಂಬನೆಯಿದೆ. ಪರ್ಯಾಯವಾಗಿ 'ನೃಪತುಂಗನೆ ಚಕ್ರವರ್ತಿ! ಪಂಪನಲ್ಲಿ ಮುಖ್ಯಮಂತ್ರಿ' ಆಗಿರುವ ಸರಸ್ವತಿ ರಚಿಸಿದ ನಿತ್ಯ ಮಂತ್ರಿಮಂಡಲದ ಮಂಡನೆಯಿದೆ. ಬಿಜ್ಜಳನ ಗದ್ದುಗೆಯ ಕೆಳಗೆ ಕುಳಿತು ಓಲೈಸುವವನು ಎಂಬ ಆಪಾದನೆ ಬಂದಾಗ ಕೆರಳಿದ ಬಸವಣ್ಣ, ಕೂಡಲಸಂಗಮನೇ ನಿಜವಾದ ದೊರೆ ಎಂದುತ್ತರಿಸುವ ವಚನದ ಮಾದರಿಯಿದು.

ಕುವೆಂಪುಗೆ ಹೋಲಿಸಿದರೆ, ಅಧಿಕಾರಸ್ಥರು ಮನೆಗೆ ಬಂದಾಗ ಬೇಂದ್ರೆಯವರು ಅತಿಯೆಚ್ಚರ ವಹಿಸುತ್ತಿದ್ದರು. ಒಮ್ಮೆ ಕುಲಪತಿ ಪಾವಟೆಯವರು ಮನೆಗೆ ಬರುತ್ತಾರೆಂದು ತಿಳಿದಾಗ, ತಮ್ಮ ಭೇಟಿಗೆಂದು ಬಂದಿದ್ದ ಯುವಕ ಕೆ.ವಿ. ಸುಬ್ಬಣ್ಣನವರನ್ನು ಬೇಂದ್ರೆ ಹೊರಕಳಿಸುತ್ತಾರೆ. ಬೇಂದ್ರೆಯವರಿಂದ ಬದುಕಿಗೆ ಮಾರ್ಗದರ್ಶನ ಪಡೆದುಕೊಳ್ಳಲು ಬಂದಿದ್ದ ಸುಬ್ಬಣ್ಣನವರಿಗೆ ಭ್ರಮನಿರಸನ ಉಂಟುಮಾಡುತ್ತದೆ. ಬಳಿಕ ಅವರು ಕಾರಂತರನ್ನು ಮಾದರಿಯಾಗಿಸಿಕೊಳ್ಳುವ ನಿರ್ಧಾರ ತಳೆಯುತ್ತಾರೆ. ಕಾರಂತರಾದರೂ ರಾಜಕಾರಣಿಗಳ ಜತೆ ಬಿಗುವಾಗಿ ವರ್ತಿಸುತ್ತಿದ್ದರು. ರಾಜಕೀಯ ಚಳವಳಿಗೆಂದು ಕಾಲೇಜು ತೊರೆದ, ಚುನಾವಣೆಗಳಲ್ಲಿ ಸ್ಪರ್ಧಿಸಿ ಸೋತಿದ್ದ ಅವರು, ರಾಜಕಾರಣಿಗಳನ್ನು ಸಭೆಗಳಲ್ಲಿ ಕಟುವಾಗಿ, ಕೆಲವೊಮ್ಮೆ ಸಿನಿಕವಾಗಿ ಟೀಕಿಸುತ್ತಿದ್ದರು.

ಲೇಖಕರು ತಮ್ಮ ಘನತೆ, ವಿವೇಕ, ನಿಷ್ಠುರತೆಯಿಂದ ಆಳುವವರನ್ನು ಪ್ರಭಾವಿಸುವ ಮತ್ತು ಕರೆದುಬುದ್ಧಿ ಹೇಳುವ; ಅಥವಾ ರಾಜಕಾರಣಿಗಳು ಅವರಲ್ಲಿ ಹೋಗಿ ಸಲಹೆ ಕೇಳುವ ದಿನಗಳು ಕರ್ನಾಟಕದಲ್ಲಿ ಬೇಗನೆ ಕಣ್ಮರೆಯಾದವು. ಈಗ ರಾಜಕಾರಣಿಗಳನ್ನು ಕರೆಸಿಕೊಂಡು ಬುದ್ಧಿ ಹೇಳುವ ಅಧಿಕಾರವನ್ನು ಧಾರ್ಮಿಕ ನಾಯಕರು ಹಾಗೂ ಉದ್ಯಮಿಗಳು ಚಲಾಯಿಸುತ್ತಿದ್ದಾರೆ. ಈ ದುಷ್ಕಾಲದಲ್ಲೂ ಲೇಖಕರ ನೈತಿಕತೆ ಘನತೆ ಉಳಿಸಿಕೊಂಡ ಲೇಖಕರಲ್ಲಿ ದೇವನೂರರೂ ಒಬ್ಬರು.

ಅಧಿಕಾರಸ್ಥರ ಜತೆ ಲೇಖಕರು ಕಲಾವಿದರು ಸಂಬಂಧ ಇರಿಸಿಕೊಳ್ಳುವುದಕ್ಕೆ ಕನ್ನಡದಲ್ಲಿ ನಿಡಿದಾದ ಪರಂಪರೆಯಿದೆ. ಶ್ರೀವಿಜಯನ 'ಕವಿರಾಜಮಾರ್ಗ'ದ ಹೆಸರಲ್ಲೇ ಇದರ ಚಿಹ್ನೆಯಿದೆ. ಪಂಪ, ಬಸವಣ್ಣ, ಬಿಎಂಶ್ರೀ, ಕಟ್ಟೀಮನಿ, ಲಂಕೇಶ್, ಅನಂತಮೂರ್ತಿ, ಬರಗೂರು, ಸಿದ್ಧಲಿಂಗಯ್ಯ, ಕಂಬಾರರು- ವಿವಿಧ ಪರಿಯಲ್ಲಿ ನಂಟಿದ್ದವರೇ. ಲೇಖಕ-ರಾಜಕಾರಣಿಗಳ ಈ ನಂಟಸ್ತಿಕೆ ತನಗೆ ತಾನೇ ದೋಷವೂ ಅಲ್ಲ, ಹಿರಿಮೆಯೂ ಅಲ್ಲ. ಈ ನಂಟು ವೈಯಕ್ತಿಕ ಮಹತ್ವಾಕಾಂಕ್ಷೆಯಿಂದ ಕೂಡಿದೆಯೊ, ಸಾಮುದಾಯಿಕ ಹಿತವುಳ್ಳದ್ದಾಗಿದೆಯೊ? ಈ ನಂಟಿನ ಸ್ವರೂಪ ಸಮಾನಮನಸ್ಕ ಸ್ನೇಹದಲ್ಲಿದೆಯೊ, ಘನತೆ ಸ್ವಾಭಿಮಾನ ಕಳೆದುಕೊಂಡು ಓಲೈಸುವ ಭಾವದಲ್ಲಿದೆಯೊ? ಆಳುವವರು ಸರ್ವಾಧಿಕಾರಿ ಆಗಿದ್ದಾಗ ಲೇಖಕರು ನಿಷ್ಠುರವಾಗಿದ್ದಾರೊ ಕೀರ್ತಿಸುತ್ತಿದ್ದಾರೊ? ಜನರ ಬದುಕನ್ನೆ ಬದಲಾಯಿಸುವ ಶಕ್ತಿಯುಳ್ಳ ಶಕ್ತಿರಾಜಕಾರಣವನ್ನೇ ಅನಿಷ್ಟವೆಂದು ಪರಿಭಾವಿಸುವ ಅರಾಜಕೀಯ ಪ್ರಜ್ಞೆ ಪ್ರಕಟಿಸುತ್ತಿದ್ದಾರೊ? ಇವು ಕೇಳಿಕೊಳ್ಳಬೇಕಾದ ಪ್ರಶ್ನೆಗಳು.

ತನ್ನ ದೇಶದ ಸರ್ವಾಧಿಕಾರಿಗಳನ್ನು ವಿರೋಧಿಸುತ್ತ ಬಂಧನ ಭೀತಿಯಿಂದ ಭೂಗತನಾಗಿದ್ದ ಚಿಲಿಯ ಕವಿ ನೆರೂಡ, ಸಮಾಜವಾದಿ ಕಾಣ್ಕೆಯ ಮೂಲಕ ದೇಶ ಕಟ್ಟಲೆಂದು ಆಯ್ಕೆಯಾದ ಅಲೆಂಡೆಯ ಬೆನ್ನಿಗೆ ನಿಂತಿದ್ದನು. ಅಧಿಕಾರಸ್ಥರು ದುಷ್ಟರಾಗಿದ್ದಾಗ, ಎಚ್ಚರಗೇಡಿತನದಲ್ಲೊ ಸ್ವಾರ್ಥಕ್ಕಾಗಿಯೊ ಬೆಂಬಲಿಸಿದ ಸೂಕ್ಷ್ಮಮನಸ್ಸಿನ ಲೇಖಕರು ಜೀವಮಾನವಿಡೀ ಪರಿತಪಿಸಿದ ನಿದರ್ಶನಗಳೂ ಇವೆ. ಯಾಕೆಂದರೆ, ಪ್ರಭುತ್ವದ ಜತೆಗಿನ ಸಂಬಂಧದ ಸ್ವರೂಪವು, ಲೇಖಕರ ಬರೆಹದ ನೈತಿಕತೆ ಮತ್ತು ಕಸುವನ್ನು ನಿರ್ಣಯಿಸುವ ಸಂಗತಿ ಕೂಡ. ಕುವೆಂಪು ಬರೆಹ ಮತ್ತು ವ್ಯಕ್ತಿತ್ವಗಳ ಘನತೆಯ ಒಂದಂಶವು, ಅವರು ಅಧಿಕಾರಸ್ಥರ ಜತೆಗಿರಿಸಿಕೊಂಡ ನಂಟಿನ ಸ್ವರೂಪದಲ್ಲೂ ಇದ್ದಂತಿದೆ.

(ಕುಪ್ಪಳಿಯ ಕವಿ ಮನೆ ಸ್ಮಾರಕದಲ್ಲಿ ಇಲ್ಲಿ ಚರ್ಚಿತವಾದ ಪಟಗಳು ಪ್ರದರ್ಶನಕ್ಕಿವೆ)

ಮುನ್ನೋಟ 25-12-2022 ರಿಂದ 31-12-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಆಹಾರ ವಸ್ತುಗಳನ್ನು ತಯಾರಿಸಿ ಮಾರುವವರಿಗೆ ಶ್ರಮಕ್ಕೆ ತಕ್ಕ ಫಲ ಸಿಗುತ್ತದೆ. ಕರಿದ ಪದಾರ್ಥಗಳನ್ನು ತಯಾರಿಸಿ ಮಾರುವವರಿಗೆ ವ್ಯಾಪಾರ ಹೆಚ್ಚುತ್ತದೆ. ನಿಮ್ಮ ವ್ಯಾಪಾರ ವ್ಯವಹಾರದಲ್ಲಿ ಹೆಚ್ಚು ಶಿಸ್ತನ್ನು ಕಾಯ್ದುಕೊಳ್ಳುವುದು ಉತ್ತಮ. ಕೃಷಿ ಸಂಬಂಧಿತ ಉಪಕರಣಗಳನ್ನು ತಯಾರಿಸುವವರಿಗೆ ವ್ಯವಹಾರ ಹೆಚ್ಚುತ್ತದೆ. ಸಂಗಾತಿಯ ಆರೋಗ್ಯಕ್ಕಾಗಿ ಹಣ ಖರ್ಚಾಗುತ್ತದೆ. ಧನಾದಾಯವು ಅಗತ್ಯಕ್ಕಿಂತ ಕಡಿಮೆ ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಮನೆಯಲ್ಲಿ ಶಾಂತಿ ಕಾಪಾಡಿಕೊಳ್ಳುವುದು ಅನಿವಾರ್ಯವಾಗಬಹುದು. ವ್ಯಾಪಾರ ವ್ಯವಹಾರ ಮಾಡುವವರಿಗೆ ಅತಿಯಾದ ಲಾಭವಿರುವುದಿಲ್ಲ. ಹಾಗೆಂದು ನಷ್ಟವೂ ಇಲ್ಲ. ಕೃಷಿಯಿಂದ ಆದಾಯವಿರುತ್ತದೆ. ಹೈನುಗಾರಿಕೆ ಮಾಡುವವರು ಬಂದಿದ್ದ ಗಂಡಾಂತರದಿಂದ ಪಾರಾಗುವರು. ಕೆಲವರಿಗೆ ಕಚೇರಿಯಲ್ಲಿ ತರಬೇತಿ ಸಿಗುವ ಯೋಗವಿದೆ. ಪಿತ್ರಾರ್ಜಿತ ಆಸ್ತಿ ಒದಗುವ ಸಂದರ್ಭವಿದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ದಿನನಿತ್ಯದ ಕೆಲಸಗಳಲ್ಲಿ ಸಿಬ್ಬಂದಿಯಿಂದ ಹೆಚ್ಚಿನ ಸಹಕಾರ ದೊರೆಯುತ್ತದೆ. ಈ ಹಿಂದೆ ಮಾಡಿದ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರವಹಿಸಿರಿ. ಖರ್ಚಿಗೆ ಕಡಿವಾಣ ಹಾಕಬೇಕಾದ ಪರಿಸ್ಥಿತಿ ಇರುತ್ತದೆ. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ವಿದ್ಯಾರ್ಥಿಗಳು ಅಧ್ಯಯನಕ್ಕೆ ಹೆಚ್ಚು ಶ್ರಮವಹಿಸಬೇಕು. ಸಮಾನಮನಸ್ಕರಲ್ಲಿ ಹಣಕಾಸಿನ ವಿಚಾರದಿಂದ ಸಂಬಂಧ ವ್ಯತ್ಯಾಸಗೊಳ್ಳಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಸಿವಿಲ್ ಎಂಜಿನಿಯರ್‌ಗಳಿಗೆ ಉತ್ತಮ ಅವಕಾಶಗಳು ದೊರೆಯುತ್ತವೆ. ಸಹೋದರಿಯರಿಂದ ನಿಮ್ಮ ಕೆಲಸಗಳಿಗೆ ಪೂರಕ ಸಹಾಯ ದೊರೆಯುತ್ತದೆ. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ. ಬಂಧುಗಳ ಮನೆಯ ಸತ್ಕಾರಕೂಟದಲ್ಲಿ ಭಾಗವಹಿಸುವ ಅವಕಾಶಗಳಿವೆ. ಎಲೆಕ್ಟ್ರಾನಿಕ್ಸ್ ಉದ್ದಿಮೆದಾರರಿಗೆ ಸಾಕಷ್ಟು ಪ್ರಗತಿ ಇರುತ್ತದೆ. ಆಸ್ತಿಯ ವಿಚಾರದಲ್ಲಿ ಹೊಸ ರೀತಿಯ ತಗಾದೆಗಳು ಬರಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಸ್ನೇಹಿತರ ಅನುಕೂಲದಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಯಶಸ್ಸು ದೊರೆಯುತ್ತದೆ. ರಾಜಕೀಯ ವ್ಯಕ್ತಿಗಳಿಗೆ ಸ್ಥಾನಮಾನ ದೊರೆಯುವ ಸಾಧ್ಯತೆ ಇದೆ. ಸಮೀಪವರ್ತಿಗಳಿಂದ ಮೋಸ ಹೋಗುವ ಸಾಧ್ಯತೆಗಳಿವೆ, ಎಚ್ಚರವಹಿಸಿರಿ. ಕಫದ ಸಮಸ್ಯೆಯನ್ನು ನಿರ್ಲಕ್ಷ್ಯ ಮಾಡಬೇಡಿರಿ. ಉದ್ದಿಮೆದಾರರು ಶಾಂತಚಿತ್ತದಿಂದ ಕಾರ್ಮಿಕರ ಸಮಸ್ಯೆಯನ್ನು ಆಲಿಸುವುದು ಉತ್ತಮ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಜಟಿಲ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸೂಕ್ತ ಮಾರ್ಗದರ್ಶಕರನ್ನು ಹುಡುಕುವಿರಿ. ನಿಮ್ಮವರ ನಡುವೆ ಉಂಟಾಗುವ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ಕುಳಿತು ಬಗೆಹರಿಸಿಕೊಳ್ಳಿರಿ. ಗುತ್ತಿಗೆದಾರರಿಗೆ ಹೊಸ ಗುತ್ತಿಗೆಗಳು ದೊರೆಯುವ ಸಂದರ್ಭವಿದೆ. ಆದಾಯವು ನಿರೀಕ್ಷೆಯ ಮಟ್ಟಕ್ಕಿಂತ ಕಡಿಮೆ ಇರುತ್ತದೆ. ಯಾರನ್ನಾದರೂ ನಂಬಿ ಹಣ ಹೂಡುವ ಮುಂಚೆ ಅವರ ಬಗ್ಗೆ ಸರಿಯಾಗಿ ತಿಳಿಯಿರಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ನಿಮ್ಮ ಅತಿಯಾದ ಒರಟುತನ ನಿಮ್ಮನ್ನು ಜನಸಮೂಹದಲ್ಲಿ ಇಕ್ಕಟ್ಟಿಗೆ ಸಿಲುಕಿಸಬಹುದು. ಉಸಿರಾಟದಲ್ಲಿ ತೊಂದರೆ ಕಂಡುಬಂದಲ್ಲಿ ಎಚ್ಚರವಹಿಸಿರಿ. ವಿದ್ಯಾರ್ಥಿಗಳಿಗೆ ಹೆಚ್ಚು ಶ್ರಮವಹಿಸಬೇಕಾದ ಅಗತ್ಯವಿದೆ. ದಿನಸಿ ಸಗಟು ದಾಸ್ತಾನುದಾರರಿಗೆ ಅಗತ್ಯವೆನಿಸುವಷ್ಟು ದಾಸ್ತಾನು ದೊರೆಯುತ್ತದೆ. ವೃತ್ತಿಯಲ್ಲಿ ಹಿತಶತ್ರುಗಳು ಹುಟ್ಟಿಕೊಳ್ಳುವರು. ಲೇವಾದೇವಿ ವ್ಯವಹಾರಗಳು ಬೇಡವೇ ಬೇಡ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಆಧ್ಯಾತ್ಮಿಕ ವಿಚಾರಗಳತ್ತ ಮನಸ್ಸು ಹರಿಯತೊಡಗುತ್ತದೆ. ಆತ್ಮೀಯರೊಂದಿಗೆ ನಿಮ್ಮ ಭಾವನೆಗಳನ್ನು ಹಂಚಿಕೊಂಡು ಸಂತೋಷಪಡುವಿರಿ. ಪ್ರಯಾಣದಲ್ಲಿ ನಷ್ಟ ಸಂಭವಿಸುವ ಸಾಧ್ಯತೆಯಿದೆ, ಎಚ್ಚರವಹಿಸಿರಿ. ಕಟ್ಟಡ ನಿರ್ಮಾಣ ಮಾಡುವವರಿಗೆ ಹೆಚ್ಚಿನ ಕೆಲಸ ದೊರೆಯುತ್ತದೆ. ನಿರೀಕ್ಷಿತ ಆದಾಯ ಬಂದು ಸೇರುತ್ತದೆ.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಯಾರಿಗೂ ಯಾವುದೇ ರೀತಿಯ ಭರವಸೆಗಳನ್ನು ನೀಡಬೇಡಿರಿ. ವಾಹನ ಖರೀದಿಯು ನಿಮ್ಮಿಷ್ಟದಂತೆ ನಡೆಯುತ್ತದೆ. ಉದ್ಯೋಗಕ್ಕೆ ಅನುಕೂಲವಾಗುವ ಹೊಸ ಜನರ ಪರಿಚಯವಾಗುತ್ತದೆ. ಮಿತ್ರರ ಜೊತೆ ಸೇರಿ ಸಣ್ಣಮಟ್ಟದ ಉತ್ಪಾದನಾ ಘಟಕವನ್ನು ಆರಂಭಿಸುವ ಆಲೋಚನೆ ಇರುತ್ತದೆ. ಧನಾದಾಯವು ಸಾಮಾನ್ಯವಾಗಿರುತ್ತದೆ. ರಾಜಕೀಯ ವ್ಯಕ್ತಿಗಳು ವೈಯಕ್ತಿಕ ಅನುಕೂಲಕ್ಕಾಗಿ ಹೆಚ್ಚು ಶ್ರಮಪಡುವರು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ನಿಮ್ಮ ಸಮಸ್ಯೆಗಳನ್ನು ನ್ಯಾಯಯುತವಾಗಿ ಹಾಗೂ ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳುವಿರಿ. ಮನೆಯಲ್ಲಿನ ಆಗುಹೋಗುಗಳ ಬಗ್ಗೆ ಹೆಚ್ಚಿನ ಗಮನ ಕೊಡಿರಿ. ನೀವು ಮಾಡಿದ್ದ ಕೆಲಸಕ್ಕೆ ದುಪ್ಪಟ್ಟು ಸಂಪಾದನೆಯ ಯೋಗವಿರುತ್ತದೆ. ಬೋಧಕ ವರ್ಗದವರಿಗೆ ಹೆಚ್ಚಿನ ಸ್ಥಾನಮಾನ ದೊರೆಯುವ ಸಾಧ್ಯತೆಗಳಿವೆ. ಕಳೆದು ಹೋಗಿದ್ದ ವಸ್ತುವನ್ನು ಹುಡುಕುವಿರಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಸಹಕಾರ ರಂಗದಲ್ಲಿ ಕೆಲಸ ಮಾಡುತ್ತಿರುವವರಿಗೆ ಹೆಚ್ಚಿನ ಗೌರವ ದೊರೆಯುತ್ತದೆ. ಉದ್ಯೋಗದಲ್ಲಿ ಸ್ಥಾನ ಬದಲಾವಣೆಯ ಸಾಧ್ಯತೆಗಳಿವೆ. ಆದಾಯದಷ್ಟೇ ಖರ್ಚು ಇರುತ್ತದೆ. ಹಣದ ನಿರ್ವಹಣೆಯನ್ನು ಸರಿಯಾಗಿ ಮಾಡಿರಿ. ನಿಮ್ಮ ಶ್ರಮದ ದುಡಿಮೆಗೆ ತಕ್ಕ ಫಲವಿರುತ್ತದೆ. ಸಂಗಾತಿಯ ಆದಾಯದಲ್ಲಿ ಹೆಚ್ಚಳ ಕಾಣಬಹುದು

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಬಹುದು. ಹಣಕಾಸಿನ ಪರಿಸ್ಥಿತಿ ಸಾಮಾನ್ಯವಾಗಿ ಇರುತ್ತದೆ. ಹೊಸ ಆಸ್ತಿ ಖರೀದಿ ಮಾಡುವ ವಿಚಾರ ಮುನ್ನೆಲೆಗೆ ಬರುತ್ತದೆ. ವಾಹನಗಳ ಬಿಡಿ ಭಾಗಗಳನ್ನು ಮಾರಾಟ ಮಾಡುವವರ ವ್ಯಾಪಾರ ಹೆಚ್ಚುತ್ತದೆ. ನಿಮ್ಮ ನಡವಳಿಕೆಯಿಂದ ಬಂಧುಗಳು ದೂರವಾಗುವರು. ಅವಿವಾಹಿತರಿಗೆ ಸಂಬಂಧ ದೊರೆಯುವ ಸಾಧ್ಯತೆ ಇದೆ. ಅನಿರೀಕ್ಷಿತ ಖರ್ಚುಗಳು ಎದುರಾಗಬಹುದು.

ಪದಬಂಧ 2769



ಮೇಲಿನಿಂದ ಕೆಳಕ್ಕೆ
1. ಶ್ಯಮಂತಕಮಣಿಯನ್ನು ಧರಿಸಿದ ಅರಸ ಸಿಂಹದಿಂದ ಹತನಾದ 3
2. ನನ್ನ ತಪ್ಪನ್ನು ಮನ್ನಿಸು 3
3. ಪತಿಯೇ ಪರಮಾತ್ಮನೆಂಬುದು ಸಾಧ್ವಿಯ ನಂಬಿಕೆ 4
4. ಮರಣಾನಂತರ ಪಡೆಯುವ ಸುರಕ್ಷಾ ಹಣ 4
7. ಒಂದಿಷ್ಟೂ ಕಷ್ಟವಲ್ಲದ್ದು 3
9. ಒಂದನ್ನೂ ಬಿಡದೆ ಸಮಗ್ರವನ್ನೂ ಪರಿಶೀಲಿಸುವ ದೃಷ್ಟಿ 4
11. ಮೊಸರಿನಿಂದ ತೆಗೆದ ಬೆಣ್ಣೆ 4
12. ಮಂಗಳಕರವಾದ ಚೆಲುವೆ 3
13. ಪ್ರಾಣಿಕುಲಕ್ಕೆ ಸೇರಿದ್ದು 2
15. ಒಂದರಲ್ಲೊಂದು ಸೇರಿ ಹೋಗುವಂತೆ ಮಾಡುವವ 4
16. ವರ್ತನೆ ಕೊಡುವ ವ್ಯಾಪಾರಿ 3
18. ಹೃದಯ ಮಿಡಿತಕ್ಕೆ ಒಳಗಾಗುವವ 3
20. ಕೆಟ್ಟ ಪ್ರದೇಶದ ಹರಹು 4
21. ತಲೆಕೆಳಗಾದ ಮಾತೆ 2
23. ನಾಗಪುರದ ಖ್ಯಾತ ಕಿತ್ತಳೆ 3
24. ಹೊಸ ದಿಕ್ಕಿನ ಕಡೆ ನಡಿಗೆ 4
25. ಕೆಟ್ಟುಹೋಗಿರುವ ಸಮಯವೆಂಬ ಪಟ್ಟಗಳಿಸಿರುವ ಯುಗ 4
26. ಮದುವೆಗೋ ಮಸಣಕೋ ನಡೆಯುವ ಟಾಂಗಾ 3
27. ಆರಂಭದಲ್ಲಿ ಜನನದಂತೆ ಅಂತಿಮದಲ್ಲಿ ಸಾವು 3

ಎಡದಿಂದ ಬಲಕ್ಕೆ
1. ಆಡಳಿತಕ್ಕೆ ವಿರೋಧವಾದ ರಾಜಕೀಯ ಗುಂಪು 4
3. ಓದಿ ಮುಗಿಸಿದಾಗ ಸಿಗುವ ಅಂತಸ್ತು 3
5. ಲಿಪಿಯ ಮೂಲವನ್ನು ಹೆಚ್ಚು ಬಳಸದೆ ಬರೆದ ಪುರಾತನ ಕಾನೂನು ಗ್ರಂಥ 4
6. ಕಾಯನ್ನು ಬಲವಂತವಾಗಿ ಹಣ್ಣಾಗಿಸು 3
8. ನಮ್ಮಲ್ಲಿ ಖುಷಿಯನ್ನು ಹೆಚ್ಚಿಸುವ ನಮ್ಮದೇ ಮಗು 4
10. ಮುಖ ಸೌಂದರ್ಯಕ್ಕೆ ಮೆರಗು 5
14. ಪರಂಪರಾನುಗತವಾಗಿ ಪೂಜಿಸಲ್ಪಟ್ಟ ಮನೆಯ ಆರಾಧ್ಯ ಮೂರ್ತಿ 4
17. 2023 ಹೊಸವರ್ಷಕ್ಕೆ ಸ್ವಾಗತ ನಿಮಗೆ ಒಳ್ಳೆಯದಾಗಲಿ ಎಂಬ ಹಾರೈಕೆ 4
19. ಮನೆಯಲ್ಲಿ ಬೇಡವೆಂದರೂ ಬೆಳಸುವ ಶ್ವಾನ 4
22. ಹಕ್ಕಿಗಳ ಚಿಲಿಪಿಲಿ ನಾದ 4
23. ಇಲ್ಲೇ ಇರುವ ಸ್ವರ್ಗ ಮತ್ತು ಇಲ್ಲೇ ಅನುಭವಿಸಬೇಕಾದ ಅದರ ವ್ಯತಿರಿಕ್ತ ಲೋಕ 5
26. ಉಫೇ....ದಶರಥಾತ್ಮಜನಿಗೆ! 4
28. ಪಾರಿವಾಳದ ಮೇಲೆರಗುವ ಹಕ್ಕಿ 3
29. ವಾಯುವಿನ ಬಲದಿಂದ ಹಾರುವ ಕಾಗದ, ಸೂತ್ರಕ್ಕೆ ಬದ್ಧ 4
30. ಬುದ್ಧಿ ಸರಿಯಿಲ್ಲದ ಹುಚ್ಚ 3
31. ಜಾಣನಲ್ಲದ ಈ ಪ್ರಾಣಿ ಅರಣ್ಯವಾಸಿ 4

ಪದಬಂಧ ಉತ್ತರ -2768


ಮೇಲಿಂದ ಕೆಳಕ್ಕೆ
1. ಪರಿಸರ 2.ಜಲಜೀವ 4.ಸಿರಿಧಾನ್ಯ 5.ತಿಳಿದವ 7.ಕ್ಷಾಮಪೀಡಿತ 8.ಚತ್ರಿ 9.ಧರ್ತಿ 10.ಭಾವತರಂಗ 12.ಮೂಗುತಿ 13.ಪದ 14.ತನಿ 15.ಗೀತಾಮೃತ 16.ವಿಂಧ್ಯಗಿರಿ 18.ಗಲಿಬಿಲಿ 19.ಮಹಾದೇವ

ಎಡದಿಂದ ಬಲಕ್ಕೆ
1. ಪರಿವ್ರಾಜಕ 3.ಹಸಿರುಕ್ರಾಂತಿ 6.ರಕ್ಷಾಕವಚ 9.ಧನ್ಯತಾಭಾವ 11.ತ್ರಿಮೂರ್ತಿ 13.ಪತಿತ 15.ಗೀತಗೋವಿಂದ 17.ನಿಗಮಾಗಮ 20.ತಡವರಿಸು 21.ವಾಲಿಸುಗ್ರೀವ

ಕಾಣಿ ಸುಟ್ಲಿ

ಚಿತ್ತಾಲರ ಕೊನೆಯ ಕಾದಂಬರಿ 'ದಿಗಂಬರ'ದ ಸುತ್ತ

ವಿವೇಕ ಶಾನಭಾಗ



ಯಶವಂತ ಚಿತ್ತಾಲರ ಪರಿಚಯವಾದಾಗಿನಿಂದ ಅವರ ಕೊನೆಗಾಲದವರೆಗೂ ನಮ್ಮ ನಡುವೆ ಪತ್ರ ವ್ಯವಹಾರಕ್ಕಿಂತ ಫೋನ್ ಸಂಪರ್ಕವೇ ಹೆಚ್ಚಾಗಿತ್ತು. ಬರಹ, ಓದು ಇದರ ಸುತ್ತಲೇ ಅವರ ಮಾತುಕತೆ. ಅವರು ಹೊಸ ಕತೆ ಬರೆಯುತ್ತಿರುವ ಹೊತ್ತಿಗೆ ಕತೆ ಶುರುಮಾಡಿದ್ದನ್ನು, ಎಷ್ಟು ಪುಟ ಬರೆದರೆಂಬುದನ್ನು ಉತ್ಸಾಹದಿಂದ ಹೇಳುತ್ತಿದ್ದರು. ಆದರೆ ಕತೆಯ ಬಗ್ಗೆ ಏನೂ ಹೇಳುತ್ತಿರಲಿಲ್ಲ. ಅಂದರೆ ಕತೆ 'ಬರೆಯುವ' ಭೌತಿಕ ಚಟುವಟಿಕೆಯ ಬಗ್ಗೆ ಮಾತ್ರ ಮಾತು ಹೊರತು ಕತೆಯ ವಸ್ತು ವಿವರಗಳ ಕುರಿತಲ್ಲ.

ಯಾವುದೋ ಒಂದು ಹಂತದಲ್ಲಿ, ಬಹಳ ಗೆಲುವಿನಿಂದ ಕೊಂಕಣಿಯಲ್ಲಿ 'ಕಾಣಿ ಸುಟ್ಲಿ' ಅನ್ನುತ್ತಿದ್ದರು. 'ಕತೆ ಬಿಡಿಸಿಕೊಂಡಿತು ಅಥವಾ ಕತೆ ಬಿಚ್ಚಿಕೊಂಡಿತು' ಎಂಬುದು ಅದರ ಭಾವಾರ್ಥ. ಒಮ್ಮೆ ಇದಾಯಿತೋ, ಕತೆಗೊಂದು ಓಘ ಬಂದು ತನ್ನಿಂದ ತಾನೇ ಅದು ಕೊನೆ ಮುಟ್ಟಿಸಿಕೊಳ್ಳುತ್ತದೆಂಬುದು ಅವರ ವಿಶ್ವಾಸ. ಕತೆ ಯಾವುದರಿಂದ ಬಿಡಿಸಿಕೊಂಡಿತು, ಕತೆಗಾರನ ಸಂಕಲ್ಪದಿಂದಲೋ? ಸಿದ್ಧಾಂತದಿಂದಲೋ? ಕಲೆಯ ಬಲೆಯಿಂದಲೋ? ಆದರೆ ಕತೆಯೊಂದು ಯಾವುದರಿಂದಲೋ ಬಿಡಿಸಿಕೊಂಡು ಸ್ವತಂತ್ರವಾಗುವ ಅವಶ್ಯಕತೆ ಇದೆಯೆಂಬುದು ನಮ್ಮಿಬ್ಬರಿಗೂ ಗೊತ್ತಿದೆ ಎಂಬ ಗ್ರಹೀತ ಹಿಡಿದ ಹಾಗೆ ಅವರ ಮಾತು ಇರುತ್ತಿತ್ತು.

ಬಹುವಚನ ಪ್ರಕಾಶನದಿಂದ ಇದೀಗ ಪ್ರಕಟವಾಗಿರುವ 'ದಿಗಂಬರ' ಅವರ ಕೊನೆಯ ಕಾದಂಬರಿ. ಇದನ್ನು ಅವರು ಬಯಸಿದ ಹಂತದವರೆಗೂ ಒಯ್ದು ಪೂರ್ತಿಗೊಳಿಸಲಾಗಲಿಲ್ಲ ಅನ್ನುವದನ್ನು ಬಿಟ್ಟರೆ ಈ ಕಾದಂಬರಿಯ ಓದಿನ ಅನುಭವ ಶ್ರೀಮಂತವಾಗಲು ಸಾಕಾಗುವಷ್ಟು, ಕೊನೆಯನ್ನು ನಮ್ಮ ಕಲ್ಪನೆಯಲ್ಲಿ ಪೂರ್ತಿಗೊಳಿಸಲು, ಅದರ ವಿವಿಧ ಸಾಧ್ಯತೆಗಳನ್ನು ಯೋಚಿಸಲು ಅವಶ್ಯವಾಗುವಷ್ಟು ಗಾತ್ರ ಮತ್ತು ಹೂರಣ ಇದಕ್ಕಿದೆ. ಈ ಕಾದಂಬರಿಯ ಪ್ರಕಟಣೆಗೆ ಇದೇ ಪ್ರೇರಣೆ. ರಾಜೇಂದ್ರ ಚೆನ್ನಿಯವರು 'ದಿಗಂಬರ'ಕ್ಕೆ ಬರೆದ ಮುನ್ನುಡಿಯು ಅಪೂರ್ಣ ಕೃತಿಗಳ ಕುರಿತ ಅಪರೂಪದ ಒಳನೋಟಗಳನ್ನು ಒಳಗೊಂಡಿದೆ.


ಕಾದಂಬರಿಯ ಹಸ್ತಪ್ರತಿಯನ್ನು ಪರಿಶೀಲಿಸಿ, ಮುದ್ರಣಕ್ಕೆ ಸಿದ್ಧಗೊಳಿಸುವ ಜವಾಬ್ದಾರಿ ವಹಿಸಿಕೊಂಡಾಗ 'ಕಾಣಿ ಸುಟ್ಲಿ' ಎಂಬ ನುಡಿಗಟ್ಟನ್ನು ಮತ್ತೆಮತ್ತೆ ನೆನೆಸಿಕೊಂಡಿದ್ದೇನೆ. ಚಿತ್ತಾಲರು ಇದನ್ನು ಆರಂಭಿಸಿ, ಅನಾರೋಗ್ಯ ನಿಮಿತ್ತ ನಿಲ್ಲಿಸಿ ಮತ್ತೆ ಹನ್ನೆರಡು ವರ್ಷಗಳ ನಂತರ ಆರಂಭಿಸಿದ್ದರು. ಈ ಬರವಣಿಗೆಯ ಯಾವ ಹಂತದಲ್ಲಿ ಅವರ ಮನಸ್ಸಲ್ಲಿ 'ಕಾಣಿ ಸುಟ್ಲಿ' ಹುಟ್ಟಿರಬಹುದು ಎಂದು ಯೋಚಿಸಿದ್ದೇನೆ. ಅಷ್ಟು ವರ್ಷಗಳ ಅಂತರದ ನಂತರ ಅವರಿಗದು ಹೊಳೆದು ಪುನರಾರಂಭಿಸಿದರೇ, ಎರಡನೇ ಭಾಗವನ್ನು ಬರೆಯುವಾಗ ಅವರಿಗದು ಹೊಳೆಯಿತೇ ಇತ್ಯಾದಿ ಉತ್ತರ ದೊರೆಯದ ಪ್ರಶ್ನೆಗಳು ನನ್ನನ್ನು ಕಾಡಿವೆ.

ಕಾದಂಬರಿಯನ್ನು ಮುಗಿಸಿ, ಪ್ರಕಟಣೆಗೆ ಸಿದ್ಧಪಡಿಸುವ ತನಕ ತಾನು ಬದುಕಿರುತ್ತೇನೆಂಬ ಭಾವನೆ ಅವರಲ್ಲಿ ಇದ್ದಂತಿತ್ತು. ಈ ಹೊತ್ತಿನಲ್ಲಿ ನೆನಪಾಗುವುದು ಕಾಫ್ಕಾನ ಕಾದಂಬರಿಗಳು. ಅವನ ಸಾವಿನ ನಂತರ ಪ್ರಕಟವಾದ, ಇಪ್ಪತ್ತನೆಯ ಶತಮಾನದ ಮಹತ್ವದ ಕಾದಂಬರಿಗಳಲ್ಲಿ ಕೆಲವೆಂದು ಪರಿಗಣಿಸಲಾಗುವ 'ದಿ ಟ್ರಯಲ್', 'ದಿ ಕಾಸಲ್' ಮುಂತಾದವು ಕಾಫ್ಕಾನ ಅಪೂರ್ಣ ಕಾದಂಬರಿಗಳು. ತನ್ನ ಜೀವಿತಾವಧಿಯಲ್ಲಿ ಮೆಟಮಾರ್ಫಸಿಸ್‌ನಂತಹ ಕೆಲವೇ ಕೃತಿಗಳನ್ನು ಪ್ರಕಟಿಸಿದ ಕಾಫ್ಕಾ ಇನ್ನುಳಿದವುಗಳನ್ನು ಪ್ರಕಟಿಸದೇ ಇದ್ದುದಕ್ಕೆ ಪೂರ್ತಿಗೊಳಿಸಿಲ್ಲ ಎಂಬುದೇ ಕಾರಣವಾಗಿತ್ತು. ಆದರೆ ಈ ಕಾದಂಬರಿಗಳ ಅಪೂರ್ಣತೆಯು ಓದುಗರನ್ನು ಬಾಧಿಸಿಲ್ಲ. ಅವು ಕೊಡುವ ಓದಿನ ಅನುಭವದ ಎದುರು ಕತೆಯು ಕೊನೆ ಮುಟ್ಟಿದಾಗ ತಣಿಯುವ ಕುತೂಹಲವು ನಗಣ್ಯವೆನಿಸಿದೆ.

ಚಿತ್ತಾಲರ ಹಸ್ತಾಕ್ಷರಗಳು ಅನನ್ಯ. ಅವರ ಜೊತೆ ಒಡನಾಡಿದ ಎಲ್ಲರಿಗೂ ಅವು ಪರಿಚಿತ. ಅವುಗಳಲ್ಲಿ ಒಂದು ಬಗೆಯ tentativeness ಇದೆ. ಅದುವೇ ಆ ಅಕ್ಷರಗಳ ಮೋಹಕತೆಗೆ ಕಾರಣವೆಂದು ನನ್ನ ಅಭಿಪ್ರಾಯ. ಅವರ ವಯಸ್ಸಿನ ಕಾರಣದಿಂದ ದಿಗಂಬರದ ಹಸ್ತಪ್ರತಿಯ ಕೊನೆಯ ಭಾಗದ ಬರವಣಿಗೆಯನ್ನು ಓದುವುದು ತುಸು ಕಠಿಣವಾದರೂ ಅಕ್ಷರಗಳ ಆಂತರಿಕ ಸೌಂದರ್ಯ ಮಾಸಿಲ್ಲ. ಉತ್ತರ ಕನ್ನಡದ ನೆಲದ ಮತ್ತು ಕೊಂಕಣಿಯ ಗಾಢ ಸ್ಪರ್ಷವಿರುವ, ಅವರಿಗೇ ವಿಶಿಷ್ಟವಾಗಿರುವ ಭಾಷೆಯ ಪರಿಚಯವಿರದೇ ಅವರು ಬಳಸಿದ ಶಬ್ದಗಳನ್ನು ಗ್ರಹಿಸುವುದು, ಊಹಿಸುವುದು ಸುಲಭವಲ್ಲ. ಇಂಥ ಊಹೆಯ ರೋಮಾಂಚನವನ್ನು ಅನುಭವಿಸುತ್ತ, ಅವರ ಕೈಬರಹದ ವಾಕ್ಯಗಳನ್ನು ನಿಧಾನವಾಗಿ ಹಿಂಬಾಲಿಸುತ್ತ, ಜೊತೆಜೊತೆಗೇ ಪಠ್ಯದ ಪಕ್ಕದ ಖಾಲಿ ಜಾಗದಲ್ಲಿರುವ ಟಿಪ್ಪಣಿಗಳನ್ನು ಗಮನಿಸುತ್ತ, ಒಬ್ಬ ಬರಹಗಾರರಾಗಿ ಚಿತ್ತಾಲರು ಕೃತಿಗೆ ರೂಪಕೊಡುವ ಪ್ರಕ್ರಿಯೆಯನ್ನು ಗಮನಿಸುತ್ತ ನಾನು ದಿಗಂಬರ ಕಾದಂಬರಿಯನ್ನು ಮೊದಲ ಬಾರಿಗೆ ಓದಿದೆ. ಹೀಗೆ ಸೂಕ್ಷ್ಮವಾಗಿ ನಿಧಾನವಾಗಿ ಆಸ್ವಾದಿಸಿ ಓದುವುದೊಂದು ಅಪೂರ್ವ ಅನುಭವವಾಗಿತ್ತು.


ಆರಂಭದ ಕೆಲವು ಅನಿಶ್ಚಯಗಳು ಬರಬರುತ್ತ ಸ್ಪಷ್ಟವಾಗುತ್ತ ಹೋಗುವ ಹಾದಿಯಲ್ಲಿ, ಚಿತ್ತಾಲರ ಬರವಣಿಗೆಯ ಸೂಕ್ಷ್ಮತೆ, ಕೌಶಲ, ಅದು ಆಕಾರ ಪಡೆಯುವ ಕ್ರಮವನ್ನು ಕಾಣಬಹುದು. ಇದು ಮೊದಲ ಕರಡಾದರೂ ಚಿತ್ತುಕಾಟಿಲ್ಲದಂತೆ ಅವರ ಗದ್ಯ ಹರಿದಿದೆ. ಪುಟಗಳ ಬದಿಯ ಮಾರ್ಜಿನ್ನಿನಲ್ಲಿರುವ ಟಿಪ್ಪಣಿಗಳು ಅವರ ಬರವಣಿಗೆಯ ಪ್ರಕ್ರಿಯೆಯನ್ನು ಅಭ್ಯಾಸ ಮಾಡುವವರಿಗೆ ಅಮೂಲ್ಯವಾದ ಒಳನೋಟಗಳನ್ನು ಕೊಡುತ್ತವೆ. ಅವರ ಹಸ್ತಾಕ್ಷರದಲ್ಲಿರುವ ಇಂಥ ಕೆಲವು ಪುಟಗಳನ್ನು ಕಾದಂಬರಿಯುದ್ದಕ್ಕೂ ಅಲ್ಲಲ್ಲಿ ಕಾಣಬಹುದು. ಒಂದು ಪಾತ್ರವು ಬರಬರೆಯುತ್ತ ರೂಪತಳೆಯುವಾಗ ಲೇಖಕ ಯೋಚಿಸುವ ಹಲವು ಮಗ್ಗಲುಗಳಿಗೆ ಸಾಕ್ಷಿಯಾಗುವಂತೆ ಈ ಟಿಪ್ಪಣಿಗಳಿವೆ. ಉದಾಹರಣೆಗೆ, ಪಾತ್ರವೊಂದು ಲಿಫ್ಟ್‌ನಲ್ಲಿ ಕಚೇರಿಗೆ ಹೋಗುವಾಗಿನ ಸನ್ನಿವೇಶವನ್ನು ವಿವರಿಸುವ ಪುಟದ ಪಕ್ಕ 'ಈಸ್ ಶೀ ಅಟ್ರ್ಯಾಕ್ಟಿವ್' ಎಂಬ ಪ್ರಶ್ನೆಯನ್ನು ಕೇಳಿಕೊಂಡಿದ್ದಾರೆ. ಅವಳು ಆಕರ್ಷಕವಾಗಿದ್ದರೆ ಕಾಣುವ ದಾರಿಯೇ ಬೇರೆ, ಅಲ್ಲವಾದರೆ ಉಂಟಾಗುವ ಪರಿಣಾಮವೇ ಬೇರೆ ಎಂಬುದನ್ನು, ಈ ಸಣ್ಣ ವಿವರದ ಮೂಲಕ ಅದೂ ಅತ್ಯಂತ ಸಮರ್ಪಕ ಬಿಂದುವಿನಲ್ಲಿ ಗುರುತಿಸುವ ಕಥನಕೌಶಲದ ಬಗ್ಗೆ ಅಚ್ಚರಿಯಾಗದೇ ಇರದು. ಹಸ್ತಪ್ರತಿಯ ಮೊದಲ ಪುಟದಲ್ಲಿ ಪಾತ್ರಗಳ ವಯಸ್ಸನ್ನು ಸಂದರ್ಭ ಸಹಿತ ನಮೂದಿಸಿರುವ ರೀತಿಯು, ಒಂದು ಕಥನದ ಬಂಧವನ್ನು ಬಿರುಕಿಲ್ಲದೇ, ವಿರೋಧಾಭಾಸಗಳಿಲ್ಲದೇ ಕಟ್ಟಲು ಎಂಥ ಸ್ಪಷ್ಟತೆಯ ಅಗತ್ಯವಿದೆಯೆಂಬುದನ್ನು ತಿಳಿಸುವಂತಿದೆ.

ಈ ಕಾದಂಬರಿಯನ್ನು ಮುದ್ರಣಕ್ಕೆ ಸಿದ್ಧಗೊಳಿಸುವ ಜವಾಬ್ದಾರಿಯು ನನಗೆ ಭಾವನಾತ್ಮವಾಗಿ ಕಷ್ಟದ ಸಂಗತಿಯಾಗಿತ್ತು. ಕೃತಿಯ ಮೊತ್ತಮೊದಲ ಓದುಗನೆಂಬ ರೋಮಾಂಚನದ ಜೊತೆಗೇ ಇದನ್ನು ತಿದ್ದಲು ಚಿತ್ತಾಲರು ನಮ್ಮ ನಡುವೆ ಇಲ್ಲ ಅನ್ನುವ ಕೊರಗು ಕಾಡುತ್ತಿತ್ತು. ಓದಿನುದ್ದಕ್ಕೂ ಮಾತಿನಲ್ಲಿ ಇಡಲಾಗದ ವಿಚಿತ್ರ ಉದ್ವೇಗವೊಂದು ನನ್ನನ್ನು ಆವರಿಸಿತ್ತು. ಅವರು ಕಥೆಯ ಅಚ್ಚುಕಟ್ಟುತನದ ಬಗ್ಗೆ ಬಹಳ ಯೋಚಿಸುತ್ತಿದ್ದರು. ಕಥೆಯ ಬಂಧ, ವಾಕ್ಯರಚನೆ, ಶಬ್ದಗಳ ಆಯ್ಕೆಯಲ್ಲಿ ಎಂದೂ ಸುಲಭ ದಾರಿಯನ್ನು ಹಿಡಿದವರಲ್ಲ. ಅವರು ಬದುಕಿದ್ದರೆ ಈ ಕಾದಂಬರಿಯನ್ನು ಯಾವ ಬಗೆಯಲ್ಲಿ ತಿದ್ದುತ್ತಿದ್ದರೆಂಬುದಕ್ಕೆ ಕೆಲವು ಸೂಚನೆಗಳು ವಹಿಯ ಪುಟಗಳ ಬದಿಯ ಜಾಗದಲ್ಲಿರುವ ಟಿಪ್ಪಣಿಗಳಲ್ಲಿ ದೊರೆಯುತ್ತವೆ. ಆದರೆ ಈ ಕೃತಿಯನ್ನು ಇದ್ದ ಹಾಗೆಯೇ ಪ್ರಸ್ತುತಪಡಿಸುವುದು ಮುಖ್ಯವೆನಿಸಿದ್ದರಿಂದ ಅಪರೂಪಕ್ಕೆ ಕಾಗುಣಿತವನ್ನು ತಿದ್ದಿದ್ದು ಬಿಟ್ಟರೆ ಮತ್ಯಾವುದಕ್ಕೂ ನಾನು ಕೈಹಚ್ಚಲು ಹೋಗಲಿಲ್ಲ. ಅದು ನನ್ನಿಂದ ಸಾಧ್ಯವೂ ಇರಲಿಲ್ಲ. ಚಿತ್ತಾಲರ ಮೊದಲ ಕರಡು ಹೇಗಿರುತ್ತದೆ ಎಂಬುದು ಅವರ ಸಾಹಿತ್ಯದ ಅಭ್ಯಾಸಿಗಳಿಗೂ, ಅಭಿಮಾನಿಗಳಿಗೂ, ಅವರ ಓದುಗರಿಗೂ ತಿಳಿಯಲಿ ಎಂಬುದು ಈ ಕಾದಂಬರಿಯ ಪ್ರಕಟನೆಯ ಉದ್ದೇಶಗಳಲ್ಲೊಂದು.



ಪು: 186 ₹300

ದಿಗಂಬರ (ಕಾದಂಬರಿ
ಲೇ: ಯಶವಂತ ಚಿತ್ತಾಲ
ಪ್ರ: ಬಹುವಚನ ಪ್ರಕಾಶನ
ಸಂ: 63625 88659



ಹಲವು ದರ್ಶನಗಳ 'ಬೌದ್ಧಿಕ ಆತ್ಮಚರಿತ್ರೆ'

ಎಸ್. ದಿವಾಕರ್

ಈ ಪುಸ್ತಕ ಒಂದು ಬಗೆಯ ಬೌದ್ಧಿಕ ಆತ್ಮಚರಿತ್ರೆಯಿದ್ದಂತೆ. ಇಲ್ಲಿ ನಮ್ಮ ಮುಖ್ಯ ಕವಿ, ವಿದ್ವಾಂಸ ಕೆ.ವಿ. ತಿರುಮಲೇಶರ ಚಿಂತನೆಯ ನೆಲೆಗಟ್ಟಿರುವ ಆತ್ಮೀಯ ಸಂಸ್ಮರಣೆಗಳು, ಸಾಹಿತ್ಯ ಕಲೆಗಳ ವಿಮರ್ಶೆ, ಜಗತ್ತಿನ ಕೆಲವು ಸೂಕ್ಷ್ಮ ವಿದ್ಯಮಾನಗಳ ವ್ಯಾಖ್ಯಾನ, ಹೀಗೆ ಹಲವು ಕ್ಷೇತ್ರಗಳ ದರ್ಶನವಿದೆ. ನಮ್ಮ ಸಾಹಿತ್ಯವನ್ನೂ ಒಳಗೊಂಡು ಜಗತ್ತಿನ ಸಾಹಿತ್ಯ, ಸಾಹಿತ್ಯ ಕೃತಿಗಳ ಬಗ್ಗೆ ತಿರುಮಲೇಶರಿಗೆ ಎಷ್ಟೆಲ್ಲ ಹಸಿವಿದೆ ಎಂಬುದಕ್ಕೂ ಈ ಪುಸ್ತಕ ಒಂದು ನಿದರ್ಶನ. ಇಲ್ಲಿ ನಿಜವಾದ ಲೇಖಕ ಎಂದರೆ ಎಲ್ಲದರಲ್ಲೂ ಆಸಕ್ತಿ ಇರುವವನು ಎಂಬುದಕ್ಕೂ ಪುರಾವೆಯುಂಟು.

ಸುಮಾರು ಮೂರು ದಶಕಗಳ ದೀರ್ಘಾವಧಿಯಲ್ಲಿ ರಚಿತಗೊಂಡ, ಅನುರಣನ ಶಕ್ತಿಯುಳ್ಳ ಬರಹಗಳ ಈ ಸಂಕಲನದಲ್ಲಿರುವುದು ಬಾಲ್ಯ, ವಿದ್ಯಾಭ್ಯಾಸ, ಸಾಹಿತ್ಯ, ಕಲೆ, ರಾಜಕೀಯ, ಚರಿತ್ರೆ, ಧರ್ಮ ಮೊದಲಾದವುಗಳನ್ನು ಕುರಿತ ಸಣ್ಣ ಸಣ್ಣ ಲೇಖನಗಳು. ಇವುಗಳಲ್ಲಿ ಹಾಸುಹೊಕ್ಕಾಗಿರುವುದು ಅಂತರಾರ್ಥ, ವ್ಯಾಖ್ಯಾನ, ಓದುಗನನ್ನು ಯೋಚಿಸುವಂತೆ ಮಾಡಬಲ್ಲ ಪ್ರತಿಭೆ. ಇವುಗಳ ಉದ್ದೇಶ ಓದುಗರಿಗೆ ಏನು ಯೋಚಿಸಬಹುದೆಂದು ಹೇಳುವುದಷ್ಟೇ ಅಲ್ಲ, ಏನೆಲ್ಲ ವಿಷಯಗಳ ಬಗ್ಗೆ ಹೇಗೆಲ್ಲ ಯೋಚಿಸಲಾಗಿದೆ ಎಂಬುದನ್ನು ತಿಳಿಸಿಕೊಡುವುದು ಕೂಡ.

ಇಲ್ಲಿನ ಬಹುಪಾಲು ಲೇಖನಗಳು ತಿರುಮಲೇಶರ ವಿಚಾರಗಳ ವಿಕಸನವನ್ನು ಪ್ರತಿಫಲಿಸುವುದಲ್ಲದೆ ಅವರ ಆಸಕ್ತಿ ಅನುರಕ್ತಿಗಳ ಆಳಅಗಲಗಳನ್ನೂ ಪ್ರಕಾಶಪಡಿಸುತ್ತವೆ. ಅವರು ಸಾಹಿತ್ಯದ ರೂಪಕಶಕ್ತಿಯ ಬಗೆಗೆ ಬರೆಯಲಿ, ಎಲಿಯಟ್ ಸೃಷ್ಟಿಯ ಮೆಕಾವಿಟಿ ಬೆಕ್ಕಿನ ಬಗ್ಗೆ ಬರೆಯಲಿ, ವಿವಿಧ ತರಕಾರಿ, ಸಂಸ್ಕೃತಿ ಸಂಕರ, ಜೇನುಪೆಟ್ಟಿಗೆ, ಅತಿ ಸಣ್ಣಕತೆ, ಭಾಷಾಶಾಸ್ತ್ರ, ಹೀಗೆ ಯಾವುದರ ಬಗೆಗೆ ಬರೆದರೂ ಅವುಗಳಲ್ಲಿ ಹಲವು ಮಗ್ಗುಲುಗಳನ್ನು ಒಟ್ಟಿಗೇ ಕಾಣಿಸುವ ಪ್ರಬಂಧಧ್ವನಿ ಇರುತ್ತದೆ. ಇಲ್ಲಿ ಅವರೊಬ್ಬ ವಿದ್ವಾಂಸರಾಗಿ, ವಿಮರ್ಶಕರಾಗಿ ಮಾತ್ರವಲ್ಲ, ಒಬ್ಬ ಲೇಖಕರಾಗಿಯೂ ಸಹ ಲೇಖಕರ ಕೃತಿಗಳ ಬಗ್ಗೆ ಯೋಚಿಸುತ್ತಾರೆ. ಈ ಸಹ ಲೇಖಕರು ನಮ್ಮವರಾಗಿರಬಹುದು, ಪಾಶ್ಚಾತ್ಯ ದೇಶಗಳಿಗೆ ಸೇರಿದವರಾಗಿರಬಹುದು, ಹಿಂದಿನವರಾಗಿರಬಹುದು ಅಥವಾ ನಮ್ಮ ಸಮಕಾಲೀನರೇ ಆಗಿರಬಹುದು.

ವಿಮರ್ಶಾಪ್ರಜ್ಞೆಯ ಜೊತೆ ಔದಾರ್ಯವನ್ನೂ ಬೆಳೆಸಿಕೊಂಡ ಕನ್ನಡದ ಮನಸ್ಸಿಗೆ ಕೀಟ್ಸ್, ರಿಲ್ಕೆ, ಕ್ಲೀಸ್ಟ್, ಹರ್ಮನ್ ಬ್ರಾಖ್, ಎಲಿಯಟ್, ಶಿಶುನಾಳ ಶರೀಫ, ಗೋವಿಂದ ಪೈ, ಕಾರಂತ, ಗೋಕಾಕ, ಹೀಗೆ ಎಲ್ಲರೂ ಎಷ್ಟೆಲ್ಲ ಮುಖ್ಯ ಎಂಬುದನ್ನು ಇಲ್ಲಿನ ಒಂದೊಂದು ಲೇಖನವೂ ಸಾಬೀತುಗೊಳಿಸುತ್ತದೆ. ಆದ್ದರಿಂದಲೇ ಅಮೆರಿಕನ್ ಕವಿ ಡಬ್ಲ್ಯೂ. ಎಸ್. ಮರ್ವಿನ್ ಜೊತೆ ಎಡ್ವರ್ಡ್ ಹರ್ಷ್ ನಡೆಸಿದ ಸಂದರ್ಶನಕ್ಕೂ ಹೋರ್ಹೆ ಲೂಯಿಸ್ ಬೋರ್ಹೆಸ್‌ನ 'ಆತ್ಮಕಥಾರೂಪದ ಒಂದು ಪ್ರಬಂಧ'ಕ್ಕೂ (ಎರಡೂ ಅನುವಾದಗಳು) ಇಲ್ಲಿ ಸ್ಥಳಾವಕಾಶವುಂಟು.


ಭಾಷೆಯೆನ್ನುವುದು ಹೆಸರಿಲ್ಲದ್ದನ್ನು ಹೆಸರಿಸಬೇಕಾದ ಲೇಖಕನಿಗೂ ಅವನು ಎದುರಿಸುವ ಭಾಷಾರಹಿತ ವಾಸ್ತವಕ್ಕೂ ನಡುವೆ ಇರುವ ಒಂದು ವಾಹಕಶಕ್ತಿ. ತಿರುಮಲೇಶರಲ್ಲಿ ಇದು ಎಷ್ಟು ಧ್ವನಿಪೂರ್ಣವಾಗಿದೆಯೆನ್ನುವುದಕ್ಕೆ ಅವರು ಕಾಸರಗೋಡಿನ ಪನ್ನೆಪ್ಪಲದ ಬಗ್ಗೆ, ತಮ್ಮ ಬಾಲ್ಯದ ಅನುಭವಗಳ ಬಗ್ಗೆ, ತಾವು ಓದಿದ ಶಾಲೆ ಕಾಲೇಜುಗಳ ಬಗ್ಗೆ, ಪಾತ್ರೆಪಗಡೆಗಳ ಬಗ್ಗೆ, ಹುಲ್ಲು, ಕೀಟ, ತರಕಾರಿಗಳ ಬಗ್ಗೆ ಬರೆದಿರುವುದನ್ನು ಓದಬೇಕು.

ಉದಾಹರಣೆಗೆ 'ತರ ತರದ ತರಕಾರಿ' ಲೇಖನದಲ್ಲಿ ನುಗ್ಗೆಮರವನ್ನು ಕುರಿತ ಸಾಲುಗಳಿವು: 'ನುಗ್ಗೆಯ ಸಮಸ್ಯೆ ಏನೆಂದರೆ ಗಿಡವಾಗಿ ಇರಲೋ ಮರವಾಗಿ ಬೆಳೆಯಲೋ ಎಂದು ಅದಿನ್ನೂ ತೀರ್ಮಾನಿಸದೆ ಇರುವುದು! ಬೆಳೆಯಲು ಬಿಟ್ಟರೆ ಇದು ಮರದಷ್ಟು ಬೆಳೆದರೂ, ಮರದ ಶಕ್ತಿಯಿಲ್ಲ. ಕೊಂಬುಗಳು ಗೊಂಚಲು ಗೊಂಚಲಾಗಿ ಇಳಿದರೂ ಅವನ್ನು ಕೊಯ್ಯಲು ದೋಟಿಯ ಸಹಾಯ ಬೇಕಾಗಬಹುದು. ಮರವೆಂದ ಮೇಲೆ ಹತ್ತಿದರೆ ಗೆಲ್ಲು ಹಿಸಿದು ಕೆಳಬೀಳುವ ಅಪಾಯವಿದೆ. ಇನ್ನೊಂದು ಸಮಸ್ಯೆಯೆಂದರೆ ಮರದಿಂದ ತಮ್ಮದೇ ನೂಲುಗಳಲ್ಲಿ ಪುಟ್ಟ ಮಕ್ಕಳಂತೆ ಕೆಳಕ್ಕೆ ನೇತಾಡುವ ಕಂಬಳಿ ಹುಳಗಳು. ಅವು ನುಗ್ಗೆಮರವನ್ನು ಹುಡುಕಿಕೊಂಡು ಬರುತ್ತವೆ. ಇದರ ಅರಿವಿಲ್ಲದೆ ಕೆಳಗೆ ಹೋಗುವ ಮನುಷ್ಯರ ತಲೆಮೇಲೆ ಈ ಹುಳಗಳು ಆಕಸ್ಮಿಕವಾಗಿ ಬೀಳಬಹುದು!'

ತಿರುಮಲೇಶರ ಈ ಕೃತಿಯ ಉದ್ದಕ್ಕೂ ಪಾಂಡಿತ್ಯದ ಸ್ಪರ್ಶವಿದೆ, ಸ್ನೇಹಿತರ ನಡುವಣ ಮಾತುಕತೆಯ ಆತ್ಮೀಯತೆಯಿದೆ, ತಿಳಿಹಾಸ್ಯವೂ ಇದೆ. ಜೊತೆಗೆ ಅಗತ್ಯವೆನಿಸಿದ ಕಡೆಗಳಲ್ಲಿ ಇಂಗ್ಲಿಷಿನ ಕೆಲವು ಪಾರಿಭಾಷಿಕ ಶಬ್ದಗಳಿಗೆ ಅವರು ನಿರಾಯಾಸವಾಗಿ ಟಂಕಿಸಿರುವ ಕನ್ನಡ ಶಬ್ದಗಳೂ ಇವೆ. ಉದಾಹರಣೆಗೆ: ಸ್ವಕುಲಾನುರಕ್ತ (ಕ್ಲಾನಿಷ್), ವ್ಯವಹಾರ ವ್ಯವಸ್ಥೆ (ನೆಟ್‌ವರ್ಕ್), ಜಾಕಿಣೀ ದ್ರಾವಣ (ವಿಚಸ್ ಬ್ರ್ಯೂ), ಕೆಡುಗಣ್ಣು (ಈವಿಲ್ ಐ), ಗೃಹೀಕರಣ (ಡೊಮೆಸ್ಟಿಕೇಷನ್), ಪ್ರಪಿತೃ (ಅತಾವಿಸ್ಟಿಕ್), ಸ್ವಯಂವಿರೋಧಿ (ಕಾಂಟ್ರಡಿಕ್ಷನ್) ಪ್ರಭಾಷೆ (ಮೆಟಾಲಾಂಗ್ವೇಜ್), ಆಟೋ ಸಜೆಶ್ಚನ್ (ಸ್ವಯಮಾವಾಹನೆ) ಮುಂತಾದವು.

ಈ ಕೃತಿಯನ್ನು ಓದುತ್ತಿರುವಾಗ ಉದ್ದಕ್ಕೂ ನಾನು ತಿರುಮಲೇಶರ ಆಸಕ್ತಿಗಳ ವ್ಯಾಪಕತೆಯನ್ನು ಕಂಡು ಬೆರಗಾದದ್ದುಂಟು. ಅವರು ನಿಜವಾದ ಅರ್ಥದಲ್ಲಿ ಬಹುಶ್ರುತರು. 'ಎಂ.ಎ. ಎಂಬ ಪೋರ್ಟಲ್' ಲೇಖನದಲ್ಲಿರುವ ಈ ವಾಕ್ಯಗಳನ್ನು ನೋಡಿ: 'ಒಬ್ಬ ಓದುಗನಿಗೆ ತಾನು ಎಲ್ಲವನ್ನೂ ಓದಬೇಕು ಎನಿಸುತ್ತದೆ. ಆದರೆ ಎಲ್ಲವನ್ನೂ ಎಂದರೆ ಏನರ್ಥ? ಎಲ್ಲವೂ ಎಂದರೆ ಏನೆಂದೇ ನಮಗೆ ಗೊತ್ತಿರುವುದಿಲ್ಲ. ಗೊತ್ತಿದ್ದರೂ ಎಲ್ಲವನ್ನೂ ಓದುವುದು ಯಾರಿಂದಲೂ ಸಾಧ್ಯವಿಲ್ಲ. ದೊಡ್ಡದೊಂದು ಲೈಬ್ರರಿಗೆ ಅಥವಾ ಪುಸ್ತಕದಂಗಡಿಗೆ ಹೋದಾಗ ಗೊತ್ತಾಗುತ್ತದೆ, ಮನುಷ್ಯನ ಆಯುಸ್ಸಿನ ಮಿತಿ'. ಹೀಗಿದ್ದೂ ನನಗೆ ತಿಳಿದಂತೆ ನಮ್ಮ ಕಾಲದಲ್ಲಿ ಅವರಷ್ಟು ಓದಿಕೊಂಡವರು ಕೆಲವೇ ಕೆಲವರು.

'ಸಾಹಿತ್ಯದ ನಿಷಿದ್ಧ ವಲಯ' ಎಂಬ ಲೇಖನದಲ್ಲಿ ಅವರಿಗೆ ನೋವುಂಟುಮಾಡಿರುವ, ಓದುವ ನಮಗೆ ವಿಷಾದವೆನಿಸುವ ಈ ಕೆಲವು ಮಾತುಗಳಿವೆ. ಇವು ನಮ್ಮ ಕಾಲದ ಸಾಹಿತ್ಯ ರಾಜಕೀಯಕ್ಕೊಂದು ಕನ್ನಡಿಯೂ ಹೌದು: 'ನಾನು ಆಗಾಗ ರೋಮನ್ ಇತಿಹಾಸ ಓದುತ್ತಿದ್ದೆ. ಸಿಕ್ಕಿದ ಮಾಹಿತಿಗಳನ್ನೇ ಬಳಸಿಕೊಂಡು ಮೊದಲು 'ಟೈಬೀರಿಯಸ್', ನಂತರ 'ಕಲಿಗುಲ' ಬರೆದೆ. ಇವುಗಳ ಬಗ್ಗೆ ಜನ ಏನೆನ್ನುತ್ತಾರೋ ಎನ್ನುವ ಕುತೂಹಲ ಇತ್ತು. ಎರಡೂ ಪೂರ್ಣಪ್ರಮಾಣದ ನಾಟಕಗಳು. ನನ್ನ ಜೀವನಸಂಧ್ಯೆಯಲ್ಲಿ ಮಾಡಿದ ಕೆಲಸಗಳು. ಇನ್ನೂ ಬರೆಯಬೇಕೆಂದಿದ್ದೆ. ನನ್ನ ಭಾಷಾಬಾಂಧವರಿಂದ ಒಂದು ಒಳ್ಳೆಯ ಮಾತು ಬರುತ್ತಿದ್ದರೆ ಬಹುಶಃ ಹಾಗೆ ಮಾಡುತ್ತಿದ್ದೆನೋ ಏನೋ. ಆದರೆ ಜನರ ಅನಾದರ ನನ್ನ ಉತ್ಸಾಹವನ್ನು ಕೊಂದುಹಾಕಿತು.... ಇದರ ಬೆನ್ನಿನಲ್ಲೇ ನಾನು 'ಅವ್ಯಯ ಕಾವ್ಯ'ವನ್ನು ಬರೆದೆ. ನಾಟಕ ಓದದವರು ಆದಿ ಪ್ರಾಯೋಗಿಕ ಕಾವ್ಯವನ್ನು ಓದುತ್ತಾರೆಯೆ? 'ಅವ್ಯಯ ಕಾವ್ಯ' ಮುಗ್ಗರಿಸಿ ಬಿತ್ತು. (ಇದರ ಹಿಂದಿನ 'ಅಕ್ಷಯ ಕಾವ್ಯ'ಕ್ಕೆ ಪ್ರಶಸ್ತಿ ಬಂದಿತ್ತು ನಿಜ. ಅದೊಂದು ಆಶ್ಚರ್ಯ!)'



ಪು: 564 ₹600

ಅಕ್ಷರಲೋಕದ ಅಂಚಿನಲ್ಲಿ
ಲೇ: ಕೆ.ವಿ. ತಿರುಮಲೇಶ್
ಪ್ರ: ಅಭಿನವ
ಸಂ: 9448804905

ವಿಮರ್ಶೆ

ಮೊದಲ ಓದು


ನಟನ ಬದುಕಿನ 'ಆ್ಯಕ್ಷನ್' ಕಥೆ

ಮಂಡ್ಯ ರಮೇಶ್ ರಂಗದ ಮೇಲೆ ನಲಿದದ್ದು, ತೆರೆಯ ಮೇಲೆ ನಗಿಸಿದ್ದು ಅಷ್ಟು ಮಾತ್ರವೇ? ಹಾಗಿದ್ದರೆ ಆ ತೆರೆಯ ಹಿಂದಿನ ಕಥೆಗಳೇನು? ಪ್ರಬುದ್ಧ ನಟನ ಬದುಕು ಹೇಗಿತ್ತು? ಈ ಕಲಾವಿದನ ಬದುಕು ಪಡೆದ ತಿರುವುಗಳ ಬಗ್ಗೆ ಸಮಗ್ರವಾಗಿ ಕಟ್ಟಿಕೊಟ್ಟಿದೆ ಈ ಕೃತಿ.

ಶೀರ್ಷಿಕೆಯಲ್ಲಿರುವಂತೆ ಇದು ಬರಿ ನಟನ ಸಂಸ್ಥೆಯೊಂದರ ಕಥನ ಅಲ್ಲ. ರಂಗ, ಚಿತ್ರ ನಟ, ನಿರ್ದೇಶಕ ಬರಹಗಾರನ ಬದುಕೊಂದು ರೂಪುಗೊಂಡದ್ದು, ಅದಕ್ಕೆ ಪೂರಕವಾಗಿ ಬಂದ ವ್ಯಕ್ತಿ– ಶಕ್ತಿ ಒದಗಿದ್ದು ಹೀಗೆ ಹತ್ತಾರು ವಿಷಯಗಳನ್ನು ಆಪ್ತವಾಗಿ ಹೇಳುತ್ತಲೇ ಹೋಗಿದೆ.

ಕೆಲವು ರಂಗ ಪ್ರಯೋಗಗಳ ಹಿನ್ನೆಲೆಯ ಕಥನಗಳಿವೆ. ಆಪ್ತರ ಅನಿಸಿಕೆಗಳಿವೆ. ಸಂದರ್ಶನಗಳಿವೆ. ವಿದೇಶದಲ್ಲಿ ಹೆಜ್ಜೆ ಇಟ್ಟ 'ಮಂಡ್ಯ'ದಲ್ಲಿ ಒಂದು ಹೆಮ್ಮೆಯ ನಿಟ್ಟುಸಿರು ಇದೆ. ಟಿ.ವಿ. ಕಾರ್ಯಕ್ರಮಗಳಲ್ಲಿ ದಿಗ್ಗಜರ ಒಡನಾಟದ ಅನುಭವಗಳಿವೆ. ಲೇಖಕರಾಗಿ ಮಂಡ್ಯ ರಮೇಶ್ ಏನು ಎಂಬುದೂ ಗೊತ್ತಾಗಿದೆ. ಸಾಂಸಾರಿಕ ಬದುಕಿನ ಸುಖದುಃಖಗಳೂ ಹಾಗೆಯೇ ಬಂದು ಹೋಗಿವೆ.

ಕೊನೆಯ ಲೇಖನವೊಂದರಲ್ಲಿ ಮಂಡ್ಯದ ಕಬ್ಬಿನಲ್ಲಿ ಎಷ್ಟು ಸಿಹಿ ಇದೆಯೋ ಅಷ್ಟೇ ಕಹಿಯೂ ಇರುವುದರ ಕಥೆ ಇದೆ. ಹಲವಾರು ಉಳಿ ಪೆಟ್ಟುಗಳನ್ನು ತಿನ್ನದೇ ಕಲ್ಲು ಶಿಲೆಯಾಗದು. ಕಲೆಯಲ್ಲಿ ದೃಢ ಮನಸ್ಸನ್ನು ನೆಟ್ಟು ಟೀಕಿಸಿದವರಿಗೆ ಮೌನವಾಗಿಯೇ ಉತ್ತರವನ್ನು ಕೊಟ್ಟು ಮಂಡ್ಯದ ಮಣ್ಣನ್ನು ಗೌರವಿಸಿದ್ದಾರೆ ಈ ಕಲಾವಿದ. ಮೈಸೂರಿನ ರಂಗ ಪೀಠವನ್ನು ತಲೆಯ ಮೇಲೆ ಹೊತ್ತು ಮೆರೆಸಿದ್ದಾರೆ ಎಂಬ ಹೆಮ್ಮೆ ಇಲ್ಲಿನ ಬರಹಗಳಲ್ಲಿದೆ. ಕೊನೆಯಲ್ಲೊಂದು ಚಿತ್ರ ಸಂಪುಟವೂ ಇದೆ. ಪ್ರೊ.ಎಂ.ಕೃಷ್ಣೇಗೌಡರ ಆಪ್ತ ಮುನ್ನುಡಿಯಿದೆ. ಲೇಖಕರು ಮಂಡ್ಯ ರಮೇಶ್ ಅವರ ಆತ್ಮೀಯರೂ ಆಗಿರುವ ಕಾರಣ ಬರಹ ಮಾತಿನ ರೂಪ ಪಡೆದು ಆಪ್ತವಾಗಿ ಮೂಡಿಬಂದಿದೆ.



ಪು: 216 ₹250

ಮಂಡ್ಯ ರಮೇಶ್
ನಟನ ಕಥೆ
ಲೇ: ಎನ್. ಧನಂಜಯ
ಪ್ರ: ವೀರಲೋಕ ಬುಕ್ಸ್ ಪ್ರೈ. ಲಿ.
ಸಂ. 70221 22121

ಸಹೃದಯಿ ಮೇಷ್ಟ್ರ ವೃತ್ತಿ ವೃತ್ತಾಂತ

ಸಹೃದಯಿ ಮೇಷ್ಟ್ರೊಬ್ಬರು ತರಗತಿ ಕೋಣೆಯಲ್ಲಿ ಮತ್ತು ಕೊಠಡಿಯಿಂದಾಚೆ ಏನೆಲ್ಲಾ ಮಾಡಬಹುದು? ಹಾಗೆ ಏನನ್ನಾದರೂ ಮಾಡಬೇಕು ಎಂದು ಹೊರಟವರ ಹಾದಿ ಹೇಗಿರುತ್ತದೆ ಎಂಬುದನ್ನು ವಿವರವಾಗಿ ಹೇಳಿದ್ದಾರೆ ಡಾ. ಉದಯ ಕುಮಾರ ಇರ್ವತ್ತೂರು. ಸರ್ಕಾರಿ ಕಾಲೇಜಿನಲ್ಲಿ ವ್ಯವಸ್ಥೆಯೊಡನೆ ಹೊಂದಿಕೊಂಡೂ, ಸಾತ್ವಿಕವಾಗಿ ಎದುರಿಸುತ್ತಲೂ, ಕಾಲೆಳೆಯುವಿಕೆಯನ್ನು ಸಹಿಸುತ್ತಲೂ ಮಾನವೀಯ ಅಂತಃಕರಣವಷ್ಟನ್ನೇ ಇಟ್ಟುಕೊಂಡು ಮುಂದುವರಿದ ಕತೆಗಳು ಇಲ್ಲಿವೆ. ಮಂಗಳೂರಿನ ವಿಶ್ವವಿದ್ಯಾಲಯ ಕಾಲೇಜನ್ನು ದೂರದಿಂದ ನೋಡಿ ಹೋಗುವವರಿಗೆ ಆ ಕಾಲೇಜಿನ ಆಳ, ಅಗಲದ ವಿಸ್ತಾರವನ್ನು ತೆರೆದು ತೋರಿಸಿದ್ದಾರೆ ಲೇಖಕರು.

ವಿದ್ಯಾರ್ಥಿಗಳಿಗೆ ಬೆಳಗಿನ ಆಹಾರ ಪೂರೈಸುವ ಸಲುವಾಗಿ ಹುಟ್ಟಿಕೊಂಡ ಕ್ಯಾಂಟೀನು ಎಂಬ ದಾಸೋಹ ಕೇಂದ್ರ 'ಕೈಗೂ ಬಂದು ಮತ್ತೆ ಬಾಯಿಗೂ ಬಂದ ತುತ್ತು' ಒದಗಿಸಿದ್ದು, ವಿದ್ಯಾರ್ಥಿಗಳಿಗೆ ಸಮವಸ್ತ್ರ ರೂಪಿಸಿದ್ದು, ಹರಸಾಹಸ ಮಾಡಿ ಬಯಲು ರಂಗಮಂದಿರ ಕಟ್ಟಿದ್ದು, ವಿದ್ಯಾರ್ಥಿಗಳ ಮತ್ತು ಸಾರ್ವಜನಿಕರ ಪ್ರಾಣ ರಕ್ಷಣೆಗಾಗಿ ರಸ್ತೆ ಉಬ್ಬು ಹಾಕಲು ಸಾಹಸಪಟ್ಟಿದ್ದು, ಕಾಲೇಜಿಗೆ 150 ವರ್ಷಗಳ ಸಂಭ್ರಮಾಚರಣೆಗೆ ನಿಂತಿದ್ದು... ಹೀಗೆ ಇದು ಪ್ರಾಂಶುಪಾಲರೊಬ್ಬರ ವೃತ್ತಿ ಬದುಕಿನ ದಾಖಲೆಯೂ ಹೌದು, ಅವಲೋಕನವೂ ಹೌದು. ಹೇಳಿಕೊಳ್ಳಲೇಬೇಕೆನಿಸಿದ ಆತ್ಮ ವೃತ್ತಾಂತದಂತೆಯೂ ಈ ಕೃತಿಯ ಲೇಖನಗಳು ಓದಿಸಿಕೊಂಡು ಹೋಗುತ್ತವೆ. ನಿರೂಪಣೆಯೂ ಚೆನ್ನಾಗಿದೆ. ಅನೇಕ ಬಾರಿ ಇಂಥ ಸಾಹಸಗಳಲ್ಲಿ ಗೆದ್ದೂ ವ್ಯವಸ್ಥೆಯ ನಡುವೆ 'ದುಃಖ' ಅನುಭವಿಸಿದ ಛಾಯೆಯೂ ಅಲ್ಲಲ್ಲಿ ಇಣುಕಿದೆ.

ಕೊನೆಯಲ್ಲಿ ಒಂದಿಷ್ಟು ಚಿತ್ರಗಳು ಅನುಭವದ ದಾರಿಗೆ ದೃಶ್ಯಗಳನ್ನು ಕಟ್ಟಿಕೊಟ್ಟಿವೆ. ಪ್ರಾಂಶುಪಾಲರು ತಮ್ಮ ಬದುಕಿನಲ್ಲಿ ಸಿಕ್ಕಿದ ಆತ್ಮತೃಪ್ತಿ, ವಿದ್ಯಾರ್ಥಿಗಳ ಮತ್ತು ಪೋಷಕರ ಕೃತಜ್ಞತೆಯ ಮುಗುಳ್ನಗೆಯಲ್ಲಿ ಖುಷಿಯಾಗಿ ಕೃತಿಯನ್ನು ಮುಗಿಸಿದ್ದಾರೆ. ಅಧ್ಯಾಪಕರು, ವಿದ್ಯಾರ್ಥಿಗಳು, ಮಂಗಳೂರಿನ ಹಂಪನಕಟ್ಟೆಯ ಕೆಂಪು ಕಟ್ಟಡದ ವಿಶ್ವವಿದ್ಯಾಲಯ ಕಾಲೇಜಿನ ಬಗ್ಗೆ ತಿಳಿದುಕೊಳ್ಳಲು ಆಸಕ್ತರಿಗೆ ಅಗತ್ಯವಾದ ಕೃತಿ.



ಪು: 240 ₹250


ಗೆಲುವಿನ ದುಃಖ ಮತ್ತು ಸೋಲಿನ ಸುಖ
ಲೇ: ಡಾ.ಉದಯ ಕುಮಾರ ಇರ್ವತ್ತೂರು
ಪ್ರ: ಆಕೃತಿ ಆಶಯ ಪಬ್ಲಿಕೇಶನ್ಸ್
ಸಂ: 9449772996

ಸಹಸ್ರ ಶಿಲ್ಪಕಲೆಗಳ ಸುತ್ತ ...

ಕಲೆಗಳ ಬೀಡು ಕರುನಾಡು. ಬೇಲೂರು, ಹಳೆಬೀಡು, ಹಂಪಿ, ಬಾದಾಮಿ, ಐಹೊಳೆ, ಪಟ್ಟದಕಲ್ಲು ಮುಂತಾದುವುಗಳು ಕರ್ನಾಟಕವನ್ನು ಕಲೆಯ ತವರು ಎನ್ನುವ ಮಾತಿಗೆ ಸಾಕ್ಷ್ಯವಾಗಿ ನಮ್ಮ ಮುಂದಿವೆ. ಅಲ್ಲಿನ ಕಲೆಗಳ ವಿಸ್ತಾರ, ಅವು ಕಣ್ಮುಂದೆ ಚಿತ್ರಿಸುವ ಸಾಂಸ್ಕೃತಿಕ ಕಥನ, ಸಂಸ್ಕೃತಿಯ ಅನಾವರಣ ಹಾಗೂ ಸಾಮ್ರಾಜ್ಯಗಳ ಕಥೆ, ಅವುಗಳ ಹಿಂದಿನ ಭವ್ಯ ಇತಿಹಾಸ ಒಂದೆರಡೇ! ಇವುಗಳಿಗೆ ಸರಿಸಾಟಿಯಾಗಿ ನಿಲ್ಲಬಲ್ಲ ಕೌಶಲ ಸಿಗುವುದು ಅಪರೂಪವೇ ಸರಿ. ಹೀಗಾಗಿಯೇ ಇಂಥ ಪ್ರದೇಶಗಳನ್ನು ಒಂದೆರಡು ದಿನಗಳಲ್ಲಿ ಸುತ್ತಿ ಅರಿತು, ಕಣ್ತುಂಬಿಕೊಳ್ಳುವುದು ಕಷ್ಟಸಾಧ್ಯ. ಅಥವಾ ಅದು ಸೂಕ್ತವೂ ಅಲ್ಲ!

ಇಂತಹ ಸಾಗರದಲ್ಲಿ ಸದಾ ಈಜಾಡುವವರು ರೇಖಾಚಿತ್ರ ಕಲಾವಿದ ಪುಂಡಲೀಕ ಕಲ್ಲಿಗನೂರ್. ಕನ್ನಡದ ಹಲವು ದಿನಪತ್ರಿಕೆಗಳಲ್ಲಿನ ರೇಖೆಗಳ ಹಿಂದಿದ್ದ ಈ ಕೈ, ಇದೀಗ ಮಾರ್ಗದರ್ಶಿಯಂತೆ ಪ್ರವಾಸಿಗರಿಗೆ, ಅಧ್ಯಯನಾಸಕ್ತರ ಕೈಹಿಡಿದಿದೆ. ಈಗಾಗಲೇ ಬೇಲೂರು, ಹಳೆಬೀಡು ಶಿಲ್ಪಕಲಾ ಸಾಗರದಲ್ಲಿ ಮಿಂದು, ಗದಗ ಜಿಲ್ಲಾ ಪ್ರವಾಸಿ ತಾಣಗಳ ತಂಪನ್ನು ಕಣ್ತುಂಬಿಕೊಂಡು, ಗಜೇಂದ್ರಗಡ–ರೋಣ ತಾಲ್ಲೂಕುಗಳ ಶಿಲ್ಪಕಲಾ ದೇಗುಲಗಳ ವೈಶಿಷ್ಟ್ಯವನ್ನು ಪುಂಡಲೀಕ ಅವರು ಕನ್ನಡಿಗರ ಮುಂದಿರಿಸಿದ್ದಾರೆ. ಇದೀಗ ಬಾದಾಮಿ, ಐಹೊಳೆ, ಪಟ್ಟದಕಲ್ಲು ಮತ್ತು ಮಹಾಕೂಟದಲ್ಲಿ ಹೆಜ್ಜೆ ಹಾಕಿ, ಕಲಾಕಾರನಾಗಿ ತಾನೂ ಕಲೆಯನ್ನು ಸವಿದು, ಛಾಯಾಚಿತ್ರಗಳು ಹಾಗೂ ಭರಪೂರ ಮಾಹಿತಿಯೊಂದಿಗೆ ಅಲ್ಲಿನ ಕಲೆಗಳನ್ನು ಓದುಗರಿಗೂ ಉಣಬಡಿಸಿದ್ದಾರೆ.

ಪುಂಡಲೀಕ ಅವರ ಐದು ವರ್ಷಗಳ ಸುತ್ತಾಣ, ಶ್ರಮ ಈ ಚಿತ್ರಸಂಪುಟ. ಕೃತಿಯ ಗಾತ್ರವೇ ಈ ಮಾತಿಗೆ ಸಾಕ್ಷ್ಯ. ಇಲ್ಲಿನ ಅಪೂರ್ವ ದೇವಾಲಯಗಳ, ಗುಹೆಗಳ ವಾಸ್ತುಶಿಲ್ಪಗಳ ನೆರಳಲ್ಲಿ ನಡೆದಾಡಿ ದಾಖಲಿಸುವ ಪ್ರಯತ್ನ ಇಲ್ಲಾಗಿದೆ. 'ಇಷ್ಟು ದೊಡ್ಡ ಸಾಗರಸದೃಶ ಕಲಾಕೀರ್ತಿಯ ಒಂದು ಮಗ್ಗುಲಿನ ಪರಿಚಯ ಮಾಡಿಕೊಡುವ ಅಳಿಲು ಪ್ರಯತ್ನವಿದು. ಈ ಕೃತಿ ಪ್ರಾರಂಭವೂ ಅಲ್ಲ, ಅಂತ್ಯವೂ ಅಲ್ಲ' ಎನ್ನುವುದು ಅವರ ಮಾತು. ಇಲ್ಲಿನ ಸಾವಿರಾರು ಛಾಯಾಚಿತ್ರಗಳ ಹಿಂದಿನ ರುವಾರಿಗಳಾದ ವಿಪಿನ್ ಬಾಳಿಗಾ, ಎಸ್. ರಾಘವೇಂದ್ರ ಹಾಗೂ ಮಂಜುನಾಥ ರಾಠೋಡ ಅವರು ಪಟ್ಟ ಕಷ್ಟ, ತಾನು ಅವರಿಗೆ ನೀಡಿದ ಸಂಕಷ್ಟವನ್ನೂ ಪುಂಡಲೀಕ ಅವರು ತಪ್ಪದೆ ನೆನಪಿಸಿಕೊಂಡಿದ್ದಾರೆ. ಛಾಯಾಚಿತ್ರಗಳ ಜೊತೆಗೆ ರೇಖೆಗಳೂ ಇಲ್ಲಿನ ಶಿಲ್ಪಕಲೆಗಳಿಗೆ ಜೀವತುಂಬಿವೆ. ವಿನ್ಯಾಸ, ಛಾಯಾಚಿತ್ರಗಳ ಗುಣಮಟ್ಟ, ಸರಳವಾದ ವಿವರಣೆ ಕೃತಿಯ ಜೀವಾಳ.



ಪು: 520 ₹2,400

ಚಾಲುಕ್ಯರ ಶಿಲ್ಪಕಲೆ
(ಬಾದಾಮಿ ಐಹೊಳೆ ಪಟ್ಟದಕಲ್ಲು ಮತ್ತು ಮಹಾಕೂಟ)
ಸಂಪಾದನೆ: ಪುಂಡಲೀಕ ಕಲ್ಲಿಗನೂರು
ಪ್ರ: ಕನ್ನಡ ಪ್ರಕಾಶನ, ಗಜೇಂದ್ರಗಡ
ಸಂ: 9343760234

ಒಳನೋಟ

ತಂಬಾಕಿನ ತೀವ್ರ ಘಾಟು ನೆಲಮೂಲದ್ದೇ ಘಮಲು

ತಂಬಾಕಿನ ಘಾಟಿನಷ್ಟೇ ತೀವ್ರತೆಯುಳ್ಳದ್ದು ಅದರ ಸುತ್ತಮುತ್ತ ಕೆಲಸ ಮಾಡುವವರು, ಅದರ ಅವಲಂಬಿತರ ಬದುಕು. ತಂಬಾಕು ಉತ್ಪಾದಕರ, ಗೋದಾಮು ಮಾಲೀಕರ ದರ್ಪ, ಶೋಷಣೆ, ಗತ್ತುಗಾರಿಕೆಗಳು ಇದೇ ಘಾಟನ್ನು ಹೊಂದಿದ್ದರೆ, ಅದರ ಸುತ್ತಮುತ್ತಲಿನ ಕಾರ್ಮಿಕರದ್ದು ಇನ್ನೊಂದು ಬಗೆಯ ತೀವ್ರತೆಯ ಘಾಟು. ಅಲ್ಲಿ ಅಸಹನೆ, ಆಕ್ರೋಶ, ನೋವು, ಕಣ್ಣೀರು, ಹಸಿವು ಎಲ್ಲವೂ ಇವೆ.


ಈ ಜನರ ಬದುಕನ್ನು ಅತ್ಯಂತ ಹತ್ತಿರದಲ್ಲಿ ಕಂಡುಂಡ ಅನುಭವ ಆಧರಿಸಿಯೇ ಚೌಗಲೆ ಅವರು ಈ ನಾಟಕ ರಚಿಸಿದ್ದಾರೆ. ವಖಾರಿ ಅಂದರೆ ತಂಬಾಕನ್ನು ಶುಚಿಗೊಳಿಸುವ ಗೋದಾಮು. ಧೂಸ ಎಂದರೆ ಅಲ್ಲಿನ ದೂಳು. ಇಲ್ಲಿ ಹೊರಹೊಮ್ಮುವ ದೂಳಿನಲ್ಲಿ ತಂಬಾಕಿನ ಜರ್ದಾದ ಘಾಟು ಇದ್ದೇ ಇದೆ. ಅದನ್ನೊಂದು ರೂಪಕವಾಗಿ ಬಳಸಿ ಜನರ ದನಿಯನ್ನು ರಂಗಕೃತಿಯಲ್ಲಿ ಎತ್ತಿ ಹಿಡಿದಿದ್ದಾರೆ.

ತಂಬಾಕು ಕಾರ್ಮಿಕರ ಹೋರಾಟ ಜೋರಾಗಿಯೇ ನಡೆದಿರುತ್ತದೆ. ಅದಕ್ಕೆ ಪ್ರತಿಯಾಗಿ ಮಾಲೀಕರ ವರ್ಗ ಪ್ರತಿರೋಧ ಒಡ್ಡುತ್ತಲೇ ಇರುತ್ತದೆ. ಕಾರ್ಮಿಕ ಹೆಣ್ಣುಮಕ್ಕಳ ಮೇಲೆ ಕಣ್ಣು ಹಾಕುವ ಮಾಲೀಕವರ್ಗ, ಅದನ್ನು ದಿಟ್ಟವಾಗಿ ಎದುರಿಸುವ ಕಾರ್ಮಿಕರು, ಆದಾಗ್ಯೂ ಆ ಶೋಷಣೆಯ ಬಲೆಯೊಳಗೆ ಬೀಳುವ ಮುಗ್ಧೆಯರು... ಈ ಶೋಷಣೆ ತಡೆಯಲು ಮುಂದಾದ ಬೀಡಿ ವ್ಯಾಪಾರಿ ಮಹಮದ್‌ನ ಕೊಲೆ... ಇಂಥ ಹಲವಾರು ಘಟನೆಗಳು ನಾಟಕವನ್ನು ಆವರಿಸಿವೆ. ನಾಟಕಕ್ಕೆ ಹಿನ್ನೆಲೆಯಾಗಿ ಸಂಗ್ಯಾ ಬಾಳ್ಯಾ ನಾಟಕದ ತಾಲೀಮು ಸಮಾನಾಂತರ ಕಥೆಯಾಗಿ ಕಾಣುತ್ತದೆ. ಕೆಲವು ದೃಶ್ಯಗಳು ಸಂಗ್ಯಾ ಬಾಳ್ಯಾ ನಾಟಕದ ತಾಲೀಮಿನ ತುಣುಕಿನೊಂದಿಗೆ ಅಂತ್ಯಗೊಳ್ಳುತ್ತವೆ.

ತೀವ್ರಗೊಂಡ ಹೋರಾಟವನ್ನು ವ್ಯವಸ್ಥಿತವಾಗಿ ಹಣಿಯುವ ಪ್ರಯತ್ನ ನಡೆಯುತ್ತದೆ. ಅದೂ ಕೊನೆಗೆ ಪ್ರಧಾನ ಪಾತ್ರದ ಭೀಮವ್ವ ಸಂಗ್ಯಾಬಾಳ್ಯಾ ನಾಟಕದ ವೇದಿಕೆಯಲ್ಲೇ ಕೊಲೆಯಾಗುವುದರೊಂದಿಗೆ ಅಂತ್ಯಗೊಳ್ಳುತ್ತದೆ. ಹೆಚ್ಚು ಕಡಿಮೆ ಸಂಗ್ಯಾ ಬಾಳ್ಯಾದ ಅಂತ್ಯದಲ್ಲಿ ಕಂಡು ಬರುವ ರೀತಿಯ ಘಟನೆಯೇ ಇಲ್ಲಿದೆ. ಎಲ್ಲ ಮುಗಿದ ಮೇಲೆ ಸಾಹುಕಾರರ ಅಂಗವಿಕಲ, ಮಂದಬುದ್ಧಿಯ ಮಗ ಬಾಹುಬಲಿಯು ನಾಟಕದ ಕೊನೆಯಲ್ಲಿ 'ಹಂ ಹೋಂಗೇ ಕಾಮ್‌ಯಾಬ್' ಎಂದು ಹೇಳುತ್ತಾ ಬರುವುದು ವೈರುಧ್ಯ ಮತ್ತು ಪ್ರತಿರೋಧದ ಧ್ವನಿಗಳಿಗೆ ತಿರುಗಿ ಹೇಳುವ ವ್ಯಂಗ್ಯದಂತೆಯೂ ಭಾಸವಾಗುತ್ತದೆ.

ತಂಬಾಕು ಕಾರ್ಮಿಕರ ಆಂದೋಲನವನ್ನು ಹಣಿಯಲು ಹುಟ್ಟಿಕೊಳ್ಳುವ ಮಾರುಕಟ್ಟೆ ಶಕ್ತಿಗಳು (ಪೂಲಚಂದ್, ಪೋರವಾಲ), ಅವುಗಳ ಒಳಸಂಚು, ಒಳಗೆ ಅಡಗಿರುವ ತಣ್ಣನೆಯ ಕ್ರೌರ್ಯ ಇಲ್ಲಿ ಅನಾವರಣಗೊಂಡಿದೆ. ಹೋರಾಟದ ಹಿಂದಿರುವ ರಾಜಕೀಯ, ಬೆಂಬಲ ಕೊಟ್ಟೂ ಕೊಡದಂತಿರುವ ಧಾರ್ಮಿಕ ಮುಖಂಡರು ಎಲ್ಲರ ಮುಖವನ್ನೂ ನಾಟಕ ತೆರೆದಿಟ್ಟಿದೆ.

ಹಳೇ ಮೈಸೂರು, ಹುಣಸೂರು, ಪಿರಿಯಾಪಟ್ಟಣ ಪ್ರದೇಶಗಳ ಹಳ್ಳಿ ಸೊಗಡಿನ ಭಾಷೆ ಬಳಸಿರುವುದು ವಸ್ತುವನ್ನು ಇನ್ನಷ್ಟು ಹತ್ತಿರವಾಗಿಸಿದೆ. ಆ ಪದಗಳ ಅರ್ಥಗಳೂ, ಮೊದಲ ಪ್ರದರ್ಶನದ ವಿವರಗಳೂ ಪುಸ್ತಕದ ಕೊನೆಯಲ್ಲಿ ಇವೆ. ನೆಲಮೂಲದ ಜನರ ಪ್ರತಿರೋಧದ ದನಿಯಾಗಿ ಈ ಕೃತಿ ಅವರ ಭಾಷೆಯಲ್ಲೇ ಮೂಡಿಬಂದಿದೆ.



ಪು: 104 ₹100

ವಖಾರಿಧೂಸ (ನಾಟಕ)
ಲೇ: ಡಿ.ಎಸ್. ಚೌಗಲೆ
ಪ್ರ: ಸಪ್ನ ಬುಕ್ ಹೌಸ್ ಬೆಂಗಳೂರು
ಸಂ: 080 40114455

ಕಥೆ



ಜ್ಯೋತಿ ಅವರ
ಪರೀಕ್ಷಿತನ ಆತ್ಮಾವಲೋಕನ

ಸಾವು ಎಲ್ಲರಿಗೂ ಬರುತ್ತದೆಯೆನ್ನುವುದು ನಿಜ. ಆದರೆ, ಅದಕ್ಕಾಗಿ ನಾವೆಂದೂ ಪೂರ್ವಸಿದ್ಧತೆ ಮಾಡುವುದಿಲ್ಲ. ನಮ್ಮ ತಯಾರಿ ಏನಿದ್ದರೂ ಚೆನ್ನಾಗಿ ಬದುಕುವುದಕ್ಕೆ ಹೊರತು, ಸಾಯುವುದಕ್ಕಲ್ಲ...

ಪೂರ್ಣ ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story


ಕವನ

ವಸುಂಧರಾ ಕದಲೂರು ಅವರ
ಪರಮೋಚ್ಚ ಉದಾಸೀನತೆ


ಕವನ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


https://www.prajavani.net/poetry

ಗಮನಸೆಳೆದ ಹೊತ್ತಿಗೆಗಳು














ವರ್ಷಪೂರ್ತಿ ನಾವು ಓದಿದ ಪುಸ್ತಕಗಳು ಅದೆಷ್ಟೋ. ಆದರೆ, ಕೆಲವು ಕೃತಿಗಳಂತೂ ಮನದಲ್ಲಿ ಅಚ್ಚಳಿಯದೆ ಉಳಿದುಬಿಡುತ್ತವೆ. ಹೀಗೆ 'ಎದೆಗೆ ಬಿದ್ದ ಅಕ್ಷರ'ಗಳು ಓದುಗರ ತಿಳಿವಳಿಕೆಯನ್ನು ವಿಸ್ತರಿಸುತ್ತವೆ. ಹೊಸ ಕಾಣ್ಕೆಯನ್ನೂ ನೀಡುತ್ತವೆ. ಈ ವರ್ಷ (2022) ನೀವು ಓದಿದ ಕೃತಿಗಳಲ್ಲಿ ಹಾಗೆ ಮನಸ್ಸಿನಲ್ಲಿ ಉಳಿದ ಕೃತಿಗಳು ಯಾವುವು? ಈ ಪ್ರಶ್ನೆಯನ್ನು ನಾಡಿನ ವಿವಿಧ ಭಾಗಗಳ ಗಂಭೀರ ಓದುಗರ ಮುಂದಿಟ್ಟು ಎಲ್ಲರಿಂದಲೂ ತಲಾ ಹತ್ತು ಕೃತಿಗಳ ಪಟ್ಟಿಯನ್ನು ಪಡೆಯಿತು 'ಭಾನುವಾರದ ಪುರವಣಿ'. ಹಾಗೆ ಪಡೆದ ಕೃತಿಗಳ ಪಟ್ಟಿಯನ್ನು ಇಲ್ಲಿ ನೀಡಲಾಗಿದ್ದು ಕನ್ನಡ ಸಾಹಿತ್ಯದ ಅಂತಹ ಹೊಸ ಫಸಲಿನ ಜೊತೆಗಿನ ಪುಟ್ಟ ಅನುಸಂಧಾನ ಇಲ್ಲಿದೆ. ಅಂದಹಾಗೆ ಇದೇನು ರ್‍ಯಾಂಕಿಂಗ್ ಅಲ್ಲ. ಚರ್ಚಿತ ಪುಸ್ತಕಗಳ ಕಡೆಗಿನ ಒಂದು ಹೊರಳು ನೋಟವಷ್ಟೇ..












ಕೃತಿಯ ಹೆಸರು	ಲೇಖಕರು
ಎಸ್.ಆರ್.ವಿಜಯಶಂಕರ	
ವಾಗರ್ಥ	ಡಿ.ಎ.ಶಂಕರ್
ಕರಾವಳಿ ಕಥನಗಳು	ಡಾ.ಕೆ.ಚಿನ್ನಪ್ಪ ಗೌಡ
ಆ ಪತ್ರಿಕೋದ್ಯಮ	ಜಿ.ಎನ್.ರಂಗನಾಥ ರಾವ್
ಕರಾವಳಿಯ ಕವಿರಾಜ ಮಾರ್ಗ	ಡಾ.ಬಿ.ಜನಾರ್ದನ ಭಟ್
ಬೌಲ್(ಕಾದಂಬರಿ)	ಎಂ.ಎಸ್.ಮೂರ್ತಿ
ಸಂಘಟನಾ ಚತುರ ಕೆದಂಬಾಡಿ ರಾಮಗೌಡ	ಡಾ.ಪೂವಪ್ಪ ಕಣಿಯೂರು
ಡಿ.ಆರ್.ನಾಗರಾಜ್(ಭಾರತೀಯ ಸಾಹಿತ್ಯ ನಿರ್ಮಾಪಕರು ಮಾಲಿಕೆ)	ನಟರಾಜ್ ಹುಳಿಯಾರ್
ಕರಮಜೋವ್ ಸಹೋದರರು	ಅನುವಾದ: ಟಿ.ಎಸ್.ರಘುನಾಥ್
ವೋಲೆ ಸೋಯಿಂಕಾ ವಾಚಿಕೆ	ಆಯ್ಕೆ ಮತ್ತು ಅನುವಾದ: ಜ.ನಾ.ತೇಜಶ್ರೀ
ಸೂಪ ಶಾಸ್ತ್ರ	ಆರ್.ಲಕ್ಷ್ಮೀನಾರಾಯಣ
ಭಾರತರತ್ನ ಪಂ. ಭೀಮಸೇನ ಜೋಶಿ	ಡಾ.ನಾಗರಾಜರಾವ್ ಹವಾಲ್ದಾರ್
ಲೋಕೇಶ ಅಗಸನಕಟ್ಟೆ	
ವಿನ್ನರ್ ವಿನ್ನರ್ ಚಿಕನ್ ಡಿನ್ನರ್	ವಿವಿಧ ಲೇಖಕರು
ಬುದ್ಧಿಜೀವಿ ಬಿಕ್ಕಟ್ಟುಗಳು	ಕೆ.ವಿ.ನಾರಾಯಣ
ಅವನ ಮುಖ ಮರೆತುಹೋಗಿದೆ	ಪ್ರತಿಭಾ ನಂದಕುಮಾರ್
ನೀಲಕುರಿಂಜಿ	ದಾದಾಪೀರ್ ಜೈಮನ್
ಇದಿರು ನೋಟ	ಸಬಿತಾ ಬನ್ನಾಡಿ
ಬೆತ್ತಲೆ ಸಂತ	ಇಸ್ಮಾಯಿಲ್ ತಳಕಲ್
ಬೆಳಕಿನ ಬೇಸಾಯ	ಅವಿನಾಶ
ಯಹೂದಿ	ಶ್ರೀಕಾಂತ ಶೆಟ್ಟಿ
ಅಶಾಂತಿ ಪರ್ವ	ಎಸ್.ಜಿ. ಸಿದ್ದರಾಮಯ್ಯ
ಋಣದ ಗಣಿ	ರುದ್ರಪ್ಪ ಹನಗವಾಡಿ
ವೋಲೆ ಸೋಯಿಂಕಾ (ವಾಚಿಕೆ)	ಅನು: ಜ.ನಾ. ತೇಜಶ್ರೀ
ಭುವನಾ ಹಿರೇಮಠ	
ಗದ್ಯಗಾರುಡಿ	ಕೇಶವ ಮಳಗಿ
ಮುಗಿದ ಹಾಡಿನ ಖಾಲಿ ರಾಗ	ಜಿ.ಪಿ. ಬಸವರಾಜು
ವಿಷ್ಣು ಕ್ರಾಂತಿ	ರಾಮು
ಎದೆ ಹಾಲಿನ ಪಾಳಿ	ಆರೀಫ್ ರಾಜಾ
ಮಣಿಬಾಲೆ	ಎಚ್.ಆರ್. ಸುಜಾತಾ
ಸಂಬಾರ ಬಟ್ಟಲ ಕೊಡಿಸು	ರೇಣುಕಾ ರಮಾನಂದ
ಗಾಳಿಯ ಮಡಿಲು	ಸಿದ್ದು ಸತ್ಯೆಣ್ಣವರ
ಕೆನ್ನೀಲಿ	ಎಂ.ಆರ್. ಕಮಲಾ
ಕಡಲು ನೋಡಲು ಹೋದವಳು	ಫಾತಿಮಾ ರಲಿಯಾ
ಕಥಾ ಕಿನ್ನುರಿ	ಚೆನ್ನಪ್ಪ ಕಟ್ಟಿ
ಗೀತಾ ವಸಂತ	
ಅಧಿಕಾರ ಮತ್ತು ಅಧೀನತೆ	ಅನುವಾದ: ಶ್ರೀಮತಿ ಎಚ್.ಎಸ್.
ಹೆಮಿಂಗ್ವೆ, ಇಂಡಿಯನ್ ಕ್ಯಾಂಪ್ ಮತ್ತು ಇತರ ಕಥೆಗಳು	ಅನು: ಎಸ್. ಗಂಗಾಧರಯ್ಯ
ಬುದ್ಧಿಜೀವಿ ಬಿಕ್ಕಟ್ಟುಗಳು	ಅನು: ಕೆ.ವಿ. ನಾರಾಯಣ
ನಮ್ಮ ಭಾರತ	ಕ್ಯಾಪ್ಟನ್ ಜಿ.ಆರ್. ಗೋಪಿನಾಥ್, ಅನು: ವಿಜಯ್ ಜೋಷಿ
ಗಂಗೆ ಬಾರೆ ಗೌರಿ ಬಾರೆ	ಡಾ.ಮಿರ್ಜಾ ಬಷೀರ್
ಅವನ ಮುಖ ಮರೆತುಹೋಗಿದೆ	ಪ್ರತಿಭಾ ನಂದಕುಮಾರ್
ಮಣಿಬಾಲೆ	ಎಚ್.ಆರ್. ಸುಜಾತಾ
ದರ್ಶನ ದೀಪಿಕೆ	ಅನು: ಆರ್.ಕೆ.ಕುಲಕರ್ಣಿ
ವಿನ್ನರ್ ವಿನ್ನರ್ ಚಿಕನ್ ಡಿನ್ನರ್	ವಿವಿಧ ಕಥೆಗಾರರು
ಡೆಸ್ಡಿಮೋನಾಳ ಕರವಸ್ತ್ರ	ವಿಕ್ರಮ ವಿಸಾಜಿ
ಕೆನ್ನೀಲಿ (ಆಲಿಸ್ ವಾಕರ್ ಪ್ರಬಂಧಗಳು)	ಅನು: ಎಂ.ಆರ್.ಕಮಲಾ
ಇದಿರು ನೋಟ	ಸಬಿತಾ ಬನ್ನಾಡಿ
ಮಲ್ಲೇಪುರಂ ಜಿ. ವೆಂಕಟೇಶ್	
ಕಾನನ ಜನಾರ್ದನ	ಡಾ.ಕೆ.ಎನ್. ಗಣೇಶಯ್ಯ
ವಿದುರ	ಜಗದೀಶ ಶರ್ಮಾ ಸಂಪ
ಗಂಡು ಜೀವ ಹೆಣ್ಣು ಭಾವ	ಬಿ.ಎಸ್. ಜಯಪ್ರಕಾಶ್ ನಾರಾಯಣ
ಹೊಯ್ಸಳ ಮಹಾಮಂಡಳೇಶ್ವರರು	ಡಾ.ಎಸ್. ಗಂಗಾಂಬಿಕೆ
ಪ್ರಾಕೃತ ಕಥಾಸಾಹಿತ್ಯ	ಪ್ರೊ.ಹಂಪನಾ
ಅಂಬೇಡ್ಕರ್ ಮತ್ತು ...	ಡಾ. ಎಚ್. ಟಿ. ಪೋತೆ
ವೈದೇಹಿ ಮಕ್ಕಳ ನಾಟಕಗಳು	ವೈದೇಹಿ
ಪದಗಳಿವೆ ಎದೆಯೊಳಗೆ	ಡಾ. ಎನ್. ಜಗದೀಶ ಕೊಪ್ಪ
ದಾರಿ	ಕುಸುಮ ಆಯರಹಳ್ಳಿ
ಸತ್ಯಮೇವ ಜಯತೇ	ಶಂಕರ ಬಿದರಿ
ಮಣ್ಣಿನ ಕನಸು	ಡಾ.ಶತಾವಧಾನಿ ಆರ್. ಗಣೇಶ್

ಚಿದಾನಂದ ಸಾಲಿ	
ಗಾಳಿಯ ಮಡಿಲು (ಕಾವ್ಯ)	ಸಿದ್ದು ಸತ್ಯಣ್ಣವರ
ವಿವೇಕಿಯ ಸ್ವಗತ (ಕಾವ್ಯ)	ಡಾ.ತಾರಿಣಿ ಶುಭದಾಯಿನಿ
ಹೋಳಿ (ನಾಟಕ/ಅನುವಾದ)	ಮರಾಠಿ ಮೂಲ: ಮಹೇಶ್ ಎಲಕುಂಚವಾರ, ಅನು: ಡಾ. ಹೇಮಾ ಪಟ್ಟಣಶೆಟ್ಟಿ
ಇದ್ದೂ ಇಲ್ಲದ್ದು (ಕಾದಂಬರಿ)	ಡಾ. ನಾ.ಮೊಗಸಾಲೆ
ಗುಬ್ಬಿ ಜಂಕ್ಷನ್ (ಮಕ್ಕಳ ಕವಿತೆ)	ಡಾ. ಎಚ್.ಎಸ್.ವೆಂಕಟೇಶಮೂರ್ತಿ
ಪುರುಷಾವತಾರ (ಕಾದಂಬರಿ)	ಡಾ. ಬಾಳಾಸಾಹೇಬ ಲೋಕಾಪುರ
ಮಹಾಬಿಂದು (ಕಾದಂಬರಿ)	ಡಾ.ಎಚ್.ಟಿ.ಪೋತೆ
ಹಾವಳಿ (ಕಾದಂಬರಿ)	ಪ್ರೊ. ಮಲ್ಲಿಕಾರ್ಜುನ ಹಿರೇಮಠ
ಬುದ್ಧ (ವಾಚಿಕೆ)	ಡಾ.ಎಸ್. ನಟರಾಜ ಬೂದಾಳು
ಓಕೆ ಮೇಕೆ (ಮಕ್ಕಳ ಕಾವ್ಯ)	ಡಾ.ಚಿಂತಾಮಣಿ ಕೊಡ್ಲೆಕೆರೆ
ಇಸ್ಮಾಯಿಲ್ ತಳಕಲ್	
ಗದ್ಯ ಗಾರುಡಿ (ಲೇಖನ)	ಕೇಶವ ಮಳಗಿ
ಮೋನು ಸ್ಮೃತಿ (ಆತ್ಮಚರಿತ್ರೆ)	ಬೋಳುವಾರು ಮೊಹಮ್ಮದ್ ಕುಂಞ
ಕಿನೊ ಮತ್ತು ಇತರ ಕತೆಗಳು (ಕಥೆ)	ಹರುಕಿ ಮುರಕಮಿ - ಅನುವಾದ : ಮಂಜುನಾಥ ಚಾರ್ವಾಕ
ಎದೆ ಹಾಲಿನ ಪಾಳಿ (ಕಾವ್ಯ)	ಆರೀಫ್ ರಾಜಾ
ಅಜ್ಜಿ ಕರೆದ ಹಾಗಾಯಿತು (ಕತೆ)	ಸವಿತಾ ನಾಗಭೂಷಣ
ಹೊನ್ನಾವರಿಕೆ (ಲೇಖನಗಳು)	ಎಂ.ಆರ್.ಕಮಲಾ
ಅವನ ಮುಖ ಮರೆತು ಹೋಗಿದೆ	ಪ್ರತಿಭಾ ನಂದಕುಮಾರ್
ಕಡಲು ನೋಡಲು ಹೋದವಳು	ಫಾತೀಮಾ ರಲಿಯಾ
ಕಾಡ ಹೂವಿನ ಹಾಡು(ಕಾವ್ಯ)	ಮೂಲ: ವಿಲಿಯಂ ಬ್ಲೇಕ್ - ಅನು: ವಿಠ್ಠಲ ದಳವಾಯಿ
ರಾಶೋಮನ್(ಕಥೆ)	ಮೂಲ: ಯೂನೋಸ್ಕೆ ಅಕ್ತಗವ: ಕನ್ನಡಕ್ಕೆ: ಕೆ.ಪುಟ್ಟಸ್ವಾಮಿ
ಕೆ. ಸತ್ಯನಾರಾಯಣ	
ಕರಮ್‌ಜೋವ್ ಸಹೋದರರು	ದಾಸ್ತೋವಸ್ಕಿ, ಅನು: ಟಿ.ಎಸ್. ರಘುನಾಥ್
ಅಂತಃಕರಣದ ಪು.ತಿ.ನ	ಎಚ್.ಎಸ್. ವೆಂಕಟೇಶ್‌ಮೂರ್ತಿ
ಪದಗಳಿವೆ ಎದೆಯೊಳಗೆ	ಎನ್. ಜಗದೀಶ್ ಕೊಪ್ಪ
ಅವನ ಮುಖ ಮರೆತುಹೋಗಿದೆ	ಪ್ರತಿಭಾ ನಂದಕುಮಾರ್
ಕರಾವಳಿಯ ಕವಿರಾಜಮಾರ್ಗ	ಡಾ.ಬಿ. ಜನಾರ್ದನ ಭಟ್
ವಿದುರ	ಜಗದೀಶ ಶರ್ಮಾ ಸಂಪ
ಡಿ.ಆರ್.ನಾಗರಾಜ್	ನಟರಾಜ ಹುಳಿಯಾರು
ಯಾರೂ ಬರೆಯದ ಕಥೆಗಳು	ಹೊಸ ಕಥೆಗಾರರ ಕಥೆಗಳು
ಅಮರೇಶ ನುಗಡೋಣಿ	
ಬುದ್ಧಿಜೀವಿಗಳ ಬಿಕ್ಕಟ್ಟುಗಳು	ಕೆ.ವಿ.ನಾರಾಯಣ
ಮಧುಬಾಲ	ರಮೇಶ ಅರೋಲಿ

ಕರಿಡಬ್ಬಿ	ರಾಜಾರಾಂ ತಲ್ಲೂರು
ಇದಿರು ನೋಟ	ಸವಿತಾ ಬನ್ನಾಡಿ
ಬುದ್ಧ	ನಟರಾಜ ಬೂದಾಳು
ಸೌಹಾರ್ದ ಪಥ	ಸಂ. ಲಕ್ಷ್ಮೀಕಾಂತ ಪಂಚಾಳ
ದೇಹವೇ ದೇಶ	ಮೂಲ: ಗರಿದೂ ಶ್ರೀವಾಸ್ತವ ಅನು: ವಿಕ್ರಮ ವಿಸಾಜಿ
ರಾಶೋಮನ್	ಮೂಲ– ಯೂನೊಸ್ ಕೆ ಅಕ್‌ತಗವ, ಅನು: ಕೆ.ಪುಟ್ಟಸ್ವಾಮಿ
ಅಧಿಕಾರ ಮತ್ತು ಅಧೀನತೆ	ಮೂಲ ಕೇಟ್ ಮಿಲೆಟ್, ಅನು: ಎಚ್.ಎಸ್. ಶ್ರೀಮತಿ
ದೇವು ಪತ್ತಾರ	
ಪದಗಳಿವೆ ಎದೆಯೊಳಗೆ (ಸಂಶೋಧನೆ)	ಡಾ. ಎನ್. ಜಗದೀಶ ಕೊಪ್ಪ
ಮಾತು ಮುಗಿದಿಲ್ಲ- (ವ್ಯಕ್ತಿಚಿತ್ರ)	ಸಿದ್ಧಲಿಂಗ ಪಟ್ಟಣಶೆಟ್ಟಿ
ಹೊಗೆಯ ಹೊಳೆಯಿದು ತಿಳಿಯದು	ಚಿದಾನಂದ ಸಾಲಿ (ಕತೆಗಳ ಸಂಕಲನ)
ಕೆಂಡದ ರೊಟ್ಟಿ (ಕಾದಂಬರಿ)	ಉಷಾ ನರಸಿಂಹನ್
ಹಾವಳಿ (ಕಾದಂಬರಿ)	ಮಲ್ಲಿಕಾರ್ಜುನ ಹಿರೇಮಠ
ಹೆಮಿಂಗ್ವೆ-ಇಂಡಿಯನ್ ಕ್ಯಾಂಪ್ ಮತ್ತು ಇತರ ಕತೆಗಳು (ಅನುವಾದ)	ಎಸ್. ಗಂಗಾಧರಯ್ಯ
ನಿನಗಾಗಿ ಬರೆದ ಕವಿತೆಗಳು	ಎಚ್.ಎಸ್. ಮುಕ್ತಾಯಕ್ಕ
ಬುದ್ಧ	ಎಸ್. ನಟರಾಜ ಬೂದಾಳು
ಡಿ.ಆರ್. ನಾಗರಾಜ	ನಟರಾಜ ಹುಳಿಯಾರ್
ಮಾತೋಶ್ರೀ ಮಾದಕ (ನಾಟಕ)	ಚಂದ್ರಶೇಖರ ಕಂಬಾರ
ಡಾ.ಬಿ.ಜನಾರ್ದನ ಭಟ್	
ಮಂಗಳೂರಿನಿಂದ ಸುಬ್ರಹ್ಮಣ್ಯಕ್ಕೆ: ಮಿಷನರಿ ಪ್ರವಾಸ -1840	ಮೂಲ:ರೆ. ಮ್ಯೋಗ್ಲಿಂಗ್ ಮತ್ತು ರೆ. ವೈಗ್ಲೆ, ಕನ್ನಡಕ್ಕೆ: ಪ್ರೊ. ಎ. ವಿ. ನಾವಡ,
ಈರಾರು ಪತ್ರಿಕೆ	ಮೂಲ: ಹರ್ಮನ್ ಮೊಗ್ಲಿಂಗ್, ಸಂಪಾದನೆ: ಡಾ. ಹಾ. ತಿ. ಕೃಷ್ಣೇಗೌಡ
ಇದ್ದೂ ಇಲ್ಲದ್ದು (ಕಾದಂಬರಿ)	ಡಾ. ನಾ. ಮೊಗಸಾಲೆ
ಎಳೆದ ತೇರು (ಆತ್ಮಕಥನ)	ವ್ಯಾಸರಾವ್ ನಿಂಜೂರ್
ಮೋನು ಸ್ಮೃತಿ (ಆತ್ಮಕಥನ)	ಬೊಳುವಾರು ಮಹಮದ್ ಕುಂಞ
ಕರಾವಳಿ ಕಥನಗಳು (ಸಂಸ್ಕೃತಿ ವಿಮರ್ಶೆ)	ಡಾ. ಕೆ. ಚಿನ್ನಪ್ಪ ಗೌಡ
ನವ್ಯ ಸಾಹಿತ್ಯ (ಜೀವನ ಮೌಲ್ಯ ಮಾಲಿಕೆ)	ಎಸ್. ಆರ್. ವಿಜಯಶಂಕರ
ಬೀಡಿನ ಧರ್ಮದೃಷ್ಟಿ (ಸಣ್ಣಕತೆಗಳು)	ಎನ್. ನಾರಾಯಣ ಬಲ್ಲಾಳ
ಕಗ್ಗತ್ತಲ ಕಾಲ (ಅನುವಾದ)	ಮೂಲ: ಶಶಿ ತರೂರ್ ಕನ್ನಡಕ್ಕೆ: ಎಸ್. ಬಿ. ರಂಗನಾಥ್
ಅಬ್ಬೆ (ಕಾದಂಬರಿ)	ಶಶಿಧರ ಹಾಲಾಡಿ

ನಿಂಗಪ್ಪ ಮುದೇನೂರು	
ಮಹಾಬಿಂದು (ಕಾದಂಬರಿ)	ಪ್ರೊ.ಎಚ್.ಟಿ.ಪೋತೆ
ಡಾ.ಅಂಬೇಡ್ಕರ್ ಸಹವಾಸದಲ್ಲಿ(ಆತ್ಮಕಥನ)	ಮೂಲ: ಡಾ.ಸವಿತಾ ಅಂಬೇಡ್ಕರ್, ಕನ್ನಡಕ್ಕೆ: ಅನಿಲ ಹೊಸಮನಿ
ತತ್ತ್ವಕಥನ	ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್
ದೇಹವೇ ದೇಶ	ಲೇ: ಗರಿಮಾ ಶ್ರೀವಾಸ್ತವ, ಅನುವಾದ: ವಿಕ್ರಮ ವಿಸಾಜಿ
ನಿನಗಾಗಿ ಬರೆದ ಕವಿತೆಗಳು	ಎಚ್.ಎಸ್.ಮುಕ್ತಾಯಕ್ಕ
ಇದಿರು ನೋಟ (ಅಂಕಣ ಬರಹಗಳ ಸಂಗ್ರಹ)	ಸಬಿತಾ ಬನ್ನಾಡಿ
ತರವಲ್ಲ ತಗಿ ನಿನ್ನ ತಂಬೂರಿ ಸ್ವರ (ವಿಮರ್ಶೆ)	ಲೇ: ಮೇಟಿ ಮಲ್ಲಿಕಾರ್ಜುನ
ಕಂಗಳ ಬೆಳಗು	ಡಾ.ಸತ್ಯಮಂಗಲ ಮಹಾದೇವ
ಪದಗಳಿವೆ ಎದೆಯೊಳಗೆ	ಡಾ. ಎನ್. ಜಗದೀಶ ಕೊಪ್ಪ
ಅವಳ ಅರಿವು	ಡಾ.ಗೀತಾ ವಸಂತ
ಸುರೇಶ ನಾಗಲಮಡಿಕೆ	
ಬುದ್ಧಿಜೀವಿ ಬಿಕ್ಕಟ್ಟುಗಳು	ಮೂಲ: ಜೀನ್ ಪಾಲ್ ಸಾರ್ತೃ, ಅನು: ಕೆ.ವಿ. ನಾರಾಯಣ
ನಾವು ಇತಿಹಾಸ ಕಟ್ಟಿದೆವು	ಅನು: ದು. ಸರಸ್ವತಿ
ಕೆನ್ನೀಲಿ	ಅನು: ಎಂ.ಆರ್. ಕಮಲ
ಬುನಿನ್ ಕತೆಗಳು	ಎಸ್. ಗಂಗಾಧರಯ್ಯ
ತರವಲ್ಲ ತಗಿ ನಿನ್ನ ತಂಬೂರಿ ಸ್ವರ	ಮೇಟಿ ಮಲ್ಲಿಕಾರ್ಜುನ
ಪಾಶ್ಚಾತ್ಯ ತತ್ವಜ್ಞಾನದ ಇತಿಹಾಸ	ಮೂಲ: ಬರ್ಟ್ರಂಡ್ ರಸೆಲ್, ಕನ್ನಡಕ್ಕೆ: ಪಿ.ವಿ. ನಾರಾಯಣ
ಡಿ.ಆರ್.ನಾಗರಾಜ್	ನಟರಾಜ್ ಹುಳಿಯಾರ್
ಗಾಳಿಯ ಮಡಿಲು	ಸಿದ್ದು ಸತ್ಯಣ್ಣವರ
ಅರಸು ಕುರನ್ಗರಾಯ	ರವಿಕುಮಾರ್ ನೀಹ
ಓಶೋ ಸಾವಿನ ಸುತ್ತ	ಟಿ.ಎನ್.ವಾಸುದೇವಮೂರ್ತಿ
ಎಚ್.ಎಲ್. ಪುಷ್ಪ	
ಬಿದಿರು ನೀನ್ಯಾರಿಗಲ್ಲದವಳು	ಮೋಟಮ್ಮ
ಗಂಗೆ ಬಾರೆ ಗೌರಿ ಬಾರೆ	ಡಾ.ಮಿರ್ಜಾ ಬಷೀರ್
ಬೌಲ್	ಎಂ.ಎಸ್.ಮೂರ್ತಿ
ಇದಿರು ನೋಟ	ಡಾ. ಸಬಿತಾ ಬನ್ನಾಡಿ
ಸಮಾಧಿಗಳು ಪ್ರತಿಭಟಿಸುವುದಿಲ್ಲ	ಡಾ. ಟಿ.ಎಚ್.ಲವಕುಮಾರ್
ಮಣಿಬಾಲೆ	ಎಚ್.ಆರ್. ಸುಜಾತಾ
ಕತ್ತಲ ದಾರಿ ದೂರ	ದ್ವಾರನಕುಂಟೆ ಪಾತಣ್ಣ
ಉಪ್ಪುಚ್ಚಿ ಮುಳ್ಳು	ದಯಾ ಗಂಗನಘಟ್ಟ
ಅನಾದ	ರಾಗಂ (ರಾಜಶೇಖರ ಮಠಪತಿ)
ಅಪ್ಪನೊಳಗೊಬ್ಬ ಅವ್ವ	ಬಿ.ಜೆ. ಪಾರ್ವತಿ ಸೋನಾರೆ
ವಿಕ್ರಂ ವಿಸಾಜಿ	
ಪದಗಳಿವೆ ಎದೆಯೊಳಗೆ	ಡಾ. ಎನ್. ಜಗದೀಶ್ ಕೊಪ್ಪ
ಎಲ್ಲರ ಗಾಂಧೀಜಿ	ಸಂ.ನಟರಾಜ್ ಹುಳಿಯಾರ್
ಬುದ್ಧಿಜೀವಿ ಬಿಕ್ಕಟ್ಟುಗಳು	ಮೂಲ: ಜೀನ್ ಪಾಲ್ ಸಾರ್ತೃ, ಅನು: ಕೆ.ವಿ.ನಾರಾಯಣ
ವೋಲೆ ಸೋಯಿಂಕಾ ವಾಚಿಕೆ	ಜ.ನಾ.ತೇಜಶ್ರೀ
ಅಪ್ಪನ ರಾಲೀಸ್ ಸೈಕಲ್	ದರ್ಶನ ಜಯಣ್ಣ
ವಿಷ್ಣು ಕ್ರಾಂತಿ ಮತ್ತು ಇತರ ಪದ್ಯಗಳು	ಮೈಸೂರು ರಾಮು
ಮೈ ಅವ್ರ ಮೇರೆ ಲಮ್ಹೆ	ಎಚ್.ಎಸ್.ಮುಕ್ತಾಯಕ್ಕ
ವಿನ್ನರ್ ವಿನ್ನರ್ ಚಿಕನ್ ಡಿನ್ನರ್	ವಿವಿಧ ಲೇಖಕರು
ಅತಂತ್ರ ಸ್ವಾತಂತ್ರ್ಯ	ಮೂಲ: ಕೋಬಾಡ ಗಾಂಧಿ, ಅನು: ಜ್ಯೋತಿ ಎ.
ಕೆನ್ನೀಲಿ	ಮೂಲ: ಅಲೀಸ್ ವಾಕರ್, ಅನು: ಎಂ.ಆರ್. ಕಮಲ
ದಾದಾಪೀರ್ ಜೈಮನ್	
ಗದ್ಯ ಗಾರುಡಿ ಗೆಬ್ರಿಯಲ್ ಗಾರ್ಸಿಯ ಮಾರ್ಕೆಸ್ ಅಂಕಣ ಬರಹಗಳ ಸಂಗ್ರಹ	ಕೇಶವ ಮಳಗಿ
ದಾರಿ	ಕುಸುಮ ಆಯರಹಳ್ಳಿ
ಪರ್ಸೆಪೊಲೀಸ್	ಮಾರ್ಜಾನ್ ಸತ್ರಪಿ, ಅನು: ಪ್ರೀತಿ ನಾಗರಾಜ್
ಲೆಟ್ಸ್ ಬ್ರೇಕಪ್	ಸಂಪತ್ ಸಿರಿಮನೆ
ದೇಹವೇ ದೇಶ	ಗರಿಮಾ ಶ್ರೀವಾಸ್ತವ್, ಅನು: ವಿಕ್ರಂ ವಿಸಾಜಿ
ದಿ ಚಾಯ್ಸ್	ಈಡಿಟ್ ಎಗರ್, ಅನು: ಜಯಶ್ರೀ ಭಟ್
ನೀಲಿ ಚುಕ್ಕಿಯ ನೆರಳು	ಮಧುರಾಣಿ ಎಚ್ ಎಸ್
ಅವನ ಮುಖ ಮರೆತು ಹೋಗಿದೆ	ಪ್ರತಿಭಾ ನಂದಕುಮಾರ್
ವಿವೇಕಿಯ ಸ್ವಗತ	ತಾರಿಣಿ ಶುಭದಾಯಿನಿ
ಪೆಟ್ರಿಕೋರ್	ಚೈತ್ರಾ ಶಿವಯೋಗಿಮಠ
ಭೂಮಿಯ ಋಣ	ಶೋಭಾ ಗುನ್ನಾಪುರ



ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಒಂದು ಅಕ್ಷೋಹಿಣಿ ಎಂದರೆ ಎಷ್ಟು?

ಮಹಾಭಾರತ ಒಂದು ಮಹಾನ್ ಕತೆ, ಈಗ ಎಲ್ಲರಿಗೂ ಸುಪರಿಚಿತ. ದೂರದರ್ಶನದಲ್ಲಿ ಈ ಸರಣಿಯನ್ನು ವೀಕ್ಷಿಸಿ ಸಂತೋಷಗೊಂಡವರು, ಸಂದೇಹಕ್ಕೊಳಗಾದವರು ಹಾಗೆಂದರೇನು, ಹೀಗೆಂದರೇನು ಎಂದು ಕೇಳಿದವರು ಅನೇಕ ಜನ. ಅದರಲ್ಲಿ ಬಹುತೇಕ ಜನರ, ವಿಶೇಷವಾಗಿ ಮಕ್ಕಳ ಮನಸ್ಸನ್ನು ಕಾಡಿದ ಪ್ರಶ್ನೆ ಎಂದರೆ ಅಕ್ಷೋಹಿಣಿ ಎಂದರೇನು ಎಂಬುದು. ಅಕ್ಷೋಹಿಣಿಯ ವಿವರ ಹೀಗಿದೆ.

ಒಂದು ಅಕ್ಷೋಹಿಣಿ ಎಂದರೆ 2,18,700 ಎಂಬ ಸಂಖ್ಯೆ. ಮಹಾಭಾರತ ಕಾಲದಲ್ಲಿ ಇದು ಸೈನ್ಯದ ಸಂಖ್ಯಾಸೂಚಕ ಪದವಾಗಿರಬಹುದೇ ವಿನಃ ಅಕ್ಷೋಹಿಣಿಯು ಸ್ಥಾನ ಬೆಲೆ ಆಗಿರುವ ಸಾಧ್ಯತೆ ಇಲ್ಲ.

ಒಂದು ಅಕ್ಷೋಹಿಣಿ ಚತುರಂಗ ಬಲದಲ್ಲಿರುತ್ತಿದ್ದ
ರಥಗಳು.........................21,870
ಆನೆಗಳು.........................21,870
ಕುದುರೆಗಳು.....................65,610
ಕಾಲಾಳುಗಳು..................1,09,350
ಒಟ್ಟು.............................2,18,700

ಇದರಿಂದ ತಿಳಿದುಬರುವ ಅಂಶವೇನೆಂದರೆ ಅಕ್ಷೋಹಿಣಿ ಸೈನ್ಯದಲ್ಲಿ 10 ವಿಭಾಗಗಳಿದ್ದು, ಪ್ರತಿ ವಿಭಾಗದಲ್ಲಿ 243 ದಳಗಳು ಅಥವಾ ತುಕಡಿಗಳಿದ್ದಿರಬೇಕು. ಇಂಥ ಪ್ರತಿಯೊಂದು ತುಕಡಿಯಲ್ಲಿದ್ದ ಚತುರಂಗ ಬಲ ಒಟ್ಟು 90 ಆಗಿರಬೇಕು. ಅಂದರೆ ರಥಗಳು 9, ಆನೆಗಳು 9, ಕುದುರೆಗಳು 27 ಮತ್ತು ಕಾಲಾಳುಗಳು 45. ವಿವರಣೆ: ಪ್ರತಿಯೊಂದು ವಿಭಾಗದಲ್ಲಿ 9 ರಥಗಳುಳ್ಳ 243 ತುಕಡಿಗಳಿದ್ದರೆ ಅಂಥ 10 ವಿಭಾಗಗಳಲ್ಲಿರುವ ಒಟ್ಟು ರಥಗಳ ಅಂಖ್ಯೆ 21,870.

ಪ್ರತಿಯೊಂದು ವಿಭಾಗದಲ್ಲೂ 9 ಆನೆಗಳುಳ್ಳ 243 ತುಕಡಿಗಳಿದ್ದರೆ ಅಂತಹ 10 ವಿಭಾಗಗಳಲ್ಲಿರುವ ಒಟ್ಟು ಆನೆಗಳ ಸಂಖ್ಯೆ 21870.

ಪ್ರತಿಯೊಂದು ವಿಭಾಗದಲ್ಲೂ 9X3 ಕುದುರೆಗಳುಳ್ಳ 243 ತುಕಡಿಗಳಿದ್ದರೆ ಅಂತಹ 10 ವಿಭಾಗಗಳಲ್ಲಿರುವ ಒಟ್ಟು ಕುದುರೆಗಳ ಸಂಖ್ಯೆ 65,610.

ಪ್ರತಿಯೊಂದು ವಿಭಾಗದಲ್ಲೂ 9X5 ಕಾಲಾಳುಗಳುಳ್ಳ 243 ತುಕಡಿಗಳಿದ್ದರೆ ಅಂಥಹ 10 ವಿಭಾಗಗಳಲ್ಲಿರುವ ಒಟ್ಟು ಕಾಲಾಳುಗಳ ಸಂಖ್ಯೆ 1,09,350.

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲ ಅಕ್ಷರಗಳಿಗೆ ಪಕ್ಕದಲ್ಲಿರುವ ಸುಳಿವು ಆಧರಿಸಿ ಹೊಸ ಪದ ರಚಿಸಿ

	ದ	ಡ	ಸುಳಿವು
1			ಸೀರೆಯ ಅಂಚು
2			ಕೆಲಸ ಮಾಡು
3			ಒಂದೂವರೆ
4			ಸರಿಸು, ತಳ್ಳು
5			ಜುಲ್ಮಾನೆ

ಅದಲು ಬದಲು ಕಂಚಿ ಕದಲು

1 ವಾದಸರಣಿ = ____
2 ರಾಯನಮಗ = ____
3 ರಮಾಗಾಯ = ____
4 ಅತ್ತೆಮದ್ದು = ____

ಅಕ್ಷರ ಆಟ

ಇಲ್ಲಿ ಕೊಟ್ಟಿರುವ ಅರ್ಥವಿಲ್ಲದ ಎರಡಕ್ಷರಗಳಿಗೆ ಹಿಂದೆ ಒಂದು ಅಕ್ಷರ ತುಂಬಿ ಅರ್ಥಬದ್ಧ ಪದ ಮಾಡಿ

ಎ. 1 _ಪ್ಪಳ 2 _ಪ್ಪಳ 3 _ಪ್ಪಳ 4 _ಪ್ಪಳ
ಬಿ. 1 _ಬಳ 2 _ಬಳ 3 _ಬಳ 4 _ಬಳ

ಹಳ್ಳಿಯ ಆಟಗಳು

ಇಲ್ಲಿ ಅಪರೂಪವೆನಿಸುವ ಹಳ್ಳಿಯ ಆಟಗಳ ಹೆಸರನ್ನು ನೀಡಲಾಗಿದೆ. ಒಮ್ಮೆ ನೆನಪಿಸಿಕೊಂಡು ಆಟವಾಡಿ

1 ಶಿಲ್ಪ ಶಿಲ್ಪಿಯ ಆಟ
2 ಸಟ್ಟಾಟ
3 ಸರಬಡಿಗೆ/ ಸರಗೋಲು / ಕಲ್ಲು ಕುಟಿಕುಟಿ / ಕಡ್ಡಿ ಚಿಮ್ಮುವ ಆಟ
4 ಸರಿ ಬೆಸ ಆಟ
5 ಸೀಮಲ್ ಕುಪ್ಪಲ್
6 ಸುರಂಗದ ಓಟ
7 ಹಗಲೋ ರಾತ್ರಿಯೋ
8 ಹಗ್ಗ ಎಳೆಯೋ ಆಟ
9 ಹಗ್ಗ ಜಿಗಿಯುವ ಆಟ
10 ಹಣ್ಣು ಕೊಡುವ ಅಜ್ಜ/ ಚೌಕದ ಮನೆಯಾಟ
11 ಹುಣಸೇ ಪಕ್ಕದ ಆಟ
12 ಹುಲಿ ಮನೆ ಆಟ
13 ಹುಲಿ ಮತ್ತು ಹಸುವಿನಾಟ
14 ಹೂವಿನ ಕಂಪಿನ ಆಟ
15 ಹತ್ತಿ ಕಟಗಿ ಬತ್ತಿ ಕಟಗಿ/ ಚಟ್ಟ ಪಟ್ಟಲಕಾಯಿ ಆಟ
16 ಹರಳು ಕೊಡೊ ಆಟ



ಕಳೆದ ಸಂಚಿಕೆಯ ಸರಿ ಉತ್ತರಗಳು

ಜಾಣಪದ ಆಟ: 1. ಬಿಡಿ 2. ಬಾಡು 3. ಬೇಡು 4. ಬಿಡು 5. ಬಿಡಿ

ಅದಲು ಬದಲು: 1. ಮಣ್ಣಿನ ಹರಕೆ 2. ಮನಗೆಲ್ಲು 3. ಹಾಸಿಗೆ ಹಿಡಿ 4. ಮಸಾರಿ ನೆಲ

ಶಬ್ದಾಟ: 1. ಪ್ರದೇಶ 2. ಸಂದೇಶ 3. ವಿದೇಶ 4. ಮಾದೇಶ 5. ಆದೇಶ

ಗಣಿತದಲ್ಲಿ ಗರ್ಡ್ ಗಮ್ಮತ್ತು

I

2	8	2
8	40	8
2	8	2

II

3	6	3
6	36	6
3	6	3

III

4	4	4
4	32	4
4	4	4

IV

5	2	5
2	28	2
5	2	5

V

5	1	6
1	26	1
6	1	6

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಗುರಿ ಸಣ್ಣದು; ಆತಂಕ ದೊಡ್ಡದು

ಮಿರಾಜ್‌ಗೆ 3 ವಿಕೆಟ್: ಎಡವಿದ ಭಾರತದ ಅಗ್ರಕ್ರಮಾಂಕದ ಬ್ಯಾಟರ್‌ಗಳು



ಅಕ್ಷರ್ ಪಟೇಲ್ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಎಪಿ/ಪಿಟಿಐ ಚಿತ್ರ

ಮುಖ್ಯಾಂಶಗಳು

- ಭಾರತದ ಗೆಲುವಿಗೆ 145 ರನ್‌ಗಳ ಗುರಿ
- 45 ರನ್‌ಗಳಿಗೆ ನಾಲ್ಕು ವಿಕೆಟ್ ಪತನ
- ಗೆಲ್ಲಲು ಇನ್ನೂ 100 ರನ್‌ಗಳು ಬೇಕು

ಮೀರ್‌ಪುರ (ಪಿಟಿಐ): ಸಾಧಾರಣ ಗುರಿಯನ್ನು ಬೆನ್ನತ್ತಿರುವ ಭಾರತ ತಂಡವು ಬಾಂಗ್ಲಾದೇಶದ ಸ್ಪಿನ್ನರ್‌ಗಳ ಎದುರು ಆಘಾತ ಅನುಭವಿಸಿದೆ. ಇದರಿಂದಾಗಿ ಎರಡನೇ ಟೆಸ್ಟ್ ಪಂದ್ಯವು ರೋಚಕ ಘಟ್ಟ ತಲುಪಿದೆ.

ಇಲ್ಲಿ ನಡೆಯುತ್ತಿರುವ ಎರಡನೇ ಟೆಸ್ಟ್‌ನಲ್ಲಿ ಮೊದಲ ದಿನದಿಂದಲೂ ಮೇಲುಗೈ ಸಾಧಿಸುತ್ತಲೇ ಬಂದ ಕೆ.ಎಲ್. ರಾಹುಲ್ ಬಳಗ ಶನಿವಾರ ಸಂಜೆಯ ಹೊತ್ತಿಗೆ ಸೋಲಿನ ಭೀತಿಯಲ್ಲಿದೆ.

145 ರನ್‌ಗಳ ಸಾಧಾರಣ ಗುರಿಯನ್ನು ಬೆನ್ನತ್ತಿದ್ದ ಭಾರತ ತಂಡವು ದಿನದಾಟದ ಮುಕ್ತಾಯಕ್ಕೆ 4 ವಿಕೆಟ್ ಕಳೆದುಕೊಂಡು 45 ರನ್ ಮಾತ್ರ ಗಳಿಸಿದೆ. ಪಂದ್ಯದಲ್ಲಿ ಇನ್ನೂ ಎರಡು ದಿನಗಳ ಆಟ ಬಾಕಿಯಿದೆ. ಆದರೆ, ಭಾರತ ತಂಡವು ಗೆಲ್ಲಲು ಇನ್ನೂ 100 ರನ್ ಗಳಿಸಬೇಕು.

ಮೊದಲ ಇನಿಂಗ್ಸ್‌ನಲ್ಲಿ ಅರ್ಧ-ಶತಕಗಳನ್ನು ಗಳಿಸಿದ್ದ ರಿಷಭ್ ಪಂತ್ ಮತ್ತು ಶ್ರೇಯಸ್ ಅಯ್ಯರ್ ಇನ್ನೂ ಕ್ರೀಸ್‌ಗೆ ಬಂದಿಲ್ಲ. ದಿನದಾಟದ ಕೊನೆಗೆ ಕ್ರೀಸ್‌ನಲ್ಲಿ ಉಳಿದಿರುವ ಅಕ್ಷರ್ ಪಟೇಲ್ (ಬ್ಯಾಟಿಂಗ್ 26; 54ಎಸೆತ) ಮತ್ತು ರಾತ್ರಿ ಕಾವಲುಗಾರ ಜೈದೇವ್ ಉನದ್ಕತ್ (ಬ್ಯಾಟಿಂಗ್ 3) ಎಚ್ಚರಿಕೆಯಿಂದ ಆಡಿ ವಿಕೆಟ್ ಪತನ ತಡೆದಿದ್ದಾರೆ.

ಆದರೆ ಅಗ್ರಕ್ರಮಾಂಕದ ಅನುಭವಿ ಬ್ಯಾಟರ್‌ಗಳು ಈ ಪಿಚ್‌ನಲ್ಲಿ ಎರಡಂಕಿ ರನ್ ಗಳಿಸಲೂ ಸಾಧ್ಯವಾಗಲಿಲ್ಲ. ಸರ್ಪಗಳು ಸಾಗುವ ಮಾದರಿಯಲ್ಲಿ ತಿರುವು ಪಡೆಯುತ್ತಿರುವ ಚೆಂಡಿನ ಲಯ ಗುರುತಿಸಿ ಆಡುವಲ್ಲಿ ಬ್ಯಾಟರ್‌ಗಳು ವಿಫಲರಾದರು.

ಮಿರಾಜ್ ಸ್ಪಿನ್: ಏಕದಿನ ಕ್ರಿಕೆಟ್ ಸರಣಿಯಲ್ಲಿ ಭಾರತ ತಂಡವನ್ನು ತಮ್ಮ ಭರ್ಜರಿ ಬ್ಯಾಟಿಂಗ್‌ನಿಂದ ಕಾಡಿದ್ದ ಆಫ್‌ಸ್ಪಿನ್ ಆಲ್‌ರೌಂಡರ್ ಮೆಹದಿ ಹಸನ್ ಮಿರಾಜ್ ಎರಡನೇ ಇನಿಂಗ್ಸ್‌ನಲ್ಲಿ ಮೂರು ವಿಕೆಟ್ ಗಳಿಸಿ ಬಾಂಗ್ಲಾ ಪಾಳೆಯದಲ್ಲಿ ಭರವಸೆ ಮೂಡಿಸಿದ್ದಾರೆ.

ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿಯೇ ರಾಹುಲ್ (2 ರನ್) ತಮ್ಮ ವಿಕೆಟ್ ಅನ್ನು ಶಕೀಬ್‌ಗೆ ಅರ್ಪಿಸಿದರು. ಇದರೊಂದಿಗೆ ಅವರ ಸತತ ವೈಫಲ್ಯ ಮುಂದುವರಿಯಿತು. ಮೂರು ಓವರ್‌ಗಳ ನಂತರ ಟೆಸ್ಟ್ ಪರಿಣತ ಪೂಜಾರ ಮಿರಾಜ್ ಎಸೆತವನ್ನು ಆಡಲು ಕ್ರೀಸ್‌ನಿಂದ ಮುಂದಡಿ ಇಟ್ಟು ಬೀಟ್ ಆದರು. ವಿಕೆಟ್‌ಕೀಪರ್ ನೂರುಲ್ ಹಸನ್ ಸ್ಟಂಪ್ ಮಾಡಿ ಸಂಭ್ರಮಿಸಿದರು.

ಆರು ಓವರ್‌ಗಳ ನಂತರ ಯುವಪ್ರತಿಭೆ ಶುಭಮನ್ ಗಿಲ್ ಕೂಡ ಪೂಜಾರ ರೀತಿಯಲ್ಲಿಯೇ ಸ್ಟಂಪ್ಡ್ ಆದರು. ಮಿರಾಜ್ ಮತ್ತೊಂದು ವಿಕೆಟ್ ಪಡೆದು ಸಂಭ್ರಮಿಸಿದರು. ವಿರಾಟ್ ಕೊಹ್ಲಿ ಕೂಡ ಒಂದು ರನ್ ಮಾತ್ರ ಗಳಿಸಿದರು. 22 ಎಸೆತಗಳನ್ನು ಎದುರಿಸಿದ ಅವರೂ ಮಿರಾಜ್‌ಗೆ ಮೂರನೇ ವಿಕೆಟ್ ಆದರು.

ಲಿಟನ್–ಹಸನ್ ಅರ್ಧಶತಕ: ಭಾರತ ತಂಡವು ಶುಕ್ರವಾರ 87 ರನ್‌ಗಳ ಮುನ್ನಡೆ ಸಾಧಿಸಿತ್ತು. ದಿನದಾಟದ ಮುಕ್ತಾಯಕ್ಕೆ ಬಾಂಗ್ಲಾ ತಂಡವು ಎರಡನೇ ಇನಿಂಗ್ಸ್‌ನಲ್ಲಿ ವಿಕೆಟ್ ನಷ್ಟವಿಲ್ಲದೇ 7 ರನ್ ಗಳಿಸಿತ್ತು.

ಮೂರನೇ ದಿನ ಬೆಳಿಗ್ಗೆ ಆರಂಭಿಕ ಬ್ಯಾಟರ್ ಶಾಂತೊ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ಅಶ್ವಿನ್ ಮೊದಲ ಆಘಾತ ನೀಡಿದರು. ಇನ್ನೊಂದೆಡೆ ಸಿರಾಜ್, ಅಕ್ಷರ್ ಮತ್ತು ಉನದ್ಕತ್ ಕೂಡ ಬಿಗಿದಾಳಿ ನಡೆಸಿದರು. 70 ರನ್‌ಗಳಿಗೆ 4 ವಿಕೆಟ್‌ಗಳು ಪತನವಾದವು. ಆದರೆ, ಈ ಹಂತದಲ್ಲಿ ಆರಂಭಿಕ ಬ್ಯಾಟರ್ ಝಾಕೀರ್ ಹಸನ್ (51; 135ಎ) ಮತ್ತು ಲಿಟನ್ ದಾದ್ (73; 98ಎ) ಇನಿಂಗ್ಸ್‌ಗೆ ಬಲ ತುಂಬಿದರು. ಅದರಿಂದಾಗಿ ತಂಡವು 70.2 ಓವರ್‌ಗಳಲ್ಲಿ 231 ರನ್ ಗಳಿಸಲು ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಾಂಗ್ಲಾದೇಶ: 227. ಭಾರತ: 314. ಎರಡನೇ ಇನಿಂಗ್ಸ್: ಬಾಂಗ್ಲಾದೇಶ:70.2 ಓವರ್‌ಗಳಲ್ಲಿ 231 (ಝಾಕೀರ್ ಹಸನ್ 51, ಲಿಟನ್ ದಾಸ್ 73, ನೂರುಲ್ ಹಸನ್ 31, ತಸ್ಕಿನ್ ಅಹಮದ್ ಔಟಾಗದೆ 31, ಅಶ್ವಿನ್ 66ಕ್ಕೆ2, ಮೊಹಮ್ಮದ್ ಸಿರಾಜ್ 41ಕ್ಕೆ2, ಅಕ್ಷರ್ ಪಟೇಲ್ 68ಕ್ಕೆ3) ಭಾರತ: 23 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 45 (ಅಕ್ಷರ್ ಪಟೇಲ್ ಬ್ಯಾಟಿಂಗ್ 26, ಮೆಹದಿ ಹಸನ್ ಮಿರಾಜ್ 12ಕ್ಕೆ3)

ಕ್ರಾಸ್ ಕಂಟ್ರಿ ಓಟ: ಶಿವಾಜಿ, ಪ್ರಿಯಾಂಕಾ ಮಿಂಚು

ನವೀನ್, ಅರ್ಚನಾಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರಿನ ನವೀನ್ ಪಾಟೀಲ್ ಮತ್ತು ಕೆ.ಎಂ.ಅರ್ಚನಾ ಅವರು ತುಮಕೂರಿನ ಕೊರಟಗೆರೆಯಲ್ಲಿ ಶನಿವಾರ ನಡೆದ ರಾಜ್ಯ ಕ್ರಾಸ್ ಕಂಟ್ರಿ ಓಟದಲ್ಲಿ ಕ್ರಮವಾಗಿ ಪುರುಷರ ಹಾಗೂ ಮಹಿಳೆಯರ ವಿಭಾಗಗಳಲ್ಲಿ ಅಗ್ರಸ್ಥಾನ ಪಡೆದರು.

ಕರ್ನಾಟಕ ರಾಜ್ಯ ಅಥ್ಲೆಟಿಕ್ ಸಂಸ್ಥೆ ಮತ್ತು ತುಮಕೂರು ಜಿಲ್ಲಾ ಅಥ್ಲೆಟಿಕ್ ಸಂಸ್ಥೆ ಆಶ್ರಯದಲ್ಲಿ ನಡೆದ ಸ್ಪರ್ಧೆಯ ಪುರುಷರ ವಿಭಾಗದ 10 ಕಿ.ಮೀ ಓಟವನ್ನು ನವೀನ್ ಅವರು 36 ನಿಮಿಷ 02 ಸೆಕೆಂಡುಗಳಲ್ಲಿ ಕ್ರಮಿಸಿದರು.

ನವೀನ್‌ಗೆ ಪ್ರಬಲ ಪೈಪೋಟಿ ನೀಡಿದ ಬೆಂಗಳೂರು ನಗರ ಜಿಲ್ಲೆಯ ಎ.ಆರ್.ರೋಹಿತ್ (36 ನಿ. 36ಸೆ.) ಮತ್ತು ಡಿವೈಇಎಸ್‌ನ ವೈಭವ್ (36 ನಿ. 51ಸೆ.) ಅವರು ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಪಡೆದುಕೊಂಡರು.

ಫಲಿತಾಂಶ: ಪುರುಷರ ವಿಭಾಗ (ದೂರ: 10 ಕಿ.ಮೀ): ನವೀನ್‌ಪಾಟೀಲ್ (ಮೈಸೂರು; ಕಾಲ: 36 ನಿ. 02 ಸೆ.)–1, ಎ.ಆರ್.ರೋಹಿತ್ (ಬೆಂಗಳೂರು ನಗರ)–2, ವೈಭವ್ (ಡಿವೈಇಎಸ್)–3

ಮಹಿಳೆಯರ ವಿಭಾಗ (10 ಕಿ.ಮೀ): ಕೆ.ಎಂ.ಅರ್ಚನಾ (ಮೈಸೂರು; ಕಾಲ: 42 ನಿ. 55.66 ಸೆ.)–1, ತೇಜಸ್ವಿನಿ (ಕೆಎಸ್‌ಪಿ)–2, ಕೆ.ಎಂ.ಮಾನ್ಯಾ (ಹಾಸನ)–3

ಬಾಲಕರ ವಿಭಾಗ: 20 ವರ್ಷದೊಳಗಿನವರು (8 ಕಿ.ಮೀ): ಶಿವಾಜಿ ಪರಶುರಾಮ್ (ಡಿವೈಇಎಸ್: ಕಾಲ: 23 ನಿ. 14 ಸೆ.)–1, ವಿಜಯ್ ಸಾವರ್ತ್‌ಕರ್ (ಬೆಳಗಾವಿ)–2, ಸಚಿನ್ ದೇವಪ್ಪನವರ್ (ಡಿವೈಇಎಸ್)–3

18 ವರ್ಷದೊಳಗಿನವರು (6 ಕಿ.ಮೀ): ವಿನೋದ್ ಕುಮಾರ್ (ಡಿವೈಇಎಸ್; ಕಾಲ: 17 ಮಿ. 12 ಸೆ.)–1, ವೇದಾ ಎಸ್.ವರನ್ (ಮೈಸೂರು)–2, ಬಿ.ಜೆ.ಅಂಶಿತಾ (ಡಿವೈಇಎಸ್)–3

16 ವರ್ಷದೊಳಗಿನವರು (2 ಕಿ.ಮೀ): ದರ್ಶನ್ (ತುಮಕೂರು; ಕಾಲ: 6 ನಿ. 10.20 ಸೆ.)–1, ಎಚ್. ಪ್ರಥಮ್ (ಡಿವೈಇಎಸ್)–2, ಸಯೆಸ್ ಸಬೀರ್ (ಡಿವೈಇಎಸ್)–3

ಬಾಲಕಿಯರ ವಿಭಾಗ: 20 ವರ್ಷದೊಳಗಿನವರು (6 ಕಿ.ಮೀ): ಪ್ರಿಯಾಂಕಾ (ಬೆಂಗಳೂರು ನಗರ; ಕಾಲ: 20 ನಿ.)–1, ಎಚ್.ಎಂ.ಹರ್ಷಿತಾ (ಡಿವೈಇಎಸ್)–2, ಶುಭಾಂಗಿ ಕಾಕತ್ಕರ್ (ಬೆಳಗಾವಿ)–3

18 ವರ್ಷದೊಳಗಿನವರು (4 ಕಿ.ಮೀ): ಪ್ರಣತಿ (ಡಿವೈಇಎಸ್; ಕಾಲ: 14 ನಿ. 20.52 ಸೆ.)–1, ಪ್ರಿಯಾಂಕಾ (ಡಿವೈಇಎಸ್)–2, ಶ್ರೀ ರಕ್ಷಾ (ಕೊಡಗು)–3

16 ವರ್ಷದೊಳಗಿನವರು (2 ಕಿ.ಮೀ): ಎಂ.ಎಂ.ಸ್ನೇಹಾ (ಕೊಡಗು; ಕಾಲ: 6 ನಿ. 25.52 ಸೆ.)–1, ಶಿಲ್ಪಾ ಹೊಸಮನಿ (ಡಿವೈಇಎಸ್)–2, ಸಂಜನಾ ಬಸವರಾಜ್ (ಡಿವೈಇಎಸ್)–3

ಪಿಸಿಬಿ ಆಯ್ಕೆ ಸಮಿತಿ: ಆಫ್ರಿದಿ ಮುಖ್ಯಸ್ಥ


ಕರಾಚಿ (ಪಿಟಿಐ): ಮಾಜಿ ನಾಯಕ ಶಾಹಿದ್ ಆಫ್ರಿದಿ ಅವರನ್ನು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಆಯ್ಕೆ ಸಮಿತಿಯ ಹಂಗಾಮಿ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ.

ಅಬ್ದುಲ್ ರಜಾಕ್, ರಾವ್ ಇಫ್ತಿಕಾರ್ ಅಹಮದ್ ಮತ್ತು ಹಾರೂನ್ ರಶೀದ್ ಅವರನ್ನೊಳಗೊಂಡ ಮಧ್ಯಂತರ ಆಯ್ಕೆ ಸಮಿತಿಯನ್ನು ಆಫ್ರಿದಿ ಮುನ್ನಡೆಸಲಿದ್ದಾರೆ.

ನ್ಯೂಜಿಲೆಂಡ್ ವಿರುದ್ಧ ತವರಿನಲ್ಲಿ ನಡೆಯಲಿರುವ ಎರಡು ಟೆಸ್ಟ್ ಮತ್ತು ಮೂರು ಏಕದಿನ ಪಂದ್ಯಗಳ ಸರಣಿಗೆ ಪಾಕ್ ತಂಡವನ್ನು ನೂತನ ಸಮಿತಿಯು ಶನಿವಾರ ಆಯ್ಕೆ ಮಾಡಿದೆ. ಈ ಸರಣಿ ಸೋಮವಾರ ಆರಂಭವಾಗಲಿದೆ.

ಪಿಸಿಬಿ ಆಡಳಿತ ನೋಡಿಕೊಳ್ಳಲು ನೇಮಿಸಿರುವ 14 ಸದಸ್ಯರ ಸಮಿತಿಯಲ್ಲಿ ಆಫ್ರಿದಿ ಮತ್ತು ಹಾರೂನ್ ಇದ್ದಾರೆ.

ಗಾಲ್ಫ್: ಚಿಕ್ಕರಂಗಪ್ಪ ಚಾಂಪಿಯನ್



ಎಸ್.ಚಿಕ್ಕರಂಗಪ್ಪ

ಜಮ್ಶೆಡ್‌ಪುರ (ಪಿಟಿಐ): ಬೆಂಗಳೂರಿನ ಎಸ್.ಚಿಕ್ಕರಂಗಪ್ಪ ಅವರು ಶನಿವಾರ ಇಲ್ಲಿ ಕೊನೆಗೊಂಡ ಟಾಟಾ ಸ್ಟೀಲ್ ಟೂರ್ ಗಾಲ್ಫ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಪ್ರೊಫೆಷನಲ್ ಗಾಲ್ಫ್ ಟೂರ್ ಆಫ್ ಇಂಡಿಯಾದ (ಪಿಜಿಟಿಐ) ಅತ್ಯಂತ ಶ್ರೀಮಂತ ಟೂರ್ನಿಯನ್ನು ಜಯಿಸಿದ ಅವರು ₹ 45 ಲಕ್ಷ ಬಹುಮಾನ ಮೊತ್ತ ತಮ್ಮದಾಗಿಸಿಕೊಂಡರು.

ಶನಿವಾರ ನಡೆದ ಅಂತಿಮ ಸುತ್ತಿನಲ್ಲಿ 69 ಶಾಟ್‌ಗಳೊಂದಿಗೆ ಸ್ಪರ್ಧೆ ಕೊನೆಗೊಳಿಸಿದ ಅವರು ನಾಲ್ಕು ಸುತ್ತುಗಳಲ್ಲಿ ಒಟ್ಟು 268 ಸ್ಕೋರ್‌ಗಳೊಂದಿಗೆ ಅಗ್ರಸ್ಥಾನ ಪಡೆದರು. 29 ವರ್ಷದ ಚಿಕ್ಕರಂಪ್ಪ, ಪಿಜಿಟಿಐನಲ್ಲಿ ಗೆದ್ದ 15ನೇ ಪ್ರಶಸ್ತಿ ಇದು.

ಶಿವ ಕಪೂರ್, ದೆಹಲಿಯ ಶಮೀಮ್ ಖಾನ್ ಮತ್ತು ಗುರುಗ್ರಾಮ್‌ನ ವೀರ್ ಅಹ್ಲಾವತ್ (ಎಲ್ಲರೂ ತಲಾ 270) ಅವರು ಜಂಟಿ ಎರಡನೇ ಸ್ಥಾನ ಪಡೆದುಕೊಂಡರು.

'ಈ ವರ್ಷ ನನಗೆ ತುಂಬಾ ಕಠಿಣವಾಗಿತ್ತು. ವರ್ಷದ ಆರಂಭದಲ್ಲೇ ತಾಯಿಯನ್ನು ಕಳೆದುಕೊಂಡೆ. ಇದರಿಂದ ಗಾಲ್ಫ್ ಆಟ ಅನಂದಿಸಲು ತುಂಬಾ ಕಷ್ಟವಾಗುತ್ತಿತ್ತು. ಈ ಗೆಲುವನ್ನು ತಾಯಿಗೆ ಅರ್ಪಿಸುತ್ತೇನೆ' ಎಂದು ಚಿಕ್ಕರಂಗಪ್ಪ ಹೇಳಿದರು.

ಮನು ಗಂದಾಸ್ ಚಾಂಪಿಯನ್: ಗುರುಗ್ರಾಮದ ಮನು ಗಂದಾಸ್ ಅವರು ಈ ಟೂರ್ನಿಯಲ್ಲಿ ಆರನೇ ಸ್ಥಾನ ಪಡೆದರು. ಆದರೆ 2022ರ ಋತುವಿನ ಟಾಟಾ ಸ್ಟೀಲ್ ಪಿಜಿಟಿಐ ರ‍್ಯಾಂಕಿಂಗ್‌ನಲ್ಲಿ (ಆರ್ಡರ್ ಆಫ್ ಮೆರಿಟ್) ಅಗ್ರಸ್ಥಾನ ಗಳಿಸಿದರು.

ಅವರು ಈ ಋತುವಿನಲ್ಲಿ ಒಟ್ಟು ₹ 88.50 ಲಕ್ಷ ನಗದು ಬಹುಮಾನ ಪಡೆದುಕೊಂಡರು. ಪಿಜಿಟಿಐ ಋತುವಿನಲ್ಲಿ ಆಟಗಾರನೊಬ್ಬ ಪಡೆದ ಗರಿಷ್ಠ ಮೊತ್ತ ಇದು.

ನೆಟ್‌ಬಾಲ್: ವರುಣ್, ಮಹೇಶ್ವರಿ ನೇತೃತ್ವ

ಬೆಂಗಳೂರು: ಎಸ್.ಮಹೇಶ್ವರಿ ಮತ್ತು ಎಸ್.ವರುಣ್ ಅವರು ಡಿ.25 ರಿಂದ 28ರ ವರೆಗೆ ಕೋಲ್ಕತ್ತದಲ್ಲಿ ನಡೆಯಲಿರುವ 35ನೇ ರಾಷ್ಟ್ರೀಯ ಜೂನಿಯರ್ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ಕರ್ನಾಟಕದ ಬಾಲಕಿಯರ ಹಾಗೂ ಬಾಲಕರ ತಂಡಗಳನ್ನು ಮುನ್ನಡೆಸಲಿದ್ದಾರೆ.

ತಂಡಗಳು ಹೀಗಿವೆ: ಬಾಲಕಿಯರು: ಎಸ್.ಮಹೇಶ್ವರಿ (ನಾಯಕಿ), ಜಯಶ್ರೀ (ಉಪನಾಯಕಿ), ಸಿಂಚನಾ, ಎ.ರಕ್ಷಿತಾ, ಎಂ.ಮಧುರಾ, ಎಂ.ಶ್ರೇಯಾ, ಎಚ್. ಮನಸ್ವಿ, ಡಿ.ಎ.ಚಂದನಾ, ಆರ್.ಅಂಜು, ಎಸ್.ರಶ್ಮಿ, ಧನಶ್ರೀ, ಎ.ಹರ್ಷಿತಾ, ಚೈತ್ರಾ (ಕೋಚ್), ಎಂ.ಲಾವಣ್ಯ (ಮ್ಯಾನೇಜರ್)

ಬಾಲಕರು: ಎಸ್.ವರುಣ್ (ನಾಯಕ), ಡಿ.ಅಭಿನಾಯಕ್ (ಉಪನಾಯಕ), ವಿ. ದಿಲೀಪ್, ಎಲ್.ಸುದೀಪ್, ಜಿ.ನಂದಾ, ಜಿ.ಹರ್ಷವರ್ದನ್, ಎಸ್.ವರುಣ್, ಪುನೀತ್ ಕುಮಾರ್, ಪ್ರತೀಕ್ ಶೆಟ್ಟಿ, ಯಶವಂತ್, ಎಸ್.ಪ್ರಜ್ವಲ್, ಶಿವನಗೌಡ, ಎಚ್.ಕೆ.ಮಂಜುನಾಥ್ (ಕೋಚ್), ಅವಿನಾಶ್ ಕುಮಾರ್ (ಮ್ಯಾನೇಜರ್)

ನವೀನ್ ಹಾಕಿ ಕ್ಲಬ್‌ಗೆ ಗೆಲುವು

ಪ್ರಜಾವಾಣಿ ವಾರ್ತೆ



ನವೀನ್ ಹಾಕಿ ಕ್ಲಬ್ ತಂಡದ ಪ್ರಜ್ವಲ್ (ಎಡ) ಮತ್ತು ಟೀಮ್ ವೈಲ್ಡ್‌ಬೋರ್ ತಂಡದ ವಿಶಾಲ್ ಅವರು ಚೆಂಡಿನ ಮೇಲೆ ಹಿಡಿತ ಸಾಧಿಸಲು ಪೈಪೋಟಿ ನಡೆಸಿದರು –ಪ್ರಜಾವಾಣಿ ಚಿತ್ರ/ ಎಸ್.ಕೆ.ದಿನೇಶ್

ಬೆಂಗಳೂರು: ನವೀನ್ ಹಾಕಿ ಕ್ಲಬ್ 'ಎ' ತಂಡದವರು ಕರ್ನಾಟಕ ರಾಜ್ಯ ಹಾಕಿ ಸಂಸ್ಥೆ ಆಶ್ರಯದ 'ಬಿ' ಡಿವಿಷನ್ ಹಾಕಿ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವು ಪಡೆದರು.

ಶನಿವಾರ ನಡೆದ ಪಂದ್ಯದಲ್ಲಿ ನವೀನ್ ಕ್ಲಬ್ ತಂಡ 2–1 ಗೋಲುಗಳಿಂದ ಟೀಮ್ ವೈಲ್ಡ್‌ಬೋರ್ ತಂಡವನ್ನು ಮಣಿಸಿತು.

ಪ್ರಬಲ ಪೈಪೋಟಿ ನಡೆದ ಪಂದ್ಯದ ಏಳನೇ ನಿಮಿಷದಲ್ಲಿ ಅಮಲ್ ಅವರು ಗೋಲು ಗಳಿಸಿ ನವೀನ್ ಕ್ಲಬ್‌ಗೆ ಮುನ್ನಡೆ ತಂದಿತ್ತರು. ವೈಲ್ಡ್‌ಬೋರ್ ತಂಡದ ವಿಶಾಲ್ 34ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿ ಸಮಬಲಕ್ಕೆ ಕಾರಣರಾದರು. ಆದರೆ ಮೊಹಸಿನ್ 47ನೇ ನಿಮಿಷದಲ್ಲಿ ಗೋಲು ಗಳಿಸಿ ನವೀನ್ ತಂಡ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಸೋಮವಾರ ನಡೆಯಲಿರುವ ಟೂರ್ನಿಯ ಎರಡನೇ ಹಂತದ ಪಂದ್ಯಗಳಲ್ಲಿ ಸಂದೀಪ್ ಹಾಕಿ ಕ್ಲಬ್–ನವೀನ್ ಹಾಕಿ ಕ್ಲಬ್ 'ಎ' ಮತ್ತು ಐಡಿಯಲ್ ಸ್ಪೋರ್ಟ್ಸ್ ಅಕಾಡೆಮಿ 'ಎ'– ರಾಯಲ್ ಹಾಕಿ ಕ್ಲಬ್ ತಂಡಗಳು ಎದುರಾಗಲಿವೆ.

ಬಾಲಕಿಯರ ಕ್ರಿಕೆಟ್ ಟೂರ್ನಿ ನಾಳೆಯಿಂದ

ಶಿವಮೊಗ್ಗ: ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ವತಿಯಿಂದ 15 ವರ್ಷದೊಳಗಿನ ಬಾಲಕಿಯರ ಅಂತರರಾಜ್ಯ ಕ್ರಿಕೆಟ್ ಟೂರ್ನಿ ಡಿಸೆಂಬರ್ 26ರಿಂದ ಜನವರಿ 3ರವರೆಗೆ ಆಯೋಜಿಸಲಾಗಿದೆ ಎಂದು ಕೆಎಸ್‌ಸಿಎ ವಲಯ ಸಂಚಾಲಕ ಎಚ್.ಎಸ್.ಸದಾನಂದ ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಾಷ್ಟ್ರದ ವಿವಿಧೆಡೆ ನಡೆಯಲಿರುವ ಈ ಟೂರ್ನಿಯಲ್ಲಿ 36 ತಂಡಗಳು ಪಾಲ್ಗೊಳ್ಳಲಿವೆ. ಅದರಲ್ಲಿ 'ಎ' ಗುಂಪಿನ ಆರು ತಂಡಗಳ ನಡುವಿನ ಪೈಪೋಟಿ ಶಿವಮೊಗ್ಗದ ಮೂರು ಕ್ರೀಡಾಂಗಣಗಳಲ್ಲಿ ನಡೆಯಲಿವೆ ಎಂದು ಹೇಳಿದರು.

ದೇಶೀಯವಾಗಿ ಮಹಿಳಾ ಕ್ರಿಕೆಟ್ ಪಂದ್ಯಾವಳಿ ಪ್ರೋತ್ಸಾಹಿಸಲು ಇದೇ ಮೊದಲ ಬಾರಿಗೆ ಬಿಸಿಸಿಐ ಈ ಟೂರ್ನಿ ಆಯೋಜಿಸಿದೆ. ಶಿವಮೊಗ್ಗದ ನವುಲೆಯಲ್ಲಿರುವ ಕೆಎಸ್‌ಸಿಎ ಎರಡು ಕ್ರಿಕೆಟ್ ಅಂಗಳ ಹಾಗೂ ಇಲ್ಲಿನ ಜೆಎನ್‌ಎನ್ ಎಂಜಿನಿಯರಿಂಗ್ ಕಾಲೇಜಿನ ಟರ್ಫ್ ಅಂಗಳದಲ್ಲಿ ಪಂದ್ಯಗಳು ನಡೆಯಲಿವೆ.

ಮಹಿಳಾ ಕಬಡ್ಡಿ ಟೂರ್ನಿ ಜ.2ರಿಂದ

ಮಹಾಲಿಂಗಪುರ (ಬಾಗಲಕೋಟೆ): ಪಟ್ಟಣದ ಕೆಎಲ್‌ಇ ಸಂಸ್ಥೆಯ ಮೈದಾನದಲ್ಲಿ ಜ.2ರಿಂದ ಮೂರು ದಿನ ಅಖಿಲ ಭಾರತ 'ಎ' ದರ್ಜೆ ಮಹಿಳಾ ಆಹ್ವಾನಿತ ಕಬಡ್ಡಿ ಟೂರ್ನಿ ಆಯೋಜಿಸಲಾಗಿದೆ.

'ಟೂರ್ನಿಯಲ್ಲಿ ಮುಂಬೈ ಸೆಂಟ್ರಲ್ ರೈಲ್ವೆ, ಬ್ಯಾಂಕ್ ಆಫ್ ಬರೋಡಾ, ಶಿವಶಕ್ತಿ, ಹೈದರಾಬಾದ್‌ನ ಸೌತ್ ಸೆಂಟ್ರಲ್ ರೈಲ್ವೆ, ತಮಿಳುನಾಡು ಪೊಲೀಸ್, ಮೂಡುಬಿದಿರೆಯ ಆಳ್ವಾಸ್, ಹುಬ್ಬಳ್ಳಿಯ ಬಿ.ಸಿ.ರಮೇಶ ಅಕಾಡೆಮಿ, ಬೆಂಗಳೂರಿನ ಕರ್ನಾಟಕ ರಾಜ್ಯ ಪೊಲೀಸ್, ಕನ್ಯಾಕುಮಾರಿಯ ಯುಟಿಐ, ಪುಣೆಯ ಪ್ರಕಾಶ ತಾತ್ಯ, ಬೆಳಗಾವಿಯ ಮಹಾಕಾಳಿ ಚಿಂಚಲಿ, ರಾಜಸ್ಥಾನದ ಸಾಯಿ ಸೇರಿದಂತೆ ಪ್ರತಿಷ್ಠಿತ 40 ತಂಡಗಳು ಭಾಗವಹಿಸಲಿವೆ' ಸಿದ್ದು ಆರ್. ಕೊಣ್ಣೂರ ಸ್ಪೋರ್ಟ್ಸ್ ಕ್ಲಬ್ ಸಂಸ್ಥಾಪಕ ಸಿದ್ದು ಕೊಣ್ಣೂರ ಹೇಳಿದರು.

2022 ಹಿನ್ನೋಟ

ಬ್ಯಾಡ್ಮಿಂಟನ್ ಅಂಕಣದಲ್ಲಿ ಹರ್ಷ



ಮೊದಲ ಬಾರಿ ಥಾಮಸ್ ಕಪ್ ಗೆದ್ದ ಭಾರತದ ಪುರುಷರ ಬ್ಯಾಡ್ಮಿಂಟನ್ ತಂಡ

ಬ್ಯಾಡ್ಮಿಂಟನ್ ಅಂಕಣದಲ್ಲಿ ಈ ವರ್ಷವು ಭಾರತಕ್ಕೆ ಸುಗ್ಗಿಯ ಹಿಗ್ಗು. ಥಾಮಸ್ ಕಪ್ ಗೆದ್ದ ಭಾರತ ಪುರುಷರ ಬ್ಯಾಡ್ಮಿಂಟನ್ ತಂಡವು ಮಹತ್ಸಾಧನೆ ಮಾಡಿತ್ತು.

ಬ್ಯಾಂಕಾಂಕ್‌ನಲ್ಲಿ ನಡೆದ ಟೂರ್ನಿಯ ಫೈನಲ್‌ನಲ್ಲಿ ಇಂಡೊನೇಷ್ಯಾ ತಂಡವನ್ನು ಸೋಲಿಸಿದ ಕಿದಂಬಿ ಶ್ರೀಕಾಂತ್ ನೇತೃತ್ವದ ಬಳಗವು ಟ್ರೋಫಿಗೆ ಮುತ್ತಿಕ್ಕಿತು. ಟೂರ್ನಿ ಆರಂಭವಾಗಿ 73 ವರ್ಷಗಳ ಅವಧಿಯಲ್ಲಿ ಭಾರತ ತಂಡವು ಇದೇ ಮೊದಲ ಸಲ ಫೈನಲ್ ಪ್ರವೇಶಿಸಿತ್ತು. ಬ್ಯಾಡ್ಮಿಂಟನ್ ವಿಶ್ವಕಪ್ ಎಂದೇ ಬಿಂಬಿತವಾಗಿರುವ ಈ ಟೂರ್ನಿಯಲ್ಲಿ ಇದುವರೆಗೆ ಇಂಡೊನೇಷ್ಯಾ 14, ಚೀನಾ 10, ಮಲೇಷ್ಯಾ 5 ಸಲ ಚಾಂಪಿಯನ್ ಆಗಿವೆ. ಡೆನ್ಮಾರ್ಕ್ ಮತ್ತು ಜಪಾನ್ ತಲಾ ಒಂದು ಬಾರಿ ಪ್ರಶಸ್ತಿ ಜಯಿಸಿವೆ. ಕಿದಂಬಿ ಶ್ರೀಕಾಂತ್, ಯುವ ಆಟಗಾರ ಲಕ್ಷ್ಯ ಸೇನ್, ಎಚ್.ಎಸ್. ಪ್ರಣಯ್, ಎಂ.ಆರ್. ಅರ್ಜುನ್, ಧ್ರುವ ಕಪಿಲ್, ಕೃಷ್ಣಪ್ರಸಾದ ಗರಗ, ವಿಷ್ಣುವರ್ಧನ ಗೌಡ ಪಂಜಾಲಾ, ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ–ಚಿರಾಗ್ ಶೆಟ್ಟಿ ಜೋಡಿ, ತರಬೇತುದಾರ ವಿಮಲ್ ಕುಮಾರ್ ತಂಡದಲ್ಲಿದ್ದರು.

ಸಿಂಧು ಚಿನ್ನದ ಹೊಳಪು



ಡಬಲ್ ಒಲಿಂಪಿಯನ್ ಪದಕ ವಿಜೇತೆ ಪಿ.ವಿ. ಸಿಂಧು ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಎರಡು ಪದಕ ಗೆದ್ದರು. ಮಹಿಳೆಯರ ಸಿಂಗಲ್ಸ್ ಚಿನ್ನ ಗೆದ್ದರು. ಅವರಿದ್ದ ಮಿಶ್ರ ತಂಡವು ಕಂಚು ಜಯಿಸಿತು. ಅವರು ಮನಿಲಾದಲ್ಲಿ ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಸಿಂಗಲ್ಸ್ ಕಂಚಿನ ಪದಕ ಗೆದ್ದರು. ಆದರೆ ಪಾದದ ಗಾಯದ ಕಾರಣದಿಂದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿಯಲಿಲ್ಲ.

ಯುವಪ್ರತಿಭೆ ಲಕ್ಷ್ಯ ಸೇನ್

ಬೆಂಗಳೂರಿನ ಪ್ರಕಾಶ ಪಡುಕೋಣೆ ಬ್ಯಾಡ್ಮಿಂಟನ್ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿರುವ ಲಕ್ಷ್ಯ ಸೇನ್ ಭಾರತ ಬ್ಯಾಡ್ಮಿಂಟನ್ ಕ್ಷೇತ್ರದ ನವಪ್ರತಿಭೆ.

21 ವರ್ಷದ ಲಕ್ಷ್ಯ ಥಾಮಸ್ ಕಪ್ ವಿಜೇತ ತಂಡದಲ್ಲಿದ್ದರು. ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪುರುಷರ ಸಿಂಗಲ್ಸ್‌ನಲ್ಲಿ ಚಿನ್ನದ ಪದಕ ಸಾಧನೆ ಮಾಡಿದರು. ಅದೇ ಕೂಟದಲ್ಲಿ ಮಿಶ್ರ ತಂಡ ವಿಭಾಗದಲ್ಲಿ ಕಂಚು ಜಯಿಸಿದರು. ಪ್ರತಿಷ್ಠಿತ ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನಲ್ಲಿ ರನ್ನರ್ ಅಪ್ ಸಾಧನೆ ಮಾಡಿದರು.

ಪ್ರಮೋದ್ ಭಗತ್ ಮಿಂಚು



ಪ್ಯಾರಾ ಬ್ಯಾಡ್ಮಿಂಟನ್ ವಿಭಾಗದಲ್ಲಿಯೂ ಭಾರತಕ್ಕೆ ಹರ್ಷ ತಂದ ವರ್ಷ ಇದು. ಪ್ರಮೋದ್ ಭಗತ್ ಅವರು ವಿಶ್ವ ಪ್ಯಾರಾ ಬ್ಯಾಡ್ಮಿಂಟನ್‌ನಲ್ಲಿ ನಾಲ್ಕನೇ ಚಿನ್ನದ ಪದಕ ಗೆದ್ದು ದಾಖಲೆ ಬರೆದರು. ಮಹಿಳೆಯರ ಸಿಂಗಲ್ಸ್‌ನಲ್ಲಿ ಮನೀಷಾ ರಾಮದಾಸ್ ಅವರು ಪ್ರಶಸ್ತಿ ಗಳಿಸಿ ಗಮನ ಸೆಳೆದರು.

ಲಕ್ಷ್ಯ ವಿವಾದ

ಲಕ್ಷ್ಯ ಸೇನ್ ಅವರ ವಿರುದ್ಧ ವಯಸ್ಸಿನ ನಕಲಿ ಪ್ರಮಾಣ ಪತ್ರ ನೀಡಿ ವಂಚಿಸಿರುವ ದೂರನ್ನು ದಾಖಲಿಸಲಾಗಿದೆ. ಜೂನಿಯರ್ ಮತ್ತು ಸಬ್ ಜೂನಿಯರ್ ಹಂತದಲ್ಲಿ ಅವರು ನಕಲಿ ಪ್ರಮಾಣ ಪತ್ರ ಸಲ್ಲಿಸಿದ್ದಾರೆಂಬ ಆರೋಪದಲ್ಲಿ ವಿಚಾರಣೆ ಎದುರಿಸುತ್ತಿದ್ದಾರೆ.

ಶ್ರೀಲಂಕಾ ಸರಣಿಗೆ ಭಾರತ ತಂಡ: ಚೇತನ್ ಶರ್ಮಾ ಸಮಿತಿ ಆಯ್ಕೆ



ರಾಹುಲ್

ನವದೆಹಲಿ (ಪಿಟಿಐ): ನಿರ್ಗಮನವಾಗುತ್ತಿರುವ ಚೇತನ್ ಶರ್ಮಾ ನೇತೃತ್ವದ ಆಯ್ಕೆ ಸಮಿತಿಯು ಮುಂದಿನ ತಿಂಗಳು ಶ್ರೀಲಂಕಾ ಎದುರಿನ ಸರಣಿಯಲ್ಲಿ ಆಡುವ ಭಾರತ ತಂಡವನ್ನು ಆಯ್ಕೆ ಮಾಡಲಿದೆ.

ಸತತ ವೈಫಲ್ಯ ಅನುಭವಿಸುತ್ತಿರುವ ಕೆ.ಎಲ್. ರಾಹುಲ್ ಅವರನ್ನು ಕೈಬಿಡುವ ಸಾಧ್ಯತೆ ಇದೆ. ಹಾರ್ದಿಕ್ ಪಾಂಡ್ಯ ತಂಡವನ್ನು ಮುನ್ನಡೆಸುವುದು ಬಹುತೇಕ ಖಚಿತವಾಗಿದೆ.

ಜನವರಿ 3ರಿಂದ ಸೀಮಿತ ಓವರ್‌ಗಳ ಸರಣಿ ನಡೆಯಲಿದೆ. ಟಿ20 ಪಂದ್ಯಗಳಿಗೆ ಈ ಮಾದರಿಯ ಪರಿಣತ ಆಟಗಾರರನ್ನೇ ಆಯ್ಕೆ ಮಾಡುವ ಸಾಧ್ಯತೆ ಇದೆ. ಅನುಭವಿ ಆಟಗಾರ ವಿರಾಟ್ ಕೊಹ್ಲಿ ಅವರಿಗೆ ವಿಶ್ರಾಂತಿ ನೀಡುವ ನಿರೀಕ್ಷೆ ಇದೆ.

ಡೇವಿಸ್ ಕಪ್: ಡೆನ್ಮಾರ್ಕ್ ವಿರುದ್ಧದ ಪಂದ್ಯಕ್ಕೆ ಶಶಿಕುಮಾರ್‌ಗೆ ಸ್ಥಾನ

ನವದೆಹಲಿ (ಪಿಟಿಐ): ಯುವ ಆಟಗಾರ ಶಶಿಕುಮಾರ್ ಮುಕುಂದ್ ಅವರು ಡೇವಿಸ್ ಕಪ್ ಟೆನಿಸ್ ವಿಶ್ವಗುಂಪು–1 ಟೂರ್ನಿಯ ಡೆನ್ಮಾರ್ಕ್ ವಿರುದ್ಧದ ಪಂದ್ಯಕ್ಕೆ ಭಾರತ ತಂಡದಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ.

ಡೆನ್ಮಾರ್ಕ್‌ನ ಹಿಲರ್ಡ್‌ನಲ್ಲಿ ಫೆ. 3 ಮತ್ತು 4 ರಂದು ನಡೆಯಲಿರುವ ಪಂದ್ಯಕ್ಕೆ ಐವರು ಸದಸ್ಯರ ಭಾರತ ತಂಡವನ್ನು ಎಐಟಿಎ ಶನಿವಾರ ಪ್ರಕಟಿಸಿತು.

ರೋಹನ್ ಬೋಪಣ್ಣ, ಯೂಕಿ ಭಾಂಬ್ರಿ, ರಾಮಕುಮಾರ್ ರಾಮನಾಥನ್ ಮತ್ತು ಪ್ರಜ್ಞೇಶ್ ಗುಣೇಶ್ವರನ್ ತಂಡದಲ್ಲಿದ್ದಾರೆ. ಸುಮಿತ್ ನಗಾಲ್ ಹೆಚ್ಚುವರಿ ಆಟಗಾರರಾಗಿದ್ದಾರೆ.

ಈಚೆಗಿನ ಪ್ರದರ್ಶನ ಮತ್ತು ಪಂದ್ಯದ ವೇಳೆ ಆಟಗಾರರ ಲಭ್ಯತೆಯನ್ನು ಆಧರಿಸಿ ತಂಡವನ್ನು ಆಯ್ಕೆ ಮಾಡಲಾಗಿದೆ ಎಂದು ಎಐಟಿಎ ತಿಳಿಸಿದೆ. ನಂದನ್ ಬಾಲ್ ನೇತೃತ್ವದ ಆಯ್ಕೆ ಸಮಿತಿಯು ಶನಿವಾರ ವರ್ಚುವಲ್ ಸಭೆ ನಡೆಸಿ ತಂಡವನ್ನು ಆಯ್ಕೆ ಮಾಡಿದೆ.

ಮಾರ್ಚ್‌ನಲ್ಲಿ ದೆಹಲಿಯಲ್ಲಿ ನಡೆದಿದ್ದ ಮೊದಲ ಹಂತದ ಪಂದ್ಯದಲ್ಲಿ ಭಾರತ 4–0 ರಲ್ಲಿ ಡೆನ್ಮಾರ್ಕ್ ವಿರುದ್ಧ ಗೆದ್ದಿತ್ತು. ಬಳಿಕ ನಡೆದಿದ್ದ 'ಅವೇ' ಪಂದ್ಯದಲ್ಲಿ ನಾರ್ವೆ ಕೈಯಲ್ಲಿ 1–3 ರಲ್ಲಿ ಸೋತಿತ್ತು.

ಮುಂಬೈ ರೇಸ್

ಜುಕರೆಲಿ ಗೆಲ್ಲುವ ನಿರೀಕ್ಷೆ

ಮಹಾರಾಜ ಜಿವಾಜಿರಾವ್ ಸಿಂದಿಯಾ ಟ್ರೋಫಿ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಜುಕರೆಲಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ದೌಲತ್ ಮಾಯ್ 3, ಮಿಸ್ಟಿಸಮ್ 5, ಟ್ವೆಲ್ತ್ ಅರ್ಲ್ 1
2ನೇ ರೇಸ್: ತೂಫಾನ್ 8, ಟಾಸ್ಮಾನ್ 3, ಮಿಸ್ಟೀರಿಯಸ್ ಗರ್ಲ್ 4
3ನೇ ರೇಸ್:, ಕಿರ್ಕಿನೆಸ್ 2, ಚಾಟ್ 5
4ನೇ ರೇಸ್: ಪೋರ್ಟೋಫಿನೊ ಬೇ 8, ಓಪಸ್ ಡೀ 4, ಅಜ್ರಿನಾಝ್ 6
5ನೇ ರೇಸ್: ಸನ್‌ರೈಸ್ 7, ಡ್ರಾಗೊನೆಸ್ 6, ಲಾರ್ಡ್ ಅಂಡ್ ಮಾಸ್ಟರ್ 8
6ನೇ ರೇಸ್: ಜುಕರೆಲಿ 1, ಜೂಲಿಯೆಟ್ 2
7ನೇ ರೇಸ್: ಬ್ಯಾಲೆನ್ಸಿಯಾಗ 5, ವಾಟ್‌ಈಸ್‌ಇನ್‌ಎನೇಮ್ 4, ಎಕ್ಸಲೆಂಟ್ ಸ್ಟಾರ್ 8
8ನೇ ರೇಸ್: ಇಂಟೆನ್ಸ್ ಬಿಲೀಫ್ 10, ಸ್ಪಿರಿಟ್ ಬೇ 7, ಡೆಮಿಟ್ರಿಯಸ್ 3

ಉತ್ತಮ ಬೆಟ್: ದೌಲತ್ ಮಾಯ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	5,6,7	6,7,8